## ಅಧ್ಯಾಯ–೧೪

# ಸಾಹಿತ್ಯ ಮತ್ತು ಸಂಸ್ಕೃತಿ

ಪುರಾಣಗಳಲ್ಲಿ ಉಕ್ತವಾಗಿರುವಂತೆ ಮಂಡ್ಯ ಜಿಲ್ಲೆಯು ದಂಡಕಾರಣ್ಯ ಪ್ರದೇಶವೆಂದು ಗುರುತಿಸಲ್ಪಟ್ಟಿದೆ. ಮಾಂಡವ್ಯ, ಮೈತ್ರೇಯ, ಕದಂಬ, ಕೌಂಡಿಲ್ಯ, ಕಣ್ವ, ಅಗಸ್ತ್ಯ, ಗೌತಮ ಮುಂತಾದ ಮಹರ್ಷಿಗಳು ತಪಸ್ಸು ಮಾಡುತ್ತಿದ್ದರೆನ್ನಲಾದ ಈ ಪ್ರದೇಶದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯು ಅನೂಚಾನವಾಗಿ ಹರಿದು ಬಂದಿದೆ.

ಜಿಲ್ಲೆಯ ಕುಂತಿಬೆಟ್ಟ, ಕರಿಘಟ್ಟ, ನಾರಾಯಣದುರ್ಗ, ಗಜರಾಜಗಿರಿ, ಆದಿಚುಂಚನಗಿರಿ ಮುಂತಾದ ಬೆಟ್ಟಗಳು; ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ ಮತ್ತು ವೀರ ವೈಷ್ಣವಿ ನದಿಗಳು; ಗಗನಚುಕ್ಕಿ, ಭರಚುಕ್ಕಿ ಮತ್ತು ಶಿಂಷಾ ಜಲಪಾತಗಳು; ರಂಗನತಿಟ್ಟು, ಕೊಕ್ಕರೆ ಬೆಳ್ಳೂರು ಮತ್ತು ಗೆಂಡೆಹೊಸಳ್ಳಿ ಪಕ್ಷಿಧಾಮಗಳು ಸೊಗಯಿಸಿದ್ದು, ಈ ಜಿಲ್ಲೆಯ ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೇರಣೆ ನೀಡಿವೆ. ಶ್ರೀರಂಗಪಟ್ಟಣ, ನಾಗಮಂಗಲ, ಮಳವಳ್ಳಿ, ಮೇಲುಕೋಟೆ, ತೊಣ್ಣೂರು, ಕಂಬದಹಳ್ಳಿ, ಬಿಂಡಿಗನವಿಲೆ, ಗೋವಿಂದನಹಳ್ಳಿ, ಬೆಳ್ಳೂರು, ಬೆಳಕವಾಡಿ, ಮದ್ದೂರು, ಅರೆತಿಪ್ಪೂರು, ವೈದ್ಯನಾಥಪುರ, ಅಗ್ರಹಾರ ಬಾಚಹಳ್ಳಿ, ವರಾಹನಾಥ ಕಲ್ಲಹಳ್ಳಿ, ಅಘಲಯ, ಹೊಸಹೊಳಲು, ಕಿಕ್ಕೇರಿ, ಬಸರಾಳು, ಧನಗೂರು, ಹರವು, ಹೊಸಬೂದನೂರು, ಮಾರೇಹಳ್ಳಿ ಮುಂತಾದ ಊರುಗಳು, ಹಿಂದೆ ಸಾಂಸ್ಕೃತಿಕ ಹಾಗೂ ಕಲಾಭಿವೃದ್ಧಿ ಕೇಂದ್ರಗಳಾಗಿದ್ದು, ಕೆಲವೆಡೆ ದೇವಾಲಯಗಳನ್ನೇ ಕಾರ್ಯಾಗಾರಗಳನ್ನಾಗಿ ಉಪಯೋಗಿಸಿಕೊಂಡು ಶಿಕ್ಷಣ, ಕಲೆ ಮತ್ತು ಆಧ್ಯಾತ್ಮಿಕ ಜ್ಞಾನಗಳ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ನಡೆಸಲಾಗುತ್ತಿತ್ತು.

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತಕ ರಾಮಾನುಜಾಚಾರ್ಯರ ಕಾರ್ಯಕ್ಷೇತ್ರವಾಗಿದ್ದ ತೊಣ್ಣೂರು ಹಾಗೂ ಮೇಲುಕೋಟೆ; ಜೈನ ಧರ್ಮದ ಕೇಂದ್ರಗಳಾದ ಅರೆತಿಪ್ಪೂರು, ಕಂಬದಹಳ್ಳಿ ಹಾಗೂ ಬಸ್ತಿಹೊಸಕೋಟೆ ಶ್ರೀರಂಗಪಟ್ಟಣದ ಶ್ರೀರಂಗನಾಥ, ಗಂಗಾಧರನಾಥ, ತೊಣ್ಣೂರಿನ ನಂಬಿನಾರಾಯಣ, ಮೇಲುಕೋಟೆಯ ಚೆಲುವನಾರಾಯಣ, ನಾಗಮಂಗಲದ ಶ್ರೀಸೌಮ್ಯಕೇಶವ, ಕನ್ನಂಬಾಡಿಯ ಕನ್ನೇಶ್ವರ ಮತ್ತು ಗೋಪಾಲಕೃಷ್ಣ,

ವೀರಭದ್ರಸ್ವಾಮಿ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ, ವರಾಹನಾಥಕಲ್ಲಹಳ್ಳಿಯ ಲಕ್ಷ್ಮೀವರಾಹನಾಥ, ಬಸರಾಳಿನ ಮಲ್ಲಿಕಾರ್ಜುನ, ಮದ್ದೂರಿನ ಉಗ್ರನರಸಿಂಹಸ್ವಾಮಿ, ಆದಿಚುಂಚನಗಿರಿಯ ಕಾಲಭೈರವೇಶ್ವರ ಮತ್ತು ಗಂಗಾಧರೇಶ್ವರ, ಸಿಂದಗಟ್ಟದ ಸಂಗಮೇಶ್ವರ ಮುಂತಾದ ಪ್ರಖ್ಯಾತ ದೇವಾಲಯಗಳು, ಜಿಲ್ಲೆಯಲ್ಲಿರುವ ವಿಭಿನ್ನ ಸಂಸ್ಕೃತಿಗಳಿಗೆ ದ್ಯೋತಕವಾಗಿವೆ.

ಸಾಹಿತ್ಯದ ಎಲ್ಲಾ ಪ್ರಕಾರಗಳ ಪುನರುಜ್ಜೀವನಕ್ಕೆ ಕಾರಣರೆನ್ನಬಹುದಾದ ಕವಿ ಮತ್ತು ಖ್ಯಾತ ಅರಸರಾದ ಚಿಕ್ಕದೇವರಾಜ ಒಡೆಯರು, ಅವರ ಆಸ್ಥಾನದ ಗೋವಿಂದ ವೈದ್ಯ, ಮಂತ್ರಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಭಾರತೀ ನಂಜ, ತಿಮ್ಮ ಕವಿ, ಪಂಡಿತ ಸಿಂಗರಾರ್ಯ, ಕವಯಿತ್ರಿಯರಾದ ಸಂಚಿಹೊನ್ನಮ್ಮ, ಶೃಂಗಾರಮ್ಮ, ಕವಿಗಳಾದ ಷಡಕ್ಷರದೇವ, ಮಲ್ಲರಸ, 'ಬೇಹಾರ ಗಣಿತ' ರಚಿಸಿದ ಭಾಸ್ಕರ, ಗೋವಿನ ಹಾಡು ರಚಿಸಿದ ಅಜ್ಞಾತ ಕವಿ, ಹೊಸಗನ್ನಡದ ಉದಯಕ್ಕೆ ಕಾರಣಕರ್ತರಾದ ಆರ್.ನರಸಿಂಹಾಚಾರ್ಯ, ಎಂ.ಎಲ್.ಶ್ರೀಕಂಠೇಶಗೌಡ, ನವೋದಯದ ಪರಿಕಾರ ಬಿ.ಎಂ.ಶ್ರೀಕಂಠಯ್ಯ, ದೇವಶಿಖಾಮಣಿ ಆಳಸಿಂಗ್ರಾಚಾರ್ಯ, ಕವಿ ಪು.ತಿ.ನರಸಿಂಹಚಾರ್, ಬಿಂಡಿಗನವಿಲೆ ವೆಂಕಟಾಚಾರ್ಯ ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸಿದ ಎಂ.ಆರ್.ಶ್ರೀನಿವಾಸಮೂರ್ತಿ, ದಲಿತ ಸಾಹಿತಿ ಜಿ.ವೆಂಕಟಯ್ಯ, ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರಾದ ಕೆ.ವಿ.ಶಂಕರಗೌಡ, ಕುಪ್ಪಣ್ಣಸ್ವಾಮಿ, ಆಳ್ವಾರ್‌ಸ್ವಾಮಿ, ಜಾನಪದ ಕ್ಷೇತ್ರದಲ್ಲಿ ಮೊದಲು ಸಂಗ್ರಹ ಕಾರ್ಯ ಆರಂಭಿಸಿದ ಅರ್ಚಕ ರಂಗಸ್ವಾಮಿ ಭಟ್ಟರು, 'ಜಾನಪದಲೋಕ'ದ ರೂವಾರಿ ಎಚ್.ಎಲ್.ನಾಗೇಗೌಡ; ಜಾನಪದ ವಿದ್ವಾಂಸ ಜೀ.ಶಂ.ಪರಮಶಿವಯ್ಯ ಮತ್ತು ಕ.ರಾ.ಕೃಷ್ಣಸ್ವಾಮಿ, ನಲ್ಕುಂದಿ ಶ್ರೀರಂಗಮ್ಮ, ಭಾಷಾತಜ್ಞ ಜಿ.ವೆಂಕಟಸುಬ್ಬಯ್ಯ, ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಜಿ.ನಾರಾಯಣ, ಮುಂತಾದವರು ಈ ಜಿಲ್ಲೆಯವರಾಗಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಇವರಲ್ಲದೆ ಭೂ ವಿಜ್ಞಾನಿ ಎಂ.ಬಿ.ರಾಮಚಂದ್ರರಾವ್; ಚಿತ್ರ ಕಲಾವಿದರಾದ ಅ.ನ.ಸುಬ್ಬರಾವ್, ಎಸ್.ಆರ್.ಐಯ್ಯಂಗಾರ್, ಎಂ.ಟಿ.ವಿ.ಆಚಾರ್ಯ; ಖ್ಯಾತ ಚಿತ್ರ ತಾರೆ ಹಾಗೂ ನೃತ್ಯ ಕೋವಿದೆಯರೂ ಆದ ವೈಜಯಂತಿಮಾಲಾ ಬಾಲಿ ಹಾಗೂ ಜಯಲಲಿತ ; ಸಂಗೀತ ವಿದ್ವಾಂಸ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಮುಂತಾದವರು ಮೂಲತಃ ಮಂಡ್ಯ ಜಿಲ್ಲೆಯವರಾಗಿದ್ದಾರೆ. ಸ್ವಾಮಿವಿವೇಕಾನಂದರು ಮೆಚ್ಚುಗೆ ವ್ಯಕ್ತಪಡಿಸಿರುವ ಪತ್ರಕರ್ತ, ಎಂ.ಸಿ.ಆಳಸಿಂಗ ಪೆರುಮಾಳ್ (೧೮೬೫–೧೯೦೯) ರವರೂ ಮೂಲತಃ ಮಂಡ್ಯದವರಾಗಿದ್ದು, ಇವರು ವಿವೇಕಾನಂದರ ಆಪ್ತರಾಗಿದ್ದರು. ರಾಜ್ಯ ಸರ್ಕಾರದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯಾದ, ಪಂಪ ಪ್ರಶಸ್ತಿಯನ್ನು ಈ ಜಿಲ್ಲೆಯವರಾದ ಶತಾಯುಷಿ ಎ.ಎನ್.ಮೂರ್ತಿರಾವ್, ಮೈಸೂರುಮಲ್ಲಿಗೆ ಖ್ಯಾತಿಯ ಕೆ.ಎಸ್.ನರಸಿಂಹಸ್ವಾಮಿ ಮತ್ತು ಭಾಗವತ ಪರಂಪರೆಯ ಸಾಹಿತ್ಯ ರಚನೆಕಾರ ಪು.ತಿ.ನರಸಿಂಹಾಚಾರ್ ಪಡೆದಿರುತ್ತಾರೆ. ಈ ಹಿನ್ನೆಲೆಯುಳ್ಳ ಜಿಲ್ಲೆಯ ಸಾಹಿತ್ಯಾತ್ಮಕ ಚರಿತ್ರೆಯನ್ನು ಮೊದಲು ಶಾಸನಗಳಲ್ಲಿ ಅವಲೋಕಿಸೋಣ.

**ಶಾಸನಕವಿಗಳು**

ಭಾಷೆ, ಸಾಹಿತ್ಯ, ಸಾಂಸ್ಕೃತಿಕ ಚರಿತ್ರೆಗಳ ಅರಿವು ಮತ್ತು ಅಧ್ಯಯನಕ್ಕೆ ಅಮೂಲ್ಯ ಆಧಾರಗಳಾಗಬಲ್ಲಂತಹ ಈ ಜಿಲ್ಲೆಯ ಶಾಸನಗಳಲ್ಲಿ ಕಂದಪದ್ಯ ಮತ್ತು ಶ್ಲೋಕಗಳು ಹೆಚ್ಚು ಬಳಕೆಯಾಗಿರುವುದು ಕಂಡುಬರುತ್ತದೆ. ಕೆಲವು ಶಾಸನಗಳಲ್ಲಿ ಶ್ಲೋಕಗಳನ್ನೇ ಹೆಚ್ಚಾಗಿ ಬಳಸಲಾಗಿದೆ. ನಾಗಮಂಗಲ ತಾಲೂಕಿನ ಎಲೇಕೊಪ್ಪದ ಸುಮಾರು ೧೧–೧೨ನೇ ಶತಮಾನದ ಜೈನ ಶಾಸನದಲ್ಲಿ ಲೇಖಕನ ಹೆಸರನ್ನು ಸೂಚಿಸುವ ಭಾಗ ಬಿಟ್ಟರೆ, ಉಳಿದ ಭಾಗವು ಕಂದ ಪದ್ಯಗಳಲ್ಲಿಯೇ ರಚಿಸಲ್ಪಟ್ಟಿದೆ. ಮದ್ದೂರು ತಾಲೂಕಿನ ಆತಕೂರಿನ ಚಲ್ಲೇಶ್ವರ ದೇವಸ್ಥಾನದ ಮುಂದಿದ್ದ ಕ್ರಿ.ಶ.೯೫೦ರ ವೀರಗಲ್ಲು ಶಾಸನದಲ್ಲಿ (ಈಗ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದೆ) ಗಂಗ ವಂಶದ ಇಮ್ಮಡಿ ಬೂತುಗನ ಅಧೀನ ಅಧಿಕಾರಿಯಾದ, ಸಗರ ವಂಶದ ಮಣಲಾರ ಎಂಬಾತನು, ರಾಷ್ಟ್ರಕೂಟ ಅರಸ ಮುಮ್ಮಡಿಕೃಷ್ಣನಿಂದ,

ಕಾಳಿ ಎಂಬ ಹೆಸರಿನ ಬೇಟೆ ನಾಯಿಯೊಂದನ್ನು ಬೇಡಿ ಪಡೆದ ವಿಷಯವನ್ನು ಅತ್ಯಂತ ಲಾಲಿತ್ಯಪೂರ್ಣವಾಗಿ ವಿವರಿಸಲಾಗಿದೆಯಾದರೂ ರಚನಕಾರನ ಹೆಸರು ಉಲ್ಲೇಖವಾಗಿಲ್ಲ.

'ಕ್ಷಿತಿ ವಿನುತೆ ಸರ್ಬ್ಬದೇವನುತೆ ಸಂನುತೆ ಸೋಮಿಯಕ್ಕನಣುಗಿನ ಸತುಕವಿ ಸಾಂತಮಹಂತಂ ಸ್ತಿತಿಸಾರಂ ಪೇಳ್ದನಳ್ತಿಯಂ ಸಾಶನಮಂ' ಎಂಬ ಉಲ್ಲೇಖದಿಂದ ನಾಗಮಂಗಲ ತಾಲೂಕಿನ ಲಾಲನಕೆರೆಯ ಕ್ರಿ.ಶ.೧೧೩೮ರ ಶಾಸನವನ್ನು ಸತ್ಕವಿ ಸಾಂತಮಹಂತ ರಚಿಸಿದನೆಂದು ತಿಳಿದುಬರುತ್ತದೆ. ಇಲ್ಲಿಯ ಕ್ರಿ.ಶ.೧೧೬೫ರ ಇನ್ನೊಂದು ಶಾಸನದ ಕೊನೆಯಲ್ಲಿರುವ 'ದಕ್ಷಿಣ ಹೆಂಮನ ಮೊಮ್ಮಂ ಲಾಕ್ಷಣಕವಿ ಶಾಂತಿನಾಥ ಕುಳತಿಳಕಂ ದಾಕ್ಷಿಣ್ಯ ನಿಧಿ ಗುಣೋತ್ಕರ ಸಿಕ್ಷಾಗುರು ಹೇಳ್ದನರ್ತಿಯಿಂ ಶಾಸನಮಂ' ಎಂಬ ಸಾಲಿನಿಂದ ಈ ಶಾಸನವನ್ನು ರಚಿಸಿದ ಶಾಂತಿನಾಥ ಕವಿಯು ದಕ್ಷಿಣ ಹೆಂಮನ ಮೊಮ್ಮಗನೆಂದು ತಿಳಿಯುತ್ತದೆ. ಇದರಲ್ಲಿ ೧೩ ಕಂದಗಳೂ ಏಳು ವೃತ್ತಗಳೂ ಇವೆ. ಇದೇ ಕವಿ, ಅರಸೀಕೆರೆಯ ಒಂದು ಶಾಸನವನ್ನೂ (೪೮ನೇ ಶಾಸನ) ಬರೆದಿದ್ದಾನೆ.

ಮದ್ದೂರು ತಾಲೂಕಿನ ವೈದ್ಯನಾಥಪುರದ ವೈದ್ಯನಾಥೇಶ್ವರ ದೇವಾಲಯದ ಶಿಲಾಶಾಸನದಲ್ಲಿ ಹೊಯ್ಸಳರ ಕೇತಯ ದಂಡನಾಯಕನು ಕ್ರಿ.ಶ.೧೧೮೩ರಲ್ಲಿ, ಕಿಳಲೆನಾಡೊಳಗಿದ್ದ ಮದ್ದೂರಿನ ಸ್ವಯಂಭೂ ವೈಜನಾಥ ದೇವರ ಪಾತ್ರಕ್ಕೆಂದು ದತ್ತಿಬಿಟ್ಟಿರುವ ವರ್ಣನಾಭಾಗವು ಕಾವ್ಯಮಯವಾಗಿದ್ದರೂ, ಬರೆದವನ ಹೆಸರು ತಿಳಿದುಬರುವುದಿಲ್ಲ. ಸಾಹಿತ್ಯಕವಾಗಿ ಗಮನಾರ್ಹವಾದ ಹೊಯ್ಸಳ ಎರಡನೇ ವೀರಬಲ್ಲಾಳನ ಕಾಲದ (ಕ್ರಿ.ಶ.೧೨೨೦–೧೨೩೮) ಅರೆತಿಪ್ಪೂರಿನ ಜಿನ ಶಾಸನವೊಂದರಲ್ಲಿ ಜೈನ ಅನುವರ್ತಿ ಹಾಗೂ ಕವಿಯಾದ ಬಾಲಚಂದ್ರದೇವನು ತನ್ನ ಮಕ್ಕಳಿಗೆ ಆಸ್ತಿಯ ಹಕ್ಕನ್ನು ಹಂಚಿರುವ ವಿವರಣೆಯುಳ್ಳ ಶಾಸನವಿದು. ಅವನ ತಂದೆ ಹಾಗೂ ಗುರುವಾದ ಕಂದರ್ಪದೇವ ಮತ್ತು ತಾಯಿ ಸೊನ್ನಾದೇವಿಯರ ಜ್ಞಾಪಕಾರ್ಥವಾಗಿ ನೀಡಿರುವ ಈ ಶಾಸನದ ಆಧಾರದ ಮೇಲೆ ಕವಿ ಬಾಲಚಂದ್ರದೇವನು ಇಲ್ಲಿಯವನೆಂದು ವೇದ್ಯವಾಗುತ್ತದೆ. ಜನ್ನ ಕವಿಯ ಅನಂತನಾಥ ಪುರಾಣ ಮತ್ತು ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣದಲ್ಲಿ ಉಲ್ಲೇಖಿತಗೊಂಡಿರುವಂತೆ, ಈ ಕವಿಯು ಎರಡು ಗ್ರಂಥಗಳನ್ನು ರಚಿಸಿದ್ದಾನೆ. ಹೊಯ್ಸಳ ಇಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಬಸರಾಳಿನ ಕ್ರಿ.ಶ.೧೨೩೪ರ ಶಾಸನ ಹಾಗೂ ಹೊಯ್ಸಳ ಸೋಮೇಶ್ವರನ ಕಾಲದ ಬಸರಾಳಿನ ಕ್ರಿ.ಶ.೧೨೪೭ರ ಶಾಸನಗಳಲ್ಲಿ ಕಂಡುಬರುವ 'ಧರೆ ಪೊಗಳೆ ಚಿದಾನನ್ದಂ ವಿರಚಿಸಿದಂ ಸತ್ಕವೀಶ್ವರಂ ಶಾಸನವಂ ಪರಮಪ್ರಕಾಶ ಯೋಗೀಶ್ವರ ತನಯಂ' ಎಂಬ ಪದ್ಯದಿಂದ, ಪರಮಪ್ರಕಾಶ ಯೋಗೀಶ್ವರನ ಮಗನಾದ ಚಿದಾನಂದನು ಶಾಸನಕವಿ ಎಂದು ಸ್ಪಷ್ಟವಾಗುತ್ತದೆ. ಈ ಶಾಸನದ ಒಂದು ಪದ್ಯ 'ಸೂಕ್ತಿ ಸುಧಾರ್ಣವ' ದಲ್ಲಿ ಬಂದಿದ್ದು ಆ ಕೃತಿಯ ಕಾಲಗಣನೆಗೆ ಈ ಶಾಸನವನ್ನು ಮಹತ್ವದ ಆಕರವೆಂದು ವಿದ್ವಾಂಸರು ಪರಿಗಣಿಸಿದ್ದಾರೆ.

ವಿಜಯನಗರದ ಅರಸ ಹರಿಹರನ ಆಳ್ವಿಕೆಯ ಕಾಲಕ್ಕೆ ಸೇರಿದ ಮದ್ದೂರು ತಾಲೂಕಿನ ಕ್ರಿ.ಶ.೧೩೮೧ರ ಅರುವನಹಳ್ಳಿಯ ಶಾಸನವು ಕವಿ ನೃಸಿಂಹನ ರಚನೆಯಾಗಿದ್ದು, ಶ್ಲೋಕ, ಮತ್ತೇಭವಿಕ್ರೀಡಿತ, ಮಾಲಿನಿ ಮತ್ತು ಉತ್ಪಲಮಾಲೆ ಛಂದಸ್ಸುಗಳನ್ನು ಒಳಗೊಂಡಿದೆ. ವಿರೂಪಾಕ್ಷನ ಆಳ್ವಿಕೆಯಲ್ಲಿ ರಚಿತವಾದ ಮಳವಳ್ಳಿ ತಾಲೂಕಿನ ಸುಜ್ಜಲೂರು ತಾಮ್ರ ಶಾಸನದ (ಕ್ರಿ.ಶ.೧೪೭೩) ರಚನೆಕಾರ ಮಾಧವಾರಾಧ್ಯನ ಮಗ ದುಗ್ಗಪ. ಬರೆದವನು ಐತಪಾರ್ಯನ ಮಗ ರಾಯಸಸ್ವಾಮಿವಲ್ಲಭ ಎಂಬ ಅಂಶವೂ ತಿಳಿದುಬರುತ್ತದೆ.

ಕೃಷ್ಣದೇವರಾಯನ ಆಸ್ಥಾನ ಕವಿಯಾದ ಸಭಾಪತಿಯು, ಕೃಷ್ಣದೇವರಾಯ ಹಾಗೂ ನಂತರದ ಅರಸರ ಕಾಲಕ್ಕೆ ಒಳಪಟ್ಟಂತೆ, ಒಟ್ಟು ಐದು ತಾಮ್ರ ಶಾಸನಗಳನ್ನು ರಚಿಸಿದ್ದಾನೆ. ನಾಗಮಂಗಲ ತಾಲೂಕಿನ ದೊಡ್ಡ ಜಟಕದ ಕ್ರಿ.ಶ.೧೫೧೨ರ ಶಾಸನ, ಕ್ರಿ.ಶ.೧೫೧೬ರ ಮಂಡ್ಯದ ತಾಮ್ರ ಶಾಸನ, ಕೃಷ್ಣರಾಜಪೇಟೆ ತಾಲೂಕಿನ ಬ್ಯಾಲದಕೆರೆಯ ಕ್ರಿ.ಶ.೧೫೩೨ರ ತಾಮ್ರ ಶಾಸನ, ಮದ್ದೂರು ತಾಲೂಕಿನ ಹುರಗಲವಾಡಿಯ ಕ್ರಿ.ಶ.೧೫೩೩ರ ತಾಮ್ರ ಶಾಸನ ಹಾಗೂ

ನಾಗಮಂಗಲ ತಾಲೂಕಿನ ಹೊನ್ನೇನಹಳ್ಳಿಯ ಕ್ರಿ.ಶ.೧೫೪೫ರ ತಾಮ್ರ ಶಾಸನಗಳು, ಸಭಾಪತಿ–ಸ್ವಯಂಭು ಕವಿಯ ರಚನೆಗಳಾಗಿದ್ದು, ಎಲ್ಲವೂ ಸಂಸ್ಕೃತ ಭಾಷೆಯಲ್ಲಿವೆ.

ಮದ್ದೂರು ತಾಲೂಕಿನ ಹೊನ್ನಲಗೆರೆಯ ಕ್ರಿ.ಶ.೧೬೨೩ರ ತಾಮ್ರಶಾಸನ ಕನ್ನಡ ಹಾಗೂ ಸಂಸ್ಕೃತ ಭಾಷೆಯಲ್ಲಿದ್ದು ನಾಗರಿಲಿಪಿಯಲ್ಲಿ ಬರೆಯಲಾಗಿದೆ. ಈ ಶಾಸನವನ್ನು ರಚಿಸಿದ ಕವಿಯು ಗಜಾರಣ್ಯ (ತಲಕಾಡು) ನೃಸಿಂಹನ ಮಗ ಮತ್ತು ನಂಜಿನಾಥನ ಶಿಷ್ಯ ನೃಸಿಂಹ ಕವಿಯ ರಚನೆ ಎಂದು ತಿಳಿಸುತ್ತದೆ. ಅರವೀಡು ಮನೆತನದ ವೀರ ರಾಮದೇವರಾಯನ ಕಾಲಕ್ಕೆ ಸೇರಿದ ಈ ಶಾಸನವನ್ನು ಸಿಂಗರಿಯ ಮಗ ತಿಮ್ಮಪ್ಪ ಕಂಡರಿಸಿದ್ದಾನೆ. ಈ ಶಾಸನವನ್ನು ೭೨ ಸಾಲುಗಳ, ಮಾಲಿನಿ, ಶಾಲಿನಿ ಶ್ಲೋಕಗಳನ್ನೊಳಗೊಂಡ ಕಂದ ಪದ್ಯಗಳಲ್ಲಿ ರಚಿಸಲಾಗಿದೆ. ಕೌಶಿಕ ವಂಶದ ಶ್ರೀನಿವಾಸನ ಮಗ ನರಸಿಂಹ ಸೂರಿ ಎಂಬ ಕವಿಯು, ಮೇಲುಕೋಟೆಯ ಕ್ರಿ.ಶ.೧೬೪೭ರ ತಾಮ್ರ ಶಾಸನವನ್ನು ರಚಿಸಿದ್ದಾನೆ. ಕವಿ ನರಸಿಂಹಸೂರಿಯು ವೇದ–ಶಾಸ್ತ್ರ ಪಾರಂಗತನೂ, ಕೌಶಿಕ ವಂಶದ ಮೌಕ್ತಿಕಮಣಿಯೂ, ಸದಾ ಪ್ರಾಜ್ಞನೂ ಆಗಿದ್ದನೆಂದು ಈ ಶಾಸನ ಉತ್ಪ್ರೇಕ್ಷಿಸುತ್ತದೆ.

ಪಾಂಡವಪುರದ ತೊಣ್ಣೂರು ದೇವಾಲಯದಲ್ಲಿರುವ ಕ್ರಿ.ಶ.೧೭೨೨ರ ತಾಮ್ರಶಾಸನ, ಮೇಲುಕೋಟೆಯ ಕಂಚಿಮಠದ ಕ್ರಿ.ಶ.೧೭೨೪ ಹಾಗೂ ಕ್ರಿ.ಶ.೧೭೨೫ರ ತಾಮ್ರ ಶಾಸನಗಳು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿದ್ದು. ಇದನ್ನು ಬರೆದ ಕವಿ ರಾಮಾಯಣಂ ತಿರುಮಲೆಯಾಚಾರ್ಯ. ಈತ ಕರ್ನಾಟಾಂಧ್ರ ಸುಸಂಸ್ಕೃತ ಕವಿತಾ ಗಾಂಧರ್ವನೆಂದೂ, ಕುಶಲನೆಂದೂ, ರಾಮಾಯಣ ಮತ್ತು ಭಾರತಗಳ ಓದುಗನಾಗಿದ್ದನೆಂದೂ, ಈ ಶಾಸನಗಳು ತಿಳಿಸುತ್ತವೆ. ಛಂದೋಗ್ರಂಥಗಳಲ್ಲಿ ಲಯಗ್ರಾಹಿ ಎಂದು ಪ್ರಸಿದ್ಧವಾದ ಮಾಲಾವೃತ್ತ ವರ್ಗದ 'ತಾಳಗ್ರಾಹಿ ವೃತ್ತ'ವೆಂಬ ಒಂದು ಪದ್ಯಜಾತಿ ಪಾಂಡವಪುರದ ಕ್ರಿ.ಶ.೧೭೨೪ರ ಶಾಸನದಲ್ಲಿದೆ. ಹದಿನಾರು ತಾಮ್ರಪಟಗಳ ಮೇಲೆ, ಬರೆಸಲಾದ ಈ ಶಾಸನವು, ೭೩೩ ಸಾಲುಗಳ ದೀರ್ಘ ರಚನೆಯಾಗಿದ್ದು 'ಶಾಸನಗ್ರಂಥ' ವೆಂದೂ ಹೇಳಲಾಗಿದೆ. ಸುಂದರವಾದ ಶೈಲಿಯಲ್ಲಿ, ಕಾವ್ಯಮಯವಾಗಿ ರಚಿತವಾಗಿರುವ ಈ ಶಾಸನದ ಪದ್ಯಗಳು ಅತ್ಯಂತ ಸೊಗಸಾಗಿದ್ದು, 'ಮಿತ್ರವಿಂದಾ ಗೋವಿಂದ' ನಾಟಕಕ್ಕೆ ಸಿಂಗರಾರ್ಯ ಆ ಪದ್ಯಗಳನ್ನಾರಿಸಿಕೊಂಡಿದ್ದಾನೆ. 'ಅಪ್ರತಿಮವೀರಚರಿತೆ' ಯಲ್ಲಿಯೂ ಈ ಶಾಸನಗಳಲ್ಲಿನ ಕೆಲವು ಪದ್ಯಗಳಿವೆ. ಇದಲ್ಲದೆ ದೇವನಗರ, ತೊಂಡನೂರು, ಕಳಲೆ, ಕಂಚಿ ಮುಂತಾದ ಸ್ಥಳಗಳಲ್ಲಿ ದೊರೆತಿರುವ ತಾಮ್ರ ಶಾಸನಗಳೂ ಈತನ ಇತರ ರಚನೆಗಳಾಗಿವೆ.

ಶ್ರೀರಂಗಪಟ್ಟಣದ ಗುಂಬಸ್‌ಗೆ ಸೇರಿದ ಒಂದು ಶಾಸನದಲ್ಲಿ ಟಿಪ್ಪುವಿನ ವೀರ ಮರಣವನ್ನು ಮೀರ್‌ಹುಸೇನ್‌ಅಲಿ ಎಂಬ ಕವಿಯು ಹೃದಯಸ್ಪರ್ಶಿಯಾಗಿ ವಿವರಿಸಿದ್ದು ಶಾಸನವನ್ನು ಅಬ್ದುಲ್ ಖಾದರ್ ಕೆತ್ತಿದ್ದಾನೆ.

## ಪ್ರಾಚೀನ ಸಾಹಿತ್ಯ

ರಾಮಾನುಜಾಚಾರ್ಯರು ತೊಣ್ಣೂರು ಮೇಲುಕೋಟೆಗಳಲ್ಲಿ ಸುಮಾರು ಹನ್ನೆರಡು ವರ್ಷಗಳ ಕಾಲ ನೆಲೆಸಿದ್ದು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಪಾಂಡವಪುರ ತಾಲೂಕಿನ ತೊಣ್ಣೂರು ಗ್ರಾಮದಲ್ಲಿ ಅವರು ನೆಲೆಸಿದ್ದು, ಇಲ್ಲಿಯೇ ಹೊಯ್ಸಳ ಮಹಾರಾಜ ಬಿಟ್ಟಿದೇವನನ್ನು ಜೈನ ಮತದಿಂದ ಶ್ರೀವೈಷ್ಣವ ಮತಕ್ಕೆ ಮತಾಂತರಗೊಳಿಸಿದರೆಂಬ ಅಭಿಪ್ರಾಯವಿದ್ದು, ಆನಂತರ ಆಚಾರ್ಯರು ಮೇಲುಕೋಟೆಯಲ್ಲಿ ನೆಲೆಸಿದರು. ಮಹತ್ವದ ಧಾರ್ಮಿಕ ಕೃತಿಗಳಾದ 'ವೇದಾಂತ ಸಾರ' ಮತ್ತು 'ವೇದಾಂತ ದೀಪ'ಗಳನ್ನು ರಚಿಸಿ ಅದರಲ್ಲಿ ವಿಶಿಷ್ಟಾದ್ವೈತದ ತತ್ವಗಳನ್ನು ಸರಳ ಶೈಲಿಯಲ್ಲಿ ನಿರೂಪಿಸಿದ್ದಾರೆ. ಬಾದರಾಯಣನ 'ವೇದಾಂತ ಸೂತ್ರ'ದ ಮೇಲೆ ಟೀಕೆಗಳುಳ್ಳ 'ಶ್ರೀಭಾಷ್ಯ'ವನ್ನು ಬರೆದಿದ್ದಾರೆ. 'ಭಗವದ್ಗೀತೆ'ಯನ್ನು ಕುರಿತು ಅವರು ರಚಿಸಿರುವ 'ಗೀತಾ ಭಾಷ್ಯ' ಒಂದು ಮಹತ್ವದ ಕೃತಿಯಾಗಿದೆ. ಶ್ರೀರಾಮಾನುಜರ ವಾಸ್ತವ್ಯ ಮತ್ತು ಪ್ರವಚನಗಳು, ನಾಡಿನಾದ್ಯಂತ ಹರಡಿ, ಜಿಲ್ಲೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಗತಿಯ ಮೇಲೆ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರಿದೆ.

ಕನ್ನಡದಲ್ಲಿ ದೊರೆತ ಸಾಂಗತ್ಯ ಶೈಲಿಯ ಮೊದಲ ಉದಾಹರಣೆ ಎನ್ನಲಾದ 'ಸೊಬಗಿನ ಸೋನೆ' ಮತ್ತು 'ಅಮರುಕ' (೧೪೧೦) ಗ್ರಂಥಗಳನ್ನು ರಚಿಸಿರುವ ದೇಪರಾಜನೆಂಬ ಕವಿ ಮಂಡ್ಯ ಜಿಲ್ಲೆಯವನೆಂದು ವಿದ್ವಾಂಸರ ಅಭಿಪ್ರಾಯ. 'ಅಮರುಕ' ಗ್ರಂಥ, ವಾರ್ಧಕ ಷಟ್ಪದಿಯಲ್ಲಿದ್ದು, ಇದನ್ನು ಸಂಸ್ಕೃತದ 'ಅಮರುಶತಕ' ದಿಂದ ಭಾಷಾಂತರಿಸಲಾಗಿದೆ.

ವಚನಕಾರ ಸ್ವತಂತ್ರ ಸಿದ್ಧಲಿಂಗೇಶ್ವರ ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲಿನ ಬಳಿಯು ಕಾಪನಹಳ್ಳಿಯವನಾಗಿದ್ದು ವಚನಗಳನ್ನೂ (೧೪೮೦) 'ಮುಕ್ತ್ಯಾಂಗನಾಕಂಠಮಾಲೆ', 'ಜಂಗಮ ರಗಳೆ' ಎಂಬ ಗ್ರಂಥಗಳನ್ನೂ ರಚಿಸಿದ್ದಾನೆ.

ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯವನಾದ ನಂಜುಂಡಾರಾಧ್ಯ, (ಸು.ಕ್ರಿ.ಶ.೧೫೫೦) 'ಭೈರವೇಶ್ವರ ಕಾವ್ಯ' ಗ್ರಂಥವನ್ನು ರಚಿಸಿದ್ದಾನೆ. ಭೈರವ ರಾಜನ ಕಥೆಯನ್ನು ಪ್ರಧಾನವಾಗಿಟ್ಟುಕೊಂಡು, ಅನೇಕ ಶಿವಶರಣರ ಕಥೆಗಳನ್ನು ಇದರಲ್ಲಿ ಹೇಳಲಾಗಿದೆ. ನಂಜುಂಡಾರಾಧ್ಯನ ಈ ಕಾವ್ಯದ ಆಧಾರದ ಮೇಲೆ, ಸಿದ್ಧಲಿಂಗ ಶಿವಯೋಗಿಯ 'ಭೈರವೇಶ್ವರ ಪುರಾಣ', ಬಸವಲಿಂಗದೇವನ 'ಭೈರವೇಶ್ವರ ಪುರಾಣ ಕಥಾ ಸಾಗರ', ಚನ್ನಬಸವನ 'ಸಾಲೆ ಭೈರವೇಶ್ವರ ಚರಿತೆ', ಶಾಂತಲಿಂಗ ದೇಶಿಕನ 'ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರ ಮೊದಲಾದ ಕೃತಿಗಳು ನಂತರದಲ್ಲಿ ಸೃಷ್ಟಿಗೊಂಡಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. 'ಕರಸ್ಥಲ ನಾಗಲಿಂಗನ ಚರಿತ್ರೆ'ಯನ್ನು ಕ್ರಿ.ಶ.೧೬೭೨ರಲ್ಲಿ ಬರೆದಿರುವ ರುದ್ರಕವಿ, ಶ್ರೀರಂಗಪಟ್ಟಣದ ಸಮೀಪದ ಬೊಮ್ಮೂರಿನವನೆಂದು ಹೇಳಲಾಗಿದೆ. ಆದರೆ ರುದ್ರಕವಿಯ ಕಾಲವನ್ನು ಆರ್.ನರಸಿಂಹಾಚಾರ್ಯರು, ಕ್ರಿ.ಶ.೧೬೫೦ ಎಂದು ನಮೂದಿಸಿದ್ದಾರೆ. ಈ ಕೃತಿಯು ಸಾಂಗತ್ಯ ಛಂದಸ್ಸಿನಲ್ಲಿದೆ. 'ಕಂಠೀರವ ನರಸರಾಜ ವಿಜಯ' ಎಂಬ ಕೃತಿಯನ್ನು ಗೋವಿಂದ ವೈದ್ಯ ಬರೆದಿರುವನೆಂದು ಬಹುಪಾಲು ವಿದ್ವಾಂಸರು ಅಭಿಪ್ರಾಯಪಟ್ಟರೆ, ಇತ್ತೀಚೆಗೆ ಕೆಲವರು, ಭಾರತೀನಂಜ ಈ ಕೃತಿಯ ರಚನಕಾರನೆಂದು ವಾದಿಸುತ್ತಾರೆ. ಭಾರತೀನಂಜನು, ಕಂಠೀರವ ನರಸರಾಜರ ಸಹಪಾಠಿಯಾಗಿದ್ದು, ನರಸರಾಜರು ಅಧಿಕಾರಕ್ಕೆ ಬಂದ ಮೇಲೆ, ತಮ್ಮ ಕೆಲವು ಸಹಪಾಠಿಗಳನ್ನು ವಿವಿಧ ಹುದ್ದೆಗಳಿಗೆ ನೇಮಿಸಿಕೊಂಡಾಗ ಭಾರತೀನಂಜನನ್ನೂ ಆಸ್ಥಾನ ಕವಿಯಾಗಿ ನೇಮಿಸಿಕೊಂಡರು. ಭಾರತೀನಂಜ ತಲಕಾಡಿನವನಾಗಿದ್ದು, ಕಾವ್ಯಗಳನ್ನು ಅದರಲ್ಲೂ ಭಾರತವನ್ನು ವಾಚನ ಮಾಡುವ ಸಂಪ್ರದಾಯವುಳ್ಳ ವಂಶದವನು. 'ಕಂಠೀರವ ನರಸರಾಜ ವಿಜಯ' ಒಂದು ಸಾಂಗತ್ಯ ಗ್ರಂಥವಾಗಿದ್ದು, ಅರಸ ನರಸರಾಜರ ಚರಿತ್ರೆಯನ್ನು ವಸ್ತುವಾಗಿ ಹೊಂದಿರುವ ಕೃತಿ. ಶ್ರೀರಂಗಪಟ್ಟಣದ ಮೇಲೆ ರಣದುಲ್ಲಾಖಾನನು ಆಕ್ರಮಣ ಮಾಡಿದಾಗ, ಅವನನ್ನು ನರಸರಾಜರು ಹಿಮ್ಮೆಟ್ಟಿಸಿದ ಸಂಗತಿ ಮತ್ತು ಬಿಜಾಪುರದ ಸುಲ್ತಾನನೊಡನೆ ಘರ್ಷಣೆಯಾದ ಸಂಗತಿಗಳನ್ನು ಈ ಕೃತಿ ಒಳಗೊಂಡಿದೆ. ಇದೊಂದು ಚಾರಣಕಾವ್ಯವೆಂದೂ, ಯುದ್ಧಕಾವ್ಯ ಅಥವಾ ವೀರಕಾವ್ಯವೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ವಿಜಯನಗರದ ಸಾಮ್ರಾಜ್ಯ ಅವನತಿಗೊಂಡ ನಂತರ, ಹಲವಾರು ರಾಜರುಗಳು ಆಗಿ ಹೋದಮೇಲೆ, ಮೈಸೂರು ಒಡೆಯರ ಆಳ್ವಿಕೆಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚು ಆಶ್ರಯ ಮತ್ತು ಪ್ರಾಮುಖ್ಯತೆ ಸಿಕ್ಕಿತು. ಈ ಜಿಲ್ಲೆಯ ಶ್ರೀರಂಗಪಟ್ಟಣವು ಕ್ರಿ.ಶ.೧೬೧೦ ರಿಂದ ೧೭೯೯ರವರೆಗೆ ಮೈಸೂರು ಸಂಸ್ಥಾನದ ರಾಜಧಾನಿಯಾಗಿತ್ತು. ವಿಜಯನಗರದ ಪತನಾನಂತರ ಶ್ರೀರಂಗಪಟ್ಟಣ ಅದರ ಪ್ರಾಂತೀಯ ಕೇಂದ್ರವಾಗಿದ್ದು, ಶ್ರೀರಂಗರಾಯನು ಅಲ್ಲಿಂದ ರಾಜ್ಯಾಡಳಿತ ನಡೆಸುತ್ತಿದ್ದ. ತಿರುಮಲೆಯಾರ್ಯರು (೧೬೨೫) ರಾಜ ಒಡೆಯರಿಗೆ ಶ್ರೀರಂಗರಾಯನಿಂದ ಶ್ರೀರಂಗಪಟ್ಟಣದ ಅಧಿಕಾರವನ್ನು ವರ್ಗಾವಣೆ ಮಾಡಿಸುವುದರಲ್ಲಿ ಯಶಸ್ವಿ ಅದರು. ಅದ್ದರಿಂದ ರಾಜ ಒಡೆಯರು ಅವರನ್ನು ಪ್ರಧಾನಿಗಳನ್ನಾಗಿ ನೇಮಿಸಿಕೊಂಡರು. ಇವರು ಸಂಸ್ಕೃತ ಕನ್ನಡ ವಿದ್ವಾಂಸರು. 'ಕರ್ಣ ವೃತ್ತಾಂತ ಕತೆ' ಎಂಬ ಸಾಂಗತ್ಯ ಗ್ರಂಥ ರಚಿಸಿದ್ದಾರೆ. ಇವರನ್ನು ಕನ್ನಡ ಕವಿ ಚರಿತ್ರಕಾರರು ಪ್ರಧಾನಿ ತಿರುಮಲೆಯಾರ್ಯರೆಂದು ಗುರುತಿಸಿದ್ದಾರೆ.

ಚಿಕ್ಕದೇವರಾಜ ಒಡೆಯರು (೧೬೭೨-೧೭೦೪) ಸ್ವತಃ ಕವಿಯಾಗಿದ್ದು ಅನೇಕ ಕವಿಗಳಿಗೆ ಆಶ್ರಯದಾತರೂ ಆಗಿದ್ದರು. ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಿಂಗರಾರ್ಯ, ತಿಮ್ಮರಸ, ಮಲ್ಲಿಕಾರ್ಜುನ, ಚಿದಾನಂದ, ಮಲ್ಲರಸ ಮುಂತಾದ ಕವಿಗಳಲ್ಲದೆ, ಹೊನ್ನಮ್ಮ ಮತ್ತು ಶೃಂಗಾರಮ್ಮ ಎಂಬ ಕವಯಿತ್ರಿಯರೂ ಒಡೆಯರ ಆಸ್ಥಾನದಲ್ಲಿದ್ದು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವರಲ್ಲಿ ಮಂತ್ರಿಗಳಾದ ತಿರುಮಲಾರ್ಯ ಮತ್ತು ಚಿಕ್ಕುಪಾಧ್ಯಾಯರು ಸ್ವತಃ ಉತ್ತಮ ಗ್ರಂಥಗಳನ್ನು ಬರೆದುದಲ್ಲದೆ ಇತರರಿಗೂ ಗ್ರಂಥಗಳನ್ನು ರಚಿಸಲು ಉತ್ತೇಜಿಸಿದರು. ಚಿಕ್ಕದೇವರಾಜರ ಕಾಲದ ಸಾಹಿತ್ಯ ಮೇಲುಕೋಟೆ, ತಿರುಪತಿ ಮತ್ತು ಶ್ರೀರಂಗಪಟ್ಟಣಗಳ ಸುತ್ತ ಕೇಂದ್ರೀಕೃತಗೊಂಡಿದ್ದು, ಶ್ರೀವೈಷ್ಣವ ಧರ್ಮವನ್ನು ಎತ್ತಿಹಿಡಿಯುವ ಕಾವ್ಯಗಳ ರಚನೆಗಳಾಗಿದ್ದು, ವ್ಯಾಖ್ಯಾನ, ಟೀಕು, ಮಹಾತ್ಮೆ ಮತ್ತು ಚಾರಿತ್ರಿಕ ಕಾವ್ಯಗಳು ವಿಶೇಷ ಪ್ರಾಶಸ್ತ್ಯ ಪಡೆದವು.

ಚಿಕ್ಕದೇವರಾಜ ಒಡೆಯರು ಕನ್ನಡ ಮತ್ತು ಸಂಸ್ಕೃತಗಳೆರಡನ್ನೂ ಬಲ್ಲವರಾಗಿದ್ದು 'ಚಿಕ್ಕದೇವರಾಜಬಿನ್ನಪ', 'ಗೀತಗೋಪಾಲ' ಎಂಬ ಕೃತಿಗಳನ್ನು ರಚಿಸಿದ್ದಾರೆ. ವಿಶಿಷ್ಟಾದ್ವೈತದ ನಿರೂಪಣೆಯುಳ್ಳ 'ಚಿಕ್ಕದೇವರಾಜಬಿನ್ನಪ' ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿಗೆ ಮಾಡಿಕೊಂಡ ೩೦ ಬಿನ್ನಪಗಳ ಕೃತಿಯಾದರೆ 'ಗೀತಗೋಪಾಲ' ಗ್ರಂಥವು ಸಂಗೀತ ಪ್ರಧಾನವಾದ ಶ್ರೀವೈಷ್ಣವ ಸಂಪ್ರದಾಯದ ಕೃಷ್ಣ ಸ್ತುತಿಯ ಗೀತೆಗಳನ್ನು ಹೊಂದಿರುವ ಕೃತಿ. 'ಭಾಗವತ', 'ಭಾರತ' ಮತ್ತು 'ಶೇಷಧರ್ಮಗಳು', ಸಂಬಂಧಿತ ಸಂಸ್ಕೃತ ಗ್ರಂಥಗಳಿಗೆ ಕನ್ನಡದಲ್ಲಿ ಬರೆದಿರುವ ಟೀಕೆಗಳಾಗಿವೆ. 'ಚಿಕ್ಕದೇವರಾಜ ಸೂಕ್ತಿವಿಲಾಸ' ಎಂಬುದು 'ಭಾಗವತ' ಶೈಲಿಯ ಗ್ರಂಥ.

ತಿರುಮಲಾರ್ಯರು (೧೬೪೫-೧೭೦೬) ಚಿಕ್ಕದೇವರಾಜ ಒಡೆಯರ ಕಾಲದ ಹೆಸರಾಂತ ಕವಿ. 'ಚಿಕ್ಕದೇವರಾಜಬಿನ್ನಪ' ಮತ್ತು 'ಗೀತಗೋಪಾಲ'ಗಳನ್ನು ಅದರಲ್ಲಿರುವ ಸ್ವಪ್ರಶಂಸೆ ಅಂಶಗಳ ಆಧಾರದ ಮೇಲೆ ತಿರುಮಲಾರ್ಯರೇ ಬರೆದಿರಬಹುದೆಂಬ ಅನುಮಾನವೂ ಹಲವರಿಗಿದೆ. ತಿರುಮಲಾರ್ಯರು 'ಚಿಕ್ಕದೇವರಾಜ ವಿಜಯ', 'ಚಿಕ್ಕದೇವರಾಜ ವಂಶಾವಳಿ', ಮತ್ತು 'ಅಪ್ರತಿಮ ವೀರ ಚರಿತ' ಇವು ಒಡೆಯರ ಬಾಲ್ಯ, ವಿದ್ಯಾಭ್ಯಾಸ, ಸಂಗೀತ ಜ್ಞಾನ ಇತ್ಯಾದಿಗಳನ್ನೊಳಗೊಂಡಂತೆ, ಒಡೆಯರ ಚರಿತ್ರೆಯನ್ನು ಹೇಳುವ ವಸ್ತುವನ್ನು ಹೊಂದಿದ್ದು, ರಚನೆಯ ರೂಪದಲ್ಲಿ ಮಾತ್ರ ವ್ಯತ್ಯಾಸವಿದೆ. ಒಂದು ಚಂಪೂ, ಇನ್ನೊಂದು ಗದ್ಯ. ಮತ್ತೊಂದು ಕೃತಿಯು ಲಕ್ಷಣ ಗ್ರಂಥ ರೂಪದಲ್ಲಿದೆ.

ಚಿಕ್ಕುಪಾಧ್ಯಾಯರು ಮುಖ್ಯ ಸಚಿವ ಮತ್ತು ಆಸ್ಥಾನ ಕವಿಯಷ್ಟೇ ಆಗಿರದೇ, ರಾಜನಿಗೆ ಶಿಕ್ಷಕರೂ ಆಗಿದ್ದರೆನ್ನಲಾದ ಕಾರಣವೇ ಇವರಿಗೆ ಚಿಕ್ಕುಪಾಧ್ಯಾಯರೆಂಬ ಹೆಸರು ಬಂದಿರಬಹುದು ಎಂದು ಕೆಲವರ ಊಹೆ. ಇವರು ತಿರುಮಲಾರ್ಯರಿಗೆ ಸಮನಾಗಿದ್ದ ಸಮರ್ಥ ಕವಿ. ವಿಶಿಷ್ಟಾದ್ವೈತ ತತ್ವ ವಿವರಣೆ, ಸ್ಥಳ ಮಹಾತ್ಮೆ, ಪುರಾಣ ವಿಷಯ, ಚಮತ್ಕಾರ ಪ್ರದರ್ಶನ, ನೀತಿ ಬೋಧೆ, ಶಾಸ್ತ್ರ, ಸ್ತೋತ್ರ, ಕಥೆ, ವೈದ್ಯ, ವೇದಾಂತ ಮುಂತಾದ ವಿಭಿನ್ನ ವಿಷಯಗಳುಳ್ಳ ವಿವಿಧ ಕೃತಿಗಳನ್ನು, ಚಂಪೂ, ಸಾಂಗತ್ಯ, ಗದ್ಯ ಹಾಡು ಮೊದಲಾದ ವಿವಿಧ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದ್ದು, ಇವರನ್ನು ಆ ಕಾಲದ ಕನ್ನಡದ ಬೃಹತ್ ಗ್ರಂಥಕಾರ ಎಂದು ಹೇಳಲಾಗಿದೆ. ಇವರ ಕೃತಿಗಳಲ್ಲಿ 'ಹಸ್ತಿಗಿರಿ ಮಹಾತ್ಮ್ಯ' (೧೬೭೯), 'ಕಮಲಾಚಲ ಮಹಾತ್ಮ್ಯ' (೧೬೮೦) 'ರುಕ್ಮಾಂಗದ ಚರಿತೆ' (೧೬೮೧), 'ವಿಷ್ಣು ಪುರಾಣ' (೧೬೯೧), 'ದಿವ್ಯ ಸೂರಿ ಚರಿತೆ', 'ಸಾತ್ವಿಕ ಬ್ರಹ್ಮ ವಿದ್ಯಾ ವಿಲಾಸ' ಗಳು ಶ್ರೇಷ್ಠ ಗ್ರಂಥಗಳೆಂದು ಖ್ಯಾತಿ ಪಡೆದಿವೆ. ಇವು ಕ್ರಮವಾಗಿ ಪುರಾಣೋಕ್ತ, ರುಕ್ಮಾಂಗದ, ವಿಷ್ಣು ಮತ್ತು ಆಳ್ವಾರರ ಚರಿತ್ರೆಗಳನ್ನೊಳಗೊಂಡಿವೆ. ಇವರ ಕೃತಿಗಳಲ್ಲಿ ಶ್ರೀವೈಷ್ಣವ ನಿಷ್ಠೆ, ತತ್ವ ಮತ್ತು ಸಂಪ್ರದಾಯಗಳ ಮಾಹಿತಿ ಇದ್ದು, ಶೃಂಗಾರದ ಹಾಡುಗಳು ಗಮನಾರ್ಹವೆನ್ನಿಸಿವೆ. ತಿರುಮಲಾರ್ಯರ ಸೋದರ ಸಿಂಗರಾರ್ಯರು ಸಂಸ್ಕೃತದ 'ರತ್ನಾವಳಿ' ಯನ್ನು ಕೃಷ್ಣ, ಮಿತ್ರನಿಂದೆಯರನ್ನು ನಾಯಕ ನಾಯಕಿಯರನ್ನಾಗಿ ಮಾಡಿ ಕನ್ನಡಕ್ಕೆ ತಂದಿದ್ದು ಇದೇ ಹದಿನೇಳನೆಯ ಶತಮಾನದ ಕನ್ನಡದ ಮೊದಲ ನಾಟಕವಾದ 'ಮಿತ್ರವಿಂದಾ ಗೋವಿಂದ'.

'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು...........ನಮ್ಮನ್ನೆಲ್ಲ ಪಡೆದ ತಾಯಿ ಪೆಣ್ಣಲ್ಲವೇ' ಎಂಬ ಒಂದು ಹೇಳಿಕೆಯಿಂದ, ಸ್ತ್ರೀ ಸಾಹಿತ್ಯ ಲೋಕದಲ್ಲಿ ಉಲ್ಲೇಖಿಸಲ್ಪಡುವ ಹೊನ್ನಮ್ಮ, ಚಿಕ್ಕದೇವರಾಜ ಒಡೆಯರ ಅರಮನೆಯಲ್ಲಿ ಸಂಚಿಯ ಕೆಲಸದವಳಾಗಿದ್ದು, ಜನಪ್ರಿಯ ಕೃತಿಯಾದ 'ಹದಿಬದೆಯಧರ್ಮ' ವನ್ನು ಬರೆದಿದ್ದಾಳೆ. ಒಡೆಯರು, ದೇವರಾಜಮ್ಮಣ್ಣಿ ಹಾಗೂ ಗುರು ಸಿಂಗರಾರ್ಯರ ನೆರವಿನಿಂದ ವಿದ್ಯೆ ಕಲಿತು, ಆಗಿನ ಸಮಾಜವನ್ನು ಮೆಚ್ಚಿಸುವ ಈ ಕೃತಿಯನ್ನು ಬರೆದಿದ್ದಾಳೆ. ಸತಿಯ ಧರ್ಮ ಮತ್ತು ನೀತಿಗಳ ವಿವರಗಳಿರುವ ಸಾಂಗತ್ಯ ಕೃತಿ ಇದಾಗಿದೆ. ಒಡೆಯರ ಆಸ್ಥಾನದಲ್ಲಿದ್ದ ಇನ್ನೊಬ್ಬ ಕವಯಿತ್ರಿ ಶೃಂಗಾರಮ್ಮ ತಿರುಪತಿಯ ಶ್ರೀನಿವಾಸ ಮತ್ತು ಪದ್ಮಾವತಿಯರ ವಿವಾಹದ ವಿವರಗಳಿರುವ 'ಪದ್ಮಿನೀ ಕಲ್ಯಾಣ' ವನ್ನು ಸಾಂಗತ್ಯದಲ್ಲಿ ರಚಿಸಿದ್ದಾಳೆ.

ಒಡೆಯರ ಅಥವಾ ಅವರ ಮಂತ್ರಿಗಳ ಪ್ರೋತ್ಸಾಹದಿಂದ ತಿಮ್ಮಕವಿಯು, 'ಯಾದವಗಿರಿ ಮಹಾತ್ಮ್ಯೆ' (೧೬೭೭). 'ಪಶ್ಚಿಮರಂಗ ಮಹಾತ್ಮ್ಯೆ' ಮತ್ತು 'ವೆಂಕಟಗಿರಿ ಮಹಾತ್ಮ್ಯೆ' ಎಂಬ ಚಂಪೂ ಪ್ರಕಾರದ ಗ್ರಂಥಗಳನ್ನೂ; ಮಲ್ಲರಸನು', 'ದಶಾವತಾರ ಚರಿತೆ' ಯನ್ನೂ; ಮಲ್ಲಿಕಾರ್ಜುನನು 'ಶ್ರೀರಂಗಮಹಾತ್ಮೆ' (೧೬೭೮) ಯನ್ನೂ ಬರೆದಿದ್ದಾರೆ. 'ರಾಜಶೇಖರ ವಿಳಾಸ' (೧೬೫೦), 'ವೃಷಭೇಂದ್ರ ವಿಜಯ' (೧೬೭೭), 'ಶಬರ ಶಂಕರ ವಿಳಾಸ' ಎಂಬ ವಿದ್ವತ್ಪೂರ್ಣ ಚಂಪೂ ಕೃತಿಗಳನ್ನು ಬರೆದ ಷಡಕ್ಷರದೇವ, ಮಳವಳ್ಳಿ ತಾಲೂಕಿನ ಧನಗೂರಿನವನು. ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ಇವನುಕಾವ್ಯ ರಚಿಸಿದ್ದಾನೆ. ತನ್ನ ಗುರುಪರಂಪರೆಯಲ್ಲಿ, ರೇಣುಕಾಚಾರ್ಯ, ರುದ್ರಮುನೀಂದ್ರ, ಉದ್ದಾನ ಚರಪುಂಗವ, ಅನ್ನದಾನೀಶ, ರೇವಣಸಿದ್ಧದೇಶಿಕ, ಚಿಕ್ಕವೀರದೇಶಿಕರುಗಳನ್ನು ಭಕ್ತಿಯಿಂದ ಸ್ಮರಿಸಿದ್ದು, ಇವರಲ್ಲಿ ಉದ್ಧಾನ ಚರಪುಂಗವನಿಂದ ನಂತರದವರೆಲ್ಲರೂ ಧನಗೂರಿನವರಾಗಿ ಕಂಡು ಬರುತ್ತಾರೆಂದು, ಬಿ.ಶಿವಮೂರ್ತಿ ಶಾಸ್ತ್ರಿಗಳು 'ಮಹಾಕವಿ ಷಡಕ್ಷರ ದೇವ' ಪುಸ್ತಕದಲ್ಲಿ ಹೇಳಿದ್ದಾರೆ. ಷಡಕ್ಷರದೇವನು ಭಕ್ತಿ ಗೀತೆಗಳನ್ನು ರಚಿಸಿದ್ದು 'ಶಿವಸ್ತವಮಂಜರಿ' ಯಲ್ಲಿ ಅನಾದಿ ಸಿದ್ಧಲಿಂಗ ವೀರಭದ್ರ, ಬಸವೇಶ್ವರ, ನೀಲಾಂಬಿಕೆ, ಇವರುಗಳ ಮೇಲೆ ಬರೆದ ಗೀತೆಗಳಿವೆ. ಷಡಕ್ಷರನ ಇನ್ನೆರಡು ಕೃತಿಗಳೆಂದರೆ ವೃಷಭೇಂದ್ರ ವಿಜಯ ಹಾಗೂ 'ರಾಜಶೇಖರವಿಳಾಸ' (೧೬೫೫). ಈ ಕೃತಿಗಳು, ವಿದ್ವತ್ ವರ್ಗವನ್ನು ಗಮನದಲ್ಲಿರಿಸಿ ಬರೆದಿರುವ ಮಹಾಕಾವ್ಯಗಳಾಗಿದೆ. ಈ ಕವಿಗೆ ಹನ್ನೊಂದನೇ ವರ್ಷದಲ್ಲಿಯೇ ಕವಿತೆ ರಚಿಸುವ ಶಕ್ತಿ ಬಂದಿತ್ತೆಂದು 'ನೆರೆದೇಕಾದಶ ವರ್ಷದ ಹರೆಯದೊಳಭವ ಪ್ರಸಾದ ಬಲದಿಂ ಕವಿತಾ ತರುಣಿ ಷಡಕ್ಷರ ದೇವನ ನೆರವಿಲ್ಲದೆ ವರಿಸಿರ್ದಳರಿದನೆ ವಿಬುಧರ್' ಎಂಬ ಪದ್ಯದ ಮೂಲಕ ಆತನೇ ಹೇಳಿಕೊಂಡಿದ್ದಾನೆ. ಇವನ ಕಾವ್ಯಗಳು ಶ್ಲೇಷೆ ಮತ್ತು ಉತ್ಪ್ರೇಕ್ಷಾಲಂಕಾರಗಳಿಗೂ, ರೂಪಕ, ದೃಷ್ಟಾಂತ, ಯತಿ, ಉಪಮೆ, ಶಬ್ದಚಿತ್ರ, ಪ್ರಾಸ, ಉಚಿತ ಪದಪ್ರಯೋಗ, ಪದಮೈತ್ರಿ ಮುಂತಾದ ಉತ್ತಮ ಗುಣಗಳಿಗೂ ಹೆಸರಾಗಿವೆ. ವೀರಶೈವ ಧರ್ಮಶಾಸ್ತ್ರದಲ್ಲಿ ಪರಿಣತನಾದ ಈತ ಧನಗೂರಿನ ಮಠಾಧ್ಯಕ್ಷನಾಗಿದ್ದು, ಸನ್ಯಾಸಿಯಾದರೂ ಕಾವ್ಯ ರಚನೆಯ ಬಗ್ಗೆ ಆಸಕ್ತಿ ಹೊಂದಿದ್ದನೆಂಬುದು ಅವನ ಕೃತಿಗಳಿಂದ ತಿಳಿದು ಬರುತ್ತದೆ. ಷಟ್ಪದಿ, ರಗಳೆ, ಸಾಂಗತ್ಯ ಮೊದಲಾದ ದೇಶೀ ಛಂದಸ್ಸುಗಳಲ್ಲಿ ಕಾವ್ಯ ರಚನೆಯಾಗತೊಡಗಿದ ಸಂದರ್ಭದಲ್ಲಿ, ಹಳೆಗನ್ನಡ ಭಾಷೆಯ ಬಳಕೆ ಕುಗ್ಗುತ್ತಿದ್ದಾಗ, ಕನ್ನಡದ ಚಂಪೂ ಶೈಲಿಯ ರಚನೆಯನ್ನು ಪುನಃ ಜಾರಿಗೊಳಿಸಿ, ಉಳಿದ ಆಶ್ರಿತ ಕವಿಗಳೂ ಈ ದಿಸೆಯಲ್ಲಿ ಕೃತಿ ರಚನೆ ಮಾಡಲು ಷಡಕ್ಷರದೇವ ಸ್ಫೂರ್ತಿಯ ಸೆಲೆಯಾದನು. ಈತನಿಗೆ ಸರಸಜನಮಾನಿತ, ಉಭಯ ಕವಿತಾ ವಿಶಾರದ, ಯೋಗಿಜನಮಂಡನ, ಷಟ್ ಸ್ಥಲಶಾಸ್ತ್ರ ದರ್ಶನಾಂಕ ಎಂಬ ಬಿರುದುಗಳಿದ್ದವು.

ಶ್ರೀರಂಗಪಟ್ಟಣದ ಶ್ಯಾನುಭೋಗ ವೆಂಕಟರಮಣಯ್ಯನವರು (೧೭೯೦) 'ಮೈಸೂರು ರಾಜರ ಚರಿತ್ರೆ' ಇವರ ಗದ್ಯ ಗ್ರಂಥ. ಇಲ್ಲಿ ಕಾವ್ಯವೇ ಮುಖ್ಯವಾಗಿದೆಯಾದರೂ ಇತಿಹಾಸದ ದಾಖಲೆಗೆ ಆಕರ ಸಾಮಗ್ರಿಗಳಾಗುವಂಥ ಮಾಹಿತಿಯನ್ನು ಇದು ಒದಗಿಸಿಕೊಡುತ್ತದೆ. ಸಂಸ್ಕೃತದಲ್ಲಿ ಕಂಡುಬರುವ 'ಬಹುಲೋಪಾಖ್ಯಾನ'ದ ಕಥಾವಸ್ತುವುಳ್ಳ 'ಗೋವಿನಹಾಡು' ಕೃತಿಯನ್ನು ಕನ್ನಡದಲ್ಲಿ ಬರೆದವನು ಮದ್ದೂರಿನ ನರಸಿಂಹಸ್ವಾಮಿಯ ಒಕ್ಕಲು ಇರಬಹುದೆಂದು

ತರ್ಕಿಸಲಾಗಿದ್ದು, ಇವನು ವೈದ್ಯನಾಥಪುರದವನಿರಬೇಕೆಂದೂ ಊಹಿಸಲಾಗಿದೆ. 'ಪದ್ಮನಾಭನೆ ಪರಂಧಾಮನೆ ಮದ್ದೂರ ಶ್ರೀ ನಾರಸಿಂಹನೆ ಮುದ್ದುವರಗಳ ಕೊಡುವ ನಿಮಗೆಯು ನಮೋ ನಮೊ ಮಂಗಳಂ' ಎಂಬ ಸಾಲುಗಳ ಆಧಾರದ ಮೇಲೆ ಈತ ಮದ್ದೂರಿನವನಿರಬಹುದೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಜಿಲ್ಲೆಗೆ ಸೇರಿದ ಚಿನ್ಮಯ ಕವಿ (೧೭೫೦)ಯು 'ತಾರಕ ನಿರಂಜನ' ಎಂಬ ಗ್ರಂಥವನ್ನು ಹಾಡಿನ ರೂಪದಲ್ಲಿ ಬರೆದಿದ್ದಾನೆ. ಹೈದರಾಲಿಯ ಆಡಳಿತದಲ್ಲಿ ಕರಣಿಕರಾಗಿದ್ದು (೧೭೬೩) ೧೯ ವರ್ಷ ಕಾಲ ಅವನನ್ನು ಹತ್ತಿರದಿಂದ ನೋಡಿದ ಕಛೇರಿ ಕೃಷ್ಣಪ್ಪನವರು ಹೈದರಾಲಿಯ ರಾಜಕೀಯ ಜೀವನಾಂಶಗಳನ್ನು ಒಳಗೊಂಡಿರುವ 'ಹೈದರ್ ನಾಮೆ' ಕೃತಿಯನ್ನು ರಚಿಸಿದ್ದಾರೆಂದು ಬಿ.ನಂಜುಂಡಸ್ವಾಮಿ ಅವರು ತುಮಕೂರು ಜಿಲ್ಲೆಯ ಶೀಬಿಗ್ರಾಮದ ನರಸಿಂಹ ದೇವಾಲಯದಲ್ಲಿ ಲಭ್ಯವಾಗಿರುವ ಶಾಸನಪಾಠವೊಂದರ ಆಧಾರದ ಮೇಲೆ ನಿರ್ಧರಿಸಿದ್ದಾರೆ. ಹೈದರ್ ನಾಮೆಯನ್ನು ಬರೆದು ಮುಗಿಸಿದ್ದು ೧೭೮೪ರಲ್ಲಿ ಹೈದರ್‌ನ ನಿಧನದ ೧೮ ತಿಂಗಳ ನಂತರ. ಈ ಕೃತಿ, ಇದೇ ಕೃಷ್ಣಪ್ಪನ ಮಗ ನಲ್ಲಪ್ಪನ ರಚನೆ ಎಂದು ಈ ಮೊದಲು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು.

ಇಟಲಿ ದೇಶದ ನೇಪಲ್ಸ್ ನಗರಕ್ಕೆ ಸಮೀಪವಿರುವ ಪಲೆರ್ಮೊ ಎಂಬ ಪಟ್ಟಣದಲ್ಲಿ ಹುಟ್ಟಿದ ಲಿಯೊನಾರ್ಡೊ ಚಿನ್ನಮಿ ಎಂಬ ಕ್ರೈಸ್ತಮತ ಪ್ರಚಾರಕ ಕ್ರಿ.ಶ.೧೬೪೯ರಲ್ಲಿ (ಕಂಠೀರವ ನರಸರಾಜ ಒಡೆಯರ ಕಾಲ) ಶ್ರೀರಂಗಪಟ್ಟಣಕ್ಕೆ ಬಂದಿದ್ದು, ಕೆಲಕಾಲ ನೆಲೆಸಿ, ಧರ್ಮ ಪ್ರಚಾರಕ್ಕೆ ಪೂರಕವಾದ ಪುಸ್ತಕಗಳನ್ನಲ್ಲದೆ ಕನ್ನಡ ವ್ಯಾಕರಣ ಮತ್ತು ಶಬ್ದಕೋಶವನ್ನು ಬರೆದುದಾಗಿ ತಿಳಿದು ಬಂದಿದ್ದರೂ, ಇವುಗಳ ಪ್ರತಿಗಳು ಲಭ್ಯವಾಗಿಲ್ಲ. ಕ್ರೈಸ್ತ ಧರ್ಮದ ಮುಖ್ಯ ತತ್ವಗಳ ಸುದೀರ್ಘ ಉಪದೇಶ, ಸಂಕ್ಷಿಪ್ತ ಉಪದೇಶ, ಕ್ರೈಸ್ತೋತ್ತರ ಚರಿತ್ರೆ, ಕ್ರೈಸ್ತ ತತ್ವಗಳ ಸಮರ್ಥನೆ ಹಾಗೂ ಮೈಸೂರು ರಾಜ್ಯದಲ್ಲಿ ಪ್ರಚಲಿತ ಧಾರ್ಮಿಕ ಪಂಗಡಗಳ ಹಾಗೂ ಮೂಢನಂಬಿಕೆಗಳ ಖಂಡನೆ, ಇವು ಚಿನ್ನಮಿ ಕನ್ನಡದಲ್ಲಿ ಬರೆದ ಪುಸ್ತಕಗಳಾಗಿವೆ. ೧೬೯೧ರಲ್ಲಿ ಮತಾಂತರಗೊಂಡ ಗೊಲ್ಲನ ಮಗಳೊಬ್ಬಳನ್ನು ಹಿಂದೂ ಗೊಲ್ಲನೊಬ್ಬ ವಿವಾಹವಾಗಲು ಹೊರಟಾಗ ಚಿಕ್ಕದೇವರಾಜ ಒಡೆಯರವರೆಗೆ ಚಿನ್ನಮಿಯ ಬಗ್ಗೆ ದೂರು ಹೋಗಿ ಈತ ಬರೆದ ಪುಸ್ತಕಗಳನ್ನು ಪರಿಶೀಲಿಸಬೇಕಾದ ಸಂದರ್ಭ ಬಂದಿತು. ಆಗ ಚಿಕ್ಕದೇವರಾಜ ಒಡೆಯರು ಯಾವುದೋ ಕಾರಣಕ್ಕೆ ಕೋಪಗೊಂಡು ಕೆಲವು ಪುಸ್ತಕಗಳನ್ನು ಸುಟ್ಟು ಹಾಕಿಸಿದ್ದಾಗಿ ತಿಳಿದುಬರುತ್ತದೆ. ಈತನ ವ್ಯಾಕರಣ ಮತ್ತು ನಿಘಂಟುಗಳೂ ಆಗ ಸುಟ್ಟುಹೋಗಿರಬಹುದಾದ ಸಾಧ್ಯತೆಗಳಿವೆ.

### ಸಂಸ್ಕೃತ ಸಾಹಿತ್ಯ

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಸಂಸ್ಕೃತ ಭಾಷೆ ಹಾಗೂ ಕಾವ್ಯ ಶ್ಲೋಕಗಳು ಬಳಕೆಯಾಗಿರುವುದನ್ನು ಈ ಹಿಂದೆ ನೋಡಲಾಗಿದೆ. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ರಾಮಾನುಜಾಚಾರ್ಯರು ಇಲ್ಲಿಗೆ ಬರುವ ವೇಳೆಗೆ ಕ್ರಿಯಾಶೀಲವಾಗಿದ್ದ ಅಗ್ರಹಾರ, ಬ್ರಹ್ಮಪುರಿ ಇತ್ಯಾದಿಗಳಲ್ಲಿ ಸಂಸ್ಕೃತ ವ್ಯಾಸಂಗಕ್ಕೂ ಅನುಕೂಲವಿದ್ದು, ಸಂಸ್ಕೃತ ಭಾಷೆ, ಕಾವ್ಯ ಇತ್ಯಾದಿಗಳು ಈ ಪ್ರದೇಶದಲ್ಲಿ ಪರಿಚಿತವಿದ್ದಿತೆಂದು ಹೇಳಬಹುದು. ಗಂಗ ಅರಸರು ಸಂಸ್ಕೃತ ಸಾಹಿತ್ಯಕ್ಕೂ ಪ್ರೋತ್ಸಾಹ ನೀಡಿದ್ದು, ಹನ್ನೊಂದನೇ ಶತಮಾನದ ಮಧ್ಯ ಭಾಗದವರೆಗೂ ಜಿಲ್ಲೆಯ ಕೆಲಭಾಗ ಗಂಗರ ಅಧೀನದಲ್ಲಿದ್ದು ಈ ಪ್ರದೇಶದಿಂದ ಸಂಸ್ಕೃತ ಸಾಹಿತ್ಯ ರಚನೆಯಾಗಿರಬಹುದಾದ ಸಾಧ್ಯತೆ ಇದೆ. ಗಂಗ ಅರಸನಾದ ದುರ್ವಿನೀತನ ಆಸ್ಥಾನಕ್ಕೆ (ಸುಮಾರು ಕ್ರಿ.ಶ.೬೦೦) ಸಂಸ್ಕೃತದ ಸುಪ್ರಸಿದ್ಧ ಕವಿ ಭಾರವಿ ಬಂದಿದ್ದನೆಂಬ ಹೇಳಿಕೆ ಇದೆಯಲ್ಲದೆ, ದುರ್ವಿನೀತನು ಇದೇ ಭಾರವಿಯ 'ಕಿರಾತಾರ್ಜುನೀಯ'ದ ಹದಿನೈದನೆಯ ಅಧ್ಯಾಯಕ್ಕೆ ಟೀಕೆಯನ್ನು ಬರೆದನೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ಈತನು ಗುಣಾಢ್ಯನ 'ಬೃಹತ್ಕಥೆ' ಯನ್ನು ಪೈಶಾಚಿಕ ಭಾಷೆಯಿಂದ ಸಂಸ್ಕೃತಕ್ಕೆ ಅನುವಾದಿಸಿದನೆಂದೂ, ಪಾಣಿನಿಯ ಸಂಸ್ಕೃತ ವ್ಯಾಕರಣಕ್ಕೆ 'ಶಬ್ದಾವತಾರ'

ಎಂಬ ಟೀಕೆಯನ್ನು ಬರೆದನೆಂದೂ ತಿಳಿದುಬರುತ್ತದೆ. ಆದರೆ ಈ ಯಾವ ಕೃತಿಗಳೂ ಉಪಲಬ್ಧವಿಲ್ಲ. ಇವು ಕನ್ನಡದ ರಚನೆಯಾಗಿರಬಹುದೆಂದೂ ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಮಂಡ್ಯ ಬಳಿಯ ಕಿರಂಗೂರಿನ ಅನಂದಾಳ್ವಾರ್ (೧೦೫೪-೧೧೫೪) ಆವರು ರಾಮಾನುಜರ ನಿರ್ದೇಶನದಂತೆ ತಿರುಪತಿಗೆ ಪೂಜೆಗೆ ತೆರಳಿದ್ದು ಅವರ ವಂಶಸ್ಥರಾದ ಅಪ್ಪಯ್ಯಂಗಾರ್ಯರು 'ಅನಂತಾಯದರ್ಶ' ಎಂಬ ಸ್ತೋತ್ರ ಗ್ರಂಥ ಬರೆದಿದ್ದಾರೆ. ಇವರ ಪುತ್ರ (ಚಿಕ್ಕ) ಗೋವಿಂದ ರಾಜರು ವಿಜಯ ನಗರದ ಅಸ್ಥಾನದ ವಿದ್ವತ್ ಸಭೆಯಲ್ಲಿ ವಾದಿಸಿ ಗೆದ್ದುದಕ್ಕೆ ಕೃಷ್ಣದೇವರಾಯನಿಂದ ಮಂಡ್ಯ ಬಳಿಯಲ್ಲಿ ಕೆಲವು ಗ್ರಾಮಗಳು ಜಹಗೀರಿಯಾಗಿ ದೊರೆಯಿತು (೧೫೧೬ ರಲ್ಲಿ).

ಮಂಡ್ಯ ಜಿಲ್ಲೆಯ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಿಗೆ ಮೇಲುಕೋಟೆಯ ವಿದ್ವಾಂಸರ ಕೊಡುಗೆ ಅಪಾರವಾಗಿದೆ. ಸಂಸ್ಕೃತ ಭಾಷಾ ಸಾಹಿತ್ಯ ವಿಭಾಗದಲ್ಲಿ ಹೆಸರಿಸಬಹುದಾದ ಆನಂದಾಳ್ವರ್, ತಿರುಮಲಾರ್ಯ, ಸಿಂಗರಾರ್ಯ, ಯೋಗಾನಂದಭಟ್ಟ, ಅಳಸಿಂಗಭಟ್ಟ, ಅಕ್ಕಾರಕ್ಕಣಿ ಮಹಾಭಾಷ್ಯಂ ಅಣ್ಣಂಗರಾಚಾರ್ಯ, ಜಗ್ಗು ಸಿಂಗರಾರ್ಯ, ದೇವಶಿಖಾಮಣಿ ತಿರುಮಲೈಯ್ಯಂಗಾರ್ಯ, ಅನಂತಾಚಾರ್ಯ, ಕುಪ್ಪಣ್ಣಯ್ಯಂಗಾರ್ ಸ್ವಾಮಿ, ಆಳ್ವಾರ್ ಸ್ವಾಮಿ, ಪು.ತಿ.ನರಸಿಂಹಚಾರ್ ಮುಂತಾದ ಅನೇಕ ವಿದ್ವಾಂಸರು, ಮೇಲುಕೋಟೆಯ ಮೂಲದವರು. ಮೇಲುಕೋಟೆ ಸಂಸ್ಕೃತ ಕಾಲೇಜು ಸುಮಾರು ೧೮೫೦ರಿಂದ ಕಾರ್ಯನಿರ್ವಹಿಸುತ್ತಿರುವ ಹಳೆಯ ಸಂಸ್ಥೆಯಾಗಿದ್ದು, ಸಂಸ್ಕೃತ ಭಾಷೆ, ಮತ್ತು ಸಾಹಿತ್ಯವನ್ನು ಪ್ರಸಾರ ಮಾಡುವಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ.

ಅಳಸಿಂಗಾರ್ಯ ಮತ್ತು ಸಿಂಗಮ್ಮನವರ ಮಗನಾದ ತಿರುಮಲೈ ಅಯ್ಯಂಗಾರ್ಯರು (೧೬೪೫-೧೭೦೬), ಚಿಕ್ಕದೇವರಾಜ ಒಡೆಯರ ಆಸ್ಥಾನದ ವಿದ್ವಾಂಸ ಮತ್ತು ಮಂತ್ರಿಯಾಗಿದ್ದವರು, ಸಂಸ್ಕೃತ ಹಾಗೂ ಪ್ರಾಕೃತಗಳೆರಡರಲ್ಲೂ ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದು ಸಂಸ್ಕೃತದಲ್ಲಿ ಯದುಗಿರಿ ನಾರಾಯಣಸ್ತವ, ಯದುಗಿರಿ ನಾಯಕೀಸ್ತವ, ಲಕ್ಷ್ಮೀನರಸಿಂಹಸ್ತವ, ಮಂಜುಳ ಕೇಶವಾಸ್ತವ, ರಾಜಗೋಪಾಲಸ್ತವ, ಪರವಾಸುದೇವಸ್ತವ, ಪಶ್ಚಿಮರಂಗರಾಜಸ್ತವ, ಏಕಾದಶಿನಿರ್ಣಯ ಮುಂತಾದ ಕೃತಿಗಳನ್ನು ರಂಜನೀಯ ಶೈಲಿಯಲ್ಲಿ ರಚಿಸಿದ್ದಾರೆ. ಮಳವಳ್ಳಿ ತಾಲೂಕಿನ ಧನಗೂರಿನವರಾದ ಷಡಕ್ಷರದೇವರು ಕನ್ನಡವಲ್ಲದೆ ಸಂಸ್ಕೃತದಲ್ಲಿ ಎಡಿಯೂರು ಸಿದ್ಧಲಿಂಗ ಯತಿಯನ್ನು ಕುರಿತು 'ಸಿದ್ಧಲಿಂಗಸ್ತವಂ' ಎಂಬ ಗೀತೆ ಹಾಗೂ ಕೆಲವು ಭಕ್ತಿಗೀತೆಗಳನ್ನು ರಚಿಸಿದ್ದಾರೆ.

ಸಿಂಗರಾರ್ಯರು (೧೬೮೦) ತಿರುಮಲಾರ್ಯರ ಸೋದರ. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದವರು. 'ರಾಘವಾಭ್ಯುದಯ' ಮತ್ತು 'ಗೀತರಂಗೇಶ್ವರಂ' ಎಂಬ ಕೃತಿಗಳನ್ನು ಬರೆದಿರುವಂತೆ ತೋರುತ್ತದೆ. ಆದರೆ ಇವೆರಡೂ ಲಭ್ಯವಾಗಿಲ್ಲ. ಅವರ ಸೋದರ ರಚಿಸಿದ ಯದುಗಿರಿ ನಾರಾಯಣಸ್ತವ ಹಾಗೂ ಶ್ರೀಶೈಲ ದಿನಚರ್ಯ ಎಂಬ ಕೃತಿಗಳಿಗೆ ಸಿಂಗರಾರ್ಯ ಟೀಕೆಯನ್ನು ಬರೆದಿದ್ದಾರೆ. ವಿದ್ವಾಂಸ ಅಳಸಿಂಗಭಟ್ಟರ ತಂದೆಯಾದ ಯೋಗಾನಂದಭಟ್ಟರು (೧೭೩೫-೧೮೧೦) 'ಈಶ್ವರಸಂಹಿತೆ' ಕಾತ್ಯಾಯನಗೃಹ್ಯಸೂತ್ರ ಪ್ರಯೋಗ ಮತ್ತು 'ಪರಾಶರ ಗೃಹ್ಯಸೂತ್ರ' ಗಳಿಗೆ 'ಸಾತ್ವತಾಮೃತಂ' ಎಂಬ ವಿವರವುಳ್ಳ ಟೀಕಾ ಕೃತಿಯನ್ನು ಬರೆದಿದ್ದಾರೆ. ಮೈಸೂರು ಒಡೆಯರ ಹಾಗೂ ಹೈದರಾಲಿಯ ಆಸ್ಥಾನಗಳಲ್ಲಿ ಮಂತ್ರಿಗಳಾಗಿ ಅಥವಾ ಕವಿಗಳಾಗಿ ಇದ್ದವರು ಸಾಹಿತ್ಯಾತ್ಮಕ ದೃಷ್ಟಿಯಿಂದ ಮಹತ್ವದಲ್ಲದಿದ್ದರೂ, ಕೆಲವು ಕಾವ್ಯಗಳನ್ನು ರಚಿಸಿದರು. ಶಾಲ್ಯದ ಕೃಷ್ಣರಾಜ (೧೭೪೮-೧೭೭೫) ಕನ್ನಡ, ತೆಲುಗು ಮತ್ತು ಸಂಸ್ಕೃತಗಳಲ್ಲಿ ಕೃತಿಗಳನ್ನು ರಚಿಸಿದ್ದು, ಅಕ್ಷರಾದಿ ನಿಘಂಟು, ಅನುಭವ ರಸಾಯನ, ಅಪ್ರಸ್ತುತ ಪ್ರಶಂಸ ಶತಕ ಅಥವಾ ಪ್ರಾಣೇಶ್ವರ ಶತಕ, ಬೇಕಿನ ಕೀರ್ತಿಶಾಸ್ತ್ರ, ನಳನಾಟಕ, ನಿಜದೀಪಕರತ್ನ, ಬಾಹಟಕ

ಟೀಕೆ, ಸದಾಶಿವ ಶತಕ ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆ. ಹದಿನೆಂಟನೆಯ ಶತಮಾನದ ವೆಂಕಾಮಾತ್ಯ (೧೭೭೧) ಹೈದರಾಲಿಯ ಮಂತ್ರಿಯಾಗಿದ್ದನು. ಷಡ್ದರ್ಶನಗಳಲ್ಲಿ ಅಪಾರ ಪರಿಣತನಿದ್ದ ಇವನು ಸಂಸ್ಕೃತದಲ್ಲಿ ರೂಪಕಗಳನ್ನು, ಗದ್ಯ ಪದ್ಯ ಕಾವ್ಯಗಳನ್ನು, ಅಲಂಕಾರ ಶತಕಗಳನ್ನೂ ರಚಿಸಿದ್ದಾನೆ. ರೂಪಕದ ಪ್ರಭೇದಗಳಾದ ಭಾಣ ಹಾಗೂ ಪ್ರಹಸನಗಳನ್ನು ಬರೆದಿದ್ದು, ಸಮಾಜವನ್ನು ವಿಡಂಬಿಸಿ ರಚಿಸಿರುವ 'ಕುಕ್ಷಿಂಬರಭೈಕ್ಷವ' ಇಂಥ ಒಂದು ಅಪ್ರಕಟಿತ ಪ್ರಹಸನವಾಗಿದೆ. ಕಾವ್ಯಮಿಮಾಂಸೆ, ಧ್ವನಿ ವೈವಿಧ್ಯ ಮತ್ತು ರಸಪ್ರಕಾರಗಳ ಚರ್ಚೆಯನ್ನು ಬೆಳೆಸಿರುವ 'ಅಲಂಕಾರ ಮಣಿದರ್ಪಣ' ಎಂಬುದು ಇವನ ಮೇರು ಕೃತಿ. ಸುಮಾರು ಹನ್ನೆರಡು ಕೃತಿಗಳನ್ನು ರಚಿಸಿದ ಅಳಸಿಂಗ ಭಟ್ಟರು (೧೭೯೫–೧೮೬೦) ಯೋಗಾನಂದ ಭಟ್ಟರ ಪುತ್ರರು. ಮೂಲತ: ಈ ಜಿಲ್ಲೆಯವರಾಗಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರ ವಿಶ್ವಾಸಿಯಾಗಿದ್ದರು. ಇವರು ಮೇಲುಕೋಟೆಯ ವೈರಮುಡಿ ಉತ್ಸವದ ಸಾಂಪ್ರದಾಯಿಕ ಅಂಶಗಳನ್ನು, ರಾಮಾನುಜರ ಅವಧಿಯ ಚಾರಿತ್ರಿಕ ಘಟನೆಗಳಾಗಿ ಪರಿಗಣಿಸಬಹುದಾದ ಅಂಶಗಳನ್ನು ಒಳಗೊಂಡ ಕೃತಿಯಾದ 'ವಜ್ರ ಮುಕುಟೀ ವಿಲಾಸ ಚಂಪು' ವನ್ನು ರಚಿಸಿದ್ದಾರೆ. ರಾಮಾನುಜ ನಿಯಮನಪ್ಪಡಿ, ತಿರುವಾರಾಧನ ಕ್ರಮ, ಪಾಂಚರಾತ್ರ ಪ್ರಯೋಗ ಸಂಪ್ರದಾಯ ದೀಪಿಕ ಮತ್ತು ಈಶ್ವರ ತಂತ್ರಭಾಷ್ಯಗಳ ಟೀಕೆಗಳೊಂದಿಗೆ ರಚಿಸಿದ, ಸಾತ್ವತಾಮೃತಸಾರ, ಸಾತ್ವತ ತಂತ್ರಭಾಷ್ಯ, ಯತಿರಾಜಶತಕ ಇವು ಅಳಸಿಂಗಭಟ್ಟರು ಬರೆದ ಇನ್ನಿತರ ಕೃತಿಗಳು.

'ಮಹಾಭಾಷ್ಯಂ' ಅನ್ನು ಕಂಠಪಾಠ ಮಾಡಿ, ಅದನ್ನು ನೋಡದೆಯೇ ಅದರ ಬಗ್ಗೆ ಮಾತಾಡಬಲ್ಲವರಾಗಿದ್ದ ಅಣ್ಣಂಗಾರಾಚಾರ್ಯ (೧೮೦೦–೧೮೮೪) 'ದಶಕೋಟಿರತ್ನಮಾಲಾ' ಎಂಬ ಕೃತಿಯನ್ನು ಕುಣಿಗಲ್ ರಾಮಾಸ್ವಾಮಿಯವರ 'ನವಕೋಟಿ' ಕೃತಿಗೆ ವಿರುದ್ಧವಾಗಿ ಬರೆದಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರು ಈ ಬಗ್ಗೆ ಏರ್ಪಡಿಸಿದ ವಾಗ್ವಾದದಲ್ಲೂ ಇತರ ವಿದ್ವಾಂಸರೆಲ್ಲರನ್ನು ಸೋಲಿಸಿದ್ದರೆಂದು ತಿಳಿದುಬರುತ್ತದೆ.

ಮೊದಲನೇ ಜಗ್ಗುಸಿಂಗರಾರ್ಯ (೧೮೨೦–೧೮೮೬), ಹಲವಾರು ತಾಳೆಗರಿ ಹಸ್ತಪ್ರತಿಗಳನ್ನು ರಚಿಸಿದ್ದಾರೆ. ವ್ರತಮುಕ್ತ ಸಾರಾವಳಿ, ಯುದುಗಿರಿ ನಾಯಿಕಾಸ್ತವಂ ಮತ್ತು ಯತಿರಾಜಸ್ತವ, ಸಿಂಗರಾರ್ಯರು ಬರೆದ ಕೃತಿಗಳು. ಇವರಿಗೆ 'ಸಾಹಿತ್ಯ ಸರಸ್ವತಿ' ಎಂಬ ಬಿರುದಿತ್ತು.

ಸಿಂಗ್ರಾಚಾರ್ಯರ ಮಗ ಅನಂತಾಚಾರ್ಯ (೧೮೨೩–೧೮೬೩)ರು, ಆದಿಶೇಷನ ಕೃಪೆಯಿಂದ ಹುಟ್ಟಿದರೆಂಬ ಕಾರಣದಿಂದ ಆನಂದಾಳ್ವರ್ ಎಂದೂ ಕರೆಯಲ್ಪಟ್ಟರು. ತಂದೆಯಿಂದ ವೇದ, ವೇದಾಂಗ, ಮಹಾಭಾಷ್ಯ, ಶ್ರೀಭಾಷ್ಯ ಮತ್ತು ಭಗವದ್ವಿಷಯಗಳನ್ನೂ, ಗೂಳಿಬಾಳಾಚಾರ್ಯರಿಂದ ನ್ಯಾಯ ಮತ್ತು ಮೀಮಾಂಸೆಗಳನ್ನೂ, ಹಾಗೂ ಶ್ರವಣಬೆಳಗೊಳದಲ್ಲಿ ಜೈನ ಮತ್ತು ಬೌದ್ಧ ಸಾಹಿತ್ಯವನ್ನೂ ಅಭ್ಯಾಸ ಮಾಡಿದ್ದರು. ಮೇಲುಕೋಟೆಯಲ್ಲಿದ್ದ ಅವಧಿಯಲ್ಲಿ 'ರಸಮುರುಳೀಧರ' 'ಕುವಲಯಾನಂದ ಮಕರಂದ', ಕೃಷ್ಣರಾಜ ಕಲೋದ್ಧಾರ ಇತ್ಯಾದಿ ಅಲಂಕಾರಿಕ ಪಠ್ಯಗಳನ್ನು ರಚಿಸಿದ್ದರು. ಧಾರವಾಡ, ಪುಣೆ, ಮುಂತಾದ ಕಡೆ ನಡೆದ ವಾದಗೋಷ್ಠಿಗಳಲ್ಲಿ ಘನ ವಿದ್ವಾಂಸರನ್ನು ತಮ್ಮ ವಾದದಿಂದ ಸೋಲಿಸಿದ ಆನಂದಾಳ್ವರು ತಮ್ಮ ೨೭ನೇ ವಯಸ್ಸಿನಲ್ಲಿಯೇ ಆಸ್ಥಾನ ವಿದ್ವಾಂಸರಾಗಿದ್ದರು. ಇವರು ರಚಿಸಿದ 'ತ್ರಿದಂಡಧಾರಣ ತಪ್ತ ಚಕ್ರಾಂಕನ' ಎಂಬ ವಿದ್ವತ್ ಕೃತಿಯನ್ನು ಗುರುತಿಸಿದ ಮೈಸೂರು ಮಹಾರಾಜರು, ತಮ್ಮ ಷಷ್ಠಪೂರ್ತಿ ಶಾಂತಿ ಸಮಾರಂಭದಲ್ಲಿ ಇವರಿಗೆ 'ವಿದ್ವನ್ ಮಂಡಳಿ ಸಾರ್ವಭೌಮ' ಎಂಬ ಬಿರುದು ನೀಡಿ ಗೌರವಿಸಿದ್ದರು. 'ಚತುಶ್ಯತಕೋಟಿ', 'ನ್ಯಾಯಭಾಸ್ಕರ', ಎಂಬ ಖಂಡನ ಗ್ರಂಥಗಳು, ಶ್ರೀಭಾಷ್ಯದ ಮೇಲಿನ ವಾದಗ್ರಂಥ, ನಟವತತ್ವ ವಿಭೂಷಣಂ, ಸಿದ್ದಾಂತ ಸಿದ್ದಾಂಜನ, ಕೃಷ್ಣರಾಜಯಶೋಡಿಂಡಿಮ ಮುಂತಾದವು ಆನಂದಾಳ್ವಾರ ಇತರ ರಚನೆಗಳು. ಮೇಲುಕೋಟೆಯ 'ಸಂಸ್ಕೃತ' ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಕುಪ್ಪಣ್ಣಯ್ಯಂಗಾರ್‌ಸ್ವಾಮಿ (೧೮೪೦–೧೯೨೦) ಯವರು, ನ್ಯಾಯ, ವೈಶೇಷಿಕ, ಸಾಂಖ್ಯಾ, ಯೋಗ, ಮೀಮಾಂಸ ಮತ್ತು ವೇದಾಂತಗಳಲ್ಲಿ ಪಾಂಡಿತ್ಯ

ಹೊಂದಿದ್ದು, ಆನಂದಾಳ್ವರ (ವಾದಾವಳಿ) ಅನೇಕ ಪುಸ್ತಕಗಳಿಗೆ ಟಿಪ್ಪಣಿಗಳನ್ನೂ ಬರೆದಿದ್ದಾರೆ. ತರ್ಕತೀರ್ಥ ಮಹಾವಿದ್ವಾನ್ ಲಕ್ಷ್ಮೀತಾತಾಚಾರ್ಯ ಸ್ವಾಮಿ ಮತ್ತು ಮಹಾವಿದ್ವಾನ್ ಯತಿರಾಜಸ್ವಾಮಿಗಳೂ ಸೇರಿದಂತೆ, ಅನೇಕ ಸಂಸ್ಕೃತ ವಿದ್ವಾಂಸರು ಕುಪ್ಪಣಯ್ಯಂಗಾರ್ಯರ ಶಿಷ್ಯರಾಗಿದ್ದರು. ಇವರಿಂದ ತರಬೇತಿ ಪಡೆದ ಆ ಇಬ್ಬರು ಶಿಷ್ಯರು, ಮೈಸೂರು ಮಹಾರಾಜರ ಆಸ್ಥಾನದಲ್ಲಿ ಒಂದೇ ಒಂದು ಬಾರಿ ನಡೆಸಿದ 'ಮಹಾವಿದ್ವಾನ್' ಪರೀಕ್ಷೆಯಲ್ಲಿ ಉತ್ತೀರ್ಣರಾದರು.

'ದಶವಿದ್ಯ ಚಕ್ರವರ್ತಿ' ಎಂಬ ಬಿರುದಿನಿಂದ ಗೌರವಿಸಲ್ಪಟ್ಟ ಆಳ್ವಾರ್ ಸ್ವಾಮಿ (೧೮೫೦–೧೯೨೪) ಯವರು ಲಕ್ಷ್ಮೀತಾತಾಚಾರ್ಯ ಸ್ವಾಮಿಯವರ ಮಗ. ಉಭಯವೇದಾಂತ, ತರ್ಕ ಮತ್ತು ಅಲಂಕಾರಗಳನ್ನು ಹತ್ತು ಭಾಷೆಗಳಲ್ಲಿ ವೈವಿಧ್ಯ ವಿಚಾರಗಳೊಂದಿಗೆ ಭಾಷಣ ಮಾಡಬಲ್ಲ ಜನಪ್ರಿಯ ವಾಗ್ಮಿಯಾಗಿದ್ದರು. ಮೇಲುಕೋಟೆಯಲ್ಲಿ ಸಂಸ್ಕೃತ ಕಾಲೇಜಿನ ಸ್ಥಾಪನೆಗೆ ಕಾರಣಕರ್ತರಾದವರಲ್ಲಿ ಇವರೂ ಒಬ್ಬರು.

ಸಾಹಿತ್ಯ ಅಲಂಕಾರ ಮತ್ತು ಆಗಮಗಳಲ್ಲಿ ಪಾಂಡಿತ್ಯ ಪಡೆದಿದ್ದ ಯದುಗಿರಿ ಯತಿರಾಜ ಸಂಪತ್ ಕುಮಾರ ರಾಮಾನುಜ ಜೀಯರ್ ಸ್ವಾಮಿ (ಆಸುರಿ ಆನಂದಾಳ್ವಾರ್ ೧೮೯೫–೧೯೪೩) ಯವರು ಹೆಸರಾಂತ ಸಂಸ್ಕೃತ ಕವಿ. ಕಾವ್ಯ ಮಂಜರಿ, ಶ್ರೀ ಪೌಷ್ಕರ ಸಂಹಿತ, ಅಷ್ಟಶ್ಲೋಕಿ, ಶ್ರೀಸದ್ ವಿದ್ಯಾವಿಜಯಂ, ಅದ್ವೈತ ವಿದ್ಯಾವಿಜಯಂ, ತಾಪಸವತ್ಸರಾಜನಾಟಕ, ಕಾವ್ಯಪ್ರಕಾರ, ವೇದಾಂತ ವಿಜಯಮಂಗಲ ದೀಪಿಕ, ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಶ್ರೀರಂಗಪಟ್ಟಣದಲ್ಲಿ ಜನಿಸಿದ ಎಸ್.ಜಿ.ನರಸಿಂಹಾಚಾರ್ (೧೮೬೨–೧೯೦೭) ಎಸ್. ಜಿ. ಗೋವಿಂದ ರಾಜ ಆಯ್ಯಂಗಾರ್ (೧೮೭೫–೧೯೪೬), ಪು.ತಿ.ನರಸಿಂಹಾಚಾರ್ (೧೯೦೫–೧೯೯೮) ರವರೂ, ಸಂಸ್ಕೃತ ಭಾಷಾ ಪರಿಣಿತರಾಗಿದ್ದು, ಕೆಲವು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ (ಅರುಣೋದಯ ಭಾಗ ನೋಡಿ). ಕಲ್ಕಿಭಗವತ್ ಸಿಂಹ ಎಂಬ ಕಾವ್ಯನಾಮದಲ್ಲಿ ಕೃತಿಗಳನ್ನು ರಚಿಸಿದ ಎಂ.ಟಿ.ನರಸಿಂಹಾಚಾರ್ಯ (೧೮೬೭–೧೯೩೫)ರವರು, ಮೇಲುಕೋಟೆಯ ಸಿಂಗ್ರಾಚಾರ್ಯ ಹಾಗೂ ಸಿಂಗಾರಮ್ಮನವರ ಮಗ, ಸಂಸ್ಕೃತ, ಇಂಗ್ಲಿಷ್, ಕನ್ನಡ ಮತ್ತು ತಮಿಳು ಭಾಷೆಗಳನ್ನು ಬಲ್ಲವರಾಗಿದ್ದು ಉತ್ತಮ ಕವಿತೆಗಳನ್ನು ರಚಿಸುತ್ತಿದ್ದ ಕವಿ. ಕಥಾಮಾಲ, ಗೀತಾರ್ಥ ಸಾರಾಮೃತ, ಅನಂತಾರ್ಯಸಚ್ಚರಿತಾಮೃತಂ, ಜ್ಞಾನಾಮೃತತರಂಗಿಣಿ ಮುಂತಾದ ಕೃತಿಗಳನ್ನು ಬರೆದಿರುವರಲ್ಲದೆ, 'ಪರಿವರಿತ್ಯ ರತ್ನಮಾಲಾ' ಕೃತಿಯಲ್ಲಿ 'ಅನಂತಾರ್ಯಸಚ್ಚರಿತಾಮೃತಂ' ಕೃತಿಯನ್ನು 'ಅನಂತಾರ್ಯ ವೈಭವ' ವಾಗಿ ಕನ್ನಡಕ್ಕೂ ಅನುವಾದಿಸಿದ್ದಾರೆ. ಅಲ್ಲದೆ ಕನ್ನಡದಲ್ಲೂ ಹಲವು ಕೃತಿಗಳನ್ನು ರಚಿಸಿದ್ದಾರೆ.

'ನಂಜರಾಜಯಶೋಭೂಷಣ' ಕೃತಿಯ ರಚನೆಕಾರರೂ; ಹಲವು ಲೇಖಕರಿಗೆ ಸಂಸ್ಕೃತ ನಾಟಕಗಳನ್ನು ಬರೆಯಲು ಮತ್ತು ಪ್ರದರ್ಶಿಸಲು ಪ್ರೋತ್ಸಾಹಿಸಿದವರೂ ಆದ ಟಿ.ಎ.ಎಂಬೆರುಮಾನಾರ್ ಸ್ವಾಮಿ (೧೮೭೪–೧೯೪೬) ಯವರು ಮೇಲುಕೋಟೆಯವರು. ಇವರು ಬರೋಡದ ಮಹಾರಾಜರಿಂದ 'ವೇದಾಂತ ವಿದ್ಯಾ ವಿಶಾರದ' ಎಂಬ ಬಿರುದನ್ನೂ, ಮೈಸೂರು ಮಹಾರಾಜರಿಂದ 'ಪಂಡಿತರತ್ನಂ' ಹಾಗೂ 'ಮಹಾ ವಿದ್ವಾನ್' ಎಂಬ ಬಿರುದುಗಳನ್ನೂ ಪಡೆದಿದ್ದರು.

ವೇದ, ವೇದಾಂತ, ವ್ಯಾಕರಣ, ನ್ಯಾಯ, ಅಲಂಕಾರ, ಮುಂತಾದವುಗಳಲ್ಲಿ ಪಾಂಡಿತ್ಯ ಪಡೆದ ಹಲವು ಸಂಸ್ಕೃತ ವಿದ್ವಾಂಸರು, ಮೇಲುಕೋಟೆಯ ಸಂಸ್ಕೃತ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಅಥವಾ ಅಧ್ಯಾಪಕರಾಗಿ ಉತ್ತಮ ಸೇವೆ ಸಲ್ಲಿಸುವ ಮೂಲಕ ಜಿಲ್ಲೆಯಲ್ಲಿ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸಿದ್ದಾರೆ.

ದೇವಶಿಖಾಮಣಿ ತಿರುಮಲೈಯ್ಯಂಗಾರ್ಯ (೧೮೨೦–೧೯೧೦) ಕುಪ್ಪಣ್ಣಯ್ಯಂಗಾರ್ ಸ್ವಾಮಿ (೧೮೪೦–೧೯೨೦), ಪುರೋಹಿತ ತಿರುನಾರಾಯಣ ಅಯ್ಯಂಗಾರ್ (೧೮೫೦–೧೯೪೧) ಈಲಪುಳ್ಳೆ ವರದಾಚಾರ್ (೧೮೬೦–೧೯೩೬), ಬಾಲಧ್ವನಿ ಜಗ್ಗು ವೆಂಕಟಾಚಾರ್ಯ (೧೮೭೪–೧೯೬೦) ಲಕ್ಷ್ಮೀತಾತಾಚಾರ್ಯಸ್ವಾಮಿ (೧೮೭೪–೧೯೨೬), ಕೈಂಕರ್ಯಂ

ಶೆಲ್ವನಾರಾಯಣ ಐಯಂಗಾರ್ (೧೮೮೮–೧೯೬೮), ಎಚ್.ಶ್ರೀನಿವಾಸಾಚಾರ್ (೧೮೯೦–೧೯೬೪), ಶ್ರೀರಂಗಂ ಸಂಪತ್ಕುಮಾರಾಚಾರ್ (೧೮೯೫–೧೯೮೩), ಎ.ಜಿ.ತಿರುನಾರಾಯಣ ಐಯಂಗಾರ್ (೧೮೯೫–೧೯೬೫), ವೆಂಕಟನರಸಿಂಹಾಚಾರ್ (೧೮೯೫–೧೯೯೩), ಸ್ಥಾನೀಕಂ ಸಂಪತ್ಕುಮಾರಾಚಾರ್ (೧೮೯೮–೧೯೬೨), ಪಂಡಿತರಾಜ ಆಳ್ವಾರ್ ತಿರುಮಲೈಯ್ಯಂಗಾರ್ (೧೯೦೬–೧೯೭೩), ಚಕ್ರವರ್ತಿ ಶ್ರೀನಿವಾಸ ವರದಾಚಾರ್ (೧೯೧೦), ಬಿ.ವಿ.ನರಸಿಂಹಾಚಾರ್ (೧೯೨೬) ಶ್ರೀರಂಗಂ ನರಸಿಂಹಾಚಾರ್ಯ (೧೯೨೮–೧೯೨೩), ಮುಡುಂಬೈ ನರಸಿಂಹಾಚಾರ್ಯ (೧೯೩೧), ಎನ್.ಎಸ್.ಕೃಷ್ಣಮಾಚಾರ್ (೧೯೩೪), ಎಂ.ಎ.ಲಕ್ಷ್ಮೀತಾತಾಚಾರ್ (೧೯೩೮) ಮುಂತಾದವರು ಈ ಕಾಲೇಜಿನಲ್ಲಿ ಸೇವೆ ಸಲ್ಲಿಸಿರುವಂತಹ ಸಂಸ್ಕೃತ ವಿದ್ವಾಂಸರಾಗಿದ್ದಾರೆ. ಪ್ರಸ್ತುತ ವಿದ್ವಾಂಸರಾದ ಅರೈಯರ್ ಶ್ರೀರಾಮ ಶರ್ಮ (೧೯೩೪) ಮೇಲುಕೋಟೆಯ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ದೇವ ಶಿಖಾಮಣಿ ತಿರುಮಲೈಯ್ಯಂಗಾರ್ಯರು, 'ಸಂಪತ್ ಕುಮಾರ ಚರಿತಂ' ಕೃತಿಯ ಕತೃವೂ, 'ಮುಕುಂದ ಮಾಲಾ' ವನ್ನು ಕನ್ನಡಕ್ಕೆ ತಂದ ಅನುವಾದಕರೂ ಆಗಿದ್ದಾರೆ. ಕೋಲ್ಕತ್ತಾ ಸರ್ಕಾರದಿಂದ ನಡೆಸಲಾದ ತರ್ಕತೀರ್ಥ ಪರೀಕ್ಷೆಯಲ್ಲಿ ಮೊದಲಿಗರಾಗಿ ಪದಕ ಮತ್ತು ಕಡಗಗಳಿಂದ ಸನ್ಮಾನಿಸಲ್ಪಟ್ಟ ಲಕ್ಷ್ಮೀತಾತಾಚಾರ್ಯಸ್ವಾಮಿಗಳು ಆನಂದಾಳ್ವಾರ್‌ರ ಕೃತಿಗಳ ಕುರಿತಾದ ವಿರೋಧೀ ವಿಮರ್ಶೆಗಳನ್ನು ಖಂಡಿಸುವಲ್ಲಿ ಸಮರ್ಥರಾಗಿದ್ದರು. ಬಾಲಧ್ವನಿ ಜಗ್ಗು ವೆಂಕಟಾಚಾರ್ಯರು, ಹಲವಾರು ಕಾವ್ಯ ಮತ್ತು ನಾಟಕಗಳನ್ನು ಬರೆದಿದ್ದಾರೆ. ಮಹಾಭಾರತದ ಘಟನೆಗಳ ವೈವಿಧ್ಯಮಯ ವರ್ಣನೆಗಳಿರುವ ಹತ್ತು ದೃಶ್ಯಗಳಲ್ಲಿ ಬರೆದ 'ಋಣವಿಮೋಚನ' ವು ನಾಟಕಗಳಲ್ಲಿ ಪ್ರಮುಖವಾದುದು. ಅಲಂಕಾರ ಶಾಸ್ತ್ರದಲ್ಲಿ ಆಳವಾದ ಅಧ್ಯಯನ ಮಾಡಿ ಬರೆದಿರುವ 'ಕುವಲಯಾನಂದ ಚಂದ್ರಿಕ' ವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಕೃತಿ. 'ಯಮಕಿಂಕರ ಸಂವಾದ', 'ರಸಗಂಗಾಧರಮರ್ಮ ಪ್ರಕಾಶ ಮರ್ಮೋದ್ಘಾಟನಂ', ಆಳ್ವಾರರ ಜೀವನ ಚರಿತ್ರಾಂಶಗಳುಳ್ಳ ದಿವ್ಯಸೂರಿಚರಿತಂ, ಇವು ಉತ್ತಮ ಮಟ್ಟದ ಕೃತಿಗಳಾಗಿವೆ. ಜಗ್ಗು ವೆಂಕಟಾಚಾರ್ಯರು, ಯದುಗಿರಿ ಮಹಾತ್ಮ ಸಂಗ್ರಹ, ಕಾವೇರಿ ಮಹಿಮಾದರ್ಶ ಕೃಷ್ಣರಾಜು ಸೇತು ಬಂಧನ, ವ್ಯಾಘ್ರತಟಾಕ, ಮುಂತಾಗಿ ಒಂಭತ್ತು ಕಾವ್ಯ ಕೃತಿಗಳನ್ನೂ, 'ಯತೀಂದ್ರ ಪ್ರವಣಪ್ರಭಾವ, ವೇದಾಂತ ವಿಚಾರಮಾಲಾ ಮತ್ತು ಗೀತಾರ್ಥ ಸಂಗ್ರಹ ವಾಕ್ಯ' ಮುಂತಾದ ಗದ್ಯ ಕೃತಿಗಳನ್ನೂ, ಯುವಚರಿತ ಹಾಗೂ 'ಮುಕ್ತಕಂ' ಎಂಬೆರಡು ಅಪ್ರಕಟಿತ ನಾಟಕಗಳನ್ನೂ ಬರೆದಿದ್ದಾರೆ. ಕೋಲ್ಕತ್ತಾ ಮಹಾರಾಜರಿಂದ 'ಸಾಂಖ್ಯತೀರ್ಥ' ವೆಂಬ ಬಿರುದೂ, 'ಶಾಸ್ತ್ರಕವಿರತ್ನ' ಹಾಗೂ 'ಸಾಹಿತ್ಯ ರತ್ನಂ' ಎಂಬ ಇತರ ಪ್ರಶಸ್ತಿಗಳೂ ಇವರಿಗೆ ದೊರೆತಿವೆ.

ವಿದ್ಯಾರ್ಥಿ ದೆಸೆಯಲ್ಲೇ ಕವಿತೆಗಳನ್ನು ಬರೆಯತೊಡಗಿದ ದೇವಶಿಖಾಮಣಿ ಅಳಸಿಂಗ್ರಾಚಾರ್ಯರು 'ಶ್ರೀ ಚಲುವನಾರಾಯಣ ಶತಕಂ ಮತ್ತು ಪಾರ್ಥಸಾರಥಿ ಶತಕಂ' ಎಂಬ ಕೃತಿಗಳನ್ನೂ (ಅರಣೋದಯ ಕಾಲ ನೋಡಿ) ಜಗ್ಗು ಸಿಂಗರಾರ್ಯರು, 'ಯದುಶೈಲ ಚಂಪು' ಮತ್ತು 'ಕೃಷ್ಣ ಕಥಾ ರಹಸ್ಯಂ' ಎಂಬ ಕೃತಿಗಳನ್ನೂ ಬರೆದಿದ್ದಾರೆ. ಎ.ಜಿ.ತಿರುನಾರಾಯಣ ಅಯ್ಯಂಗಾರ್ಯರು ಕಾವ್ಯ ಮತ್ತು ವೇದಾಂತದ ಬಗ್ಗೆ ಹಲವಾರು ಕೃತಿಗಳನ್ನೂ ರಚಿಸಿದ್ದಾರೆ. ಆಯುರ್ವೇದ, ಜ್ಯೋತಿಷ್ಯ, ಆಗಮ, ಮಂತ್ರ ಮತ್ತು ತಂತ್ರಗಳಲ್ಲಿ ಪಾಂಡಿತ್ಯವಿದ್ದ ಸ್ಥಾನೀಕಂ ಸಂಪತ್‌ಕುಮಾರಾಚಾರ್‌ರವರು, ಈಶಾವಾಸ್ಯಭಾಷ್ಯ ಪರಿಷ್ಕಾರ ಖಂಡನ, ಕುವಲಯಾನಂದ ಚಂದ್ರಿಕ ಮಂಡನ, ಸತಭಯಾಷಣೀ ಖಂಡನಂ, ಇತ್ಯಾದಿ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀರಂಗಂ ನರಸಿಂಹಾಚಾರ್ಯರು ಕೂರೇಶರ 'ಅತಿ ಮಾನುಸಸ್ತವ' ವನ್ನೂ ಮುಡುಂಬೈ ನರಸಿಂಹಾಚಾರ್ಯರು ತಮಿಳಿನ ವೇದಾಂತ ಕೃತಿಯಾದ 'ಭಗವದ್ವಿಷಯಂ' ಅನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ.

ನಾರಾಯಣಪುರದ ಎಂ.ಎಸ್.ಶ್ರೀನಿವಾಸ ಅಯ್ಯಂಗಾರ್ಯ (೧೮೮೦–೧೯೪೦)ರು ಮೇಲುಕೋಟೆಯ ಸಂಸ್ಕೃತ ಕಾಲೇಜಿನಲ್ಲಿ ಓದಿದವರು. 'ಸಂಕಲ್ಪ ಸೂರ್ಯೋದಯ' 'ವೇದಾಂತ ದೇಶಿಕ' ಮತ್ತು 'ಮಹಾಕವಿ ಕ್ಷೇಮೇಂದ್ರನ

ಸೇವ್ಯ ಸೇವಕೋಪದೇಶ' ಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ವಿವಿಧ ಸಂಸ್ಕೃತ ವಿದ್ವಾಂಸರ ಉಪನ್ಯಾಸಗಳ ಬಗ್ಗೆ ಬರೆದ ವಿಮರ್ಶೆಗಳು ಹಾಗೂ ಕನ್ನಡದಲ್ಲಿ ಮೂರು ಸಂಪುಟಗಳಲ್ಲಿ ಬರೆದ 'ಸಂಸ್ಕೃತ ಕವಿ ಚರಿತ' ಗಳಲ್ಲದೆ ಇವರು ಸಂಸ್ಕೃತದಲ್ಲಿ ಬರೆದ ಲೇಖನಗಳು ಹಾಗೂ ಕವಿತೆಗಳು ಹಲವಾರು.

ಮೇಲುಕೋಟೆಯಲ್ಲಿ 'ಶ್ರೀ ಯದುಶೈಲ ಪ್ರೌಢಶಾಲೆ' ಯ ಆರಂಭಕ್ಕೆ ಗೋವಿಂದ ರಾಮಾನುಜ ಜೀಯರ್ ಸ್ವಾಮಿ (೧೮೮೦–೧೯೫೩) ಯವರು ಜಗ್ಗು ವಕುಲಭೂಷಣರ 'ಭಾವ ಬೋಧಿನಿ' ಅಥವ 'ಪ್ರಸನ್ನ ಕಾಶ್ಯಪ' ಕ್ಕೆ ಟೀಕೆಗಳನ್ನು ಬರೆದಿದ್ದಾರೆ. ಚೆನ್ನೈನ 'ಶ್ರೀವೈಷ್ಣವ ಗ್ರಂಥ ಮುದ್ರಾಪಕ ಸಭಾ' ದಿಂದ ಹಲವಾರು ಪುಸ್ತಕಗಳನ್ನು ಸಂಪಾದಿಸಿ ಪ್ರಕಾಶಿಸಿದ್ದಾರೆ.

ಸನ್ಯಾಸತ್ವ ಕೈಗೊಂಡು ಶ್ರೀಯದುಗಿರಿ ಯತಿರಾಜ ಮಠಕ್ಕೆ ೧೯೫೪ರಲ್ಲಿ 'ಜೀಯರ್' ಆದ ಅಯ್ಯನಯ್ಯಂಗಾರ್ ಸ್ವಾಮಿ (೧೮೮೭–೧೯೭೦) ಮದ್ದೂರಿನ ರಾಮಾನುಜಪುರದವರು. ಇವರು ಸಾಹಿತ್ಯ, ತರ್ಕ, ವೇದಾಂತ ಮತ್ತು ಮೀಮಾಂಸೆಗಳಲ್ಲಿ ಪರಿಣತರಿದ್ದು, ಶ್ರೀಭಾಷ್ಯ, ಸೂತ್ರಪ್ರಕಾಶಿಕ, ವೇದಾಂತ ವಾದಾವಳಿ ಮತ್ತು ವಿಶಿಷ್ಟಾದ್ವೈತ ಕುರಿತು ಪ್ರವಚನ ನೀಡುತ್ತಿದ್ದರು. 'ಉಪನಿಷತ್' ಹಾಗೂ 'ಆಚಾರ್ಯ ಹೃದಯಂ' ಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅನೇಕ ಲೇಖನಗಳನ್ನೂ ಮತ್ತು ಸಂಸ್ಕೃತ ಪುಸ್ತಕಗಳಿಗೆ ಮುನ್ನುಡಿಗಳನ್ನೂ ಬರೆದ ಆರ್.ಎ.ಕೃಷ್ಣಮಾಚಾರ್ಯ (೧೮೯೯–೧೯೭೪) ರು ಮೇಲುಕೋಟೆಯಲ್ಲಿ ಸಂಸ್ಕೃತ ಸಮ್ಮೇಳನ ನಡೆಸಿದ ಪಂಡಿತ ಮಂಡಳಿಯ ಕಾರ್ಯದರ್ಶಿಯಾಗಿದ್ದರು.

ಜಗ್ಗು ಆಳ್ವಾರ್ ಅಯ್ಯಂಗಾರರು (೧೯೦೨–೧೯೯೪) ೨೦ನೇ ಶತಮಾನದ ಪ್ರಮುಖ ಕವಿಗಳಲ್ಲಿ ಒಬ್ಬರು. ಪಂಡಿತರೂ, ವಿದ್ವಾಂಸರೂ ಮೆಚ್ಚುವಂತೆ, ಸಂಸ್ಕೃತ ಸಾಹಿತ್ಯದಲ್ಲಿ ಅಪಾರವಾಗಿ ಕೃಷಿ ಮಾಡಿದ್ದಾರೆ. ಪುರಾತನವಾದ ಶಾಸ್ತ್ರೀಯ ಸಂಸ್ಕೃತ ಸಾಹಿತ್ಯ ಕವಿತೆಯ ಸೃಜನಶೀಲ ಸಂಪ್ರದಾಯವನ್ನು ಅದೇ ಆಳ ಮತ್ತು ಹರವುಗಳಿಂದ ರಚಿಸುವ ರೀತಿಯನ್ನು ಪುನಃ ೨೦ನೇ ಶತಮಾನದಲ್ಲಿ ಜಾರಿಗೆ ತಂದಿದ್ದಾರೆ. ಜಯಂತಿಕ (ಗದ್ಯ), ಯತಿರಾಜ ಚಂಪು ಇತ್ಯಾದಿ ನಾಲ್ಕು ಚಂಪೂ ಕಾವ್ಯ, ಹಯವದನ ಸ್ತೋತ್ರಂ, ಮತ್ತಿತರ ೨೪ ಸ್ತೋತ್ರಗಳು, ಏಳು ಕನ್ನಡ ಪುಸ್ತಕಗಳು, ಕಥೆ, ನಾಟಕಗಳು, ಹಾಗೂ ಚಿತ್ರಕಥೆಗಳು ಇವರ ಇನ್ನಿತರ ರಚನೆಗಳಾಗಿವೆ. ಇವರಿಗೆ ಕೇಂದ್ರ ಮತ್ತು ರಾಜ್ಯಸರ್ಕಾರದ ಪ್ರಶಸ್ತಿಗಳು ಲಭಿಸಿವೆ. ವಿಶಿಷ್ಟಾದ್ವೈತ, ನ್ಯಾಯ, ಪ್ರಾಚೀನನ್ಯಾಯಗಳಲ್ಲಿ ಪಾರಂಗತರಾಗಿದ್ದ ಅಕ್ಕಾರಕ್ಕಣಿ ಸಂಪತ್ ಕುಮಾರಾಚಾರ್ಯ (೧೯೦೬–೧೯೮೩) ಶರಣಾಗತಿ ಶಾಸ್ತ್ರ, ರಾಮಾಯಣ, ಮುಂತಾಗಿ ಅನೇಕ ಕೃತಿಗಳನ್ನು ರಚಿಸಿದ್ದಲ್ಲದೆ, ಪ್ರತಿವಾದಿ ಭಯಂಕರರೆನಿಸಿದ ಅಣ್ಣಂಗಾರಾಚಾರ್ಯರ ಕೃತಿಗಳನ್ನು ಸಂಸ್ಕೃತ, ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್‌ಗಳಿಗೆ ಭಾಷಾಂತರಿಸಿದ್ದಾರೆ. 'ವರವರ್ಣಿನಿ' ಎಂಬ ಬಿರುದನ್ನು ಪಡೆದಿದ್ದ, ಶ್ರೀಮತಿ ಯಗ್ಗಮ್ಮಾಳ್ (೧೯೧೫–೧೯೯೫) ಅವರು ಜಗ್ಗು ಆಳ್ವಾರ್ ಐಯಂಗಾರರ ಪತ್ನಿ. ಭಕ್ತರ ಆಶಯದಂತೆ ಕೆಲವು ಧಾರ್ಮಿಕ ವ್ಯಕ್ತಿಗಳನ್ನು ಪರಿಚಯಿಸಿಕೊಡುವ ಕೃತಿಗಳನ್ನು ನೀಡಿದ್ದಾರೆ. ಇವರ ಆತ್ಮಚರಿತ್ರೆಯ ಕೃತಿಯಾದ 'ಶ್ರೀಲೋಕಗದ್ಯಂ' ನಲ್ಲಿ ಈ ಬಗ್ಗೆ ವಿವರಗಳಿವೆ. ಶ್ರೀರಂಗಪಟ್ಟಣದ ಕೃಷ್ಣಮಾಚಾರಿ (೧೮೩೦) ಶಬ್ದಮಂಜರಿ, ಧತುಮಂಜರಿ, ಹೊಸಗನ್ನಡ ನುಡಿಗನ್ನಡಗಳನ್ನು, ಜಿ. ತಿಮ್ಮಣ್ಣಯ್ಯ (೧೮೮೧–೧೯೬೩), ಶಿವ ಮಹಾಪುರಾಣ, ವಿಷ್ಣು ಪುರಾಣಗಳನ್ನು ರಚಿಸಿದ್ದಾರೆ.

ಅರೈಯರ್ ಶ್ರೀನಿವಾಸ ಅಯಂಗಾರ್ಯ (೧೯೧೭)ರು, 'ಸ್ವಾನುಭೂತಿ ತ್ರಿವೇಣಿ', 'ಜ್ಞಾನದೇವಚಿಂತನಿಕ' ಎಂಬ ಕೃತಿಗಳನ್ನು ಬರೆದಿದ್ದಾರೆ. ಕವಿಯಾದ ಜಗ್ಗು ಸುದರ್ಶನಾಚಾರ್ಯರು ತಮ್ಮ ತಂದೆ ಜಗ್ಗು ವೆಂಕಟಾಚಾರ್ಯ ಸ್ವಾಮಿಗಳ ಹಾಗೂ ಎಂಬಾರ್ ಜೀಯರ್ ಸ್ವಾಮಿಯವರ ಹಲವಾರು ಕೃತಿಗಳ ಸಂಪಾದನೆಯನ್ನು ಮಾಡಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಗೌರವಗಳೂ ಇವರಿಗೆ ಸಂದಿವೆ.

ರಾಮಾನುಜರ ವಿಮರ್ಶಾತ್ಮಕ ಕೃತಿಗಳ, ಉಪನಿಷತ್‌ಗಳ ಹಾಗೂ ಸಂಸ್ಕೃತದ ಮಹತ್ವದ (ಅಪರೂಪದ) ಕೃತಿಗಳ ಪ್ರಕಾಶನ ಕಾರ್ಯನಡೆಸುತ್ತಿರುವ ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿರುವ, ಎಂ.ಎ.ಲಕ್ಷ್ಮೀತಾತಾಚಾರ್ಯ (೧೯೩೮) ರವರು ನ್ಯಾಯ ಮತ್ತು ವೇದಾಂತಗಳಲ್ಲಿ (ಪೂರ್ವ ಮೀಮಾಂಸ, ನ್ಯಾಯ ಮತ್ತು ಸಾಂಖ್ಯಾ) ಪರಿಣತರಾಗಿದ್ದು, ವ್ಯಾಕರಣ ಹಾಗೂ ಅಲಂಕಾರಗಳ ಕುರಿತಾಗಿಯೂ ಉತ್ತಮವಾಗಿ ಬೋಧಿಸಬಲ್ಲ ಪ್ರಾಧ್ಯಾಪಕರಾಗಿದ್ದಾರೆ. ವಿವಿಧ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿರುವ ಇವರು, 'ಆಪಸ್ತಂಭ ಧರ್ಮಸೂತ್ರ' ವನ್ನು ಕನ್ನಡಕ್ಕೂ, ಕೂರೇಶನ 'ಶ್ರೀಸ್ತವ'ವನ್ನು ಇಂಗ್ಲೀಷಿಗೂ ಅನುವಾದಿಸಿದ್ದಾರೆ. ಇವರು ಕೆಲಕಾಲ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲೂ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಆಶುಕವಿ, ಅರೈಯರ್ ಶ್ರೀರಾಮಶರ್ಮರು (೧೯೪೩) ಲೋಕಾಚಾರ್ಯ ಪಂಚಾಶತ್, ನರಸಿಂಹ ಸಹಸ್ರನಾಮ ಮುಂತಾದ ಹಲವಾರು ಕೃತಿಗಳ ಸಂಪಾದಕರಾಗಿ, ಆಸ್ಮಕ ಚಂಪು, ವಿಷ್ಣು ಸಹಸ್ರನಾಮ ಭಾಷ್ಯವಾರ್ತಿಕಂ, ವಾತ್ಸಾಯನೀಯವಾರ್ತಿಕಂ, ಅರ್ಥಶಾಸ್ತ್ರೋಪನಿಷದ್ ವಿವರಣಂ ಮುಂತಾದ ಗ್ರಂಥಗಳ ಲೇಖಕರಾಗಿ ಶಾಸ್ತ್ರ, ನಾಟಕ, ಸ್ತೋತ್ರ, ವ್ಯಾಕರಣ ಇತ್ಯಾದಿ ಸುಮಾರು ೫೦೦ಕ್ಕೂ ಹೆಚ್ಚು ವಿಷಯಗಳ ಕುರಿತಾದ ಕಿರುಕೃತಿಗಳ ಕರ್ತರಾಗಿ, ಪುಸ್ತಕಗಳನ್ನು ಪ್ರಕಾಶಿಸಿದ್ದಾರೆ.

ಕಂಚಿ ಅಳಹಿಯ ಮನವಾಳ ಜೀಯರ್ ಬೆಳತೂರು ಗೋಪಾಲಾಚಾರ್ (೧೮೯೦–೧೯೬೫); ಉಭಯ ಮೀಮಾಂಸ ಪಂಡಿತರಾದ ದೇವಶಿಖಾಮಣಿ ರಾಮಾನುಜಾಚಾರ್ಯ (೧೮೭೩–೧೯೩೭); ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಧರ್ಮಶಾಸ್ತ್ರದ ಪ್ರಾಧ್ಯಾಪಕರಾಗಿ ಹಲವು ಕೃತಿಗಳನ್ನು ಬರೆದ (ಯದುಶೈಲ ಶತಕಂ, ಈಶಾವಾಸ್ಯೋಪನಿಷದ್ ಸಾರ) ನೀಲಾತ್ತಂಪಳ್ಳಿ ವೆಂಕಟನರಸಿಂಹಾಚಾರ್ (೧೮೯೧–೧೯೯೧) ರವರು; ಧರ್ಮಶಾಸ್ತ್ರ, ನವೀನನ್ಯಾಯ ಹಾಗೂ ವೇದಗಳಲ್ಲಿ ತಲಸ್ಪರ್ಶಿ ವಿದ್ವಾಂಸರೆನಿಸಿದ ಎಂಬಾರ ನರಸಿಂಹಾಚಾರ್ ಸ್ವಾಮಿ (೧೮೯೫–೧೯೮೩) ಯವರು; ಸಂಸ್ಕೃತದಲ್ಲಿ ಶಶಿರೇಖಾ ಪರಿಣಯ, ಕನ್ನಡದಲ್ಲಿ ಪ್ರಣಯಪರಾಗ ಹಾಗೂ ಹಿಂದಿಯಲ್ಲಿ ಅಮರಕೋಶದಂತಹ ಕೃತಿಗಳನ್ನು ಬರೆದ ಎಂಬಾರ್ ವರದಾಚಾರ್ಯ (೧೯೩೨) ಮತ್ತು ಇವರ ಸೋದರರಾಗಿ 'ನ್ಯಾಯ ಸಿದ್ಧಾಂಜನ' ಎಂಬ ವಿಷಯದಲ್ಲಿ ಡಾಕ್ಟೊರೇಟ್ ಪಡೆದ ಎಂಬಾರ್ ರಂಗಾಚಾರ್ಯ (೧೯೩೫) ಮುಂತಾದವರು ಮೂಲತ: ಮೇಲುಕೋಟೆಯವರು. ''ವಜ್ರಮುಕುಟೀ ವಿಲಾಸ ಚಂಪು'' ವಿಷಯದಲ್ಲಿ ಡಾಕ್ಟರೇಟ್ ಪಡೆದ ಕೊಡೆ ರಾಜಗೋಪಾಲಾಚಾರ್ ಅವರೂ ಮೂಲತಃ ಮೇಲುಕೋಟೆಯವರು.

**ಸಂಸ್ಕೃತ ಸಂಶೋಧನಾ ಸಂಸ್ಥೆ, ಮೇಲುಕೋಟೆ:** ಸಂಸ್ಕೃತ ಭಾಷಾ ಸಂರಕ್ಷಣೆ ಮತ್ತು ಸಂಶೋಧನೆಗಾಗಿ ಕ್ರಮ ಕೈಗೊಳ್ಳಲು ಕರ್ನಾಟಕ ಸರ್ಕಾರವು ೧೯೭೬ರಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿತು. ಆ ಮೂಲಕ ೧೯೭೮ರಲ್ಲಿ ಸಂಸ್ಕೃತ ಸಂಶೋಧನಾ ಸಂಸ್ಥೆಯು ಮೇಲುಕೋಟೆಯಲ್ಲಿ ಸ್ಥಾಪಿಸಲ್ಪಟ್ಟಿತು. ಸಂಸ್ಕೃತ ಭಾಷೆಯ ಬೆಳವಣಿಗೆ, ಸಂಶೋಧನೆ, ಶಿಕ್ಷಣ, ಪುಸ್ತಕಗಳ ಪ್ರಕಾಶನ, ಇತ್ಯಾದಿಗಳ ಕುರಿತಾಗಿ ಈ ಸಂಸ್ಥೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಎಂ.ಎ.ಲಕ್ಷ್ಮೀತಾತಾಚಾರ್ಯರು ಇದರ ನಿರ್ದೇಶಕರಾಗಿದ್ದಾರೆ. ೧೧ ರಿಂದ ೧೮ನೇ ಶತಮಾನದವರೆಗಿನ ಅವಧಿಯಲ್ಲಿ, ವಿಶಿಷ್ಟಾದ್ವೈತದ ಕುರಿತು ಬರೆದ ಸುಮಾರು ೨೦೦ ಕೃತಿಗಳ (೧೦ ಸಂಪುಟಗಳಲ್ಲಿ) ಸಂಪಾದನೆ; ರಾಮಾನುಜಾಚಾರ್ಯರ ಶ್ರೀಭಾಷ್ಯ, ವೇದಾರ್ಥ ಸಂಗ್ರಹ, ಇತ್ಯಾದಿ ಒಂಭತ್ತು ಪ್ರಮುಖ ಕೃತಿಗಳ ಮರುಸಂಪಾದನೆ; ರಂಗರಾಮಾನುಜ ಭಾಷ್ಯ ಮತ್ತು ಉಪನಿಷತ್ತುಗಳ ಮೇಲೆ ವಿಶಿಷ್ಟಾದ್ವೈತದ ಟೀಕೆಗಳು; ವೇದಾಂತ, ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಕೃತಿಗಳ ಗ್ರಂಥ ಸೂಚಿ ತಯಾರಿಕೆ ಮೊದಲಾದವು ಈ ಸಂಸ್ಥೆಯ ಸಾಧನೆಗಳು. ಈ ಕಾಲದಲ್ಲಿ ಮರೆಯಾಗುತ್ತಿರುವ ಪುರಾತನ ರೀತಿಯ ವಿದ್ವತ್ ಗೋಷ್ಠಿಗಳಿಗೆ ಪುನರ್ ಚಾಲನೆ ನೀಡುವ ದೃಷ್ಟಿಯಿಂದ ೧೯೮೦ ರಿಂದ ೧೯೯೭ರ ಅವಧಿಯಲ್ಲಿ, ವೇದ, ವೇದಾಂಗ, ಉಪನಿಷತ್ತು ಮುಂತಾದ

ಶಿಬಿರಗಳನ್ನು ನಡೆಸಲಾಗಿದೆ. ಆಧುನಿಕ ಡಿ.ಟಿ.ಪಿ ಸೌಲಭ್ಯವನ್ನೂ ಹೊಂದಿರುವ ಈ ಸಂಸ್ಥೆಯು ಸಂಶೋಧನೆಯ ಫಲಿತಾಂಶ/ವರದಿ, ವಿಚಾರ ಸಂಕೀರ್ಣ ಹಾಗೂ ಶಿಬಿರಗಳ ನಡಾವಳಿಗಳನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿದೆ. ಸಂಸ್ಥೆಯ ಕಾರ್ಯಕಲಾಪಗಳ ವಿಷಯಗಳನ್ನೊಳಗೊಂಡ ತ್ರೈಮಾಸಿಕ ಪತ್ರಿಕೆಯೊಂದನ್ನು ಇಂಗ್ಲೀಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹೊರತರುತ್ತಿದೆ. ಇದಕ್ಕೆ ಸುಮಾರು ೫,೫೦೦ ಸದಸ್ಯರು ಇದ್ದಾರೆ. ಅರ್ಧವಾರ್ಷಿಕ ಪತ್ರಿಕೆಯಾದ 'ತತ್ವದೀಪ'ವು ಧಾರ್ಮಿಕ, ದಾರ್ಶನಿಕ, ಲಲಿತಕಲೆ, ಸಾಹಿತ್ಯ ಮತ್ತು ಸಾಮಾನ್ಯ ವಿಜ್ಞಾನದ ಸಂಗತಿಗಳನ್ನು ಒಳಗೊಂಡಿರುತ್ತದೆ. ಹಲವು ಇಂಗ್ಲಿಷ್ ಮತ್ತು ಕನ್ನಡ ಕೃತಿಗಳ ಜೊತೆಗೆ ಆರು ಸಂಪುಟಗಳ ವಿಶಿಷ್ಟಾದ್ವೈತಕೋಶ, ನಾಲ್ಕು ಸಂಪುಟಗಳ ಶ್ರೀಭಾಷ್ಯ, ಬೃಹದಾರಣ್ಯಕೋಪನಿಷತ್ ಮುಂತಾದ ಹಲವಾರು ಪುಸ್ತಕಗಳು, ಪಟ್ಟಿಗಳು ಈ ಸಂಶೋಧನಾ ಕೇಂದ್ರದಿಂದ ಪ್ರಕಟಗೊಂಡಿವೆ. ೨೫,೦೦೦ ಸಾವಿರಕ್ಕೂ ಹೆಚ್ಚು ಗ್ರಂಥಗಳ ಗ್ರಂಥಾಲಯವನ್ನು ಈ ಸಂಸ್ಥೆ ನಿರ್ವಹಿಸುತ್ತಿದೆ. (ಶಿಕ್ಷಣ ಅಧ್ಯಾಯ ನೋಡಿ)

**ಪರ್ಷಿಯನ್ ಸಾಹಿತ್ಯ:** ಹೈದರ್ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಉರ್ದು ಭಾಷೆಯು ಸಂಸ್ಥಾನದಲ್ಲಿ ಹೆಚ್ಚು ರೂಢಿಯಲ್ಲಿತ್ತು. ಆದರೆ ಟಿಪ್ಪುವಿನ ಆಡಳಿತದ ಅಂತ್ಯಭಾಗದಲ್ಲಿ ಉರ್ದುವಿನ ಸ್ಥಾನವನ್ನು ಆಕ್ರಮಿಸಿಕೊಂಡ ಪರ್ಷಿಯನ್ ಭಾಷೆ, ಆಸ್ಥಾನ ಭಾಷೆಯೂ ಆಯಿತು. ಟಿಪ್ಪು ಮರಣಾನಂತರವೂ ಇದೇ ಪರಿಸ್ಥಿತಿ ಸ್ವಲ್ಪಕಾಲ ಮುಂದುವರಿಯಿತು. ಪರ್ಷಿಯನ್ ಭಾಷೆಯನ್ನು ನಿರರ್ಗಳವಾಗಿ ಮಾತನಾಡುತ್ತಿದ್ದ ಟಿಪ್ಪು, ಆ ಭಾಷೆಯನ್ನು ಚೆನ್ನಾಗಿ ಬಲ್ಲವನಾಗಿದ್ದು, ಅವನ ಖಾಸಗಿ ಪತ್ರವ್ಯವಹಾರ ಹೆಚ್ಚಾಗಿ ಪರ್ಷಿಯನ್ ಭಾಷೆಯಲ್ಲೇ ನಡೆದಿರುವುದು ಕಂಡುಬಂದಿದೆ. ಅವನ ಆಸ್ಥಾನದಲ್ಲಿ ಅನೇಕ ಮಂದಿ ಪರ್ಷಿಯನ್ ಹಾಗೂ ಉರ್ದು ಪಂಡಿತರು ಆಶ್ರಯ ಪಡೆದಿದ್ದರು. ಟಿಪ್ಪು ಒದಗಿಸಿದ ಮಾಹಿತಿಯನ್ನು ಆಧರಿಸಿ ಸುಲ್ತಾನ್ – ಉ – ತಾರೀಖ್ ಎಂಬ ಪರ್ಷಿಯನ್ ಗ್ರಂಥವನ್ನು ಹೈದರಾಬಾದಿನ ನಿಜಾಮನ ಮಂತ್ರಿ, ಅಮೀರ್‌ಆಲಮ್‌ನ ಸೋದರ ಜೀನ್ ಉಲ್ ಅಬ್ದೀನ್ ಶುಸ್ತ್ರೀ ರಚಿಸಿದ್ದಾನೆ. ಹೈದರ್ ಹಾಗೂ ಟಿಪ್ಪು ಸುಲ್ತಾನರ ಆಸ್ಥಾನದಲ್ಲಿ ಮೀರ್ ಮುನ್ಷಿ ಆಗಿ ಸೇವೆ ಸಲ್ಲಿಸುತ್ತಿದ್ದ ಅಮೀರ್ ಹುಸೇನ್ ಆಲಿ ಕಿರ್ಮಾನಿಯೂ, ತನ್ನ ದಿನಚರಿಯನ್ನು ಆಧರಿಸಿ ರಚಿಸಿರುವ ಹೈದರ್ ಷಾ ಅಥವಾ ಹೈದರ್‌ನಾಮಾ ಗ್ರಂಥವು ಹೈದರ್–ಟಿಪ್ಪು ಕಾಲದ ಸಮಕಾಲೀನ ಚಿತ್ರಣವನ್ನು ನೀಡುತ್ತದೆ. ಕಿರ್ಮಾನಿಯು ಸವಣೂರು ನವಾಬರ ಇತಿಹಾಸ ಹಾಗೂ 'ತಾಜ್ ಕಿರಾತ್ ಉಲ್ ಬಿಲಾದ ಉಲ್ ಅಖಿಮ್' ಎಂಬ ಗ್ರಂಥಗಳನ್ನೂ ಬರೆದಿದ್ದು, ಶ್ರೀರಂಗಪಟ್ಟಣದಲ್ಲಿ ಟಿಪ್ಪುವಿನ ಸಮಾಧಿ ಮೇಲಿರುವ ಸೊಗಸಾದ ಪದ್ಯಗಳು ಇವನದೇ ರಚನೆ ಎಂದು ತಿಳಿದು ಬರುತ್ತದೆ. ಟಿಪ್ಪುವಿನ ದ್ವಿತೀಯ ಮಗನಾದ ಗುಲಾಮ್ ಮಹಮದನು (೧೭೮೪) ರಚಿಸಿರುವ 'ಕಾರ್ ನಾಮ ಇ ಹೈದರಿ' ಪರ್ಷಿಯನ್ ಕೃತಿಯು ಭಾರತೀಯ ಹಾಗೂ ಯುರೋಪಿಯನ್ ಕೃತಿಗಳನ್ನು ಆಧರಿಸಿ ಬರೆಯಲ್ಪಟ್ಟಿದ್ದು, ಹೈದರ್‌ನ ಪರ್ಷಿಯನ್ ಜೀವನಕ್ರಮವನ್ನು ನಿರೂಪಿಸುತ್ತದೆ. ಟಿಪ್ಪುವಿನ ಕಾರ್ಯದರ್ಶಿಯಾಗಿದ್ದ ಮೌಲ್ವಿ ಮಹಮದ್ ಹಬೀಬುಲ್ಲಾನು ಆಸ್ತಿ ವಿಭಜನೆಗೆ ಸಂಬಂಧಿಸಿದಂತಹ ಮಹಮದಿ ಕಾಯ್ದೆಗಳನ್ನು ಪರ್ಷಿಯನ್ ಭಾಷೆಯಲ್ಲಿ ರಚಿಸಿದ್ದಾನೆ. ಅದನ್ನು ಬರೆಯುವಲ್ಲಿ ಖಟ್ಟೆ ಜುಲ್ಫಿ (ದುಂಡಾಕಾರದ) ಸುಂದರಲಿಪಿಯನ್ನು ಬಳಸಲಾಗಿದೆ. ಮೌಲ್ವಿ ಸೈಯದ್ ಶಾಬುದ್ದೀನ್ ಖಾದ್ರಿಯು ಪ್ರಖ್ಯಾತ ಅರೆಬಿಕ್, ಪರ್ಷಿಯನ್ ಹಾಗೂ ಉರ್ದು ಪಂಡಿತನಾಗಿದ್ದನು. ಟಿಪ್ಪುವಿನ ಆಸ್ಥಾನ ಕವಿಯಾಗಿದ್ದ ಮುನ್ಷಿ ಗುಲಾಮ್ ಹುಸೇನ್ ಮುನಜ್ಜಮ್‌ನಿಗೆ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯವೂ ಲಭಿಸಿತ್ತು. ಪರ್ಷಿಯನ್ ವ್ಯಾಕರಣ, ಜ್ಯೋತಿಷ್ಯ ಹಾಗೂ ವೈದ್ಯಕೀಯಗಳಿಗೆ ಸಂಬಂಧಿಸಿದಂತೆ ಇವನು ರಚಿಸಿರುವ ಕೃತಿಗಳು ೨೦ನೆಯ ಶತಮಾನದ ಮೊದಲ ಭಾಗದಲ್ಲೂ ಜನಪ್ರಿಯವಾಗಿದ್ದವು. ಪ್ರಸಿದ್ಧ ಹಕೀಮನೂ, ಉತ್ತಮ ಬರಹಗಾರನೂ ಆಗಿದ್ದ ಇವನು, ಆ ದಿನಗಳಲ್ಲಿ ಕಾನ್‌ಸ್ಟೆಂಟಿನೋಪಲ್ಸ್ ಸೇರಿದಂತೆ, ಮುಸ್ಲಿಂ ದೇಶದ ಇತರ ರಾಜಧಾನಿ ಪಟ್ಟಣಗಳಲ್ಲೂ ಹೆಸರುವಾಸಿಯಾಗಿದ್ದನೆಂದು ತಿಳಿದು ಬರುತ್ತದೆ. ಇವನ ಶಿಷ್ಯನಾದ ಹಾಸನದ ದಿವಾನ್ ಸೈಯದ್ ಅಮೀರ್

ಅಹಮದನು ಖಗೋಳ ವಿಜ್ಞಾನ ಹಾಗೂ ರೇಖಾಗಣಿತ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಪಲವಾರು ಪರ್ಷಿಯನ್ ಗ್ರಂಥಗಳನ್ನು ರಚಿಸಿದ್ದು ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಅನೇಕ ಸಾಧನೋಪಕರಣಗಳನ್ನೂ ಸಿದ್ಧಪಡಿಸುವ ಮೂಲಕ ಗಮನ ಸೆಳೆದಿದ್ದನೆಂದು ತಿಳಿದುಬರುತ್ತದೆ. ಇವನು ಸುಮಾರು ೧೮೭೪ ರಲ್ಲಿ ಗತಿಸಿದನು.

ಮೈಸೂರು ನಗರದ ನಿವಾಸಿಯಾದ ಮೀರ್‌ಹಯತ್ ಸಾಹೇಬನು ಉರ್ದು ಹಾಗೂ ಪರ್ಷಿಯನ್ ಭಾಷೆಗಳಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದಂತೆ ಗಣನೀಯ ಪ್ರಮಾಣದಲ್ಲಿ ಗ್ರಂಥಗಳನ್ನು ಬರೆದಿದ್ದಾನೆ. ಶ್ರೀರಂಗಪಟ್ಟಣದವನಾದ ಮಹಮದ್ ಅಬ್ದುಲ್ ಖಲಮ್ ಸಾಹೇಬನು ಪರ್ಷಿಯನ್ ಭಾಷೆಯ ಉದ್ದಾಮ ಪಂಡಿತನಿದ್ದು, ಗುಂಬಜ್‌ನ ದ್ವಾರದ ಮೇಲಿರುವ ಐದು ಪದ್ಯಗಳು ಈತನ ರಚನೆಗಳಾಗಿವೆ. ಬೆಂಕಿ ನವಾಬನ ಮೊಮ್ಮಗನಾದ ಮಹಮದ್ ಹುಸೇನ್ ಆಲಿಯು ಉರ್ದು ಭಾಷೆಯಲ್ಲಿ ರಚಿಸಿರುವ ಗಜಲ್‌ಗಳಿಂದಾಗಿ ಪ್ರಖ್ಯಾತನಾಗಿದ್ದನು. ಇದೇ ರೀತಿ ಮಹಮದ್ ಖಾಸಿಮ್ ಸಾಹೇಬನು ಪರ್ಷಿಯನ್ ಹಾಗೂ ಉರ್ದು ಭಾಷೆಗಳೆರಡರಲ್ಲೂ ಗಜಲ್ ರಚಿಸಬಲ್ಲವನಾಗಿದ್ದನೆಂದು ತಿಳಿದು ಬರುತ್ತದೆ. ಬೆಂಗಳೂರಿನವನಾದ ಮಹಮದ್ ಹನೀಫ್ ಮೌಲ್ವಿಯು 'ಮನ್ಸೂರೇ ಮಹಮದ್' ಎಂಬ ಉರ್ದು ಗ್ರಂಥವನ್ನು ರಚಿಸಿದ್ದು ಅದರಲ್ಲಿ ಈತನು ಕ್ರೈಸ್ತ ಮಿಷಿನರಿಗಳ ಇಸ್ಲಾಂ ವಿರೋಧಿ ಟೀಕೆಗಳನ್ನು ಉಗ್ರವಾಗಿ ಖಂಡಿಸಿದ್ದಾನೆ. ಅಬ್ದುಲ್‌ಹೈ ಸಾಹೇಬ್ ರಚಿಸಿರುವ 'ಕುತ್ಬಾ ಹಿಲ್ ಹನೀಫಿಯಾ' ಎಂಬ ಉರ್ದು ಗ್ರಂಥ ಆ ದಿನಗಳಲ್ಲಿ ಬಹಳ ಜನಪ್ರಿಯವಾಗಿತ್ತು. ಶ್ರೇಷ್ಠ ವಿದ್ವಾಂಸನಾಗಿದ್ದು ಇವನು ದಖ್ಖನಿ ಹಿಂದೂಸ್ಥಾನಿ ಎಂದೇ ಕರೆಯಲ್ಪಡುವ ಉರ್ದು ಭಾಷೆಯ ಉನ್ನತಿಗಾಗಿ ದುಡಿದು ಶಿಕ್ಷಣ ತರಬೇತಿ ವಿದ್ಯಾಲಯದಲ್ಲಿ ಅರಬಿಕ್ ತರಗತಿಗಳನ್ನು ತೆರೆಯಲು ಅಂದಿನ ಸರ್ಕಾರಕ್ಕೆ ಪ್ರೇರಣೆ ನೀಡಿದ್ದನು.

ಸುಂದರ ಷರ್ಷಿಯನ್ ಬರವಣಿಗೆಯು (ಕ್ಯಾಲಿಗ್ರಫಿ) ಚಿತ್ರಕಲೆಯ ಒಂದು ಶಾಖೆಯಾಗಿದ್ದು, ಮೈಸೂರಿನ ಹಾಜಿ ಖಲಂದರ್ ಖಾನ್ ಸಾಹೇಬ್, ಗುಲಾಮ್ ಜೀಲನಿ ಸಾಹೇಬ್, ಸೂಖಾನ್ ಸಾಹೇಬ್, ಕರೀಮುದ್ದೀನ್ ಹಾಗೂ ಸುಜ್ಜಾದ್ ಸಾಹೇಬ್ ಮುಂತಾದವರು ೧೯ನೆಯ ಶತಮಾನದಲ್ಲಿದ್ದ ಪ್ರಸಿದ್ಧ ನಾಸ್ಟಾಲಿಕ್ (Nasta Liq) ಅಲಂಕಾರಿಕ ಲಿಪಿಯ ಹೆಸರಾಂತ ಬರಹಗಾರರಾಗಿದ್ದರು. ಅದರಲ್ಲೂ ಕರಿಮುದ್ದೀನನ ಬರವಣಿಗೆ ಬಹು ದೂರದ ಟರ್ಕಿ ದೇಶವನ್ನೂ ತಲುಪಿತ್ತೆಂದು ಹಯವದನರಾಯರು ಮೈಸೂರು ಗ್ಯಾಸೆಟಿಯರ್ ಸಂಪುಟದಲ್ಲಿ ದಾಖಲಿಸಿದ್ದಾರೆ.

**ಆ್ಯಂಗ್ಲಿಕನ್ ಸಾಹಿತ್ಯ:** ಹೈದರ ಅಲಿ ಖಾನನ ಬ್ರಿಟಿಷ್ ವಿರೋಧಿ ಧೋರಣೆಯಿಂದಾಗಿ, ಅನೇಕ ಆಂಗ್ಲ ಬರಹಗಾರರು ಮೈಸೂರು ರಾಜ್ಯದತ್ತ ಸೆಳೆಯಲ್ಪಟ್ಟರು. ಅದೇ ಬ್ರಿಟೀಷ್ ವಿರೋಧಿ ನೀತಿಯನ್ನು ಟಿಪ್ಪು ಕೂಡ ಮುಂದುವರಿಸಿದನು. ಈ ಅವಧಿಯಲ್ಲಿ ಆಂಗ್ಲ ಭಾಷೆಯಲ್ಲಿ ರಚಿಸಲ್ಪಟ್ಟ ಹಲವಾರು ಕೃತಿಗಳು ಬ್ರಿಟಿಷ್ ಹಾಗೂ ಹೈದರ್ – ಟಿಪ್ಪು ನಡುವಣ ಸಂಬಂಧವನ್ನು ಬಿಂಬಿಸುತ್ತವೆ. ಸರ್. ವಾಲ್ಟರ್ ಸ್ಕಾಟ್ ರಚಿಸಿರುವ 'ಸರ್ಜನ್ಸ್ ಡಾಟರ್' ಕಾದಂಬರಿ, ಹೈದರಾಲಿಯ ಆಡಳಿತದ ಚಿತ್ರಣವನ್ನು ಒಳಗೊಂಡಿದ್ದು, ಹಲವಾರು ಮಹತ್ವದ ಅಂಶಗಳನ್ನು ತಿಳಿಸುತ್ತದೆ. ಇದೇ ರೀತಿ ಟಿಪ್ಪುವಿನ ವ್ಯಕ್ತಿತ್ವವನ್ನು ಆಧರಿಸಿದ 'ಟಿಪ್ಪು ಸುಲ್ತಾನ್' ಕಾದಂಬರಿಯನ್ನು ಕರ್ನಲ್ ಮೆಡೋಸ್ ಟೇಲರ್ ರಚಿಸಿದ್ದಾನೆ. ಡಾ. ಜಾನ್ ಲೇಡನ್‌ನ ಕವನದಲ್ಲಿ (Dirge of Tippoo Sultan) ರಾಜಧಾನಿ ಶ್ರೀರಂಗಪಟ್ಟಣ ಹಾಗೂ ರಾಜಪ್ರಮುಖರ ಉಲ್ಲೇಖ ಕಂಡು ಬರುತ್ತದೆ. ಫ್ರಾನ್ಸಿಸ್ ಬುಕಾನನ್, ಜಾನ್ ಲೇಡನ್, ಹ್ಯಾಮಿಲ್ಟನ್ ಮುಂತಾದವರ ಪ್ರವಾಸಿ ಕಥನಗಳಲ್ಲಿ ೧೮೦೦ ರ ನಂತರದಲ್ಲಿದ್ದ ಸಂಸ್ಥಾನದ ಸ್ಥಿತಿಗತಿಗಳ ಬಗ್ಗೆ ಸಾಕಷ್ಟು ಮಾಹಿತಿ ಲಭಿಸುತ್ತದೆ. ಶ್ರೀರಂಗಪಟ್ಟಣದಲ್ಲಿ ೧೮೦೦–೧೮೨೩ರ ಕಾಲಾವಧಿಯಲ್ಲಿ ನೆಲೆಸಿದ್ದ ಫ್ರೆಂಚ್ ಪಾದ್ರಿ ಅಬ್ಬೆದುಬೆಯು ಫ್ರೆಂಚ್ ಭಾಷೆಯಲ್ಲಿ ರಚಿಸಿರುವ 'ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರೆಮೊನೀಸ್' ಗ್ರಂಥದಲ್ಲಿ ಆ ಕಾಲದ ಹಲವಾರು ಸಾಂಸ್ಕೃತಿಕ ಅಂಶಗಳು ದಾಖಲಾಗಿವೆ. ಅನಂತರದಲ್ಲೂ ಟಿಪ್ಪು ಹಾಗೂ

ಶ್ರೀರಂಗಪಟ್ಟಣಗಳಿಗೆ ಸಂಬಂಧಿಸಿದಂತೆ ಆಂಗ್ಲ ಬರಹಗಾರರಿಂದ ಹಲವಾರು ಕೃತಿಗಳು ರಚಿಸಲ್ಪಟ್ಟಿವೆ. ಪಾಂಡವಪುರದವರಾದ ಖ್ಯಾತ ಕಲಾ ವಿಮರ್ಶಕ ಜಿ.ವೆಂಕಟಾಚಲಂ ಅವರು 'ಮಾಡರ್ನ್ ಇಂಡಿಯನ್ ಆರ್ಟಿಸ್ಟ್', 'ದ ಮಿರರ್ ಆಫ್ ಇಂಡಿಯನ್ ಆರ್ಟ್', 'ದ ಟ್ರಾವಲ್ ಡೈರಿ ಆಫ್ ಎನ್ ಆರ್ಟ್ ಸ್ಟೂಡೆಂಟ್', 'ಶಾಂತ ಎಂಡ್ ಹರ್ ಆರ್ಟ್', 'ಕಾಂಟಮ್‌ಪ್ರರಿ ಇಂಡಿಯನ್ ಆರ್ಟ್ಸ್', 'ದ ಡ್ಯಾನ್ಸ್ ಇನ್ ಇಂಡಿಯಾ' ಇತ್ಯಾದಿ ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದರಲ್ಲದೆ ಸಾವಿರಾರು ಲೇಖನಗಳನ್ನು ಬರೆದಿದ್ದರು. ಇನ್ನೊಬ್ಬ ಖ್ಯಾತ ಶಿಲ್ಪಾಚಾರ್ಯ ನಾಗಮಂಗಲದ ನಾ.ಭ.ಚಂದ್ರಶೇಖರಾಚಾರ್ಯರು ಎಪ್ಪತ್ತನಾಲ್ಕು ಕನ್ನಡ ಲೇಖನಗಳಲ್ಲದೆ ವಿಶ್ವಕರ್ಮ ಕಲ್ಚರ್ ಎಂಡ್ ಅದರ್ ಆರ್ಟಿಕಲ್ಸ್ ಇತ್ಯಾದಿ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ. 'ಎಸೆನ್ಶಿಯಲ್ಸ್ ಆಫ್ ಕರ್ನಾಟಕ ಫೋಕ್ ಲೋರ್' ಗ್ರಂಥವನ್ನು ಎಚ್.ಎಲ್.ನಾಗೇಗೌಡರೂ 'ಕಿರಾತಾರ್ಜುನೀಯಂ ಇನ್ ಇಂಡಿಯನ್ ಆರ್ಟ್' ಗ್ರಂಥವನ್ನು ಎಂ.ಎಸ್.ನಾಗರಾಜರಾವ್ ಬರೆದಿದ್ದಾರೆ. ಭೂಗರ್ಭ ಶಾಸ್ತ್ರಜ್ಞ ಬೆಳ್ಳೂರು ರಾಮರಾವ್ ಅವರು 'ರ್‍ಯಾಬ್ಲಿಂಗ್ ರೈಮ್ಸ್, ಲೆಜೆಂಡ್ ಅಫ್ ದಿ ಲಾಸ್ಟ್ ರಿಂಗ್ ಅಂಡ್ ಅದರ್ ಪೊಯಮ್ಸ್, ರಿಕಲೆಕ್ಷನ್ ಆಫ್ ಆ್ಯನ್ ಇಂಡಿಯನ್ ಜಿಯಾಲಜಿಸ್ಟ್' ಗ್ರಂಥಗಳನ್ನು ಬರೆದಿದ್ದಾರೆ.

**ಅರುಣೋದಯ ಕಾಲ**

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯಕ್ಕೆ ಮರು ಚೈತನ್ಯ ಸಿಕ್ಕಿತು. ಬಿ.ವೆಂಕಟಾಚಾರ್ಯ (೧೮೪೫–೧೯೧೪) ಎಂ.ಎಲ್.ಶ್ರೀಕಂಠೇಶಗೌಡ (೧೮೫೨–೧೯೨೬) ಎಸ್.ಜಿ.ನರಸಿಂಹಾಚಾರ್ಯ (೧೮೬೨–೧೯೦೭), ಆರ್.ನರಸಿಂಹಾಚಾರ್ಯ (೧೮೬೦–೧೯೩೬), ಎಂ.ಎ.ರಾಮಾನುಜಯ್ಯಂಗಾರ್ (೧೮೬೨–೧೯೩೭), ದೇವ ಶಿಖಾಮಣಿ ಅಳಸಿಂಗಾಚಾರ್ಯ, (೧೮೭೭–೧೯೪೦) ಬಿ.ಎಂ.ಶ್ರೀಕಂಠಯ್ಯ (೧೮೮೪–೧೯೪೬), ಎಂ.ಆರ್.ಶ್ರೀನಿವಾಸಮೂರ್ತಿ (೧೮೯೨–೧೯೫೩) ಜಿಲ್ಲೆಯ ಹೊಸಗನ್ನಡದ ಆರಂಭದ ಲೇಖಕರಾಗಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುರಿತ ಪ್ರಶಂಸಾರ್ಹ ಕೆಲಸಗಳು ಇವರಿಂದ ಸಮರ್ಪಕವಾಗಿ ಪ್ರಾರಂಭಗೊಂಡವು. ಇಂಗ್ಲೀಷ್ ಸಾಹಿತ್ಯದ ಅಧ್ಯಯನ ಮಾಡಿದ ಎಂ.ಎಲ್.ಶ್ರೀಕಂಠೇಶಗೌಡ, ಬಿ.ಎಂ.ಶ್ರೀ, ಬಿಂಡಿಗನವಿಲೆ ವೆಂಕಟಾಚಾರ್ಯ, ಎಸ್.ಜಿ.ನರಸಿಂಹಾಚಾರ್ಯ ಮುಂತಾದವರು ಇಂಗ್ಲೀಷ್‌ನಲ್ಲಿ ಇರುವಷ್ಟು ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಇಲ್ಲವೆಂಬ ಅಂಶವನ್ನು ಗಮನಕ್ಕೆ ತೆಗೆದುಕೊಂಡು ಆ ಕೊರತೆಯನ್ನು ನೀಗಲು ಪ್ರಯತ್ನಿಸಿದರು. ನವೋದಯದ ಪ್ರಾರಂಭಕಾರರಾದ ಇವರೆಲ್ಲಾ ಮೊದಲು ಇತರ ಭಾಷೆಗಳಿಂದ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಬರಹಕ್ಕೆ ತೊಡಗಿಕೊಂಡಿರುವುದು ಕಂಡುಬರುತ್ತದೆ. ಈ ಪ್ರಾರಂಭಕಾಲವನ್ನು ಅನುವಾದಯುಗ ಎಂದು ಹೇಳಬಹುದಾದಷ್ಟು ಇಂಗ್ಲೀಷ್, ಬಂಗಾಳಿ, ಮತ್ತಿತರ ಭಾಷೆಗಳಿಂದ ಅನುವಾದಿಸಿದ ಕೃತಿಗಳು ಈ ಸಮಯದಲ್ಲಿ ಕನ್ನಡಕ್ಕೆ ಬಂದಿವೆ. (ಎಂ.ಎಲ್.ಶ್ರೀಕಂಠೇಶಗೌಡ, ಬಿ.ಎಂ.ಶ್ರೀ, ಎ.ಎನ್.ಮೂರ್ತಿರಾವ್, ಆನಂತರದ ಸಾಹಿತಿಗಳಾದ ಎಚ್.ಎಲ್.ನಾಗೇಗೌಡ, ಅ.ರಾ.ಮಿತ್ರ, ಜಿ.ವೆಂಕಟಸುಬ್ಬಯ್ಯ ಮೊದಲಾದವರು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿದ್ದಾರಾದರೂ, ಇವರನ್ನು ಮಂಡ್ಯ ಜಿಲ್ಲೆಯ ಮೂಲದವರೆಂದು ಗುರುತಿಸಲಾಗುವುದರಿಂದ ಹಾಗೂ ಈ ಜಿಲ್ಲೆಯವರು ಅವರುಗಳನ್ನು ತಮ್ಮ ಜಿಲ್ಲೆಯವರೆಂದೇ ಪರಿಗಣಿಸಿ ಅವರ ಕಾರ್ಯ ಸಾಧನೆಗಳಿಂದ ಪ್ರೇರಣೆ ಮತ್ತು ಪ್ರಭಾವ ಪಡೆಯುತ್ತಿರುವುದರಿಂದ ಅಂತಹ ಎಲ್ಲ ಸಾಹಿತಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ)

ಮೂಲತಃ ನಾಗಮಂಗಲ ತಾಲೂಕು ಬಿಂಡಿಗನವಿಲೆಯವರಾದ ಬಿ.ವೆಂಕಟಾಚಾರ್ಯರು (೧೮೪೫–೧೯೧೪) ಅನುವಾದದ ಮೂಲಕ ಕಾದಂಬರಿಯ ಪ್ರಕಾರವನ್ನು ಕನ್ನಡಕ್ಕೆ ಪರಿಚಯಿಸಿಕೊಟ್ಟಿದ್ದಾರೆ. ಬಂಗಾಳದ ಈಶ್ವರಚಂದ್ರ ವಿದ್ಯಾಸಾಗರರಿಂದ ಬಂಗಾಳಿ ಭಾಷೆ ಕಲಿತು ವಿದ್ಯಾಸಾಗರರ 'ಭ್ರಾಂತಿ ವಿಲಾಸ' ಕಾದಂಬರಿ; ಮತ್ತು ಬಂಕಿಮಚಂದ್ರ, ರಮೇಶಚಂದ್ರದತ್ತ, ಪರಿಪ್ರಸಾದ್ ಶಾಸ್ತ್ರಿ ಮುಂತಾದವರ ಪ್ರಸಿದ್ಧ ಸಾಮಾಜಿಕ ಹಾಗೂ ಐತಿಹಾಸಿಕ ಕಾದಂಬರಿಗಳನ್ನು

ಕನ್ನಡಕ್ಕೆ ಅನುವಾದಿಸಿದ್ದಾರೆ. ವಿಷವೃಕ್ಷ (೧೯೦೦), ರಜನೀ, ಕೃಷ್ಣಕಾಂತನ ಉಯಿಲು, ಮಾಧವೀಲತ, (೧೯೦೧), ಯುಗಳಾಂಗುರೀಯ ಮುಂತಾದ ಸಾಮಾಜಿಕ ಕಾದಂಬರಿಗಳನ್ನು; ದುರ್ಗೇಶ ನಂದಿನಿ, ಕಪಾಲ ಕುಂಡಲ, ಸೀತಾರಾಮ ಮುಂತಾದ ಐತಿಹಾಸಿಕ ಕಾದಂಬರಿಗಳನ್ನು ರಚಿಸಿ, ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಕಾರ ಹಾಗೂ ಶೈಲಿಗಳನ್ನು ತಂದರು. ಆಚಾರ್ಯರು ಅನುವಾದಗಳೂ ಸೇರಿ ಸುಮಾರು ೮೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಅನುವಾದಗಳಲ್ಲಿ ಇಂದಿರೆ (೧೮೯೭), ಆನಂದಮಠ (೧೯೦೧), ವೆನಿಸ್ ನಗರದ ವಣಿಕ, ದೇವಿ ಚೌಧರಾಣಿ, ಮುಂತಾದವು ಪ್ರಮುಖವಾದವು. ಅವಕಾಶ ತೋಷಿಣಿ ಎಂಬ ಪತ್ರಿಕೆಯನ್ನೂ ಕೆಲವು ಕಾಲ ನಡೆಸಿದರು. ಬೇರೆಬೇರೆ ಊರುಗಳಲ್ಲಿ ಸೇವೆ ಸಲ್ಲಿಸಿದ ಇವರು ಕೊನೆಗೆ ಮೈಸೂರಿನಲ್ಲಿ ನೆಲೆಸಿದರು.

ರಾಜ್ಯದ ಹೊಸಗನ್ನಡದ ಸಾಹಿತ್ಯದ ಉದಯಕ್ಕೆ ಕಾರಣ ಪುರುಷರಲ್ಲಿ ಒಬ್ಬರಾದ ಮದ್ದೂರು ತಾಲೂಕಿನ ದೇಶಹಳ್ಳಿಯ ಎಂ.ಎಲ್.ಶ್ರೀಕಂಠೇಶಗೌಡರು ವಕೀಲರಾಗಿ, ನ್ಯಾಯಾಧೀಶರಾಗಿ, ಸಾಹಿತಿಯಾಗಿ, ಪತ್ರಕರ್ತರಾಗಿ ಮತ್ತು ನಾಟಕ ಮಂಡಳಿಯೊಂದರ ಸಂಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ನ್ಯಾಯಾಧೀಶರಾಗಿದ್ದಾಗ ತೀರ್ಪನ್ನು ಕನ್ನಡದಲ್ಲಿಯೇ ಬರೆಯುತ್ತಿದ್ದರು. ಹಾಸನದಲ್ಲಿದ್ದಾಗ ಇವರು ಬರೆದ ತೀರ್ಪುಗಳು ಈಗಲೂ ಲಭ್ಯ ಇವೆ ಎನ್ನಲಾಗಿದೆ. ಪಠ್ಯಪುಸ್ತಕಗಳು ಕನ್ನಡದಲ್ಲಿ ಲಭ್ಯವಿಲ್ಲದಾಗ ಅವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಕೊಟ್ಟರಾದ್ದರಿಂದ 'ಶಾರದಾ ಭೂಗೋಳ' ಮತ್ತು 'ದಕ್ಷಿಣ ಭಾರತದ ವ್ಯವಸಾಯ ಪದ್ಧತಿ' ಮೊದಲಾದವು ಹೊರಬಂದವು. ಮೈಸೂರಿನಲ್ಲಿದ್ದಾಗ ಗೆಳೆಯರೊಂದಿಗೆ ಸೇರಿ 'ದಿ ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ಸ್' (ಜಿ.ಟಿ.ಎ.) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. 'ಇಂಗ್ಲೀಷ್ ಕ್ಲಾಸಿಕ್ಸ್ ಫಾರ್ ಕ್ಯಾನರೀಸ್ ರೀಡರ್' ಎಂಬ ಸರಣಿಯಲ್ಲಿ ಹಲವಾರು ಗ್ರಂಥಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಿದರು. (ನಾಟಕ ಸಾಹಿತ್ಯ ನೋಡಿ) ಭವಾನಿ ಬಾಳು, ಚಾಮನೃಪ, ಚಂದ್ರಪ್ರಭೆ, ಬುದ್ದಿಯ ಬಲವೇ ಬಲ ಮುಂತಾದವು ಇವರ ಸ್ವತಂತ್ರ ಕೃತಿಗಳಾಗಿದ್ದು, ಅವುಗಳ ರಚನೆ ಮತ್ತು ಗದ್ಯ ನಿರ್ಮಾಣದಲ್ಲಿ ಹಿಂದಿನ ವರ್ಣನಾತ್ಮಕ ಜಾಡು, ಹಳೆಯಬಂಧ, ಸಂಪೂರ್ಣ ಅಳಿಸಿಲ್ಲದಿರುವುದು ಕಂಡುಬರುತ್ತದೆ. ಸಾಹಿತ್ಯವೆನ್ನುವುದು ಮುಂದುವರಿದ ಜಾತಿಜನಾಂಗಕ್ಕೆ ಸೀಮಿತವಾಗಿದ್ದ ಕಾಲದಲ್ಲಿ, ಇತರೇ ಜನಾಂಗದಿಂದ ಮೇಲೆ ಬಂದ ಮೊಟ್ಟ ಮೊದಲ ಹೆಸರಾಂತ ಸಾಹಿತಿಯಾಗಿಯೂ ಇವರು ಉಲ್ಲೇಖನೀಯರು. ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ರಾಜಕಾರ್ಯಪ್ರವೀಣ ಎನ್.ಎಸ್.ಸುಬ್ಬರಾವ್ ಅವರು ಶ್ರೀರಂಗಪಟ್ಟಣದವರು. ಅವರು ಅರ್ಥಶಾಸ್ತ್ರಜ್ಞ ಮತ್ತು ಆಡಳಿತಗಾರರಾಗಿದ್ದರಲ್ಲದೇ ಸಾಹಿತಿಯೂ ಆಗಿದ್ದರು. ಇವರು ಮುಂಬಯಿಯಲ್ಲಿ ೧೯೩೫ ರಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದರು.

ಆಗಿನ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಸಂಚರಿಸಿ ಸುಮಾರು ೫,೦೦೦ ಹೊಸ ಶಾಸನಗಳನ್ನು ಸಂಗ್ರಹಿಸಿದ ಆರ್.ನರಸಿಂಹಚಾರ್ಯರು ಮಂಡ್ಯ ಕೊಪ್ಪಲಿನಲ್ಲಿ (ಅರಕೆರೆ ಬಳಿ) ಜನಿಸಿದ್ದು (೧೮೬೦-೧೯೩೬) ಎಂಟನೇ ಶತಮಾನದಿಂದ ಹತ್ತನೇ ಶತಮಾನದವರೆಗಿನ ಪ್ರಾಚೀನ ಕನ್ನಡ ಸಾಹಿತ್ಯದ ನೂರಾರು ಕವಿಗಳನ್ನು ಮೊಟ್ಟ ಮೊದಲಿಗೆ ಮೂರು ಸಂಪುಟಗಳ 'ಕರ್ನಾಟಕ ಕವಿ ಚರಿತೆ'ಯ ಮೂಲಕ ಬೆಳಕಿಗೆ ತಂದಿದ್ದಾರೆ. ನೀತಿ ಮಂಜರಿ, ಶಾಸನ ಪದ್ಯ ಮಂಜರಿ ಇತ್ಯಾದಿ ಕನ್ನಡ ಕೃತಿಗಳನ್ನೂ, ದಿ ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್ ಮತ್ತು ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್ ಎಂಬ ಇಂಗ್ಲಿಷ್ ಕೃತಿಗಳನ್ನೂ ಬರೆದಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಅತ್ಯಂತ ಜನಪ್ರಿಯವಾದ ಗಾಂಪರ ಗುಂಪಿನ 'ನಗೆಗಡಲು' ಎಂಬ ಹಾಸ್ಯ ಕೃತಿಯೂ ಇವರ ರಚನೆ. ಮೈಸೂರಿನ ಪುರಾತತ್ವ ಇಲಾಖೆಯಲ್ಲಿ ಇವರು ನಿರ್ದೇಶಕರಾಗಿದ್ದ ಅವಧಿಯಲ್ಲಿ (೧೯೦೬-೧೯೨೨) ಅನೇಕ ಪುರಾತತ್ವ ಲೇಖನಗಳನ್ನು ಪ್ರಕಟಿಸಿದ್ದರು. ಲೂಯಿರೈಸ್ ಅವರೊಡನೆ ಕೆಲಸ ಮಾಡಿದವರು. ಹಿಂದೂ, ಜೈನ, ಮುಸಲ್ಮಾನ ಮತಗಳಿಗೆ ಸಂಬಂಧಿಸಿದ ಸಾವಿರಾರು ಕಟ್ಟಡಗಳ ವಾಸ್ತುಶಿಲ್ಪ ಪರೀಕ್ಷಿಸಿದ್ದಲ್ಲದೆ ೪,೧೦೦ ಹಳೆ ನಾಣ್ಯಗಳನ್ನು ಸಂಗ್ರಹಿಸಿದ್ದರು. ೧೨೫ ಕ್ಯೂ

ಹೆಚ್ಚು ಕನ್ನಡ ಸಂಸ್ಕೃತ ಪ್ರಾಚೀನ ಕೃತಿಗಳನ್ನೂ ಅವಲೋಕಿಸಿ ನೂರು ಸಂಪುಟಗಳಲ್ಲಿ ಪ್ರತಿ ಮಾಡಿಸಿ ಪ್ರಾಚ್ಯ ಕೋಶಾಗಾರದಲ್ಲಿರಿಸಿದ್ದಾರೆ. ಅಲ್ಲದೆ, ತಲಕಾಡು, ಹಳೇಬೀಡು, ಚಂದ್ರವಳ್ಳಿಗಳಲ್ಲಿ ಭೂಶೋಧನೆ ನಡೆಸಿ ರೋಮನ್ ಮತ್ತು ಚೀನಿ ನಾಣ್ಯಗಳನ್ನು ಸಂಗ್ರಹಿಸಿದ್ದಾರೆ. ಇವರಿಗೆ ೧೯೦೭ರಲ್ಲಿ 'ರಾಯಲ್ ಏಷಿಯಾಟಿಕ್ ಸೊಸೈಟಿ' ಯ ಗೌರವ ಸದಸ್ಯತ್ವ ದೊರೆತಿದೆ. ಮೈಸೂರು ಮಹಾರಾಜರು ಇವರಿಗೆ 'ಪ್ರಾಕ್ತನ ವಿಮರ್ಶಾ ವಿಚಕ್ಷಣ' ಎಂಬ ಪ್ರಶಸ್ತಿಯನ್ನು ೧೯೧೩ ರಲ್ಲಿ ನೀಡಿ ಗೌರವಿಸಿದ್ದರು. ಬ್ರಿಟಿಷರಿಂದ ೧೯೧೯ರಲ್ಲಿ 'ರಾವ್ ಬಹಾದ್ದೂರ್' ಎಂಬ ಪ್ರಶಸ್ತಿ ಪಡೆದಿದ್ದರು. ಭಾರತ ಸರ್ಕಾರ ೧೯೧೪ ರಲ್ಲಿ ಇವರಿಗೆ ಮಹಾಮಹೋಪಾಧ್ಯಾಯ ಎಂಬ ಪ್ರಶಸ್ತಿ ನೀಡಿದೆ. ಕಲ್ಕತ್ತದ ಅಖಿಲ ಭಾರತ ಸಾಹಿತ್ಯ ಸಂಘದಿಂದ ೧೯೨೪ ರಲ್ಲಿ 'ಪ್ರಾಚ್ಯ ವಿದ್ಯಾ ವೈಭವ' ಎಂಬ ಬಿರುದು ನೀಡಿ ಗೌರವಿಸಲಾಗಿದೆ. ಆಚಾರ್ಯರು ಬೇಲೂರು ಮತ್ತು ಸೋಮನಾಥಪುರ ದೇವಸ್ಥಾನಗಳ ಬಗ್ಗೆ ಬರೆದ ಕಿರುಗ್ರಂಥಗಳು (ಮಾನೋಗ್ರಾಫ್ಸ್) ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿವೆ. ೧೯೨೪ ರಲ್ಲಿ ಸಿ.ಹಯವದನರಾಯರಿಗೆ ಗ್ಯಾಸೆಟಿಯರ್‌ಗಳ ಹೊಸ ಮಾಲೆಯನ್ನು ಸಂಪಾದಿಸುವ ಜವಾಬ್ದಾರಿ ಕೊಡಲ್ಪಟ್ಟಾಗ, ಇವರು ಹಲವಾರು ರೀತಿಯಲ್ಲಿ ಅವರಿಗೆ ನೆರವಾಗಿದ್ದಾರೆ. ಧಾರವಾಡದಲ್ಲಿ ನಡೆದ ನಾಲ್ಕನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು.

ಎಸ್.ಜಿ.ನರಸಿಂಹಾಚಾರ್‌ರವರು (೧೮೬೨-೧೯೦೭) ಶ್ರೀರಂಗಪಟ್ಟಣದಲ್ಲಿ ಜನಿಸಿದವರಾಗಿದ್ದು ಕನ್ನಡವೇ ಅಲ್ಲದೆ ಸಂಸ್ಕೃತ, ತಮಿಳು ಹಾಗೂ ಇಂಗ್ಲೀಷ್‌ನಲ್ಲಿ ಪಾಂಡಿತ್ಯ ಪಡೆದಿದ್ದು, ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಇವರು ಇಂಗ್ಲಿಷಿನಿಂದ ಸರಳ ರಗಳೆಯಲ್ಲಿ ಬರೆದ ಅನೇಕ ಪದ್ಯಗಳಲ್ಲಿ ಗೋವಿನ ಬಾಳು (ಇಟ್ಟರೆ ಸಗಣಿಯಾದೆ) ಕಾವೇರಿಯ ಮಹಿಮೆ (ನೋಡು ಕಾವೇರಿಯ) ಇತ್ಯಾದಿ ಪದ್ಯಗಳು ಜನಪ್ರಿಯಗೊಂಡಿವೆ. ಹಿಂದೂ ದೇಶದ ಚರಿತ್ರೆ, ಅಲ್ಲಾವುದ್ದೀನನ ಅದ್ಭುತ ದೀಪ, ಈಸೋಪನ ನೀತಿಕಥೆಗಳು, ಗಲಿವರನ ದೇಶ ಸಂಚಾರ, ಭಾರತ ವೀರ ಚರಿತೆ, ಇವರ ಇನ್ನಿತರ ಪ್ರಮುಖ ಕೃತಿಗಳು. ಧಾರವಾಡದಲ್ಲಿ ೧೯೦೭ರಲ್ಲಿ ನಡೆದ ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ತಮ್ಮ ಪತ್ರಿಕೆಗಳ ಮೂಲಕ ಹಲವಾರು ಹಳೆಗನ್ನಡ ಗ್ರಂಥಗಳನ್ನು ಮೊದಲ ಬಾರಿಗೆ ಪ್ರಕಟಿಸಿದ ಎಂ.ಎ.ರಾಮಾನುಜಯ್ಯಂಗಾರ್ (೧೮೬೨-೧೯೩೭) ರವರು ಮೂಲತಃ ಮಂಡ್ಯದವರು. ಕವಿಕಾರ್ಯ ಪ್ರಶಂಸೆ, ಕವಿ ಸಮಯಂ ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಪಂಪಾ ಶತಕ, ಪಂಚತಂತ್ರ, ಭಾವ ಚಿಂತಾರತ್ನ, ಹದಿಬದೆಯ ಧರ್ಮ, ಮೊದಲಾದ ಹಳೆಗನ್ನಡ ಕೃತಿಗಳನ್ನು ಪರಿಷ್ಕರಿಸಿದ್ದಾರೆ. ಹಳೆಗನ್ನಡ ಭಾಷೆಯ ವಿದ್ವಾಂಸರಾದ ಹೆಚ್.ಆರ್.ರಂಗಸ್ವಾಮಿ ಅಯ್ಯಂಗಾರ್ (೧೯೮೯) ರವರು ಮಂಡ್ಯದವರು. ಡಿ.ಎಚ್.ಹನುಮರವರು ನಾಗಮಂಗಲ ತಾಲೂಕಿನ ದಡಮುಡಿಕೆ ಗ್ರಾಮದವರು. ಕವಿತಾ ಕೃತಿಗಳನ್ನು ಹೆಚ್ಚಾಗಿ ರಚಿಸಿದ್ದಾರೆ. ಗೌಡನ ಮಗಳು (ಐತಿಹಾಸಿಕ ಕಾದಂಬರಿ ೧೯೨೬), ಹನುಮನ ಕವಿತೆ (೧೯೩೮), ಗಾಂಧೀ ಗೋಪುರ (೧೯೫೦) ಮುಂತಾದವು ಇವರ ಕೃತಿಗಳಲ್ಲಿ ಪ್ರಮುಖವಾದುವು. ಕನ್ನಡ ಹಾಗೂ ಸಂಸ್ಕೃತ ವಿದ್ವಾಂಸರಾಗಿದ್ದ ದೇವಶಿಖಾಮಣಿ ಅಳಸಿಂಗಾಚಾರ್ಯರು (೧೮೭೭-೧೯೪೦) ಮೇಲುಕೋಟೆಯವರು. ಇವರು ವಿವಿಧ ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಕಾವ್ಯ ರಚನೆಯಲ್ಲಿ ಪರಿಣತರು. ಶ್ರೀಮದ್ರಾಮಾಯಣ, ಶ್ರೀಮದ್ಭಾಗವತ ಮತ್ತು ಶ್ರೀಮನ್ಮಹಾಭಾರತ ಮುಂತಾದವುಗಳನ್ನು ಸರಳ ಗದ್ಯಕ್ಕೆ ಅನುವಾದಿಸಿದ್ದಾರೆ. ಘೋರ ಯೂರೋಪು ಯುದ್ಧದ ಚರಿತ್ರೆ, ಪೌರನೀತಿ, ಪಂಚಭಾಷಾ ಪ್ರಹಸನ, ಇವರ ಇನ್ನಿತರ ಪ್ರಮುಖ ಕೃತಿಗಳು.

**ನವೋದಯ ಸಾಹಿತ್ಯ**

ಸಾಮಾನ್ಯವಾಗಿ ಇಡೀ ಕನ್ನಡ ನಾಡಿಗೆ ಸಂಬಂಧಿಸಿದಂತೆ ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತಗಳು' ಕೃತಿಯಿಂದ ಆರಂಭವಾಗಿ ಪ್ರಗತಿಶೀಲರವರೆಗಿನ ಕಾಲಾವಧಿಯ ಸಾಹಿತ್ಯವನ್ನು ನವೋದಯ ಸಾಹಿತ್ಯ ಎಂಬ ಹೆಸರಿನಿಂದ

ಗುರುತಿಸಲಾಗುತ್ತದೆ. ಈ ಕೃತಿ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಿಸಿ, ಭಾವಗೀತೆಯ ಪ್ರಕಾರ ಬೆಳೆಯಲು ಮಾದರಿಯಾಯಿತು. ಬಿ.ಎಂ.ಶ್ರೀಯವರು ಹೊಸಗನ್ನಡ, ಹಳಗನ್ನಡ, ಗ್ರಾಮೀಣ ಮತ್ತು ಪರಭಾಷೆಯ ಶಬ್ದಗಳನ್ನೂ ಹೊಸ ಛಂದಸ್ಸನ್ನೂ, ವಿವಿಧ ವಸ್ತುಗಳನ್ನೂ ತಮ್ಮ ಸಾಹಿತ್ಯದಲ್ಲಿ ಸಂದರ್ಭೋಚಿತವಾಗಿ ಪ್ರಯೋಗಿಸಿದ್ದು, ಸಾಂಪ್ರದಾಯಿಕ ವಸ್ತು ರೂಪ ರೀತಿಗಳನ್ನು ಬದಿಗೊತ್ತಿ ಸ್ವಚ್ಛಂದ ಪದ್ಯಗಳ ರಚನೆಗೆ ದಾರಿ ಮಾಡಿಕೊಟ್ಟಿತು. ಈ ಜಿಲ್ಲೆಯ ಪು.ತಿ.ನ, ಕೆ.ಎಸ್.ನ ಮುಂತಾದ ಕವಿಗಳೇ ಅಲ್ಲದೆ ನಾಡಿನ ಪ್ರಸಿದ್ಧ ಕವಿಗಳಾದ ರಾಜರತ್ನಂ, ದ.ರಾ.ಬೇಂದ್ರೆ, ಕುವೆಂಪು ಮೊದಲಾದ ಹಲವಾರು ಕವಿಗಳಿಗೂ ಮೆಚ್ಚುಗೆಯಾಗಿ ಅವರೂ ಬಿ.ಎಂ.ಶ್ರೀಯವರ ಮಾರ್ಗವನ್ನೇ ಅನುಸರಿಸಿ ಕಾವ್ಯರಚನೆ ಮಾಡುವಂತಾಯಿತು.

ನವೋದಯದ ಕಾಲದಲ್ಲಿ ಕಾವ್ಯಕ್ಕೆ ಹೊಸ ರೂಪ ಬಂದುದು ಮಾತ್ರವಲ್ಲದೇ ಕಥೆ, ಕಾದಂಬರಿ, ಪ್ರಬಂಧ, ನಾಟಕ, ವಿಮರ್ಶೆ, ಪ್ರವಾಸ ಕಥನ, ಮೊದಲಾದ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ರಚನೆಯಾಗತೊಡಗಿತು. ಪ್ರಮುಖ ಪ್ರಕಾರವಾಗಿ ಬಂದ ಭಾವಗೀತೆಯಲ್ಲಿ ಶೋಕಗೀತೆ, ಮಹಾಕಾವ್ಯ, ಖಂಡಕಾವ್ಯ, ಸುನೀತ, ಪ್ರಗಾಥ ಮೊದಲಾದ ರಚನೆಗಳೂ ಕಂಡುಬಂದವು. ಇದರಿಂದ ಕನ್ನಡದಲ್ಲಿ ಹೊಸತನ ಮೂಡಿದ್ದಷ್ಟೇ ಅಲ್ಲದೆ, ಈ ರಚನೆಗಳಿಗೆ ತೊಡಗಿದವರ ಸಂಖ್ಯೆಯೂ ಹೆಚ್ಚಾಗತೊಡಗಿತು. ಇಂಗ್ಲಿಷ್ ಅಧ್ಯಯನ ಮಾಡಿದ ಬಿ.ಎಂ.ಶ್ರೀ, ಎ.ಎನ್.ಮೂರ್ತಿರಾವ್ ಮುಂತಾದವರು ಇಂಗ್ಲಿಷ್‌ನಲ್ಲಿ ಹೊಸದೆನಿಸಿದೆಲ್ಲವನ್ನೂ ಕನ್ನಡಕ್ಕೆ ತಂದು ಸೇರಿಸಿಕೊಳ್ಳುವ ಉತ್ಸಾಹ ತೋರಿದರು. ಇತರೇ ಪ್ರಕಾರಗಳಲ್ಲಿ ಬರೆದರೂ ಸಹ, ಬಿ.ಎಂ.ಶ್ರೀಯವರು ಇಂಗ್ಲಿಷ್ ಗೀತಗಳ ಅನುವಾದವನ್ನೂ, ಪು.ತಿ.ನ, ಕೆ.ಎಸ್.ನ., ಇವರುಗಳ ಭಾವಗೀತೆಯ ಪ್ರಕಾರವನ್ನೂ, ತೀ.ನಂ.ಶ್ರೀ., ಎ.ಎನ್.ಮೂರ್ತಿರಾವ್ ಇವರುಗಳು ಲಲಿತ ಪ್ರಬಂಧದ ಪ್ರಕಾರವನ್ನೂ ಪ್ರಮುಖ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡರು ಎನ್ನಬಹುದಾಗಿದೆ. ಪು.ತಿ.ನ. ರವರು ಗೀತನಾಟಕ ಹಾಗೂ ಲಲಿತ ಪ್ರಬಂಧ ಪ್ರಕಾರಗಳನ್ನೂ ಭಾವಗೀತೆಯಷ್ಟೇ ಪ್ರಮುಖವಾಗಿಸಿಕೊಂಡು ಕೃತಿ ರಚಿಸಿದ್ದಾರೆ.

ಬಿ.ಎಂ.ಶ್ರೀ(ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ ೧೮೮೪-೧೯೪೬)ಯವರು ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ ಹುಟ್ಟಿದರಾದರೂ, ಬೆಳೆದದ್ದು ನಾಗಮಂಗಲ ತಾಲೂಕಿನ ಬೆಳ್ಳೂರಿನಲ್ಲಿ. ಇವರ ಆರಂಭದ ವಿದ್ಯಾಭ್ಯಾಸವಾಗಿದ್ದು ಶ್ರೀರಂಗಪಟ್ಟಣದಲ್ಲಿ. ಇವರ ಅಶ್ವತ್ಥಾಮನ್ ಎಂಬ ಕೃತಿ ನಾಟಕಕ್ಷೇತ್ರದಲ್ಲಿ ಹೊಸ ಆಯಾಮವನ್ನು ತೋರಿಸಿಕೊಟ್ಟ ಕೃತಿಯಾಗಿದೆ. ಇವರ ಲೇಖನಗಳು, ಭಾಷಣಗಳು ಮತ್ತು ಕೃತಿಗಳು ನಾಡಿನಲ್ಲಿ ಕನ್ನಡ ಭಾಷೆಯನ್ನು ಉಳಿಸುವಲ್ಲಿ ಹಾಗೂ ಜಾಗೃತಗೊಳಿಸುವಲ್ಲಿ ಉತ್ತಮ ಕೆಲಸ ಮಾಡಿವೆ. ಶ್ರೀಯವರು ಮಿತ ಸಂಖ್ಯೆಯಲ್ಲಿ ಅತ್ಯಂತ ಮೌಲಿಕವಾದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷಾ ಶಾಸ್ತ್ರ, ಛಂದಸ್ಸು, ವ್ಯಾಕರಣ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ ಇತ್ಯಾದಿಗಳ ಬಗ್ಗೆ ಇವರು ಮಾಡಿರುವ ಕೆಲಸ ಗಣನೀಯವಾಗಿದೆ. ಕಲಬುರ್ಗಿಯಲ್ಲಿ ೧೯೨೮ ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಿ.ಎಂ.ಶ್ರೀಯವರು ಅಧ್ಯಕ್ಷರಾಗಿದ್ದರು. ೧೯೩೮ ರಿಂದ ೧೯೪೨ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಆ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಹಿಳಾ ಶಾಖೆ, ಮುದ್ರಣಾಲಯಗಳು, ಕನ್ನಡ ನುಡಿ ಪತ್ರಿಕೆ ಮತ್ತು ಕನ್ನಡ ಅಣುಗ, ಕನ್ನಡ ಕಾವ ಹಾಗೂ ಕನ್ನಡ ಜಾಣ ಎಂಬ ಸಾಹಿತ್ಯ ಪರೀಕ್ಷೆಗಳು ಆರಂಭಗೊಂಡವು. ಪರಿಷತ್ತಿನ ಮುದ್ರಣಾಲಯಕ್ಕೆ ಬಿ.ಎಂ.ಶ್ರೀಅಚ್ಚುಕೂಟ ಎಂದೇ ಹೆಸರಿಡಲಾಗಿದೆ. ಕನ್ನಡ ಬೆರಳಚ್ಚಿಗೆ ಹೊಸ ಲಿಪಿ ಸಂಸ್ಕಾರ ಮಾಡಿದ್ದರು. ಮೈಸೂರು ಮಹಾರಾಜರು ಇವರಿಗೆ ೧೯೪೨ ರಲ್ಲಿ 'ರಾಜ ಸೇವಾಸಕ್ತ' ಪ್ರಶಸ್ತಿ ನೀಡಿ ಗೌರವಿಸಿದ್ದರು. ಇವರ ಅಭಿಮಾನಿಗಳು ಮತ್ತು ಶಿಷ್ಯರೆಲ್ಲಾ ಸೇರಿ 'ಸಂಭಾವನೆ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದು, ಕನ್ನಡ ನಾಡಿನಲ್ಲಿ ಹೀಗೆ ಸಂಭಾವನಾ ಗ್ರಂಥ ಸಮರ್ಪಿಸುವ ಹೊಸ ಸಂಪ್ರದಾಯಕ್ಕೆ ನಾಂದಿಯಾಯಿತು. ಬೆಂಗಳೂರಿನಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪನೆಯಾಗಿದ್ದು ಅದರ ಶಾಖೆ ಬೆಳ್ಳೂರಿನಲ್ಲಿದೆ. ಅವರ ಹೆಸರಿನಲ್ಲಿ ಆಗಾಗ ಕಾರ್ಯಕ್ರಮಗಳನ್ನು ಇವು ನಡೆಸುತ್ತವೆ.

ಹಲವಾರು ಪ್ರಥಮಗಳನ್ನು ಸಾಧಿಸಿದ ನಾಟಕಕಾರ ಮತ್ತು ಹೆಸರಾಂತ ಕಲಾವಿದರಾದ ಅ.ನ.ಸುಬ್ಬರಾಯರು (೧೮೯೧–೧೯೮೧) ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳಿನವರು. ಬೆಂಗಳೂರಿನಲ್ಲಿ ೧೯೧೯ರಲ್ಲಿ ಕಲಾಮಂದಿರ ಸ್ಥಾಪಿಸಿದರು. ಮೊದಲ ಕಲಾ ಪ್ರದರ್ಶನವನ್ನು ಮತ್ತು ಪ್ರಥಮ ಸಂಗೀತ ಸ್ಪರ್ಧೆಯನ್ನು ನಡೆಸಿದ ಖ್ಯಾತಿಯನ್ನು ಇವರು ಪಡೆದಿದ್ದಾರೆ. ಪುಷ್ಪ ರಚನೆ (೧೯೧೯) ಬಣ್ಣದ ಗಡಿಗೆ, ಒಂದೇ ಒಂದು, ದೃಗ್ದರ್ಶನ ಇತ್ಯಾದಿ ಹದಿನೇಳು ಕೃತಿಗಳನ್ನೂ ಇವರು ರಚಿಸಿದ್ದಾರೆ. (ಚಿತ್ರಕಲಾ ವಿಭಾಗ ನೋಡಿ)

ಎಂ.ಆರ್.ಶ್ರೀನಿವಾಸಮೂರ್ತಿ (ಎಂ.ಆರ್.ಶ್ರೀ ೧೮೯೨–೧೯೫೩) ಯವರು ಮಂಡ್ಯದವರು. ಸಾವಿತ್ರಿ, ಮಹಾತ್ಯಾಗ, ರಂಗಣ್ಣನ ಕನಸಿನ ದಿನಗಳು ವಚನ ಧರ್ಮಸಾರ, ಭಕ್ತಿ ಭಂಡಾರಿ ಬಸವಣ್ಣ, ಹಾಗೂ ಪ್ರಭುಲಿಂಗ ಲೀಲಾ ಸಂಗ್ರಹ ಇತ್ಯಾದಿಗಳನ್ನು ಬರೆದಿದ್ದಾರೆ. ಪ್ರಾಚೀನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಹೊಸಗನ್ನಡದಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರು ಉತ್ತಮ ಸ್ಕೌಟ್ ಆಗಿ, 'ಸ್ಕೌಟ್ ಮಾಸ್ಟರ್‌ಗಳ ಸಲಹೆಗಳು' (ಅನುವಾದ) ಎಂಬ ಮಾರ್ಗದರ್ಶಿ ಕೃತಿಯನ್ನೂ ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ಇವರೂ ಒಬ್ಬರು. ೧೯೫೦ ರಿಂದ ೧೯೫೩ರವರೆಗೆ ಅದರ ಅಧ್ಯಕ್ಷರಾಗಿ ಪರಿಷತ್ತಿನ ಕೆಲಸ ಮಾಡಿದ್ದಾರೆ. ೧೯೫೦ರಲ್ಲಿ ಸೊಲ್ಲಾಪುರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜಕಾರಣ, ಪತ್ರಿಕೋದ್ಯಮಗಳಲ್ಲಿ ಹೆಸರು ಮಾಡಿ ಪತ್ರಿಕೆಯ ಹೆಸರನ್ನೇ ತಮ್ಮ ಹೆಸರಿಗೆ ವಿಶೇಷಣವಾಗಿ ಪಡೆದ ವೀರಕೇಸರಿ ಸೀತಾರಾಮಶಾಸ್ತ್ರಿಗಳು (೧೮೯೩–೧೯೭೧) ಮದ್ದೂರಿನವರಾಗಿದ್ದು, ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳನ್ನು ಬರೆದಿದ್ದಾರೆ. ಲಕ್ಷ್ಮಿಯ ಸಂಸಾರ, ಚಿತ್ರಕೂಟ, ಇತ್ಯಾದಿ ಇವರ ಸಾಮಾಜಿಕ ಕೃತಿಗಳು. ಬಿದನೂರು ರಾಣಿ, ರಾಜಪಂಜರ, ಗೋಲ್ಕಂಡ, ಚಾಂದ್‌ಸುಲ್ತಾನಿ, ಮುಂತಾದ ಐತಿಹಾಸಿಕ ಕಾದಂಬರಿಗಳೂ ಸೇರಿದಂತೆ ಶಾಸ್ತ್ರಿಗಳು ಎಂಭತ್ತು ಕೃತಿಗಳನ್ನು ರಚಿಸಿದ್ದಾರೆ. 'ದೌಲತ್' ಎಂಬ ಪ್ರಸಿದ್ಧ ಕಾದಂಬರಿ ಆರು ಆವೃತ್ತಿಗಳನ್ನು ಕಂಡಿದೆ. ಇವರ 'ಶಿವಾಜಿ' ಕಾದಂಬರಿ ಸಾವಿರ ಪುಟಗಳನ್ನು ಹೊಂದಿದೆ. ಶಾಸ್ತ್ರಿಯವರ ತಂದೆ ನಾಗೇಶ ಜೋಯಿಸರೂ ಆಶುಕವಿಗಳಾಗಿದ್ದರು.

ಮದ್ದೂರು ವೀರಣ್ಣಗೌಡರೆಂದು ಹೆಸರುವಾಸಿಯಾದ ಎಚ್.ಕೆ.ವೀರಣ್ಣಗೌಡರು (೧೮೯೯–೧೯೭೬) ರಾಜಕಾರಣಿಯೆಂದೇ ಗುರುತಿಸಲ್ಪಟ್ಟವರಾದರೂ, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಬದುಕುಮೆಲುಕು, ರಷ್ಯಾದೊಳಗೆ ಇಣುಕು ನೋಟ ಎಂಬ ಕೃತಿಗಳನ್ನು ಬರೆದಿದ್ದಾರೆ. ನರ್ಸರಿಯಿಂದ ಕಾಲೇಜಿನವರೆಗಿನ ವಿದ್ಯಾಭ್ಯಾಸದ ಸೌಕರ್ಯವುಳ್ಳ ವಿದ್ಯಾಸಂಸ್ಥೆಯೊಂದನ್ನು ಮಾವ ಎಂ.ಎಚ್.ಚನ್ನೇಗೌಡರ ಹೆಸರಿನಲ್ಲಿ ಆರಂಭಿಸಿ ನಡೆಸಿದ್ದಾರೆ. ಇವರ ನೇತೃತ್ವದಲ್ಲಿ ೧೯೩೨ರಲ್ಲಿ ಜರುಗಿದ ಇರ್ವಿನ್ ನಾಲಾ ರೈತರ ಜಾಥಾ ಅನೇಕ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದು ಜಿಲ್ಲೆಯ ಜನತೆಯಲ್ಲಿ ಮರೆಯಲಾಗದ ಸಂಗತಿಯಾಗಿ ಉಳಿದಿದೆ.

ಉತ್ತಮ ಪ್ರಬಂಧಕಾರ, ವಿಮರ್ಶಕ ಹಾಗೂ ಅನುವಾದಕರೆಂದು ಪ್ರಸಿದ್ಧರಾದ ಎ.ಎನ್.ಮೂರ್ತಿರಾವ್ (ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್ ೧೯೦೦) ಅವರು ಅಕ್ಕಿಹೆಬ್ಬಾಳಿನವರು. ಅಪರ ವಯಸ್ಕನ ಅಮೆರಿಕಾ ಯಾತ್ರೆ, ಸಾಹಿತ್ಯ ಮತ್ತು ಸತ್ಯ, ಸಂಜೆಗಣ್ಣಿನ ಹಿನ್ನೋಟ (ಆತ್ಮಕಥೆ), ಇತ್ಯಾದಿಗಳಲ್ಲದೆ ಪ್ರಬಂಧ, ನಾಟಕ, ಅನುವಾದ, ರೂಪಾಂತರ ಮುಂತಾಗಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿದ ಕನ್ನಡ ನವೋದಯ ಕಾಲದ ಒಬ್ಬ ಖ್ಯಾತ ಸಾಹಿತಿಯಾಗಿದ್ದಾರೆ. ಹಗಲುಗನಸುಗಳು, ಅಲೆಯುವ ಮನ, ಮಿನುಗು ಮಿಂಚು, ಮುಂತಾದವು ಲಲಿತ ಪ್ರಬಂಧದ ಉತ್ತಮ ಮಾದರಿಯ ಉದಾಹರಣೆಗಳಾಗಬಲ್ಲ ಸಂಕಲನಗಳಾಗಿದ್ದು, ಪ್ರಬಂಧ ರಚನೆಯಲ್ಲಿ ಹೆಚ್ಚು ಖ್ಯಾತಿ ಪಡೆದಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ೧೯೫೩ ರಿಂದ ೧೯೫೪ ರವರೆಗೆ ಹಾಗೂ ಅಧ್ಯಕ್ಷರಾಗಿ ೧೯೫೪ ರಿಂದ ೫೬ರವರೆಗೆ ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯವು

೧೯೭೭ ರಲ್ಲಿ ಇವರಿಗೆ ಗೌರವ ಡಿ.ಲಿಟ್.ಪ್ರಶಸ್ತಿ ಇತ್ತು ಗೌರವಿಸಿದೆ. ೧೯೮೪ ರಲ್ಲಿ ಕೈವಾರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ವಿದೇಶಗಳಲ್ಲಿ ಪ್ರವಾಸ ಮಾಡಿದ ನಂತರ ಬರೆದ ಇವರ ಅಪರ ವಯಸ್ಕನ ಅಮೆರಿಕಾ ಯಾತ್ರೆಗೆ ೧೯೭೮ ರಲ್ಲಿ; 'ಚಂಡಮಾರುತ' ಎಂಬ ಸೃಜನಶೀಲ ಅನುವಾದಕ್ಕೆ ೧೯೮೧ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳೂ; ೧೯೮೪ರಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿಯೂ; 'ಚಿತ್ರಗಳು–ಪತ್ರಗಳು' ಎಂಬ ಕೃತಿಗೆ ೧೯೬೯ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ; 'ದೇವರು' ಕೃತಿಗೆ ರಾಜ್ಯ ಸರ್ಕಾರದ ೧೯೯೨ರ ಪಂಪ ಪ್ರಶಸ್ತಿಯೂ ದೊರೆತಿವೆ. ಇವರು ನೂರು ಸಂವತ್ಸರಗಳನ್ನು ಕಂಡ ಶತಾಯುಷಿ ಎಂಬುದೂ ದಾಖಲಾರ್ಹ ಸಂಗತಿಯೇ.

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಇತರ ಪ್ರಸಿದ್ಧರೊಡನೆ ಮಂಡ್ಯದ ಎಂ.ಎಂ.ಧರಣೇಂದ್ರಯ್ಯನವರೂ ಒಬ್ಬರು. ಸ್ವಾತಂತ್ರ್ಯ ಹೋರಾಟಗಾರರೂ ಆದ ಇವರು ಸ್ವಂತ ಮುದ್ರಣಾಲಯವೊಂದನ್ನು ಆರಂಭಿಸಿ ಕನ್ನಡದ ಅನೇಕ ಗ್ರಂಥಗಳನ್ನು ಪ್ರಕಟ ಮಾಡಿದ್ದಾರೆ. ಇವರ ಅಣ್ಣ ಮಂಡ್ಯದ ಸುಬ್ಬಣ್ಣನವರು 'ಜಿನದತ್ತರಾಯ ಪದ್ಮಾವತಿದೇವಿ' ಕಥೆಯನ್ನು ಕಾದಂಬರಿ ರೂಪದಲ್ಲಿ ಬರೆದು ಪ್ರಕಟಿಸಿದ್ದು ಇದು ಕನ್ನಡದ ಮೊದಲ ಜೈನ ಕಥಾವಸ್ತುವುಳ್ಳ ಕಾದಂಬರಿಯಾಗಿರಬಹುದೆಂಬ ಅಭಿಪ್ರಾಯವಿದೆ.

ಪು.ತಿ.ನ (ಪುರೋಹಿತ ತಿರುನಾರಾಯಣ ಅಯ್ಯಂಗಾರ್ಯ ನರಸಿಂಹಾಚಾರ್ಯರು (೧೯೦೫–೧೯೮) ಜನಿಸಿದ್ದು ಮೇಲುಕೋಟೆಯಲ್ಲಿ. ಸಾಹಿತ್ಯ ಮತ್ತು ಸಂಗೀತ ಪ್ರಧಾನವಾದ ಗೀತ ನಾಟಕಗಳನ್ನೂ, ಭಾವಗೀತೆ, ಪ್ರಬಂಧ, ಗದ್ಯನಾಟಕ, ಮಹಾಕಾವ್ಯ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. 'ಹಣತೆ, ಮಾಂದಳಿರು' ಮುಂತಾದ ಭಾವಗೀತೆ ಸಂಕಲನಗಳು, 'ರಾಮಾಚಾರಿಯ ನೆನಪು, ಈಚಲ ಮರದ ಕೆಳಗೆ, ಯದುಗಿರಿಯ ಗೆಳೆಯರು' ಮುಂತಾದ ಉತ್ಕೃಷ್ಟ ಪ್ರಬಂಧಗಳು, ಪು.ತಿ.ನ ಅವರ ರಚನೆಗಳು. ರಾಜ್ಯ ಸರ್ಕಾರವು ಪು.ತಿ.ನ ಟ್ರಸ್ಟ್ ಒಂದನ್ನು ರಚಿಸಿದೆ. ಇವರ ಮೇಲುಕೋಟೆಯ ಮನೆಯನ್ನು ಮೈಸೂರಿನ ಪ್ರಾಚ್ಯ ವಸ್ತು ಇಲಾಖೆ ವಹಿಸಿಕೊಂಡು 'ಸಾಂಸ್ಕೃತಿಕ ಸ್ಮರಣೆ' ಯಾಗಿ (೨೦೦೦ನೇ ಸಾಲಿನಲ್ಲಿ) ಸಿದ್ಧಗೊಳಿಸಿ ಸಂರಕ್ಷಿಸಿದೆ. ಪು.ತಿ.ನರವರ ಹೆಸರಿನಲ್ಲಿ ಪ್ರತಿ ವರ್ಷ ಕಾವ್ಯ ಪ್ರಶಸ್ತಿಯನ್ನೂ ನೀಡಲಾಗುತ್ತಿದೆ. ಇವರ 'ಹಂಸ ದಮಯಂತಿ ಮತ್ತು ಇತರ ರೂಪಕಗಳು' ಎಂಬ ಗ್ರಂಥಕ್ಕೆ ೧೯೬೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿದೆ. ಚಿಕ್ಕಮಗಳೂರಿನಲ್ಲಿ ೧೯೮೧ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೇಷ್ಠ ಮನ್ನಣೆಯಾದ ಗೌರವ ಸದಸ್ಯತ್ವವನ್ನೂ ೧೯೯೩ರಲ್ಲಿ ಇವರಿಗೆ ನೀಡಲಾಗಿದೆ. ಇವರ 'ಶ್ರೀಹರಿ ಚರಿತೆ' ಬೃಹತ್ ಛಂದಸ್ಸಿನ ಒಂದು ಮಹಾಕಾವ್ಯವಾಗಿದ್ದು ಅದಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿಯೂ; ೧೯೮೮ ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯಿಂದ ವರ್ಷದ ಶ್ರೇಷ್ಠ ಸೃಜನಶೀಲ ಕೃತಿ ಎಂಬ ಪುಸ್ತಕ ಬಹುಮಾನವೂ ದೊರೆತಿದೆ.

ನವೋದಯ ಕಾಲದ ಕಾವ್ಯಕ್ಕೆ ಮಹತ್ತರ ಕೊಡುಗೆ ನೀಡಿದ ಕವಿ ಕೆ.ಎಸ್.ನರಸಿಂಹಸ್ವಾಮಿ (೧೯೧೫) ಯವರು ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದವರು. ೧೯೪೩ರಲ್ಲಿ ಪ್ರಕಟವಾದ ಇವರ ಮೊದಲ ಕೃತಿಯಾದ 'ಮೈಸೂರು ಮಲ್ಲಿಗೆ' ಕವನ ಸಂಕಲನವೇ ಗಮನಾರ್ಹ ಯಶಸ್ಸನ್ನು ಸಾಧಿಸಿ, ದೇವರಾಜ್ ಬಹಾದ್ದೂರ್ ಬಹುಮಾನವನ್ನು ೧೯೪೩ರಲ್ಲಿ ಗಳಿಸಿದೆ. ೧೮ ಮುದ್ರಣಗಳನ್ನು ಕಂಡಿರುವ ಈ ಕೃತಿ ೧೯೮೨ರಲ್ಲಿ ಧ್ವನಿ ಸುರುಳಿಯಾಗಿ ಹಾಗೂ ೧೯೯೧ರಲ್ಲಿ ಚಲನಚಿತ್ರವಾಗಿ ಹೊರಬಂದಿದೆ. ೧೯೮೭ರಲ್ಲಿ ಇದಕ್ಕೆ ಕೇರಳದ ಕುಮಾರ್ ಆಶಾನ್ ಪ್ರಶಸ್ತಿ ಸಿಕ್ಕಿದೆ. ನವೋದಯ ಮತ್ತು ನವ್ಯ ಮಾರ್ಗಗಳಲ್ಲಿ ಹಲವಾರು ಕವನ ಸಂಕಲನಗಳನ್ನೂ ಮಾಯಾಶಂಖ ಮತ್ತು ಇತರ

ಕಥೆಗಳು, ರಾಣಿಯಗಿಳಿ ಮತ್ತು ರಾಜನಮಂಗ ಮುಂತಾದ ಅನುವಾದ ಕೃತಿಗಳನ್ನೂ ಶಿಶುಸಾಹಿತ್ಯವನ್ನೂ ಇವರು ಬರೆದಿದ್ದಾರೆ. ಇವರ 'ಶಿಲಾಲತೆ' ಕವನ ಸಂಕಲನಕ್ಕೆ ೧೯೫೭ರಲ್ಲಿ ರಾಜ್ಯ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನ; 'ತೆರೆದ ಬಾಗಿಲು' ಕವನ ಸಂಕಲನಕ್ಕೆ ೧೯೭೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ. ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ೧೯೭೨ರಲ್ಲಿಯೂ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ೧೯೭೩ರಲ್ಲಿಯೂ ಇವರು ಪಡೆದಿದ್ದಾರೆ. 'ಯುವ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮೈಸೂರಿನಲ್ಲಿ ೧೯೯೦ರಲ್ಲಿ ನಡೆದ ೬೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನವೋದಯ ಕಾಲದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಅಶ್ವತ್ಥ (ಅಶ್ವತ್ಥ ನಾರಾಯಣರಾವ್) (೧೯೧೨–೧೯೯೪) ರವರು ಜನಿಸಿದ್ದು ಮಂಡ್ಯ ತಾಲೂಕಿನ ಕೆರಗೋಡಿನಲ್ಲಿ. ಅಗ್ನಿ ಸಾಕ್ಷಿ, ಜಯಂತಿ, ನೋವು ನಲಿವು ಮುಂತಾದ ಹಲವಾರು ಕೃತಿಗಳನ್ನು ವಿವಿಧ ಪ್ರಕಾರಗಳಲ್ಲಿ ಬರೆದಿದ್ದಾರೆ. ಕನ್ನಡದ ನವೋದಯ ಕತೆಗಾರರಲ್ಲಿ ಸಂಖ್ಯಾಬಲ ಮತ್ತು ನೈಜ ಕತೆಗಾರಿಕೆ ಈ ದೃಷ್ಟಿಗಳೆರಡರಿಂದಲೂ ಇವರು ಹೆಸರು ಮಾಡಿದ್ದಾರೆ. ಚಲನಚಿತ್ರಗಳಾದ ಇವರ ಕೆಲವು ಕೃತಿಗಳಲ್ಲಿ ಮುನಿಯನ ಮಾದರಿ, ರಂಗನಾಯಕಿ, ಅತ್ಯಂತ ಯಶಸ್ಸನ್ನು ಕಂಡಿವೆ. ಇವರಿಗೆ ೧೯೮೨ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ದೊರೆತಿದೆ. 'ಸುಜನಾ' ಎಂಬ ಕಾವ್ಯನಾಮದಲ್ಲಿ ಬರೆಯುವ ಹೊಸಹೊಳಲಿನ ಎಸ್.ನಾರಾಯಣಶೆಟ್ಟಿ (೧೯೩೦) ಯವರು ನವೋದಯ ತಲೆಮಾರಿನ ಕವಿ, ವಿಮರ್ಶಕರುಗಳಲ್ಲಿ ಒಬ್ಬರು. ಮಂಗಳಾರತಿ (೧೯೫೬), ನಾಣ್ಯಯಾತ್ರೆ (೧೯೬೪), ಮುಂತಾಗಿ ಸುಮಾರು ಹದಿನಾರು ಕೃತಿಗಳನ್ನು ಹೊರತಂದಿದ್ದಾರೆ. ಇವರ ವಿಮರ್ಶಾತ್ಮಕ ಕೃತಿಗಳಲ್ಲಿ ಹೊಸ ದೃಷ್ಟಿ ಇರುವುದರಿಂದಾಗಿ ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚು ಹೆಸರು ಪಡೆದಿದ್ದಾರೆ. ಇವರ 'ಹೃದಯ ಸಂವಾದ' ವಿಮರ್ಶಾ ಕೃತಿಗೆ ೧೯೬೩–೬೫ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇವರಿಗೆ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ೧೯೮೯ರಲ್ಲೂ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ೧೯೯೪ರಲ್ಲೂ; ದೇವರಾಜ್‌ಅರಸ್ ಪ್ರಶಸ್ತಿ ೧೯೯೭ರಲ್ಲೂ; ವಿಶ್ವಮಾನವ ಪ್ರಶಸ್ತಿ ೧೯೯೮ರಲ್ಲೂ ದೊರೆತಿವೆ. ಇವರು ರಚಿಸಿರುವ ಮಹಾಕಾವ್ಯ 'ಯುಗಸಂಧ್ಯಾ'ಕ್ಕೆ ೨೦೦೨ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ನಾಗಮಂಗಲ ತಾಲೂಕಿನ ಅಂಬಲ ಜೀರಹಳ್ಳಿಯವರಾದ ಜೀ.ಶಂ.ಪ (ಜೀರಹಳ್ಳಿ ಶಂಕರಗೌಡ ಪರಮಶಿವಯ್ಯ ೧೯೩೩–೨೦೦೦) ಅವರು ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳೆರಡರಲ್ಲೂ ಮಹತ್ವದ ಸಾಧನೆ ಮಾಡಿದ್ದಾರೆ. ದಿಬ್ಬದಾಚೆ, ಜೀವನಗೀತ, ಕವನ ಸಂಕಲನ; ಕಾವಲುಗಾರ, ಮಬ್ಬು ಜಾರಿದ ಕಣಿವೆಯಲ್ಲಿ ಮುಂತಾದ ಕಥಾ ಸಂಕಲನ, ಪ್ರಬಂಧ, ನಾಟಕ, ಜೀವನ ಚರಿತ್ರೆ ಹಾಗೂ ಇನ್ನಿತರ ಪ್ರಕಾರದ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನೂ ಬರೆದಿದ್ದು, ಆನಂತರ ಸಂಪೂರ್ಣ ಜಾನಪದ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರು ನವ್ಯ ನವೋದಯಗಳ ಸಂಕ್ರಮಣ ಕಾಲದಲ್ಲಿ ಕಾವ್ಯ ರಚನೆಗೆ ತೊಡಗಿದರೂ ನವೋದಯದ ಕಾವ್ಯ ಚೌಕಟ್ಟಿನಲ್ಲಿಯೇ ಕಾವ್ಯ ರಚಿಸಿದ್ದಾರೆ. (ಜಾನಪದ ಸಾಹಿತ್ಯ ನೋಡಿ) ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಪ್ರಶಸ್ತಿ ದೊರೆತಿದೆ. ಕಳೆದ ಶತಮಾನದ ಮಧ್ಯಭಾಗದಲ್ಲಿದ್ದ ಕ್ಯಾತನಹಳ್ಳಿಯ ಶಾಮಣ್ಣ ಹಾಗೂ ಅವರ ಪತ್ನಿ ನಾಗರತ್ನ ಹಳಗನ್ನಡದ ಒಳ್ಳೆ ಕವಿ ಹಾಗೂ ಕವಯಿತ್ರಿ. ಇವರಿಬ್ಬರೂ ನವೋದಯ ಕಾಲದಲ್ಲಿದ್ದರೂ ಹಳೆಗನ್ನಡದಲ್ಲಿ ಬರೆಯುತ್ತಿದ್ದ ಕವಿಗಳು.

**ನವೋದಯೋತ್ತರ ಸಾಹಿತ್ಯ**

ಕನ್ನಡ ಸಾಹಿತ್ಯದಲ್ಲಿ ಸುಮಾರು ೧೯೪೫ ರಿಂದ ಪ್ರಗತಿಶೀಲ ಚಳವಳಿಯ ಘಟ್ಟ ಆರಂಭಗೊಂಡಿತು. ಈ ಚಳವಳಿಯ ಸಾಹಿತಿಗಳು ನವೋದಯಕ್ಕಿಂತಲೂ ಹೆಚ್ಚಿನ ಪ್ರಗತಿಪರ ಧೋರಣೆ ಹೊಂದಿದ್ದರು. ಬಂಡವಾಳಶಾಹಿ

ವ್ಯವಸ್ಥೆಯನ್ನು ವಿರೋಧಿಸಿ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರುವುದು ಮತ್ತು ವಾಸ್ತವತೆಗೆ ಒತ್ತು ನೀಡುವುದು ಈ ಚಳವಳಿಯ ಪ್ರಮುಖ ಅಂಶಗಳಾಗಿದ್ದವು. ಪ್ರಗತಿಶೀಲದ ನಂತರ ಬೆಳೆದು ಬಂದದ್ದನ್ನು ನವ್ಯಮಾರ್ಗವೆಂದು ಕರೆಯಲಾಯಿತು. ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು ವಸ್ತುಗಳಾಗಿ ಆಯ್ದು ಹಲವಾರು ಪ್ರತಿಮೆ, ಪ್ರತೀಕ, ಸಂಕೇತಗಳನ್ನು ಸಾಹಿತ್ಯದಲ್ಲಿ ಬಳಸುವುದು ರೂಢಿಗೆ ಬಂದಿತು. ವೈಚಾರಿಕತೆಗೆ ಮಹತ್ವದ ಸ್ಥಾನ ನೀಡಲಾಯಿತು. ತ್ರಿವೇಣಿ (ಮಹಿಳಾ ಸಾಹಿತ್ಯ ನೋಡಿ), ಬೆಸಗರಹಳ್ಳಿ ರಾಮಣ್ಣ ಮುಂತಾದವರನ್ನು ಪ್ರಗತಿಶೀಲ ಪಂಥದವರನ್ನಾಗಿಯೂ, ಬಿ.ಸಿ.ರಾಮಚಂದ್ರಶರ್ಮರನ್ನು ನವ್ಯ ಪಂಥದ ಪ್ರಮುಖರನ್ನಾಗಿಯೂ ಉದಾಹರಿಸಬಹುದು. ರಮೇಶ್ ಹುಲ್ಲಕೆರೆಯವರು ನವ್ಯ ಮಾರ್ಗ ಅನುಸರಿಸಿದರು. ನವ್ಯದ ನಂತರದ ಸಾಹಿತ್ಯದಲ್ಲಿ ದಲಿತ ಬಂಡಾಯ ಮಾರ್ಗ ಬಂದಿದ್ದು, ಆ ಬಗ್ಗೆ ಮುಂದೆ ವಿವರಿಸಲಾಗಿದೆ. ನವೋದಯ ಸಾಹಿತಿಗಳ ಬರವಣಿಗೆಯಿಂದ ಪ್ರಭಾವಿತರಾದ ಅನೇಕ ಲೇಖಕರು, ಧಾರ್ಮಿಕ ಮಾತ್ರವಲ್ಲದೆ, ಕಥೆ, ಕಾದಂಬರಿ, ಕವನ, ಪ್ರವಾಸ ಸಾಹಿತ್ಯ, ನಾಟಕ ಮುಂತಾದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅವರ ಸೇವೆ ಮತ್ತು ಸಾಧನೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ಇಲ್ಲಿ ಉಲ್ಲೇಖಿಸಲಾಗಿದೆ.

ಸೀತಾಸುತ ಅಂಕಿತದ ಕಚ್ಚಿಗೆರೆ ಸಿದ್ದೇಗೌಡರು (೧೯೦೦) ವಾಲ್ಮೀಕಿ ರಾಮಾಯಣವನ್ನು ಆಧರಿಸಿ ಕೆಲವಾರು ಕೃತಿಗಳನ್ನು ಬರೆದಿದ್ದಾರೆ. ರಾಮಾಯಣದಲ್ಲಿ ಪುರುಷ ಪಾತ್ರಗಳು, ಸ್ತ್ರೀ ಪಾತ್ರಗಳು, ರಾಕ್ಷಸ ಪಾತ್ರಗಳು ಮುಂತಾಗಿ ಬಿಡಿ ಬಿಡಿಯಾದ ಪಾತ್ರ ವಿಮರ್ಶೆ ಮಾಡಿದ್ದಾರೆ. ಊರ್ಮಿಳಾ ದರ್ಶನ, ಶಿಲೆಯಲ್ಲವೀ ಗುಡಿಯು, ಬರಗಾಲ ಬರಿಗೈಲಿ ಬರಲಿಲ್ಲ, ಮುಂತಾಗಿ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಸೀತಾಸುತರು ರಾಮಾಯಣದ ಪಾತ್ರಗಳಲ್ಲಿ ಕೆಲವು ಸ್ವಕಲ್ಪಿತ ಸಂದರ್ಭ–ಸಂಭಾಷಣೆಗಳನ್ನು ಜೋಡಿಸಿ ಆಯಾ ಪಾತ್ರಗಳ ಸ್ವರೂಪಗಳು ರೋಚಕವೂ, ಪೋಷಕವೂ ಆಗುವಂತೆ ರಚಿಸಿದ್ದಾರೆ. ಸೀತಾಸುತರೂ ಎ.ಎನ್.ಮೂರ್ತಿರಾಯರಂತೆ ಈ ಜಿಲ್ಲೆಯ ಇನ್ನೊಬ್ಬ ಶತಾಯುಷಿ ಸಾಹಿತಿಯಾಗಿದ್ದಾರೆ. ನಾಗಮಂಗಲ ತಾಲೂಕಿನ ಶ್ರೀರಂಗಪುರದವರಾದ ಡಿ.ಆರ್.ರಾಮಯ್ಯ ಅವರು ಕೋಗಿಲೆ, ಕಳೆದಬಾಳು, ಎಂಬ ಕವನ ಸಂಕಲನಗಳನ್ನೂ ಮೂವರು ದೇಶ ಭೂಷಣರು, ಸರ್ ಜಗದೀಶ್ಚಂದ್ರಬೋಸ್ ಇತ್ಯಾದಿ ಜೀವನಚರಿತ್ರೆಗಳನ್ನೂ 'ಕರ್ತವ್ಯ' ಎಂಬ ಕಾದಂಬರಿಯನ್ನೂ ಬರೆದಿದ್ದಾರೆ.

'ಶ್ರೀವತ್ಸ' ಹೆಸರಿನ ದುದ್ದ ಕೃಷ್ಣಯ್ಯಂಗಾರ್ ದುದ್ದ ಗ್ರಾಮದವರು. ರೈತರಿಗೆ ಸಂಬಂಧಿಸಿದ ವಿಷಯಗಳ ಕುರಿತು ಕೆಲವು ಕೃತಿಗಳನ್ನು ರಚಿಸಿದ್ದಾರೆ. ಇವರ 'ರೈತ ಪ್ರಪಂಚ' ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ಸಂದಿದೆ. 'ವೇದಾಂತ ದೇಶಿಕರು' ಕೃತಿಗೆ ೧೯೬೭ರಲ್ಲಿ; ಹಾಗೂ 'ಶರಣಾಗತಿ ತತ್ವ' ಕೃತಿಗೆ ೧೯೭೨ರಲ್ಲಿ, ಸಾಹಿತ್ಯ ಅಕಾಡೆಮಿಯ ಬಹುಮಾನಗಳು ಬಂದಿವೆ. ವೇದಾಂತದೇಶಿಕರ 'ಸಂಕಲ್ಪ ಸೂರ್ಯೋದಯ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಲಗೂರಿನ ಜಡೇ ಮಾದಪ್ಪ ಶಿವಶಂಕರಪ್ಪ (೧೯೧೦) ಇವರು ಪಂಚವಿಂಶತಿ ಲೀಲಾ, ಪಾದೋದಕ, ತಾಯಿ ಹರಕೆ ಮುಂತಾದ ಕನ್ನಡ ಕೃತಿಗಳನ್ನೂ ಕೆಲವು ಇಂಗ್ಲಿಷ್ ಕೃತಿಗಳನ್ನು ಬರೆದಿದ್ದಾರೆ. ನಾಭಾ ಚಂದ್ರಶೇಖರಾಚಾರ್ಯರ (೧೯೧೦) ಜನ್ಮಸ್ಥಳ ನಾಗಮಂಗಲ. ಇವರು ಶಿಲ್ಪ ಕಲಾವಿದರಾಗಿ ಖ್ಯಾತರಾಗಿರುವರಲ್ಲದೆ, ಅನೇಕ ವಿದ್ವತ್ ಪೂರ್ಣ ಲೇಖನಗಳನ್ನೂ ಬರೆದಿದ್ದಾರೆ. 'ಧಾರ್ಮಿಕ ಪಠನ ಸಂಗ್ರಹ' (ಮೂರು ಭಾಗಗಳಲ್ಲಿ) ತಾರಾಬಲಸೂಚಿ ಮುಂತಾದ ಇವರ ರಚನೆಗಳು ಪೌರೋಹಿತ್ಯ ಮಾಡುವವರಿಗೆ ಅತ್ಯಗತ್ಯ ಎನಿಸಿವೆ. ಕೆಲವು ತೆಲುಗು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರಿಗೆ 'ವಿದ್ಯಾಲಂಕಾರ, ವೇದ ಭೂಷಣ, ಅಧ್ವರ್ಯು ಶಿರೋಮಣಿ, ವಿದ್ವಾನ್ ವಿಶ್ವಕರ್ಮ ಜ್ಞಾನ ಧುರೀಣ' ಮುಂತಾದ ಬಿರುದುಗಳು ದೊರೆತಿವೆ.

ನೀಲನಹಳ್ಳಿಯ ಭದ್ರಯ್ಯ ನಡ್ಲೇಗೌಡ (ನಭ) (೧೯೧೨–೧೯೮೮) ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ರಚನೆಯಲ್ಲಿ ಪರ್ವತಾರೋಹಣ, ಆರೋಗ್ಯ, ಖಗೋಳಶಾಸ್ತ್ರ ಮತ್ತು ಪ್ರವಾಸಕ್ಕೆ ಸಂಬಂಧಿಸಿದ ಕೃತಿಗಳೇ ಹೆಚ್ಚು. ಜೀವನ ಚರಿತ್ರೆ ಹಾಗೂ ಸಾಹಸ ಕಥೆಗಳನ್ನೂ ಬರೆದಿದ್ದಾರೆ. 'ಕ್ಯಾಮರೂನ್ ಬಣಗಳೊಡನೆ' ಎಂಬುದು

ಪಶ್ಚಿಮ ಆಫ್ರಿಕಾದ ಒಂದು ರಾಜ್ಯದ ಕ್ರೂರ ನರಭಕ್ಷಕ ಜನಾಂಗವನ್ನು ಪರಿಚಯ ಮಾಡಿಕೊಡುವ ಕೃತಿ. ೧೯೩೫ ರಿಂದ ೧೯೩೯ ರವರೆಗೆ 'ಗ್ರಾಮಸೇವಾ' ಮಾಸಿಕದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ೧೯೫೫ ರಿಂದ ೧೯೬೨ ರವರೆಗೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ ಇಂಡೋನೇಷ್ಯಾ, ಅಮೆರಿಕಾ, ಇರಾನ್ ಮತ್ತು ಕೆನ್ಯಾಗಳಲ್ಲಿ ವಯಸ್ಕರ ಶಿಕ್ಷಣ ತಜ್ಞರಾಗಿ ಪ್ರವಾಸ ಮಾಡಿದ್ದಾರೆ. ಇವರ 'ಆಕಾಶದ ಆಶ್ಚರ್ಯ' ಎಂಬ ಖಗೋಳ ವಿಜ್ಞಾನದ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ.

ಹೃಷಿಕೇಶದಲ್ಲಿ ಶಿವಾನಂದಸ್ವಾಮಿಗಳಿಂದ ಸನ್ಯಾಸವನ್ನು ಸ್ವೀಕರಿಸಿದ ನಿರಂಜನಾನಂದರು (೧೯೦೭–೧೯೮೦) ೧೯೩೯ ರಲ್ಲಿ ಮಂಡ್ಯಕ್ಕೆ ಬಂದು, 'ನಿರಂಜನ ಕುಟೀರ' ವನ್ನು ಮಂಡ್ಯ ಸಮೀಪದ ಉಮ್ಮಡಹಳ್ಳಿ ಬಳಿ ನಿರ್ಮಿಸಿದ್ದಾರೆ. ಆನಂತರ ೧೯೬೪ ರಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ನೆಲೆಸಿ, ವಚನ ಪ್ರಕಾರದ ೧೨೭ ರಚನೆಗಳ 'ರವಿ ರಸಾಯನ' ಮತ್ತು 'ಧ್ಯಾನ ಮಿಂಚು' ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಯ ಬಗ್ಗೆ ಹಲವು ವಿಧಗಳಲ್ಲಿ ಕೆಲಸ ಮಾಡಿ ಪ್ರಖ್ಯಾತವಾಗಿರುವ ಜಿ.ವೆಂಕಟಸುಬ್ಬಯ್ಯನವರು (ಜ.೧೯೧೩) ಶ್ರೀರಂಗಪಟ್ಟಣದ ಗಂಜಾಂ ಗ್ರಾಮದವರು. 'ಇಗೋ ಕನ್ನಡ' ಮತ್ತು ಕನ್ನಡ ಪದಕೋಶಗಳ ಮೂಲಕ ಕನ್ನಡದ ಶಬ್ದ ಭಂಡಾರದ ಬಗ್ಗೆ ರಾಜ್ಯದ ಜನತೆಗೆ ಅರಿವು ಮೂಡಿಸಿದ್ದಾರೆ. ರಾಬಿನ್ಸನ್ ಕ್ರೂಸೊ, ನಯಸೇನ, ಅನುಕಲ್ಪನೆ, ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ೧೯೬೪ ರಿಂದ ೧೯೬೯ ರವರೆಗೆ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಇವರು ಹೆಚ್ಚಿನ ಕೃಷಿ ಮಾಡಿದ್ದು, ೧೯೭೩ ರಿಂದ ೧೯೯೧ರವರೆಗೆ ೧೮ ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ 'ಸಾಹಿತ್ಯ ಜೀವಿ' ಎಂಬ ಅಭಿನಂದನಾ ಗ್ರಂಥವನ್ನು ಸಲ್ಲಿಸಲಾಗಿದೆ. ಇವರ 'ಮುದ್ದಣ ಭಂಡಾರ' ಸಂಪಾದಿತ ಕೃತಿಗೆ ೧೯೮೭ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೯೭ನೇ ಸಾಲಿನಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ಖ್ಯಾತ ಗಮಕಿಯೂ ಮತ್ತು ಸ್ವತಃ ಕವಿಯೂ ಆದ ಎಂ.ರಾಘವೇಂದ್ರರಾವ್‌ರವರು, ಜನಿಸಿದ್ದು ಪಾಂಡವಪುರದಲ್ಲಿ. ಭಕ್ತಿನೀತಿ ಪ್ರತಿಪಾದಿಸುವ ಕಾವ್ಯಗಳನ್ನು, ಇನ್ನಿತರ ಕೃತಿಗಳನ್ನೂ ರಚಿಸಿರುವ ಇವರಿಗೆ ೧೯೭೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ೧೯೯೪ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿವೆ. 'ಗಮಕ ರತ್ನಾಕರ' ಇವರಿಗೆ ದೊರೆತಿರುವ ಬಿರುದಾಗಿದೆ. ಕೀಲಾರದ ಕೆ.ವಿ.ಶಂಕರಗೌಡರು ಶಿಕ್ಷಣ ಸಚಿವರಾಗಿ ಮಂಡ್ಯ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದರೂ, ಸಾಹಿತ್ಯ ಕ್ಷೇತ್ರದಲ್ಲೂ ಉತ್ತಮ ಸೇವೆ ಸಲ್ಲಿಸಿದ್ದಾರೆ. 'ಆಧುನಿಕ ಮಂಡ್ಯದ ಶಿಲ್ಪಿ' ಎಂದೇ ಹೇಳಲಾಗುವ ಇವರು ಕೆಲವಾರು ನಾಟಕಗಳನ್ನು, ಮಹಾತ್ಮ, ಅಂತಿಮ ಹಂತ ಎಂಬ ಅನುವಾದಿತ ಕೃತಿಗಳನ್ನೂ ಬರೆದಿದ್ದಾರೆ. (ರಂಗಭೂಮಿ ನೋಡಿ) ೧೯೬೮ ರಿಂದ ೧೯೭೦ರವರೆಗೆ ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಗದ್ಯ ಸಾಹಿತ್ಯಕ್ಕೆ 'ಪ್ರವಾಸಿ ಕಂಡ ಇಂಡಿಯಾ' ಎಂಬ ಕೃತಿಯನ್ನೂ 'ದೊಡ್ಡಮನೆ' ಎಂಬ ಕಾದಂಬರಿಯನ್ನೂ ಕೊಟ್ಟಿರುವ ಎಚ್.ಎಲ್.ನಾಗೇಗೌಡರು (ಜ.೧೯೧೬) ಜಿಲ್ಲೆಯ ಹೆರಗನಹಳ್ಳಿಯವರು. ಜಾನಪದ ಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. (ಜಾನಪದ ಸಾಹಿತ್ಯ ನೋಡಿ) ಇವರು ಸಣ್ಣ ಕಥೆ, ಕಾದಂಬರಿ ಬರೆದಿದ್ದಾರೆ. ಸರ್ ವಾಲ್ಟರ್‌ಸ್ಕಾಟ್‌ನ ಐತಿಹಾಸಿಕ ಕಾದಂಬರಿ 'ಕೆನೆಲ್‌ವರ್ತ್' ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಸೊನ್ನೆಯಿಂದ ಸೊನ್ನೆಗೆ, ಭೂಮಿಗೆ ಬಂದ ಗಂಧರ್ವ (ಕಾದಂಬರಿ) ಸರೋಜಿನಿ ದೇವಿ ಮುಂತಾದವು ಇವರ ಇನ್ನಿತರ ಸಾಹಿತ್ಯ ಕೃತಿಗಳು. ಭಾರತ ಆಡಳಿತ ಸೇವೆ (ಐ.ಎ.ಎಸ್)ಗೆ ಸೇರಿ, ಆಡಳಿತ ನಿರ್ವಹಣೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಮುಧೋಳದಲ್ಲಿ

೧೯೯೫ ರಲ್ಲಿ ನಡೆದ ೬೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರ 'ನಾ ಕಂಡ ಪ್ರಪಂಚ' ಎಂಬ ಪ್ರವಾಸ ಕೃತಿಗೆ ೧೯೮೬ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇವರು ಲೋಕಸಭಾ ಆಯೋಗ ಹಾಗೂ ವಿಧಾನಪರಿಷತ್ತಿನ ಸದಸ್ಯರೂ ಆಗಿದ್ದರು. ಅಕ್ಕಿಹೆಬ್ಬಾಳಿನ ಅಶ್ವತ್ಥ ಲಕ್ಷ್ಮೀನರಸಿಂಹಯ್ಯ (೧೯೧೭) ನವರು ಅಷ್ಟಾಂಗ ಹೃದಯ ಸಂಹಿತಾ, ಸುಶ್ರುತ ಸಂಹಿತಾ ಇತ್ಯಾದಿ ಆಯುರ್ವೇದಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ.

ಸಮೇತನಹಳ್ಳಿಯ ರಾಮರಾಯರು (೧೯೧೭) ಕೆಲವು ವರ್ಷ ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಮಂಡ್ಯದಲ್ಲಿದ್ದ ಸಂದರ್ಭದಲ್ಲಿ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಅಬ್ದುಲ್ ಖಾದರ್ (೧೯೨೮–೧೯೬೩) ರವರು 'ಗೋಸಂರಕ್ಷಣಾ ಲಾವಣಿ', 'ಗೋವುಗಳ ಪ್ರಾರ್ಥನೆ', ಭೂಲೋಕದ ಕಣ್ಣೀರು ಮುಂತಾದ ಕೃತಿಗಳನ್ನೂ; ಎನ್.ಎನ್.ಮೂರ್ತಿ (೧೯೩೧) 'ಮೆಟ್ರಿಮೋನಿಯಲ್', 'ಹೆಂಡ್ತಿಪೂಜೆ' ಮುಂತಾದ ಕೃತಿಗಳನ್ನೂ; ರಾಮಮೋಹನ್ (೧೯೩೬) ಮತ್ತು ಅರಕೆರೆಯ ಡಿ.ಕೃಷ್ಣಪ್ಪಗೌಡರು ತಲಾ ಒಂದೊಂದು ಕೃತಿಯನ್ನೂ, ಹೊರತಂದಿದ್ದಾರೆ. ಗಂಜಾಮಿನ ಕರೀಮುದ್ದೀನ್‌ರವರು ಖುರಾನನ್ನು ಕನ್ನಡಕ್ಕೆ ಅನುವಾದ ಮಾಡಿ ಇತರ ಕೆಲವು ಕೃತಿಗಳನ್ನು ಬರೆದಿದ್ದಾರೆ. ಜ್ಞಾನೋಪಾಸಕ ಎಂಬುದು ಮಳವಳ್ಳಿ ತಾಲೂಕಿನ ಹಲಗೂರು ಗ್ರಾಮದ ಮ.ಮಲ್ಲಪ್ಪನವರ (೧೯೨೦) ಕಾವ್ಯನಾಮ. ಪಂಡಿತರೆಂದೇ ಪ್ರಖ್ಯಾತಿ ಹೊಂದಿ, ವಚನ ಸಂಗ್ರಹ, ಮಕ್ಕಳ ನಾಟಕ, ಕಾದಂಬರಿ, ವ್ಯಾಕರಣ ಮತ್ತು ಭಾಷಾ ಶಾಸ್ತ್ರ ಪುಸ್ತಕಗಳು, ಮದ್ದೂರು ಮಾಹಿತಿ ಹಾಗೂ ಮಳವಳ್ಳಿ ತಾಲೂಕು ದರ್ಶನ ಮುಂತಾದ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ವಿವಿಧ ಪ್ರಕಾರಗಳಲ್ಲಿ ಬರೆದು ಹೊರ ತಂದಿದ್ದಾರೆ. ಉದಯೋನ್ಮುಖ ಬರಹಗಾರರನ್ನು ಹುಡುಕಿ ಗುರುತಿಸಿ, ಜ್ಞಾನಕಿರಣವೆಂಬ ಪ್ರಕಾಶನದ ಮೂಲಕ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಪತ್ತೇದಾರಿ ಕಾದಂಬರಿಕಾರ ಎಂದೇ ಪ್ರಸಿದ್ಧರಾದ ಮ.ರಾಮಮೂರ್ತಿ (೧೯೧೮–೧೯೭೧) ಯವರು ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಮಗ. ಪತ್ತೇದಾರಿ ಕಾದಂಬರಿಗಳಿಂದ ಈ ಪ್ರಕಾರದ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ವಿನಾಯಕ ದಾಮೋದರ ಸಾರ್ವಕರ್ ರವರ 'ದಿ ಫಸ್ಟ್ ವಾರ್ ಆಫ್ ಇಂಡಿಪೆಂಡೆನ್ಸ್' ಕೃತಿಯಿಂದ ಪ್ರಭಾವಿತರಾಗಿ 'ವಿಪ್ಲವ' ಕಾದಂಬರಿ ರಚಿಸಿದರು. ಸಾಮಾಜಿಕ ಕಾದಂಬರಿ, ಕಾವ್ಯ, ಪ್ರವಾಸ ಕಥನಗಳಲ್ಲದೇ, ಲಕುಮಿಯ ಹೆಣ, ಕೈಕೊಟ್ಟ ಪ್ರೇಮಪತ್ರ, ಮುಂತಾಗಿ ಇನ್ನೂರ ಐವತ್ತಕ್ಕೂ ಹೆಚ್ಚು ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ 'ಕಾಲುವೆ ಮನೆ' ಎಂಬ ಕಾದಂಬರಿಯ ಹತ್ತು ಸಾವಿರ ಪ್ರತಿಗಳೂ ಹಾಗೂ ೧೮ ದಿನಗಳಲ್ಲಿ 'ಸಾಗರಿ' ಪುಸ್ತಕದ ೧೨,೦೦೦ ಪ್ರತಿಗಳು ದಾಖಲೆ ಮಾರಾಟವಾಗಿವೆ. ಕನ್ನಡ ಚಳವಳಿಯಲ್ಲಿ ಅ.ನ.ಕೃಷ್ಣರಾಯರ ನಂತರದ ಪ್ರಮುಖ ಹೆಸರು ಇವರದಾಗಿದೆ.

ಶಿವಪುರದ ಲಿಂಗಯ್ಯ ಪುಟ್ಟಮಾದಯ್ಯ(೧೯೨೧)ನವರು ಸರ್ವಜ್ಞನ ಸಂದೇಶ, ನವನೀತ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇವರು, ಹಲವು ವರ್ಷ 'ಮಂಡ್ಯ ಕರ್ನಾಟಕ ಸಂಘ'ದ ಕಾರ್ಯದರ್ಶಿಯಾಗಿದ್ದರು. ೧೯೬೪ ರಲ್ಲಿ ಬೆಂಗಳೂರು ನಗರದ ಮಹಾಪೌರರಾಗಿ (ಮೇಯರ್ ಆಗಿ), ೧೯೬೯ ರಿಂದ ೧೯೭೮ ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ೧೯೯೨ ರಿಂದ ೧೯೯೫ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ ಜಿ.ನಾರಾಯಣ (೧೯೨೩) ರವರು ಮದ್ದೂರು ತಾಲೂಕಿನ ದೇಶಹಳ್ಳಿಯವರು. ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇವರು ಬೆಂಗಳೂರಿನ ಮಹಾಪೌರರಾಗಿದ್ದಾಗ ರಾಜ್ಯೋತ್ಸವದಂದು ಬೆಂಗಳೂರಿನ ಹಲವು ರಸ್ತೆಗಳಿಗೆ, ರಂಗಮಂಟಪಗಳಿಗೆ ಮತ್ತು ಬಡಾವಣೆಗಳಿಗೆ ಕನ್ನಡ ಕವಿ–ಸಾಹಿತಿಗಳ ಹೆಸರುಗಳನ್ನು ಇಟ್ಟರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾದ ಮೇಲೆ ಅದಕ್ಕೆ ಹೊಸ ಆಯಾಮ

ಕೊಟ್ಟರು. ದೆಹಲಿ, ಭೂಪಾಲ್, ಮದ್ರಾಸ್, ಇಂಗ್ಲೆಂಡ್, ಅಮೆರಿಕಾ ಮುಂತಾದ ಹೊರನಾಡ ಸ್ಥಳಗಳಲ್ಲಿದ್ದ ಕನ್ನಡಿಗರಿಗಾಗಿ ಅಲ್ಲಿಯ ಕನ್ನಡ ಸಂಘಗಳಿಗೆ ಉಚಿತ ಕನ್ನಡ ಪುಸ್ತಕಗಳನ್ನು ಸಂಗ್ರಹಿಸಿ ಸರಬರಾಜು ಮಾಡಲು ಪುಸ್ತಕ ದಾನ ಚಳುವಳಿಯನ್ನೂ ಆರಂಭಿಸಿದ್ದರು. ಹಲವಾರು ಪುಸ್ತಕಗಳನ್ನು ಹೊಸ ಹೊಸ ಸಾಹಿತ್ಯಾಸಕ್ತರಿಂದ ಬರೆಯಿಸಿ ಪ್ರಕಟಿಸಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ವರ್ಷ (೧೯೭೫) ಒಂದರಲ್ಲೇ ವಿವಿಧ ಕ್ಷೇತ್ರಗಳಲ್ಲಿ ಇರುವ ಮಹಿಳೆಯರಿಗೆ ಸಮಸ್ಯೆಗಳ ಬಗ್ಗೆ ಮಹಿಳೆಯರಿಂದಲೇ ೨೩ ಪುಸ್ತಕಗಳನ್ನು ಬರೆಸಿ ಪ್ರಕಟಿಸಿದ್ದಾರೆ. ಇವರಿಗೆ ೧೯೭೨ ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ದೊರೆತಿದೆ. (ಜನಪದ ಮತ್ತು ಪತ್ರಿಕೋದ್ಯಮ ನೋಡಿ)

ಮಾದಿಹಳ್ಳಿ ಮುನಿಸ್ವಾಮಿ(೧೯೨೮) ಯವರು 'ರಾಜಾ ಮಂತ್ರಿ', ಹಾಸ್ಯಗಾರ, ಮುಂತಾದ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಹೊ.ಶ್ರೀನಿವಾಸಯ್ಯ (೧೯೨೫) ನವರಿಂದ 'ನಾ ಕಂಡ ಜರ್ಮನಿ',ಶ್ರೀಲಂಕಾ ಸಿಂಹಳದಲ್ಲಿ ಶಶಿ, ಮುಂತಾದ ಹಲವು ಕೃತಿಗಳ ರಚನೆಯಾಗಿವೆ. ಇವರು ಈ ಜಿಲ್ಲೆಯ ಚೌದರೀ ಕೊಪ್ಪಲಿನವರು. ಇವರ 'ನಾ ಕಂಡ ಜರ್ಮನಿ' ಎಂಬ ಪ್ರವಾಸ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ೧೯೭೫ರ ಬಹುಮಾನ ದೊರೆತಿದೆ. ಕನ್ನಡ ಸಾಹಿತ್ಯದಲ್ಲಿ ನವ್ಯ ಮಾರ್ಗವನ್ನು ತಂದವರಲ್ಲಿ ಒಬ್ಬರಾದ ಬಿ.ಸಿ.ರಾಮಚಂದ್ರ ಶರ್ಮ (೧೯೨೫) ರವರು ಜನಿಸಿದ್ದು, ಈ ಜಿಲ್ಲೆಯ ನಾಗಮಂಗಲ ತಾಲೂಕಿನ ಬೋಗಾದಿ ಗ್ರಾಮದಲ್ಲಿ. ಹಾಡು ಅಥವಾ ಸಾಮಾನ್ಯ ಪದ್ಯಗಳಲ್ಲಿ ಕಾಣುವ ಆದಿ-ಮಧ್ಯ-ಅಂತ್ಯಗಳನ್ನು, ಷಟ್ಪತ್ರಯಗಳು ಇಲ್ಲದಂತೆ, ಪ್ರತಿಮೆಗಳನ್ನು ಬಳಸಿ, ಕವನಗಳನ್ನು ಬರೆದರು. ಹಲವಾರು ಕವನ ಸಂಕಲನಗಳನ್ನು, ಕಥಾ ಸಂಕಲನಗಳನ್ನು, ನಾಟಕಗಳನ್ನು ಬರೆದಿದ್ದಾರೆ. ಇವರ 'ನೆರಳು' ನಾಟಕಕ್ಕೆ ರಾಜ್ಯ ಸರ್ಕಾರದಿಂದ, 'ಸೆರಗಿನ ಕೆಂಡ' ಎಂಬ ಇನ್ನೊಂದು ನಾಟಕಕ್ಕೆ ಭಾರತ ಸರ್ಕಾರದಿಂದ ಹಾಗೂ ಇವರ ಪ್ರತಿಭಾ ಪ್ರಬಂಧಕ್ಕೆ ೧೯೭೫ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನಗಳು ದೊರೆತಿವೆ. ಇವರಿಗೆ ೧೯೮೫ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯೂ, ೧೯೯೭ ರಲ್ಲಿ ರಾಜ್ಯ ಪ್ರಶಸ್ತಿಯೂ ಲಭಿಸಿವೆ.

ಪಾಂಡವಪುರ ತಾಲೂಕಿನ ಹಳೇಬೀಡು ಗ್ರಾಮದ ಎಚ್.ಕೆ.ಯೋಗಾನರಸಿಂಹ (೧೯೨೭-೨೦೦೨) ರವರು ಚಲನಚಿತ್ರ ಸಾಹಿತಿಯಾಗಿ ಖ್ಯಾತರು. ಒಲವಿನ ಬಲಿ, ಭಾಗ್ಯ ನೌಕೆ (ರಂಗಭೂಮಿ ನೋಡಿ) ಮುಂತಾಗಿ ಹಲವಾರು ಕೃತಿಗಳನ್ನೂ ರಚಿಸಿದ್ದಾರೆ. ಅಕ್ಕಿಹೆಬ್ಬಾಳಿನ ಕೃ.ನ.ಮೂರ್ತಿ (೧೯೨೮) ಇವರು ಚಿನ್ನದ ಜಿಂಕೆ, ಸರ್ವೋದಯ ಮುಂತಾಗಿ ವಿವಿಧ ಪ್ರಕಾರಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನೂ ರಚಿಸಿದ್ದಾರೆ. ಪಾಂಡವಪುರ ತಾಲೂಕಿನ ಹಾರೋಹಳ್ಳಿ ಗ್ರಾಮದ ಎಚ್.ನಂಜೇಗೌಡರು (೧೯೨೮) ಯೂನಿಸೆಫ್ ಸಹಾಯದಿಂದ ನುಡಿಗನ್ನಡದ ನಾಲ್ಕು ಸಂಪುಟಗಳನ್ನು ಹೊರತಂದು, ಕನ್ನಡ ಭಾರತಿಯ ಕೆಲವು ಸಂಪುಟಗಳನ್ನು, ಕೇಶಿರಾಜನ ಶಬ್ದಮಣಿ ದರ್ಪಣ, ಶಬ್ದಾನುಶಾಸನ, ಇತ್ಯಾದಿಗಳನ್ನೂ ಸಂಪಾದಿಸಿದ್ದಾರೆ. ಪಾಂಡವಪುರ ತಾಲೂಕಿನ ಪಟ್ಟಸೋಮನಹಳ್ಳಿಯ ಅಬ್ದುಲ್ ಸತ್ತಾರ್ (೧೯೨೯) ರವರು ಕೆಲವು ಗೆಳೆಯರನ್ನು ಸೇರಿಸಿಕೊಂಡು ಮೊದಲು 'ಕನ್ನಡ ಸಾಹಿತ್ಯ ಸಂಘ', ಆನಂತರ 'ರಂಗ ಮಂಟಪ' ಎಂಬ ಸಂಘಗಳನ್ನು ಕಟ್ಟಿದ್ದಾರೆ. 'ನಿಶ್ಯಂಕ ಮಲ್ಲ', 'ಹೈದರ್ ಆಲಿ' ಮುಂತಾದ ಐತಿಹಾಸಿಕ ಕಾದಂಬರಿಗಳಲ್ಲದೆ ಇತರ ಪ್ರಕಾರದ ಕೃತಿಗಳ ರಚನೆ ಮಾಡಿದ್ದಾರೆ. ಹೆಮ್ಮನಹಳ್ಳಿಯ ಗಿರಿಯಯ್ಯ ಗೋಪಾಲ್ (ಜಿ.ಗೋಪಾಲ್) (೧೯೩೧) ವೈದ್ಯನ ವಿದೇಶ ಪ್ರವಾಸ, 'ಮೈಸೂರಿನಿಂದ ಮೆಕ್ಸಿಕೋಗೆ' ಎಂಬ ಪ್ರವಾಸ ಕಥನ ಕೃತಿಗಳನ್ನೂ; ಕೃಷ್ಣರಾಜಪೇಟೆಯ ರಂಗಪ್ಪ ಶೇಷಗಿರಿ (೧೯೩೧) ಯವರು ರುದ್ರಕವಿಯ ಕರಸ್ಥಲ ನಾಗಲಿಂಗನಚರಿತ್ರೆ, ಕುಮಾರ ವ್ಯಾಸನ ಆದಿಪರ್ವ ಮುಂತಾಗಿ ಹಲವಾರು ಕೃತಿಗಳನ್ನೂ ರಚಿಸಿದ್ದಾರೆ. ಪೋಲಿಸ್ ಇಲಾಖೆಯಲ್ಲಿ ಅತ್ಯುನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ಪೋಲಿಸ್ ಸೇವೆಗೆ ಸಂಬಂಧಪಟ್ಟಂತೆ ಅನೇಕ ಲೇಖನಗಳನ್ನೂ, ಪೋಲಿಸ್ ಇಲಾಖೆಯ ಇತಿಹಾಸ ಎಂಬ ಕೃತಿಯನ್ನೂ ಬರೆದ ಅಖಿಲ ಭಾರತ ಪೋಲಿಸ್ ಸೇವೆಯ ಬಿ.ಎನ್.ಗರುಡಾಚಾರ್ (ಬಿಂಡಿಗನವಿಲೆ ನಾರಾಯಣ ಗರುಡಾಚಾರ್

೧೯೩೧) ಅವರಿಗೆ ೧೯೯೪ ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಕ್ಯಾತನಹಳ್ಳಿಯ ಎಚ್.ಎ.ರಾಮಕೃಷ್ಣ (೧೯೩೨) ರವರು ಕೆಲವು ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೂ, ಕನ್ನಡ ಕೃತಿಗಳನ್ನು ಇಂಗ್ಲಿಷ್‌ಗೂ ಭಾಷಾಂತರಿಸಿದ್ದಾರೆ. ಭಾರತೀಯ ಮಹಾಕಾವ್ಯಗಳಿಂದ ಆಯ್ದ ಹನ್ನೊಂದು ಪ್ರಕರಣಗಳನ್ನು, ಬಸವೇಶ್ವರರ ನೂರೊಂದು ವಚನಗಳನ್ನು ಹಾಗೂ ಕಾಲಭೈರವನ ನೂರೊಂದು ಶ್ಲೋಕಗಳನ್ನು ಇಂಗ್ಲಿಷ್‌ಗೆ ರೂಪಾಂತರಿಸಿದ್ದಾರೆ. ಬರಲಿಲ್ಲ ಏಕೆ, ಕನಸು ನನಸು ಹಾಗೂ ಗುಲಾಬಿ ಸಿಲ್ಕಿನ ಗೊಂಬೆ ರಾಮಕೃಷ್ಣರ ಇನ್ನಿತರ ಕೃತಿಗಳು.

ಖ್ಯಾತ ನಾಟಕಕಾರರಾದ ಶ್ರೀನಿವಾಸರಾವ್ ಮಿರ್ಲೆಯವರ ಮಗ ಎಂ.ಎಸ್.ನಾಗರಾಜರಾವ್ (೧೯೩೨) ರವರು ಹುಟ್ಟಿದ್ದು ಮಂಡ್ಯದಲ್ಲಿ. ವಿವಿಧ ಉನ್ನತ ಹುದ್ದೆಗಳಲ್ಲಿದ್ದು ಪುರಾತತ್ವ, ಪ್ರಾಚೀನ ವಸ್ತು ಸಂಗ್ರಹಾಲಯ ಶಾಸ್ತ್ರ, ಸ್ಮಾರಕಗಳ ಸಂರಕ್ಷಣೆ ಮೊದಲಾದ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿದ್ದಾರಲ್ಲದೇ ವಿದ್ವತ್‌ಪೂರ್ಣ ಕೃತಿಗಳನ್ನು ರಚಿಸಿದ್ದಾರೆ.

ಪಾಂಡವಪುರ ತಾಲೂಕು ತೊಣ್ಣೂರು ಗ್ರಾಮದ ಟಿ.ವಿ.ವೆಂಕಟರಮಣಯ್ಯ (೧೯೩೩) ನವರು ಕನ್ನಡ ಪಡೆ, ನುಡಿ ಕೋಶ, ಹಾಸ್ಯ ರಸಾಯನ, ಬಾಪೂ ಹೇಳಿದ ಕಥೆಗಳು, ಮುಂತಾದವನ್ನೂ; ಮೈಸೂರು ವೆಂಕಟಪ್ಪ ಚಿತ್ರಲಿಂಗಯ್ಯ (೧೯೩೩) ನವರು ಈ ಜಿಲ್ಲೆಯ ಕಲ್ಕೆರೆಯವರಾಗಿದ್ದು 'ಖಯ್ಯಾಮ್ ಕವನ ಮಂಜರಿ' ಮತ್ತು 'ಇನ್ನೇನಿನ್ನೇನು' ಎಂಬ ಕೃತಿಗಳನ್ನೂ; ಕೀಲಾರ ತಮ್ಮೇಗೌಡ ವೀರಪ್ಪ (೧೯೩೬) ನವರು ಲೋಕಕಾವೇರಿ, ಯದುಗಿರಿ, ಕಾಜಾಣ ಮುಂತಾದವುಗಳನ್ನು; ಸದ್ಯೋಜಾತ ಮೂರ್ತಿ (೧೯೩೬) ಯವರು ಮಾರ್ಗದರ್ಶಿ, ಸಾವಿತ್ರಿ ತನಯ ಮುಂತಾದ ಹೆಸರುಗಳಲ್ಲಿ, ಕಾವ್ಯಗಾನ ಪ್ರಭ, ಶುಭ ಶೋಭ ಮೊದಲಾದವನ್ನೂ ಬರೆದಿದ್ದಾರೆ. ವಿಚಾರಗಳೊಂದಿಗೆ ಹಾಸ್ಯವನ್ನೂ ಪ್ರಧಾನವಾಗಿಸಿಕೊಂಡು ಉತ್ತಮವಾದ ಪ್ರಬಂಧಗಳನ್ನೂ ಬರೆದ ಖ್ಯಾತ ವಾಗ್ಮಿ ಅ.ರಾ.ಮಿತ್ರರವರು (೧೯೩೫) ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳಿನವರು. ಬರವಣಿಗೆಯಿಂದ ಮಾತ್ರವಲ್ಲದೇ, ಮಾತುಗಾರಿಕೆ, ಅಧ್ಯಾಪಕ–ಪ್ರಾಂಶುಪಾಲ ವೃತ್ತಿಗಳ ಮೂಲಕವೂ ಕನ್ನಡ ಭಾಷೆ, ವ್ಯಾಕರಣ ಮತ್ತು ಮಹಾಕಾವ್ಯಗಳ ಕುರಿತಾಗಿ ಕನ್ನಡ ಜನರಿಗೆ ಹೊಸ ಹೊಸ ಅಂಶಗಳನ್ನು ತಿಳಿಸಿಕೊಟ್ಟಿದ್ದಾರೆ. ಆರತಕ್ಷತೆ, ಬಾಲ್ಕನಿಯ ಬಂಧುಗಳು ಎಂಬ ಹದಿನೇಳು ಪ್ರಬಂಧಗಳ ಸಂಕಲನ, ಮಂತ್ರವಿದ್ಯೆ ಎಂಬ ಲಘುಹರಟೆ ಕೃತಿಯಲ್ಲದೆ, ಹಲವಾರು ನಗೆ ಲೇಖನ ಹಾಗೂ ಕೃತಿಗಳನ್ನೂ ಬರೆದಿದ್ದಾರೆ.

ಕೆ.ಎಸ್.ಗೋಪಾಲ ಶ್ರೀವತ್ಸ (೧೯೩೬) ಇವರು ಮದ್ದೂರು ತಾಲೂಕಿನ ಕಾಡುಕೊತ್ತನ ಹಳ್ಳಿಯವರು. ಮಕ್ಕಳ ಮನೋವಿಕಾಸಕ್ಕೆ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ನೆರವಾಗುವ ಕೃತಿಗಳನ್ನು ರಚಿಸಿದ್ದು, ಜಿಲ್ಲೆಯಲ್ಲಿ ಶಿಶುಸಾಹಿತ್ಯ ಪ್ರಕಾರದಲ್ಲಿ ಹೆಚ್ಚಿನ ಕೆಲಸ ಮಾಡಿರುವವರೆಂದೂ, ಗುರುತಿಸಲ್ಪಟ್ಟಿದ್ದಾರೆ. ಪೃಥ್ವಿಸಿಂಹನ ಸಾಹಸ(೧೯೭೩). ಎಂಥ ಪ್ರತೀಕಾರ (೧೯೭೮), ಬೆಳ್ಳಿಯಹಾರ (೧೯೮೦) ಚಾಣಕ್ಯ ಮತ್ತು ಇತರ ಕಥೆಗಳು ಮುಂತಾದವು ಶ್ರೀವತ್ಸ ಅವರ ರಚನೆಗಳು. ಹಲವಾರು ಸಂಘಸಂಸ್ಥೆಗಳಿಂದ ಇವರಿಗೆ ಗೌರವ ಸನ್ಮಾನಗಳು ದೊರೆತಿವೆ. ಇವರು ನಾಡಿನ ಮಹತ್ವದ ವ್ಯಕ್ತಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ ರಾಜ್ಯದಲ್ಲಿ ಮತ್ತು ಹೊರಸ್ಥಳಗಳಲ್ಲಿ ಪ್ರದರ್ಶಿಸಿದ್ದಾರೆ.

ಬೆಸಗರಹಳ್ಳಿ ರಾಮಣ್ಣ (೧೯೩೮–೧೯೯೮)ರವರು ಸಾಹಿತ್ಯ ಕಥಾ ಪ್ರಕಾರದ ಮೂಲಕ ಚಿಗುರೊಡೆಯುತ್ತಿದ್ದ ನವ್ಯ ಕಾಲದಲ್ಲಿ ಕಥೆ ಬರೆಯಲು ಆರಂಭಿಸಿದ್ದರೂ, ನವ್ಯ ಮಾರ್ಗವನ್ನು ಅನುಸರಿಸದೆ ನವೋದಯ ಪ್ರಗತಿಶೀಲ ಮಾರ್ಗದ ನೆಲೆಯಲ್ಲಿ ಗ್ರಾಮೀಣ ಬದುಕು ಮತ್ತು ಸಂಸ್ಕೃತಿಗಳ ವಾಸ್ತವ ಚಿತ್ರಣಗಳನ್ನೊಳಗೊಂಡ ಕಥೆಗಳನ್ನು ೧೯೫೮ ರಿಂದ ಬರೆಯಲು ಪ್ರಾರಂಭಿಸಿದರು. ಆನಂತರ ದಲಿತ ಬಂಡಾಯ ಸಾಹಿತ್ಯ ಮಾರ್ಗದ ಒಬ್ಬ ಲೇಖಕರೆಂದೂ

ಸೇರ್ಪಡೆಯಾಗಿದ್ದಾರೆ. ಹರಕೆಯ ಹಣ, ಒಂದು ಹುಡುಗನಿಗೆ ಬಿದ್ದ ಕನಸು, ಗರ್ಜನೆ ಮೊದಲಾದವು ಇವರ ಕೆಲವು ಕಥಾ ಸಂಕಲನಗಳು. ಇವರ 'ನೆಲದ ಒಡಲು' ಕಥಾ ಸಂಕಲನಕ್ಕೆ ೧೯೭೬ ರಲ್ಲೂ 'ಗರ್ಜನೆ' ಕಥಾ ಸಂಕಲನಕ್ಕೆ ೧೯೭೨ ರಲ್ಲೂ; ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳು ದೊರೆತಿವೆ.

ನಾಗಮಂಗಲ ತಾಲೂಕಿನ ಹನುಮನಹಳ್ಳಿಯ ಹ.ಕ.ರಾಜೇಗೌಡರು (೧೯೩೮) ವಿಮರ್ಶೆ, ಸಂಶೋಧನೆ, ಸಾಹಿತ್ಯ, ಜಾನಪದ, ನಾಟಕ, ಗ್ರಂಥ ಸಂಪಾದನೆ, ಇತ್ಯಾದಿ ವಿವಿಧ ಪ್ರಕಾರಗಳಲ್ಲಿ ಸುಮಾರು ಐವತ್ತು ಗ್ರಂಥಗಳನ್ನು ಹೊರತಂದಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದಾಗ ಪ್ರಾಚೀನ ಕಾವ್ಯಗಳ ಪರಿಷ್ಕರಣ ಕಾರ್ಯ ಕೈಗೊಂಡು, ಶ್ರೀಪಾಲ ಚರಿತ್ರೆ, ಕಲ್ಲೆ ಲಿಂಗೇಶ್ವರ ಚಾರಿತ್ರ, ಕೋಡುಗದ ಮಾರಯ್ಯನ ಚರಿತೆ ಇತ್ಯಾದಿ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ಉದಯ ಕಾಲದ ಪ್ರಮುಖ ಲೇಖಕರಾದ ಎಂ.ಎಲ್.ಶ್ರೀಕಂಠೇಶಗೌಡರ ಕೃತಿಗಳನ್ನು ಹುಡುಕಿ ಹೊರತೆಗೆದಿದ್ದಾರೆ. 'ಯಲಹಂಕದ ಪ್ರಭು' ಎಂಬ ನಾಟಕ ರಚಿಸಿದ್ದು, ಇದು ಹಲವಾರು ಬಾರಿ ಪ್ರದರ್ಶಿತಗೊಂಡಿದೆ. ಇವರಿಗೆ ಸರ್ಕಾರೇತರ ಪ್ರಶಸ್ತಿಗಳು ಹಲವಾರು ದೊರೆತಿವೆ. ಇವರ 'ಕುವೆಂಪು ಸಾಹಿತ್ಯ ಲೋಕ' ಕೃತಿಗಳಿಗೆ ೧೯೮೪ರ ಕುವೆಂಪು ಸಾಹಿತ್ಯ ಬಹುಮಾನ ಸಿಕ್ಕಿದೆ. ಇವರಿಗೆ ೧೯೯೦ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ದೊರೆತಿದೆ. ಕವನ, ಕಾದಂಬರಿ, ವ್ಯಕ್ತಿಚಿತ್ರ, ಪ್ರಬಂಧ, ಜಾನಪದ ಮುಂತಾಗಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವ ಡಿ.ಲಿಂಗಯ್ಯ (೧೯೩೯) ನವರು ಈ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಪೀಹಳ್ಳಿಯವರು. 'ದಿನಕರ' ಇವರ ಕಾವ್ಯ ನಾಮ. ಕೆಲವಾರು ಕವನ ಸಂಕಲನ, ಕಥಾಸಂಕಲನ, ವಿಮರ್ಶೆ ಮತ್ತು ಪ್ರಬಂಧ ಸಂಕಲನಗಳನ್ನು ಹೊರತಂದಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಇವರು ಹೆಚ್ಚು ಸೇವೆ ಸಲ್ಲಿಸಿದ್ದಾರೆ. (ಜಾನಪದ ಸಾಹಿತ್ಯ ನೋಡಿ).

ಹೆರಗನಹಳ್ಳಿಯ ಎಲ್.ಕೇಶವಮೂರ್ತಿ (೧೯೩೯) ರವರು ವಿವಿಧ ಪ್ರಕಾರಗಳಲ್ಲಿ ಉತ್ತಮ ಕೃತಿಗಳ ರಚನೆ ಮಾಡಿದ್ದಾರೆ. 'ಎಂಗಾರ ಟಿಕೆಟ್ ಕೊಡಿ' ಒಂದು ಪ್ರವಾಸ ಕೃತಿ. ಇವರ 'ನೀನ್ಯಾಕೋ ನಿನ್ನ ಹಂಗ್ಯಾಕೊ', ಎಂಬ ಲಲಿತ ಪ್ರಬಂಧಕ್ಕೆ ೧೯೭೨ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. (ಪತ್ರಿಕೋದ್ಯಮ ನೋಡಿ) ತಿ.ನಾ.ಅಚ್ಯುತರಾವ್(ತಿಪ್ಪೂರು ನಾರಾಯಣರಾವ್ ಅಚ್ಯುತರಾವ್ ೧೯೩೯) ರವರು ಭೂಮಂಡಲ ಪರಿಚಯ, ಸರಳ ಪ್ರಾಕೃತಿಕ ಭೂಗೋಳ, ಭಾರತ, ಮುಂತಾದ ಕೃತಿಗಳನ್ನೂ; ಮಾರ್ನವಮಿದೊಡ್ಡಿಯ ಮುದ್ದಗೌಡ ರಾಮಕೃಷ್ಣ (೧೯೪೦) ರವರು ಕವನ, ಕಥೆ, ಪ್ರಬಂಧ ಇತ್ಯಾದಿ ಪ್ರಕಾರಗಳಲ್ಲಿ ಕೆಲವಾರು ಕೃತಿಗಳನ್ನೂ; ದುಂಡನಹಳ್ಳಿಯ ದೊಡ್ಡಸ್ವಾಮಿ (೧೯೪೧) ಯವರು ವ್ಯಾಖ್ಯಾನ ಮತ್ತು ವಿಮರ್ಶೆಯ ಕೃತಿಗಳನ್ನು ಬರೆದಿದ್ದಾರೆ. ರಾಗೌ ಎಂಬ ಅಂಕಿತದಲ್ಲಿ ಬರೆಯುವ ಈರೇಗೌಡನದೊಡ್ಡಿಯ ರಾಮೇಗೌಡ (೧೯೪೨) ರವರು ಸಾಹಿತ್ಯ, ಸಂಶೋಧನೆ ಮತ್ತು ಜಾನಪದ ಕ್ಷೇತ್ರಗಳಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ. ಯಾತ್ರೆ, ತೆಪ್ಪ ಎಂಬ ಕವನ ಸಂಕಲನಗಳನ್ನೂ ಅವಗಾಹನ, ಕಾವ್ಯಾನುಶೀಲನ ಮುಂತಾದ ವಿಮರ್ಶಾಗ್ರಂಥಗಳನ್ನೂ, ಶಿಶು ಸಾಹಿತ್ಯ ಕೃತಿಗಳನ್ನೂ ರಚಿಸಿದ್ದಾರೆ. ಕುವೆಂಪು ವಿದ್ಯಾವರ್ಧಕ ಟ್ರಸ್ಟಿನಿಂದ ದೊರೆತಿರುವ ಬಹುಮಾನವೂ ಸೇರಿದಂತೆ ಇವರ ಕೃತಿಗಳಿಗೆ ಹಲವಾರು ಇತರೇ ಬಹುಮಾನಗಳು ದೊರೆತಿವೆ. ರಾಗೌರವರು ಬಿ.ಎಸ್.ಸಣ್ಣಯ್ಯನವರೊಂದಿಗೆ ಸಂಪಾದಿಸಿದ 'ಸಾಹಸ ಭೀಮ ವಿಜಯಂ'ಗೆ ೧೯೮೫ರಲ್ಲಿ; ರನ್ನ ವಿರಚಿತ 'ಅಜಿತ ತೀರ್ಥಂಕರ ಪುರಾಣಂ' ಗೆ ೧೯೮೮ರಲ್ಲೂ; ಲಕ್ಷ್ಮೀಶನ 'ಜೈಮಿನಿ ಭಾರತಕ್ಕೆ' ೧೯೯೩ರಲ್ಲೂ; ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನಗಳು ಬಂದಿವೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ೨೦೦೧ನೇ ಸಾಲಿನ ಗೌರವ ಪ್ರಶಸ್ತಿಯೂ ದೊರೆತಿದೆ. ಪಾಂಡವಪುರ ತಾಲೂಕಿನ ಸದಾಶಿವ ಎಣ್ಣೆಹೊಳೆ (೧೯೪೩) ಯವರು ಚುಟುಕಗಳ ಜೊತೆಗೆ ಹಾಸ್ಯ ಪ್ರಬಂಧ ಮತ್ತು ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಎಂ.ಎ.ಜಯಚಂದ್ರ (೧೯೪೪) ರವರು ಜಾನಪದ ಕ್ಷೇತ್ರದಲ್ಲಿ ಹೆಚ್ಚು ಸಾಧನೆ ಮಾಡಿದ್ದಾರೆ. ರಾಷ್ಟ್ರಕವಿ ಕಂಡ ಗೊಮ್ಮಟೇಶ್ವರ ಮತ್ತು ಇತರ ಪ್ರಬಂಧಗಳು, ವಡ್ಡಾರಾಧನೆಯಲ್ಲಿ ಸ್ತ್ರೀ, ಮುಂತಾದ ವಿಮರ್ಶಾ ಗ್ರಂಥಗಳನ್ನೂ, ಜೈನ ಮುನಿ, ಆಚಾರ್ಯರ ಜೀವನ ಚರಿತ್ರೆಗಳನ್ನೂ, ಕವನ ಮತ್ತು ಆಧುನಿಕ ವಚನಗಳ ಸಂಗ್ರಹಗಳನ್ನೂ ಪ್ರಕಟಿಸಿದ್ದಾರೆ. ಜೈನ ಸಾಹಿತ್ಯದ ಕೆಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಅಲ್ಲದೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರು ಭಾವಪೂಜೆ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಸ್ತಿಶ್ರೀ ದೇವೇಂದ್ರ ಕೀರ್ತಿಗಳ ಪ್ರಶಸ್ತಿಯನ್ನೂ, ೧೦೫ ಜನಪದ ಕಿರುಗತೆಗಳು ಎಂಬ ಗ್ರಂಥಕ್ಕೆ ಧಾರವಾಡ ವಿದ್ಯಾವರ್ಧಕ ಸಂಘದ ಬಹುಮಾನವನ್ನೂ ಪಡೆದಿದ್ದಾರೆ. (ಜಾನಪದ ಸಾಹಿತ್ಯ ನೋಡಿ)

ಜಿ.ವಿ.ಡಿ. ಎಂಬ ಅಂಕಿತದಲ್ಲಿ ಬರೆಯುವ ಗುತ್ತಲು ಗ್ರಾಮದ ಜಿ.ವಿ.ದಾಸೇಗೌಡ (೧೯೪೪) ರವರು 'ಆದರ್ಶ ಹಂಬಲ' ಎಂಬ ನಾಟಕವನ್ನು ೧೯೬೬ ರಲ್ಲಿ ಬರೆಯುವ ಮೂಲಕ ಸಾಹಿತ್ಯ ರಚನೆಗಿಳಿದರು. ನಂಜು ಬಡಿಯಿತು (೧೯೬೮), ಮುಗಿಲ ಮಗಳು (೧೯೭೫), ಮುಂತಾಗಿ ಕಥೆ, ಕವನ, ನಾಟಕ, ಕಾದಂಬರಿ ಮತ್ತು ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಭಾರತೀಯ ಕಾವ್ಯ ಮೀಮಾಂಸೆ ಒಂದು ಸಮೀಕ್ಷೆ (೧೯೯೨) ಎಂಬ ಕೃತಿಯಲ್ಲಿ ಭಾರತೀಯ ಕಾವ್ಯ ಮೀಮಾಂಸೆಯ ಒಟ್ಟು ಸಾರವನ್ನು ಸಂಗ್ರಹಿಸಿದ್ದಾರೆ. ಜಾನಪದ ಪ್ರಕಾರದಲ್ಲಿಯೂ ಜಿ.ವಿ.ಡಿ.ಯವರು ಸಂಗ್ರಹಣೆ ಮತ್ತು ಪ್ರಕಟಣೆ ಮಾಡಿದ್ದಾರೆ. (ಜಾನಪದ ಸಾಹಿತ್ಯ ನೋಡಿ)

ಕೆ.ಭೈರವಮೂರ್ತಿ(೧೯೪೫)ಯವರು ಕೊತ್ತತ್ತಿ ಹೋಬಳಿಯ ಕಸಲಗೆರೆ ಗ್ರಾಮದವರು. ಇವರು ಚಿತ್ರಾಂಗಿಣಿ (೧೯೬೪), ಮಹಾತ್ಮ (೧೯೭೧) ಎಂಬ 'ಕವನ ಸಂಕಲನ', ತುಂತುರು, ಮೊರೆ ಮುಂತಾದ ವಚನ ಸಂಕಲನಗಳನ್ನೂ, ಮತ್ತು ಪ್ರತಿಫಲನ, ಸಮಾಜಧರ್ಮ ಇತ್ಯಾದಿ ವಿಮರ್ಶಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಇಕ್ಷುಸಂಚಯ, ಸಂಸ್ಕೃತಿ ದೀಪಮಾಲೆ, ಬೆಳ್ಳಿಬೆಳಕು ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಇವರಿಗೆ ಕೆಲವು ಬಹುಮಾನಗಳೂ ಬಂದಿವೆ. ಅ.ರಾ.ಮಿತ್ರರವರ ಸೋದರ ಅ.ರಾ.ಆನಂದ (೧೯೪೬) ಅಕ್ಕಿ ಹೆಬ್ಬಾಳಿನವರಾಗಿದ್ದು ಹಲವಾರು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಬಿರುಗಾಳಿ, ಆನಂದ ನೋಟ (ನಗೆ ಬರಹ), ಹಿಮ ಕರಗಿತು, ಮೊದಲಾದವು ಇವರ ಕೃತಿಗಳಲ್ಲಿ ಪ್ರಮುಖವಾದವು. 'ಜೈನ ಸಾಹಿತ್ಯ ಮತ್ತು ಸಂಸ್ಕೃತಿ ಕೆಲವು ಅಧ್ಯಯನಗಳು' ಎಂಬ ಕೃತಿ ರಚಿಸಿರುವ ಎಂ.ಎ.ಶುಭಚಂದ್ರ (೧೯೪೬) ಮಂಡ್ಯದವರು. ಹೆತ್ತಗೋನಹಳ್ಳಿಯ (ನಾಗಮಂಗಲ ತಾಲೂಕು) ಎಚ್.ಎಂ.ನಾಗರಾಜು (೧೯೪೬) ಅವರು ಗಂಗಪ್ರಭು ದುರ್ವಿನೀತ (೧೯೭೩), ವಿಜಯನಗರ ಮತ್ತು ಮೈಸೂರು ಇತಿಹಾಸ (೧೯೮೨), ಕರ್ನಾಟಕ ಇತಿಹಾಸ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೆ 'ಇಮ್ಮಡಿ ದೇವರಾಯ ಮತ್ತು ಅವನ ಕಾಲ' ಎಂಬ ಮಹಾಪ್ರಬಂಧವನ್ನೂ ರಚಿಸಿದ್ದಾರೆ. ಮಂಡ್ಯ ತಾಲೂಕಿನ ರಮೇಶ್ ಹುಲ್ಲುಕೆರೆ (೧೯೪೭) ಆರಂಭದಲ್ಲಿ ಬರೆದ 'ತೆಂಡೆ' ಎಂಬ ಕಾದಂಬರಿ 'ಸಾಕ್ಷಿ' ಎಂಬ ಕಥಾ ಸಂಕಲನ ಪ್ರಕಟಿಸಿದ್ದು ಪುತ್ಲಿ (ಕಾದಂಬರಿ), ಕೂಗುತಿದೆ ಕಲ್ಲು (ನಾಟಕ) ಮುಂತಾದವು ಇವರ ಇನ್ನಿತರ ಕೃತಿಗಳು. ಉಪ್ಪಿನಕೆರೆ ರಾಮಲಿಂಗಯ್ಯನವರು (೧೯೪೮) 'ಆರೋಗ್ಯ ನಿಧಿ' ಮಾಸಪತ್ರಿಕೆಯ ಸಂಪಾದಕರಾಗಿದ್ದು ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ಕೃತಿಗಳನ್ನು ಹೊರತಂದಿದ್ದಾರೆ.

ಮದ್ದೂರು ತಾಲೂಕು ಸಾದೊಳಲು ಗ್ರಾಮದ ಅರ್ಜುನಪುರಿ ಅಪ್ಪಾಜಿಗೌಡರು (೧೯೪೮) ವಿಮರ್ಶಾ ಸುಧೆ (೧೯೭೯), ದೌರ್ಬಲ್ಯ, ನಿಸರ್ಗದಕರೆ, ಕುವೆಂಪು ಸಾಹಿತ್ಯ ಪರಿಚಯ, ಮುಂತಾದ ಕೃತಿಗಳನ್ನೂ, 'ನಂಜನಗೂಡು ತಿರುಮಲಾಂಬ' ಒಂದು ಅಧ್ಯಯನ–ಎಂಬ ಮಹಾಪ್ರಬಂಧವನ್ನೂ ರಚಿಸಿದ್ದಾರೆ. ಜಿಲ್ಲೆಯ ಅಂಬಿಗರಹಳ್ಳಿಯ ಸೋಮಶೇಖರ ಗೌಡರು (೧೯೪೮) ವೈದೃಶ್ಯಾತ್ಮಕ ಭಾಷಾ ವಿಜ್ಞಾನದ ಬಗ್ಗೆ 'ಭಾಷಾ ವಿಜ್ಞಾನ ವಿವಕ್ಷೆ' ಎಂಬ ಕೃತಿಯಲ್ಲದೆ, ಭಾಷಾ ವಿಜ್ಞಾನದ ಬಗ್ಗೆ ಹಲವಾರು ಲೇಖನಗಳನ್ನೂ ಬರೆದಿದ್ದಾರೆ.

ಮದ್ದೂರು ತಾಲೂಕಿನ ತೈಲೂರು ವೆಂಕಟಕೃಷ್ಣ (ಎಚ್.ವೆಂಕಟಕೃಷ್ಣೇಗೌಡ–೧೯೪೮) ರವರು ಅಗ್ನಿಕುಂಡ, ಸಮ್ಮಿಳನ ಮತ್ತು ರಕ್ತಾಭಿಷೇಕ ಎಂಬ ಕಾದಂಬರಿಗಳನ್ನೂ; ಜಿಲ್ಲೆಯ ಸಂಸ್ಕೃತಿ, ಕಲೆ, ಸಾಹಿತ್ಯ, ಜನಪದ, ಶಿಲ್ಪಕಲೆ ಮುಂತಾದ ಸಾಂಸ್ಕೃತಿಕ ಅಂಶಗಳನ್ನೊಳಗೊಂಡ 'ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ' ಎಂಬ ಕೃತಿಯನ್ನು ರಚಿಸಿದ್ದು ಸ್ಥಳನಾಮಗಳ ಬಗ್ಗೆ ಹಲವಾರು ಪ್ರಬಂಧಗಳನ್ನೂ ಬರೆದಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡ್ಯ ಜಿಲ್ಲೆಯ ಗ್ರಾಮದೇವತೆ ಮತ್ತು ಗ್ರಾಮ ಕಲೆಗಳನ್ನು ಕುರಿತು ಮಾಹಿತಿಯನ್ನು ಒದಗಿಸಿರುತ್ತಾರೆ. ಕನ್ನಡ ಸಾಹಿತ್ಯದ ಚಿಂತನಶೀಲ ವಿಮರ್ಶಕರಾದ ನರಹಳ್ಳಿ ಬಾಲಸುಬ್ರಹ್ಮಣ್ಯರವರು ಪಾಂಡವಪುರ ತಾಲೂಕಿನ ನರಹಳ್ಳಿಯವರು. ಅನುಸಂಧಾನ, ನವ್ಯತೆ, ಮುಂತಾದ ವಿಮರ್ಶಾ ಕೃತಿಗಳನ್ನೂ; ಸಿಂಗರ್ ಕಥೆಗಳು, ಕಡಿದಾದ ಹಾದಿ, ಮುಂತಾದ ಅನುವಾದ ಕೃತಿಗಳನ್ನೂ ಹೊರತಂದಿದ್ದಾರೆ. 'ಹಾಡೆ ಹಾದಿಯ ತೋರಿತು' ಅವರ ಪಿಎಚ್.ಡಿ ನಿಬಂಧ. ಕ್ಯಾತನಹಳ್ಳಿ ರಾಮಣ್ಣ ಅವರು (೧೯೪೨) ಜನಪದ ಸಾಹಿತ್ಯ ಸಂಗ್ರಹಣೆಯ ಕಾರ್ಯವನ್ನು ಹೆಚ್ಚು ಮಾಡಿರುವರಾದರೂ ತಿಳಿಜಲ, ವಜ್ರವರ್ತುಲ ಮುಂತಾದ ಕಥಾಸಂಕಲನಗಳನ್ನೂ; ಭಗತ್‌ಸಿಂಗ್, ಬದುಕುಬಂಗಾರ, ಮೊದಲಾದ ಮಕ್ಕಳ ಕತೆಗಳ ಸಂಕಲನಗಳನ್ನೂ ರಚಿಸಿದ್ದಾರೆ. ನಾಗಮಂಗಲದ ಶಿವನಹಳ್ಳಿಯ ಎಂ. ಜೈಕುಮಾರ್ 'ಡಾಂಟೆ, ಕದಿರು, ನಡೆಮಡಿ' ಕೃತಿಗಳನ್ನು ರಚಿಸಿರುವುದಲ್ಲದೆ ಅನುವಾದ, ಸಂಪಾದನೆ ಇತ್ಯಾದಿ ಕಾರ್ಯಗಳನ್ನೂ ಮಾಡಿದ್ದಾರೆ.

ಸಾಹಿತ್ಯ, ದೂರದರ್ಶನ ಕಿರುಚಿತ್ರ, ಚಲನಚಿತ್ರ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಸತ್ವಯುತ ಕಾರ್ಯಗಳಿಂದ ಹೆಸರು ಮಾಡಿರುವ ನಾಗತಿಹಳ್ಳಿ ಚಂದ್ರಶೇಖರರವರು ನಾಗಮಂಗಲ ತಾಲೂಕಿನ ನಾಗತಿಹಳ್ಳಿಯವರು. ಹದ್ದುಗಳು, ಮಲೆನಾಡಿನ ಹುಡುಗಿ, ಸನ್ನಿಧಿ ಮುಂತಾದ ಕಥಾ ಸಂಕಲನ; ಚುಕ್ಕಿ ಚಂದ್ರಮರ ನಾಡಿನಲ್ಲಿ ಮತ್ತು ಬಾ ನಲ್ಲೆ ಮಧುಚಂದ್ರಕೆ ಎಂಬ ಕಾದಂಬರಿ; ಆಯನ ಎಂಬ ಪ್ರವಾಸ ಕಥನ ಮತ್ತು ನಾನು ಹಡೆದವ್ವ ಎಂಬ ಧ್ವನಿ ಸುರುಳಿಗಳು ನಾಗತಿಹಳ್ಳಿಯವರ ಕೊಡುಗೆ. (ಚಲನಚಿತ್ರ ವಿಭಾಗ ನೋಡಿ) ಚಿಕ್ಕಮರಳಿ ಬೋರೇಗೌಡರು ಕಥೆ, ಕಾದಂಬರಿ, ಗ್ರಾಮಾಂತರ ಪ್ರಾಸ ಇತ್ಯಾದಿಗಳನ್ನು ರಚಿಸಿದ್ದಾರೆ. ಕೃಷ್ಣರಾಜಪೇಟೆಯ ಕೆ.ಆರ್.ಶೇಷಗಿರಿಯವರು (೧೯೩೧) ಕುಮಾರವ್ಯಾಸನ ಆದಿಪರ್ವ, ವಿರೂಪೇಂದ್ರನ ಗುರುಭಕ್ತ ಚಾರಿತ್ರ ಮೊದಲಾದ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. 'ಮಾರಾ' ಕಾವ್ಯನಾಮದ ಮಾದಹಳ್ಳಿಯ ರಾಮಕೃಷ್ಣರವರು 'ಗಂಗೋತ್ರಿ ಗೀತೆಗಳು' ಮುಂತಾದ ಕವನ ಸಂಕಲನಗಳನ್ನೂ; 'ನಿಸರ್ಗ' ಕಾವ್ಯನಾಮದ ವಳಗೆರೆಹಳ್ಳಿಯ ವಿ.ಎಂ.ಮುತ್ತಯ್ಯನವರು ಕೆಲವು ಕವನ ಸಂಕಲನಗಳನ್ನೂ; ಜವರನಹಳ್ಳಿ ಸಿದ್ಧಪ್ಪನವರು ಕಥೆ, ನಾಟಕ ಮತ್ತು ಅನುವಾದಿತ ಕೃತಿಗಳನ್ನೂ; ನಾ.ಪ್ರಭಾಕರ (೧೯೪೯) ರವರು 'ಚಾವುಂಡರಾಯ' (೧೯೬೭), ಶೂನ್ಯಗೀತೆ ಮುಂತಾದ ಕೆಲವು ನಾಟಕ ಮತ್ತು ಕಾದಂಬರಿ ಕೃತಿಗಳನ್ನೂ ರಚಿಸಿದ್ದಾರೆ. ಎಚ್.ಎಸ್.ಮುದ್ದೇಗೌಡರು, 'ಜೂಲಿಯಸ್ ಸೀಸರ್', 'ಕವಿಕೃತಿ ಒಂದು ವಿವೇಚನೆ' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಮದ್ದೂರು ತಾಲೂಕಿನ ಆಲೂರು ಚಂದ್ರಶೇಖರರವರು (೧೯೪೫) ಕೆಲವು ಪ್ರಬಂಧ ಸಂಕಲನ ಮತ್ತು ಗೀತ ಸಂಗೀತ ಕೃತಿಗಳನ್ನೂ; ನಾರಾಯಣ ಕಿಕ್ಕೇರಿ (೧೯೫೦) ಯವರು, ಕಾದಂಬರಿ, ಭಾಷಾವಿಜ್ಞಾನ ಮತ್ತು ಜನಾಂಗಿಕ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನೂ; ಕುರುಬರ ಬೆಟ್ಟಹಳ್ಳಿ ಮಹದೇವೇಗೌಡ(೧೯೫೦)ರು ಸಂಧ್ಯಾ ಸುಂದರಿ, ಕೋಲು ಮುಂತಾದ ಕೃತಿಗಳನ್ನು; ಸರಗೂರು ಸುದರ್ಶನ ರಘೋತ್ತಮ ರಾವ್ (೧೯೫೨) ರವರು ಬದಲಾಗುತ್ತಿರುವ ಭೂಮಿ, ಬೆಂಕಿಬೆಟ್ಟ, ನದಿಯ ಬದುಕು ಮುಂತಾದ ಕೃತಿಗಳನ್ನೂ; ಪಾಂಡವಪುರದ ಅಧ್ಯಾಪಕ ಗಿರಿಗೌಡರು ವಿಮರ್ಶೆ, ವ್ಯಾಕರಣ, ಛಂದಸ್ಸು ಮತ್ತು ಜಾನಪದ ಪ್ರಕಾರಗಳಲ್ಲಿ ಕೃತಿಗಳನ್ನೂ ರಚಿಸಿದ್ದಾರೆ.

ಅ.ನ.ಶ್ರೀನಿವಾಸ ಅಯ್ಯಂಗಾರ್‌ರವರ 'ಭೂಕಂಪಗಳು ಮತ್ತು ಅಗ್ನಿಪರ್ವತಗಳು' ಗ್ರಂಥಕ್ಕೆ ವಿದ್ಯಾ ಇಲಾಖೆಯಿಂದ ಬಹುಮಾನ ಬಂದಿದೆ. ಹಲವು ಪತ್ತೇದಾರಿ ಮತ್ತು ವೈಜ್ಞಾನಿಕ ಕಾದಂಬರಿಗಳನ್ನು ಬರೆದ ಮನು (ಪಿ. ನರಸಿಂಹರಂಗನ್) ಈ ಜಿಲ್ಲೆಯ ಮೇಲುಕೋಟೆಯವರು. ಕೆ.ಸಿ.ವೀರೇಗೌಡರು ಭಜಗೋವಿಂದಂ ಸ್ತೋತ್ರವನು ರಚಿಸಿ, ಕುಲಪತ್ರಗಳು ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕೆರಗೋಡು ಸಮೀಪದ ಗಂಟಗೌಡನಹಳ್ಳಿಯ ಸೋಮಶೇಖರಾಚಾರ್‌ರವರು (೧೯೫೩) ಕಲೆ, ನಾಟಕ, ಮತ್ತು ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅನೇಕ ನಾಟಕ ಕೃತಿಗಳನ್ನೂ ಹಲವಾರು ಕವನ ಸಂಕಲನಗಳನ್ನೂ ರಚಿಸಿದ್ದಾರೆ. ಧಾರವಾಡದ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಾಪಕರಾಗಿ ಶರಣ ಸಾಹಿತ್ಯದಲ್ಲಿ ಗಮನಾರ್ಹ ಕೆಲಸ ಮಾಡಿರುವ ಕಾಶಿ ಪುಟ್ಟಸೋಮಾರಾಧ್ಯರು ಮಳವಳ್ಳಿಯ ತಾಲೂಕಿನ ತಲಗವಾಡಿಯವರು. ಶರಣರ ನುಡಿ ಮುತ್ತುಗಳು, ವೀರಶೈವ ಮಹಾಪುರಾಣ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಮಂಡ್ಯದ ಎಸ್.ಸುದರ್ಶನ್, ನಾಟಕಕಾರರಾಗಿದ್ದು ಅಯ್ಯಪ್ಪಸ್ವಾಮಿಚರಿತೆ, ಮುಂತಾದ ಕೃತಿಗಳನ್ನು ಬರೆದಿದ್ದಾರೆ. ನಾಟಕದಲ್ಲಿ ಉತ್ತಮವಾಗಿ ಅಭಿನಯಿಸುವ ಇವರು ಮೃದಂಗವನ್ನೂ ನುಡಿಸುತ್ತಾರೆ. ಮೃದಂಗದ ವಿಷಯವಾಗಿ ಕೆಲವು ಬಿರುದುಗಳನ್ನು ಗಳಿಸಿದ್ದಾರೆ. ಕೀಳಗಟ್ಟದ ಕೆ.ಎಂ.ಮಲ್ಲಯ್ಯ ಅವರು ಕಥೆ ಮತ್ತು ಕವನ ಕೃತಿಗಳನ್ನೂ; ಕೆ.ಆರ್.ಪೇಟೆ ತಾಲೂಕಿನ ವಿರೂಪಾಕ್ಷ ರಾಜಯೋಗಿ (ರಾಜಗುರು) ಸುಮಾರು ೧೫ ಕೃತಿಗಳನ್ನೂ; ಪಾಂಡವಪುರ ತಾಲೂಕಿನ ಹರವು ಗ್ರಾಮದ ಪರಿಸರವಾದಿ ಎಚ್.ವಿ.ಆರ್.ಅಯ್ಯಂಗಾರ್ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನೂ; ಬಿ.ನಾರಾಯಣಗೌಡ 'ಕಾವೇರಿಪುರದಲ್ಲಿ ಕ್ಯಾತೆ ಮೇಷ್ಟ್ರು' ಎಂಬ ಕೃತಿಯನ್ನೂ; ಗಂಜಾಮಿನ ಜಿ.ತಿಮ್ಮಣ್ಣಯ್ಯ (೧೯೬೩) ಕೆಲವು ಧಾರ್ಮಿಕ ಕೃತಿಗಳನ್ನೂ ಬರೆದಿದ್ದಾರೆ. ಕಿಕ್ಕೇರಿಯ ಪರಿಸರದಲ್ಲಿ ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ನೆಲೆಸಿದ್ದ ಹರಿಹರ ಪ್ರಿಯ (ಸಾತವಲ್ಲಿ ವೆಂಕಟವಿಶ್ವನಾಥ್) ಅವರು ಬದುಕ ಕೊಡದ ಜನ, ಸಾಂಸ್ಕೃತಿಕ ದಾಖಲೆಗಳು, ಕುವೆಂಪುದರ್ಶನ, ರಸರೇಖೆ ಇತ್ಯಾದಿ ೩೦ಕ್ಕೂ ಹೆಚ್ಚು ಕಾದಂಬರಿ, ಕತೆ, ವ್ಯಕ್ತಿ ಚಿತ್ರಗಳು, ವಿಮರ್ಶೆ, ಲೇಖನಗಳ ಸಂಪಾದನೆ ಇತ್ಯಾದಿ ಕ್ಷೇತ್ರಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿಗಳು ಬಂದಿವೆ. ಕೆ.ಆರ್.ಪೇಟೆ ತಾಲ್ಲೂಕಿನ ಮಾದಾಪುರದ ಮಾ.ಶಂ.ಕೃಷ್ಣಯ್ಯನವರು ಜಿಲ್ಲಾ ಚುಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಕೃತಿಗಳನ್ನೂ; ಮದ್ದೂರು ತಾಲ್ಲೂಕಿನ ಜಗದೀಶಕೊಪ್ಪ ಹಲವು ಕವನ ಸಂಕಲನಗಳನ್ನು ಹಾಗೂ ಜಿಲ್ಲೆಗೆ ಸಂಬಂಧಪಟ್ಟ ಪುಸ್ತಕವನ್ನೂ; ಪಾಂಡವಪುರ ತಾಲ್ಲೂಕಿನ ಹರವು ದೇವೇಗೌಡರು ಕವನ ಸಂಕಲನವನ್ನೂ ಹೊರತಂದಿದ್ದಾರೆ. ವಳಗೆರೆ ಹಳ್ಳಿಯ ವಿ.ಎಂ.ಮುತ್ತಯ್ಯ ಜವರನಹಳ್ಳಿ ಸಿದ್ಧಪ್ಪ ಮುಂತಾದವರು ಜಿಲ್ಲೆಯ ಇತರ ಲೇಖಕರಾಗಿದ್ದಾರೆ. ಲಿಂಗಣ್ಣ ಬಂದೂಕಾರರ, ಹುಲಿ ತಂದ ಮಳೆ, ಆಡಿಬಾ ನನ ಕಂದ, ಎದೆಯ ದನಿ, ಅಣ್ಣನ ಮಾತು, ಮುಂತಾದ ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಈ ಜಿಲ್ಲೆಯ ಬಿಂಡಿಗನವಿಲೆ ಭಗವಾನ್, ಬಿಂಡಿಗನವಿಲೆ ನಾರಾಯಣಸ್ವಾಮಿ ಮತ್ತು ಪಾ.ಶ.ಶ್ರೀನಿವಾಸರವರು ಕೆಲವಾರು ಉಪಯುಕ್ತ ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. 'ಅನಾರ್ಕಲಿ–ಸಲೀಂ', ಚಿಣ್ಯ ಮುಂತಾದ ಚುಟಕಗಳ ಸಂಕಲನಗಳು (೧೯೪೯) ಇವರ ರಚನೆಗಳಾಗಿವೆ. ಕರಾವಳಿಯ ಕಡೆಯಿಂದ ಬಂದು ಮಂಡ್ಯದಲ್ಲಿ ನೆಲೆಸಿರುವ ಡಾ.ಪ್ರದೀಪ್‌ಕುಮಾರ್ ಹೆಬ್ರಿ ಹಾಗೂ ವಿದ್ವಾನ್ ಎಂ.ಕೆ.ಶಂಕರನಾರಾಯಣ ಭಟ್ಟರು ಹಲವು ಕೃತಿಗಳನ್ನು ರಚಿಸಿದ್ದಾರೆ.

ಇಲ್ಲಿಯ ಧಾರ್ಮಿಕ ಸಂಸ್ಥೆಗಳಾದ ಸ್ವತಂತ್ರ ಸಿದ್ಧಲಿಂಗೇಶ್ವರ ಮಠ, ಧನಗೂರು ಮಠ ಮತ್ತು ಇನ್ನೂ ಅನೇಕ ದೇವಾಲಯ ಹಾಗೂ ಮಠಗಳು ಸಾಹಿತ್ಯದ ಅಭಿವೃದ್ಧಿಗೆ ಕೊಡುಗೆ ನೀಡಿವೆ. ಅವುಗಳಲ್ಲಿ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಸ್ಥಾನ ಮತ್ತು ಆದಿಚುಂಚನಗಿರಿಮಠಗಳು ಗಣನೀಯವಾದ ಕೆಲಸ ಮಾಡುತ್ತಿವೆ. ಈ ಕೇಂದ್ರಗಳು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರ ನಡೆಸುತ್ತಿರುವುದಲ್ಲದೆ ಧಾರ್ಮಿಕ

ಹಾಗೂ ಸಾಹಿತ್ಯ ಸಂಬಂಧದ ಉತ್ತಮ ಪುಸ್ತಕಗಳನ್ನೂ ಹೊರತರುತ್ತಿವೆ. ಕೆಲವು ಮಠಗಳ ಯತಿಗಳು ಧಾರ್ಮಿಕ ಸಂಬಂಧದ ಪುಸ್ತಕಗಳನ್ನು ರಚಿಸಿದ್ದಾರೆ. ಆದಿಚುಂಚನಗಿರಿಯ ಮಠಾಧೀಶರಾಗಿದ್ದ ಚಂದ್ರಶೇಖರನಾಥ ಸ್ವಾಮಿಯವರು ಹದಿನೆಂಟು ಅಧ್ಯಾತ್ಮಕ ಕೃತಿಗಳನ್ನೂ; ಪಾಂಡವಪುರ ತಾಲೂಕಿನ ದರಸಗುಪ್ಪೆಯ ಸ್ವಾಮಿ ಕೃಷ್ಣಾನಂದ ಭಾರತೀಯವರು 'ಯೋಗ ವಿಜ್ಞಾನ ಪ್ರಕಾಶಿಕೆ', 'ಜ್ಞಾನೇಶ್ವರಿ ಗೀತಾಮೃತ' ಮುಂತಾದ ಕೃತಿಗಳನ್ನೂ; ಶಿವಾರಗುಡ್ಡದ ಸ್ವಾಮಿ ಜ್ಞಾನಘನಾನಂದ ಪುರಿಯವರು, 'ಭಾರತದ ಹೊಂಗನಸು', ಗೃಹಸ್ಥಾಶ್ರಮ, ಸನ್ಮಾರ್ಗದಲ್ಲಿ, ಮುಂತಾದ ಕೃತಿಗಳನ್ನೂ, ಕುಂತಿಬೆಟ್ಟದ ಸ್ವಾಮಿ ಶಂಕರಾನಂದ ಭಾರತೀಯವರು 'ಗೀತಾರ್ಥ ಬೋಧಿನಿ' ಯನ್ನು ಬರೆದಿದ್ದಾರೆ. ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಈಗಿನ ಸ್ವಾಮಿಗಳಾದ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ (೧೯೦೮)ರವರು ವಿಜ್ಞಾನ, ಗಣಿತ, ಶಿಲ್ಪ, ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ವಿಶೇಷ ಪಾಂಡಿತ್ಯ ಪಡೆದಿದ್ದು ಈ ವಿಗ್ರಹರಾಧನೆ ಕುರಿತ ಪುಸ್ತಕವಲ್ಲದೆ ಮೇಲುಕೋಟೆ, ಶ್ರೀರಂಗ ತಿರುಪತಿ ಇತ್ಯಾದಿ ಕ್ಷೇತ್ರಗಳ ಶಿಲ್ಪ ವಾಸ್ತುಶಿಲ್ಪಗಳ ಬಗ್ಗೆ ಪುಸ್ತಕಗಳನ್ನು ರಚಿಸಿದ್ದಾರೆ. ಶ್ರೀವತ್ಸಕಲ್‌ಬಾಗಲ್‌ರವರು ವಿಶಿಷ್ಠಾದ್ವೈತ ವೇದಾಂತದ ಬಗ್ಗೆ ಹಲವಾರು ಲೇಖನ ಬರೆದಿದ್ದಾರೆ. ಆದರ್ಶ ವಿದ್ಯಾ ಸಂಸ್ಥೆ ನಡೆಸುತ್ತಿರುವ ತಿರುನಾರಾಯಣ (ತಿರು) ಅವರು ಲೇಖಕರು ಹಾಗೂ ವಾಗ್ಮಿಗಳು. ಮೇಲುಕೋಟೆಯವರೇ ಆದ ಎಂ. ಆರ್. ನರಸಿಂಹನ್ ಐವತ್ತಕ್ಕೂ ಹೆಚ್ಚು ಕಥೆ, ನಾಟಕ, ಅನುವಾದ ಸಾಹಿತ್ಯ ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಗತಿಗೆ ಈ ಜಿಲ್ಲೆಯ ಕೆಲವು ಸಂಘ ಸಂಸ್ಥೆಗಳೂ ಉತ್ತಮವಾಗಿ ದುಡಿದಿವೆ. ಸಾಹಿತ್ಯ ತರಗತಿಗಳು, ನಾಡಹಬ್ಬಗಳ ಆಚರಣೆ, ಹಾಗೂ ಉಪನ್ಯಾಸಗಳ ಮೂಲಕ ಜ್ಞಾನಾಭಿವೃದ್ಧಿ, ಕನ್ನಡ ಸಾಹಿತ್ಯ ಪ್ರಸಾರ, ಸಾಂಸ್ಕೃತಿಕ ಚಟುವಟಿಕೆಗಳ ವಿಸ್ತರಣೆ ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ೧೯೩೬ ರಲ್ಲಿ ಆರಂಭಗೊಂಡಿದ್ದ ಮಂಡ್ಯದ ಕರ್ನಾಟಕ ಸಂಘ, ಸುಮಾರು ೧೯೬೫-೬೬ನೇ ಸಾಲಿನಲ್ಲಿ ೨೦೦೦ ಪುಸ್ತಕಗಳ ಗ್ರಂಥಾಲಯ ಮತ್ತು ವಾಚನಾಲಯವನ್ನೂ, ಸ್ವಂತ ಕಟ್ಟಡವನ್ನೂ ಹೊಂದಿದ್ದಿತು. ಮಂಡ್ಯ ನಗರ ಸಭೆ ಈ ಸಂಘಕ್ಕೆ ವಾರ್ಷಿಕ ೨೦೦ ರೂಪಾಯಿಗಳ ಸಹಾಯಾನುದಾನ ನೀಡುತ್ತಿತ್ತು. ಮೇಲುಕೋಟೆಯ ಕನ್ನಡ ಸಂಘ ೧೯೩೫ ರಲ್ಲೂ, ಮಂಡ್ಯದ ಕಿರಣ ಸಾಹಿತ್ಯ ಸಂಘವು ೧೯೫೦ರಲ್ಲೂ, ಸಾಹಿತ್ಯ ವಿಚಾರ ಸಂಕಿರಣ ಮತ್ತು ಆ ಸಂಬಂಧದ ಚಟುವಟಿಕೆಗಳಿಗಾಗಿಯೇ ಆರಂಭಗೊಂಡಿದ್ದುವು. ಮೇಲುಕೋಟೆಯ ಉಭಯ ವೇದಾಂತ ಪ್ರವರ್ತನ ಸಭಾ, ಧಾರ್ಮಿಕ ಅಧ್ಯಯನದ ಗುರಿಯಿಂದ ೧೯೦೨ ರಲ್ಲಿ ಸ್ಥಾಪನೆಗೊಂಡಿದ್ದು, ೧೯೬೬ರಲ್ಲಿ ಈ ಸಭಾದಲ್ಲಿ, ೮೬ ದಾನಿಗಳೂ ಸೇರಿದಂತೆ ೬೦೦ ಸದಸ್ಯರೂ, ೫೧೮ ಅಜೀವ ಸದಸ್ಯರೂ ನೋಂದಣಿಗೊಂಡಿದ್ದರು. ಮಂಡ್ಯದ ಕರ್ನಾಟಕ ಸಂಘ ನಾಗಮಂಗಲದ ಕನ್ನಡ ಸಂಘ ಮತ್ತು ಮೇಲುಕೋಟೆಯ ವೇದಾಂತ ಪ್ರವರ್ತನ ಸಭಾಗಳು ಈಗಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಿ.ಬಾಲಕೃಷ್ಣ ಸಂಗಾಪುರವರು ಆದಿತ್ಯ ಪ್ರಕಾಶನ ಸಾಹಿತ್ಯ ಮತ್ತು ಕಲಾವೇದಿಕೆಯನ್ನು ಗೆಳೆಯರ ಸಹಕಾರದಿಂದ ಸ್ಥಾಪಿಸಿದ್ದಾರೆ.

**ದಲಿತ-ಬಂಡಾಯ ಸಾಹಿತ್ಯ**

ಮನುಷ್ಯ ಮತ್ತು ಸಮಾಜವನ್ನು ಕೇಂದ್ರವನ್ನಾಗಿಟ್ಟುಕೊಂಡು, ಬರೆಯುವವರ ಜಾತಿಯನ್ನು ಆಧರಿಸದೆ, ದಲಿತರು ಮತ್ತು ದಲಿತೇತರರು, ದಲಿತ ಪರ ಕಾಳಜಿಯಿಂದ ಅಥವಾ ದಲಿತಪರ ಪ್ರಜ್ಞೆಯಿಂದ ಬರೆದಿರುವುದನ್ನು ದಲಿತ-ಬಂಡಾಯ ಸಾಹಿತ್ಯ ಎಂದು ಪರಿಗಣಿಸಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ದಲಿತ ಪ್ರಜ್ಞೆ ಚಿಗುರೊಡೆದಿದ್ದು ೧೯೭೯ರಲ್ಲಿ. ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ದಲಿತ ಸಮ್ಮೇಳನ ೧೯೭೯ ರಲ್ಲಿ ನಡೆದಾಗ, ಪ್ರತಿಯೊಂದು ಜಿಲ್ಲೆಗೂ ಸಂಚಾಲಕರನ್ನು ನೇಮಿಸಲಾಯಿತು. ಮಂಡ್ಯ ಜಿಲ್ಲೆಗೆ ಶಿವಳ್ಳಿ ಕೆಂಪೇಗೌಡರು ಸಂಚಾಲಕರಾಗಿ ನೇಮಕಗೊಂಡರು. ರಾಜ್ಯ ಮಟ್ಟದ ಸಮ್ಮೇಳನ ನಡೆದ ಕೆಲವೇ ತಿಂಗಳಲ್ಲಿ ನವೆಂಬರ್ ೧೯೭೯ರಲ್ಲಿ ಮಂಡ್ಯದಲ್ಲಿ ಇವರ ಮುಂದಾಳತ್ವದಲ್ಲಿ ಜಿಲ್ಲಾಮಟ್ಟದ

ಸಮ್ಮೇಳನ ಏರ್ಪಡಿಸಲಾಯಿತು. ಇದು ರಾಜ್ಯದಲ್ಲಿಯೇ ಮೊಟ್ಟ ಮೊದಲಿಗೆ ನಡೆದ ಜಿಲ್ಲಾಮಟ್ಟದ ದಲಿತ ಸಮ್ಮೇಳನ ಎನ್ನಲಾಗಿದೆ. ಆ ಸಂದರ್ಭದಲ್ಲಿ ಸೇರಿದ ದಲಿತ ಸಾಹಿತಿಗಳಲ್ಲಿ ಚರ್ಚೆ ನಡೆದು, ಬಂಡಾಯ ಸಾಹಿತ್ಯ ಸಂಘಟನೆ ಆರಂಭಗೊಳ್ಳಬೇಕೆಂಬ ನಿರ್ಧಾರ ಕೈಗೊಂಡರು. ಅದರಂತೆ ೧೯೭೯ರಲ್ಲಿ ಸಂಘಟನೆಯ ಸ್ಥಾಪನೆಯಾಯಿತು. ಜಿಲ್ಲೆಯ ದಲಿತ ಸಂಘರ್ಷ ಸಮಿತಿಯು ಹಲವಾರು ಹೋರಾಟಗಳನ್ನು, ಅಧ್ಯಯನ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನೂ ನಡೆಸಿದೆ. ದಲಿತರು ತಮಗಾದ ನೋವು ಮತ್ತು ಅವಮಾನಗಳ ಅನುಭವಗಳ ಬಗ್ಗೆ ಹಾಡು ಕಟ್ಟಿ, ಗ್ರಂಥಸ್ಥ ಭಾಷೆಯೇ ಶ್ರೇಷ್ಠವೆಂದು ಪರಿಗಣಿಸದೆ, ತಮ್ಮ ಜೀವನ, ವಿಚಾರ, ಅಭಿಪ್ರಾಯ, ಅಕ್ರೋಶ ಅನಿಸಿಕೆಗಳನ್ನು ತಮ್ಮದೇ ಭಾಷೆಯಲ್ಲಿ ಬರೆಯುವ ಹಾಗೂ ಪ್ರಕಟಿಸುವ ಮಾರ್ಗವನ್ನು ಈ ಪಂಥವು ಎಂಭತ್ತರ ದಶಕದಲ್ಲಿ ಅನುಸರಿಸಿತು. ಶಿವಳ್ಳಿ ಕೆಂಪೇಗೌಡರು ಮಂಡ್ಯ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆಗೆ ಆರಂಭದಿಂದ ೧೧ ವರ್ಷಗಳ ಕಾಲ ಸಂಚಾಲಕರಾಗಿ ಮೌಢ್ಯ, ಪುರೋಹಿತಶಾಹಿ ಪ್ರಾಬಲ್ಯ, ಸಾಹಿತ್ಯ ಇತ್ಯಾದಿಗಳ ಕುರಿತು ವಿಚಾರ ಸಂಕಿರಣ ಮತ್ತು ಹಲವಾರು ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಬೆಸಗರಹಳ್ಳಿ ರಾಮಣ್ಣನವರು ಅನಂತರ ಇದರ ಸಂಚಾಲಕರಾಗಿದ್ದರು.

ದಲಿತ ಪ್ರಜ್ಞೆ, ದಲಿತ ಸಾಹಿತ್ಯ ಎಂಬ ಪ್ರತ್ಯೇಕತೆ, ಪಂಥಗಳ ಅರಿವಿಲ್ಲದೆ ದಲಿತ ಚಳವಳಿಗೂ ಮೊದಲು ದಲಿತರ ನೋವು-ನಲಿವು, ಅನುಭವಗಳನ್ನು ತಮ್ಮ ಕೃತಿಗಳಲ್ಲಿ ತಂದವರು ಬೊಮ್ಮರಸೇಗೌಡರು ಮತ್ತು ಜಿ.ವೆಂಕಟಯ್ಯನವರು. ೧೯೫೮ರ ರಾಜ್ಯೋತ್ಸವದಲ್ಲಿ ಸನ್ಮಾನಿಸಲ್ಪಟ್ಟ ಬಿ.ಬೊಮ್ಮರಸೇಗೌಡರು ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯವರು. ಸ್ವಾತಂತ್ರ ಹೋರಾಟಗಾರರಾಗಿ ಹೆಸರಾದವರು. ಮಹಾತ್ಮ ಗಾಂಧೀಯವರ ಕುರಿತು ೩೫೦೦ ಪದ್ಯಗಳನ್ನೂ (೧೯೬೦ರಲ್ಲಿ); ಶಿವಾಜಿಯ ಜೀವನದ ಹೋರಾಟವನ್ನು ಮೊದಲಿನಿಂದ ಕೊನೆಯವರೆಗೆ, ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ನಂತರದ ದಲಿತಪರ ಸಾಹಿತಿಯಾಗಿ 'ಗೋವಿನಬಾಳು', 'ಹರಿಜನರಬಾಳು' ಕೃತಿಗಳು ಶೋಷಿತರ ಬಗೆಗಿದ್ದ ವಿಶ್ವಾಸದಿಂದ ಬೊಮ್ಮರಸೇಗೌಡರು ಬರೆದ ಎರಡು ಕೃತಿಗಳಾಗಿವೆ. ಇವರು ಬುದ್ಧ, ಶಿವಾಜಿ, ಇಬ್ರಾಹಿಂ, ಗಾಂಧಿ, ಮುಂತಾದವರುಗಳ ಬಗ್ಗೆ 'ಆದರ್ಶ ಮಹಾಪುರುಷರು' ಎಂಬ ಕಿರುಪುಸ್ತಕ ರಚಿಸಿದ್ದಾರೆ. ತೊರವೆ ರಾಮಾಯಣ ಮಹಾಭಾರತ ಮತ್ತು ಸ್ವಾತಂತ್ರ್ಯ ಸಂದೇಶದ ಕೆಲವು ಅಂಶಗಳನ್ನು ತಮ್ಮದೇ ರೀತಿಯಲ್ಲಿ ಅರ್ಥೈಸಿಕೊಂಡು ಹಳೆಯ ಮೈಸೂರಿನ ಹಳ್ಳಿ ಹಳ್ಳಿಗಳಿಗೂ ಹೋಗಿ ವಿವರಿಸಿದ್ದಾರೆ. ಮದ್ದೂರು ತಾಲೂಕಿನ ಹೆಮ್ಮನಹಳ್ಳಿಯ ಜಿ.ವೆಂಕಟಯ್ಯನವರು ಸುಮಾರು ೧೯೪೫ರಲ್ಲೇ ದಲಿತ ಸಾಹಿತಿಯಾಗಿ ದಾಖಲುಗೊಂಡಿದ್ದಾರೆ. ಬಿ.ಆರ್.ಅಂಬೇಡ್ಕರರ ಜೀವನದ ಹೋರಾಟ ಹಾಗೂ ಸಿದ್ಧಾಂತಗಳಿಂದ ಬಹಳ ಪ್ರಭಾವಿತರಾಗಿದ್ದ ಇವರು ಬರೆದಿರುವ ಒಟ್ಟು ಕೃತಿಗಳು ಇಪ್ಪತ್ಮೂರು. 'ಚಂದನದ ಕೊರಡು', 'ನೊಂದ ಜೀವ' ಇತ್ಯಾದಿ ಕಾದಂಬರಿಗಳನ್ನೂ, 'ಶಾರದಾ ಮಣಿ', 'ಬುದ್ಧದೇವ' ಎಂಬ ಜೀವನ ಚರಿತ್ರೆಗಳನ್ನೂ, 'ಚಿನ್ನದ ಗಿರಿ ಯಾತ್ರೆ', 'ಬನದ ಸೆರಗು' ಮುಂತಾದ ಪ್ರವಾಸ ಸಾಹಿತ್ಯ ಕೃತಿಗಳನ್ನೂ ಇವರು ಬರೆದಿದ್ದಾರೆ. ಇವರಿಗೆ ೧೯೭೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ದೊರೆತಿದೆ ಅಲ್ಲದೆ, ಕರ್ನಾಟಕ ರಾಜ್ಯ ಪ್ರಶಸ್ತಿಯೂ, ಸಾಹಿತ್ಯ ಸೇವೆಗಾಗಿ ಮಾಸಾಶನವೂ ಇವರಿಗೆ ದೊರೆತಿದೆ.

ಮಂಡ್ಯ ತಾಲೂಕಿನವರಾದ ಶಿವಳ್ಳಿ ಕೆಂಪೇಗೌಡರು ದಲಿತೇತರರಾಗಿಯೂ ದಲಿತ-ಬಂಡಾಯಗಳ ಬರಹಗಾರರೆಂದು ಜಿಲ್ಲೆಯಲ್ಲಿ ಗುರುತಿಸಲ್ಪಟ್ಟಿದ್ದಾರೆ. ಇವರು 'ಬೆನ್ನು ಮೂಳೆಯ ಹಾಡು', 'ಹತಭಾಗಿನಿ ತಂಗಿಗೆ' ಮುಂತಾದ ಕವನ ಸಂಕಲನಗಳನ್ನು, ' ಚಮ್ಮಾವುಗೆ', 'ಕಾಗೇಪುರದಲ್ಲಿ ಮೂರು ಮಕ್ಕಳ ಸಾವು' ಮುಂತಾದ ಕಥಾ ಸಂಕಲನಗಳನ್ನು ಬರೆದಿದ್ದು ಈ ಕೃತಿಗಳಲ್ಲಿ ದಲಿತ ಬದುಕಿನ ನೋವು-ನಲಿವು-ಶೋಷಣೆಯ ಅಂಶಗಳನ್ನು ಚಿತ್ರಿಸಿದ್ದಾರೆ. ಇವರ 'ಚಮ್ಮಾವುಗೆ' ಸಂಕಲನದ ಒಂದು ಕಥೆ ಮರಾಠಿಗೆ ತರ್ಜುಮೆಯಾಗಿದೆ. ಬೆಸ್ತ, ಗೆರೆಗಳು ಎಂಬ ಎರಡು ಸಂಕಲನಗಳನ್ನು ಪ್ರಕಟಿಸಿರುವ ಕೆ.ನ.ಶಿವತೀರ್ಥನ್‌ರವರು ಮಡಿ, ಕೊಂಪೆಯ ಬಾಬಾ, ತುಡಿವ ಜೀವಗಳು ಇತ್ಯಾದಿ ಕವನಗಳಲ್ಲಿ ಶೋಷಿತರ ಪರವಾಗಿ ಸ್ಪಂದಿಸಿದ್ದಾರೆ. ಸೋಮಣ್ಣ ಹೊಂಗಳ್ಳಿ (೧೯೬೬) ಯವರು, 'ತಮಟೆ' (೧೯೯೩ ಕಥಾ

ಸಂಕಲನ), ಕತ್ತಲು (೧೯೯೩) ಕಾದಂಬರಿ ಲಂಬಾಣಿ ಜನಪದ ಕಥೆಗಳು, ಮುಂತಾದ ಕೃತಿಗಳ ಮೂಲಕ, ದಲಿತ ಬರಹಗಾರರಾಗಿರುವುದು ಕಂಡು ಬರುತ್ತದೆ. ಇವರು 'ಕೊಂತಿ ಪೂಜೆ – ಒಂದು ಅಧ್ಯಯನ' ಮಹಾಪ್ರಬಂಧ ರಚಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿಯೂ ಗುರುತಿಸಲ್ಪಟ್ಟಿದ್ದಾರೆ.

**ಮಹಿಳಾ ಸಾಹಿತ್ಯ**

ಲಭ್ಯವಿರುವ ದಾಖಲೆಗಳನ್ವಯ ೧೭ನೆಯ ಶತಮಾನಕ್ಕೂ ಮೊದಲು ಮಹಿಳಾ ಸಾಹಿತ್ಯದ ಪ್ರಗತಿ ಗಮನಾರ್ಹವಾಗಿರದಿದ್ದರೂ, ಚಿಕ್ಕದೇವರಾಜ ಒಡೆಯರ ಕಾಲಾನಂತರದಿಂದ, ಜಿಲ್ಲೆಯ ಮಹಿಳೆಯರು ಬರೆದ ಕೃತಿಗಳನ್ನು ಗಮನಿಸಿದರೆ, ಇಲ್ಲಿಯ ಲೇಖಕಿಯರ ಕೃತಿಗಳಲ್ಲಿ, ಕೆಲವು ಪೌರಾಣಿಕ ಕೃತಿಗಳಿದ್ದರೂ, ಸೃಜನಶೀಲ ಮತ್ತು ಕೌಟುಂಬಿಕ ಕಥೆ, ಕಾದಂಬರಿಗಳ ಸಂಖ್ಯೆ ಹೆಚ್ಚು ಎಂಬುದಾಗಿ ಕಂಡುಬರುತ್ತದೆ.

ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದ ಕವಯತ್ರಿಯರಾದ ಶೃಂಗಾರಮ್ಮ ಮತ್ತು ಸಂಚಿಯ ಹೊನ್ನಮ್ಮ ಅವರು ಕ್ರಮವಾಗಿ ಬರೆದ ಅವರು ಪದ್ಮಿನಿಕಲ್ಯಾಣ ಹಾಗೂ ಹದಿಬದೆಯ ಧರ್ಮ ಕೃತಿಗಳಿಂದ ಇಲ್ಲಿಯ ಮಹಿಳಾ ಸಾಹಿತ್ಯ ಚರಿತ್ರೆ ಆರಂಭಗೊಳ್ಳುತ್ತದೆ. 'ಹದಿಬದೆಯ ಧರ್ಮ' ಕೃತಿಯಲ್ಲಿ ಒಬ್ಬ ಸತಿಯು ಅನುಸರಿಸಬೇಕಾದ ರೀತಿ, ನೀತಿ, ಧರ್ಮಗಳ ವಿವರಣೆ ಇದೆ. ಮೇಲುಕೋಟೆಯ ರಾಜಮ್ಮ (ನಲ್ಕುಂದಿ ಶ್ರೀರಂಗಮ್ಮ)ನವರು 'ದೂರ್ವಾಸ ಚರಿತ್ರೆ', 'ಅನಂತ ಪದ್ಮನಾಭನ ಕಥೆ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಮಾರ್ಗವು ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಸ್ತ್ರೀವಾದ ಮುಂತಾದ ಹಲವಾರು ಪಂಥಗಳನ್ನು ದಾಟಿ ಬಂದಿದೆ. ಸ್ತ್ರೀವಾದಿ ಚಳವಳಿ ವ್ಯಾಪಕಗೊಳ್ಳುವ ಮೊದಲೇ ತ್ರಿವೇಣಿಯವರಿಂದ ಆರಂಭಿಸಿ ಅನೇಕ ಬರಹಗಾರ್ತಿಯರು ಸ್ತ್ರೀವಾದದ ಬಗ್ಗೆ ಅರಿವು ಮೂಡಿಸಿದ್ದಾರೆ.

ವಾಣಿ (೧೯೧೭–೧೯೮೮) ಎಂಬ ಕಾವ್ಯ ನಾಮದಲ್ಲಿ ಶ್ರೀರಂಗಪಟ್ಟಣದ ಬಿ.ಎನ್.ಸುಬ್ಬಮ್ಮನವರು ಕಾದಂಬರಿ, ಕಥಾ ಸಂಕಲನ, ನಾಟಕ ಹಾಗೂ ವಚನ ಸಂಕಲನಗಳನ್ನು ಬರೆದು ಪ್ರಕಟಪಡಿಸಿದ್ದಾರೆ. ಇವರು ರಚಿಸಿರುವ ಕೃತಿಗಳಲ್ಲಿ ಎರಡು ಕನಸು (೧೯೬೦), ಶುಭಮಂಗಳ(೧೯೬೨) ಮತ್ತು ಹೊಸಬೆಳಕು(೧೯೬೯) ಮುಂತಾದವು ಅತ್ಯಂತ ಯಶಸ್ವೀ ಚಲನಚಿತ್ರಗಳಾಗಿ ಖ್ಯಾತಿ ಪಡೆದಿವೆ. ಇವರ 'ಮನೆ ಮಗಳು' ಕಾದಂಬರಿಗೆ ೧೯೬೨ ರಲ್ಲಿ ಕರ್ನಾಟಕ ಸರ್ಕಾರದ ಬಹುಮಾನ, ೧೯೭೨ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ದೊರೆತಿವೆ. ಮಂಡ್ಯದ ಸಿಂಗಾರಮ್ಮ (ಶ್ರೀದೇವಿ ೧೯೨೩) ಶಾಲೆಗೇ ಹೋಗದೆ ಶಿಕ್ಷಣ ಪಡೆದು ಸಂಸ್ಕೃತ, ಕನ್ನಡ, ತೆಲುಗು, ತಮಿಳು ಹಾಗೂ ಹಿಂದಿ ಐದು ಭಾಷೆಗಳಲ್ಲಿ ಪರಿಶ್ರಮ ಹೊಂದಿ, ಗೋಪುರದ ಹಿರಿಮೆ, ಶ್ರೀಭಾಷ್ಯ ಹಿರಿಮೆ, ಭಕ್ತಿ ಸಿದ್ಧಾಂಜನ, ಪಂಚರಾತ್ರಿ ಮೊದಲಾದ ಧಾರ್ಮಿಕ ಕೃತಿಗಳನ್ನು ಹಾಗೂ ಲೇಖನಗಳನ್ನೂ ಬರೆದಿದ್ದಾರೆ. ಮಂಡ್ಯದ ಮಹಿಳಾ ಸಮಾಜದ ಕಾರ್ಯದರ್ಶಿಯಾಗಿ ಇಪ್ಪತ್ತೈದು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ. ಇವರ ಹಿಂದಿ ಕಿರುಕತೆಗೆ ೧೯೬೪ರಲ್ಲಿ ಜಮ್ನಾಲಾಲ್ ಪುರಸ್ಕಾರವೂ, ಬೆಂಗಳೂರಿನಲ್ಲಿ ೧೯೯೪ ರಲ್ಲಿ ನಡೆದ ಹರಿದಾಸ ಸಮ್ಮೇಳನದಲ್ಲಿ ಇವರ 'ಶಿಲ್ಪ ಕಲಾ ಮತ್ತು ವಿಷ್ಣು ವಿಗ್ರಹ ವೈಶಿಷ್ಟ್ಯ' ಎಂಬ ಪ್ರಬಂಧಕ್ಕೆ ಬಹುಮಾನವೂ ದೊರೆತಿವೆ.

೧೯೫೦–೬೦ರ ದಶಕದಲ್ಲಿ ಪ್ರಮುಖ ಕಾದಂಬರಿಗಾರ್ತಿಯಾಗಿ ಹೆಸರುವಾಸಿಯಾದ, ತ್ರಿವೇಣಿ ಕಾವ್ಯನಾಮದ ಅನುಸೂಯ (೧೯೨೮–೧೯೬೩) ರವರು, ಮಂಡ್ಯದವರು. ಮಹಿಳೆಯರು ಹೆಚ್ಚಾಗಿ ಬರೆಯದೇ ಇದ್ದಂತಹ ಕಾಲದಲ್ಲಿ, ಮಹಿಳೆಯರ ಸಮಸ್ಯೆಗಳನ್ನೇ ವಸ್ತುವಾಗಿಟ್ಟುಕೊಂಡು ಕೃತಿಗಳ ರಚನೆ ಮಾಡಿದ್ದಾರೆ. ನವೋದಯ ಮಾರ್ಗದಲ್ಲಿ ಕೃತಿ ರಚನೆ ಆರಂಭಿಸಿದರೂ, ಪ್ರಗತಿಶೀಲ ಪಂಥದ ಸರಳ ಶೈಲಿಯನ್ನೇ ಅನುಸರಿಸಿ ಹಲವಾರು ಕೃತಿಗಳನ್ನು ಬರೆದಿದ್ದಾರೆ. ಇವರ ಹೆಚ್ಚಿನ ಕೃತಿಗಳಲ್ಲಿ ಸ್ತ್ರೀವಾದಿ ಧೋರಣೆಗಳಿವೆ. ೪೧ ಸಣ್ಣ ಕಥೆ ಮತ್ತು ಇಪ್ಪತ್ತು ಕಾದಂಬರಿಗಳು ಇವರ

ಕಾಣಿಕೆಯಾಗಿದ್ದು ೧೯೫೩ ರಿಂದ ೧೯೬೩ರ ಅವಧಿಯಲ್ಲಿ ಇವು ಪ್ರಕಟವಾದವು. ಎರಡು ಮನಸ್ಸು, ಹೂವು ಹಣ್ಣು, ಕೀಲುಗೊಂಬೆ, ವಸಂತಗಾನ, ಮುಂತಾದವು ಅಪಾರ ಜನಪ್ರಿಯತೆ ಗಳಿಸಿದಂತಹ ಕೃತಿಗಳಾಗಿವೆ. ಚಲನಚಿತ್ರಗಳಿಗೆ, ಸಮಾಜದಲ್ಲಿ ಅತ್ಯಂತ ಪ್ರಾಮುಖ್ಯತೆ ಇದ್ದ ಕಾಲದಲ್ಲಿ, ತ್ರಿವೇಣಿಯವರ ಹಣ್ಣೆಲೆ ಚಿಗುರಿದಾಗ, ಹೂವುಹಣ್ಣು, ಅಪಸ್ವರ, ಬೆಳ್ಳಿಮೋಡ, ಶರಪಂಜರ, ಮಲೆಯಾಳಿ ಭಾಷೆಯಲ್ಲಿ ಬೆಕ್ಕಿನಕಣ್ಣು ಮುಂತಾದ ಕಾದಂಬರಿಗಳು ಚಲನಚಿತ್ರಗಳಾಗಿ ಉತ್ತಮ ಹೆಸರುಗಳಿಸಿದ್ದಲ್ಲದೇ, ಸಮಾಜದ ಮೇಲೆ ಆಳವಾದ ಪ್ರಭಾವವನ್ನೂ ಬೀರಿವೆ. ಇವರು ನವೋದಯ ಕಾಲದ ನಂತರ, ಸಮಾಜ ಸುಧಾರಣೆ, ಸ್ತ್ರೀ ಸ್ವಾತಂತ್ರ್ಯದ ಮತ್ತು ಸಮಾಜದ ಅನೀತಿ–ಅನ್ಯಾಯಗಳ ಬಗ್ಗೆ ಸಾಹಿತ್ಯದಲ್ಲಿ ದನಿ ಎತ್ತಿದ ಜಿಲ್ಲೆಯ ಮೊದಲ ಮಹಿಳಾ ಸಾಹಿತಿಯಾಗಿದ್ದಾರೆ. 'ಸಮಸ್ಯೆಯ ಮಗು' ಕಥಾ ಸಂಕಲನಕ್ಕೆ ೧೯೫೦ ರಲ್ಲಿ ದೇವರಾಜ್ ಬಹುದ್ದೂರ್ ಬಹುಮಾನವೂ ಮತ್ತು 'ಅವಳ ಮನೆ' ಕಾದಂಬರಿಗೆ ೧೯೬೦ ರಲ್ಲಿ ರಾಜ್ಯ ಸರ್ಕಾರದ ಬಹುಮಾನವೂ ದೊರೆತಿವೆ. ತ್ರಿವೇಣಿಯವರ ತಂಗಿ ಆರ್ಯಾಂಬ ಪಟ್ಟಾಭಿ (೧೯೩೬) ಮಂಡ್ಯದವರು. ಸಣ್ಣ ಕಥೆಗಳನ್ನು ರಚಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸಿ, ಹೊಂಗನಸು (೧೯೬೧), ಆರಾಧನೆ (೧೯೬೨) ಮುಂತಾಗಿ ಸುಮಾರು ೩೦ ಕಾದಂಬರಿಗಳನ್ನು, ಕಥಾಸಂಕಲನ, ನಾಟಕ, ಮಕ್ಕಳ ಪುಸ್ತಕ, ಜೀವನ ಚರಿತ್ರೆ, ಮೊದಲಾಗಿ ಎಲ್ಲ ಪ್ರಕಾರಗಳ ಕೃತಿಗಳನ್ನು ಬರೆದಿದ್ದಾರೆ. ಮಹಿಳಾ ಧ್ಯಾನ ವಿದ್ಯಾ ಪೀಠವನ್ನು ಸುಮಾರು ೧೯೭೫ ರಿಂದ ನಡೆಸುತ್ತಿದ್ದಾರೆ. ಇವರ 'ಟೆನ್ನಿಸ್' ಕೃತಿಗೆ ೧೯೮೮ ರಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಮಲ್ಲಿಕಾ ಪ್ರಶಸ್ತಿ ದೊರೆತಿದೆ.

ಚಲನಚಿತ್ರವಾಗಿರುವ 'ಲಂಬಾಣಿ ಲಕ್ಕಿ' (೧೯೭೭), ಅಂತರಂಗದ ಅಲೆ, (ಕಾದಂಬರಿ ೧೯೮೭) ನಾಗಸಾಕಿ, ಪರಿವರ್ತನೆ, ಕಂದರ ಕಾಮಧೇನು, ಇತ್ಯಾದಿ ಮಕ್ಕಳ ಸಾಹಿತ್ಯವನ್ನು ರಚಿಸಿದ ಜಗ್ಗು ಪ್ರಿಯದರ್ಶಿನಿ (೧೯೨೭) ಯವರು ಜನಿಸಿದ್ದು ನಾಗಮಂಗಲದಲ್ಲಿ. ಮದ್ದೂರಿನವರಾದ ಸುಶೀಲ ಹೊನ್ನೇಗೌಡ (ಮರಾಶಿ–೧೯೪೯) ರವರು, ಜನಪದ ಪ್ರಕಾರದಲ್ಲಿ ಜನಪದ ಆಟಗಳು (೧೯೭೯), ಜನಪದ ಅಡಿಗೆಗಳು (೧೯೮೦) ಮುಂತಾದ ಕೃತಿಗಳನ್ನೂ, ಕಾದಂಬರಿಗಳನ್ನೂ; ಸೀತಾಪುರದ ಜಯಲಕ್ಷ್ಮಿ (ವಿಶಾಲ–೧೯೫೨)ಯವರು, ನೋಟ, ಐದು ಜಾನಪದ ಪ್ರಬಂಧಗಳು; ಸೀತಾಪುರದ ಏಳೂರಮ್ಮ ಮುಂತಾದ ಕೃತಿಗಳನ್ನೂ; ಅಂಬಿಗರಹಳ್ಳಿಗೆ ಸೇರಿದ, ಪದ್ಮಾಶೇಖರ್ (೧೯೫೩) ರವರು, 'ಹಕ್ಕಿಯ ಹರೆಯ' (ಕವನ ಸಂಗ್ರಹ)ಸಮಾವೇಶ, ಜನಪದ ಮನರಂಜಕರು ಮುಂತಾದ ಕೃತಿಗಳನ್ನೂ ರಚಿಸಿದ್ದಾರೆ. ನಗುವನಹಳ್ಳಿ ಪಿ.ರತ್ನ (೧೯೫೪–೧೯೯೯) ರವರು 'ಚತುರಾರ್ಯ ಪ್ರಬಂಧ' (೧೯೮೯), ವಿಕ್ರಮ ವಿಲಾಸ ಇತ್ಯಾದಿ ಕೃತಿಗಳನ್ನು, ಕವನ ಹಾಗೂ ಮಕ್ಕಳ ಪುಸ್ತಕಗಳನ್ನೂ; ಮಂಡ್ಯದ ಪದ್ಮ ಕೆಂಪೇಗೌಡರು ಕೆಲವು ಕಾದಂಬರಿ ಕವನ, ಮತ್ತು ಮಕ್ಕಳ ಸಾಹಿತ್ಯ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿಯಲ್ಲಿ ಜನಿಸಿದ ಲತಾರಾಜಶೇಖರ್ (೧೯೫೪) ರವರು 'ಕೋಗಿಲೆ ಕೂಗಿದಂತೆ', 'ಶೇಫಲಿಕಾ' ಇತ್ಯಾದಿ ಕವನ ಸಂಕಲನಗಳನ್ನೂ, 'ಹೂವರಳಿ ನಕ್ಕಾಗ', ಮನಸ್ಸು ಮನಸ್ಸುಗಳ ನಡುವೆ, ಮುಂತಾದ ಕಾದಂಬರಿಗಳನ್ನೂ ಬರೆದಿದ್ದು, ಕೆಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮಂಡ್ಯದ ಆರ್.ಎಸ್.ವಿಜಯಲಕ್ಷ್ಮಿಯವರು, ದ್ವಾದಶಾನುಪೇಕ್ಷೆ, ಕನ್ನಡ ಸಾಂಗತ್ಯ ಪ್ರಕಾರ ಮುಂತಾದ ಕೃತಿಗಳನ್ನೂ; ನಾಗಮಂಗಲ ತಾಲೂಕಿನ (ಹನುಮನಹಳ್ಳಿ) ಎನ್.ಜಿ.ಲಲಿತರವರು ಎರಡು ಜೀವನ ಚರಿತ್ರೆಗಳನ್ನೂ; ಡಿ.ಎಲ್.ವಿಜಯ ಕುಮಾರಿ (ಸಂತೆಕಸಲಗೆರೆ) ಯವರು ಬಂಧನದ ಹಕ್ಕಿ, ಅಗ್ನಿಧಾರಿಣಿ ಮುಂತಾದ ಕಾದಂಬರಿ ಹಾಗೂ ಕವನ ಸಂಕಲನಗಳನ್ನೂ; ಮೇಲುಕೋಟೆಯವರಾದ ಜಯಾ ಕಲ್‌ಬಾಗಲ್ (೧೯೨೮–೨೦೦೦) ತಮ್ಮ ೬೫ನೇ ವಯಸ್ಸಿನಲ್ಲಿ ಬರವಣಿಗೆ ಆರಂಭಿಸಿ ಕೆಲವು ಲೇಖನಗಳನ್ನೂ, ಪ್ರವಾಸ ಕಥನವನ್ನೂ ಬರೆದಿದ್ದಾರೆ. ಇವರ ಮಕ್ಕಳಾದ ವಸಂತ ಕಲ್‌ಬಾಗಲ್ ಮತ್ತು ಗೀತಾಸೀತಾರಾಮ್ ಕವಯಿತ್ರಿಯರು. 'ಪ್ರಮದೆ', 'ಸುದ್ದಿಕಾವ್ಯ' ಇತ್ಯಾದಿ ಕವನ ಸಂಕಲನಗಳನ್ನು ವಸಂತ ಕಲ್‌ಬಾಗಲ್ ಪ್ರಕಟಿಸಿದ್ದಾರೆ. ಮಂಡ್ಯದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳನ್ನು

ಮುಂದುವರಿಸುತ್ತಿರುವ ಪದ್ಮಾ ಶ್ರೀನಿವಾಸ್, 'ಲಕ್ಷ್ಮಿ' ಎಂಬ ಕಾವ್ಯನಾಮದಲ್ಲಿ ಕನ್ನಡದಲ್ಲಿ, ವಿಶೇಷವಾಗಿ ಹಿಂದಿಯಲ್ಲಿ, ಕವಯಿತ್ರಿ ಎಂದು ಗುರುತಿಸಲ್ಪಟ್ಟಿದ್ದಾರೆ. ಹಿಂದಿಯ 'ಕುಸುಮಾಂಜಲಿ'ಯು ಇವರಿಂದ 'ಕಾವ್ಯಧಾರಾ' ಆಗಿ ಕನ್ನಡಕ್ಕೆ ಬಂದಿದೆ. ಪದ್ಮಾರವರಿಗೆ ಬಿಹಾರ ರಾಜ್ಯ ಸರ್ಕಾರವು 'ವಿದ್ಯಾ ವಾಚಸ್ಪತಿ' ಎಂಬ ಬಿರುದು ನೀಡಿದೆ. ಪ್ರಭಾ ಬೆಸಗರಹಳ್ಳಿ ಕೆಲವು ಕೃತಿಗಳನ್ನು ಬರೆದಿದ್ದಾರೆ.

**ಜನಪದ ಭಾಷೆ**

ಜಿಲ್ಲೆಯಲ್ಲಿ ಕನ್ನಡ ಭಾಷಿಗರ ಸಂಖ್ಯೆ ಅಧಿಕವಾಗಿದೆ. ಇಲ್ಲಿಯ ಕನ್ನಡದಲ್ಲಿ ಇತರೇ ಭಾಷೆಗಳ ಪ್ರಭಾವವಾಗಲೀ, ಮಿಶ್ರಣವಾಗಲೀ ಹೆಚ್ಚು ಇಲ್ಲವೆಂದೇ ಹೇಳಬಹುದಾಗಿದೆ. ಮಂಡ್ಯದ ಭಾಷೆ ಎಂದರೆ ಇಲ್ಲಿಯ ಜನಪದರ ಆಡುನುಡಿಯೇ ಆಗಿದೆ. ಇಲ್ಲಿಯ ಜನಪದರ ನುಡಿಯಲ್ಲಿ ಶಿಷ್ಟ ಪದಗಳು ರೂಪಾಂತರಗೊಂಡು ಬೇರೆಯೇ ಪದಗಳಾಗಿ ಬಳಸಲ್ಪಡುತ್ತವೆ. ಉದಾಹರಣೆಗೆ: ಅಮ್ಮ-ಅವ್ವ, ಸ್ವಲ್ಪ-ಒಸಿ, ಬಾಯಿ ತೆರೆದು-ಬಾಯಿಕಿಸಿದು, ಇದ್ದಾನೆ-ಅವ್ನೆ, ಇಡು-ಮಡುಗು, ಚೆನ್ನಾಯ್ತು-ಬೇಸಾಯ್ತು ಮುಂತಾದವು. ಇನ್ನು ಕೆಲವು ಶಬ್ದಗಳಿಗೆ 'ವ' ಕಾರದ ಬದಲು 'ಇ' ಕಾರ ಪ್ರಯೋಗ ಮಾಡಲಾಗುತ್ತದೆ. ಉದಾ:- ವಿಷ-ಇಸ, ವಿಧಿ-ಇದಿ, ವಿಚಾರ-ಇಚಾರ, ವಿದ್ಯೆ-ಇದ್ಯ, ಹೂ-ಊ, ಇದ್ದೇನೆ-ಇವ್ನಿ, ಒಲೆ-ವಲೆ, ಒಣಗು-ವಣ್ಗು, ತೋಟ-ತ್ವಾಟ, ಕೋಟೆ-ಕ್ವಾಟೆ, ಕೋಣ-ಕ್ವಾಣ, ಗೋಡೆ-ಗ್ವಾಡಿ ಇತ್ಯಾದಿಗಳು. ಇನ್ನು ಕೆಲವು ಕಡೆ ಪದಾದಿಯ 'ಹ' ಲೋಪಗಳಿಸಿ ಉಚ್ಚರಿಸಲಾಗುತ್ತದೆ. ಹಣ್ಣು-ಅಣ್ಣು, ಹಾಲು-ಆಲು, ಹುಲಿ-ಉಲಿ, ಹಳ್ಳಿ-ಅಳ್ಳಿ, ಹಕ್ಕಿ-ಅಕ್ಕಿ ಇತ್ಯಾದಿ.

**ಭಾಷಾ ಮಿಶ್ರಣ**

ಹೈದರಾಲಿ ಹಾಗೂ ಟಿಪ್ಪೂಸುಲ್ತಾನರ ರಾಜ್ಯಭಾರದಲ್ಲಿ ಉರ್ದು ಜೊತೆಗೆ ಕನ್ನಡಕ್ಕೂ ಪ್ರೋತ್ಸಾಹವಿತ್ತು. ಟಿಪ್ಪುವಿನ ಕಾಲದಲ್ಲಿ ಕನ್ನಡ, ಮರಾಠಿ ಹಾಗೂ ಪಾರಸಿ (ಪರ್ಷಿಯನ್) ಭಾಷೆಗಳಲ್ಲಿ ಲೆಕ್ಕಪತ್ರಗಳನ್ನು ಇಡುತ್ತಿದ್ದರು. ಕನ್ನಡ ಗ್ರಂಥಗಳಲ್ಲಿ ಮತ್ತು ನಿತ್ಯ ವ್ಯಾವಹಾರಿಕ ಭಾಷೆಯಲ್ಲಿ ಅನೇಕ ಉರ್ದು ಪಾರಸಿ ಪದಗಳು ಬೆರೆತವು. ಈ ಭಾಷೆ ತೋವಿನಕೆರೆಯ ಚಂದ್ರಸಾಗರ ವರ್ಣಿ (ಸು.೧೮೧೦) ಎಂಬ ಜೈನ ಕವಿಗೆ ಮುಲ್ಲಾ ಶಾಸ್ತ್ರವನ್ನು ಭಾಮಿನಿ ಷಟ್ಪದಿಯಲ್ಲಿ ಬರೆಯಲು ಪ್ರೇರಣೆ ನೀಡಿತು. ಕಂಠೀರವ ನರಸರಾಜ ವಿಜಯದಲ್ಲಿ ಉರ್ದು ಪದಗಳು, ನುಡಿಗಟ್ಟುಗಳು ಸಾಕಷ್ಟಿವೆ. ಮೈಸೂರು ಒಡೆಯರ ಕಾಲದಲ್ಲೂ ಉರ್ದು ಕನ್ನಡ ಭಾಷೆಗಳ ಮಿಶ್ರಣ ಪ್ರಯೋಗ ಮುಂದುವರಿಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಸನ್ನದುಗಳಲ್ಲಿ ಪಾರಸೀ ಹಾಗೂ ಉರ್ದು ಶಬ್ದಗಳು ಹೇರಳವಾಗಿವೆ. ಆ ಕಾಲದಲ್ಲಿ ಮುದ್ರಿಸುತ್ತಿದ್ದ ನಾಣ್ಯ, ಇತ್ಯಾದಿಗಳಲ್ಲಿ ಕನ್ನಡ ಮತ್ತು ಪಾರಸಿ ಭಾಷೆಗಳೆರಡೂ ಒಟ್ಟಾಗಿ ಇರುವುದು ಕಂಡುಬಂದಿದೆ. ಟಿಪ್ಪುಸುಲ್ತಾನನಿಗೆ ಶಿಕ್ಷಣ ನೀಡುತ್ತಿದ್ದ ಮೌಲ್ವಿಗಳೊಂದಿಗೆ ಕನ್ನಡ ಪಂಡಿತರೂ ಇದ್ದರು. ಸುಲ್ತಾನನ ಮರಣಾನಂತರ ಕಟ್ಟಲಾಗಿರುವ ಕಿರಂಗೂರು (ವೆಲ್ಲೆಸ್ಲಿ) ಸೇತುವೆಯ ಮೇಲೆ ಪಾರಸಿ ಮತ್ತು ಕನ್ನಡ, ಎರಡೂ ಭಾಷೆಗಳ ಬರಹವಿದೆ. ಮಳವಳ್ಳಿ ತಾಲೂಕಿನ ಕುಡಿನೀರು ಕಟ್ಟೆಯ ಗೋರಿಯ ಮೇಲಿನ ಶಾಸನದಲ್ಲಿ ಮೊದಲು ಇಂಗ್ಲೀಷ್, ಮಧ್ಯೆ ಕನ್ನಡ ಮತ್ತು ಕೆಳಗಡೆ ಪಾರಸಿ ಭಾಷೆಯಲ್ಲಿ ಬರೆಯಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ರಾಜಾಜ್ಞೆಗಳನ್ನು ಉರ್ದು ಹಾಗೂ ಕನ್ನಡದಲ್ಲಿ ಹೊರಡಿಸುತ್ತಿದ್ದರು. ಆಕಾಶವಾಣಿಯಲ್ಲಿ ಉರ್ದು ಭಾಷೆಯಲ್ಲೂ ಸಮಾಚಾರಗಳು ಪ್ರಸಾರಗೊಳ್ಳುತ್ತಿದ್ದವು. ಅಮೀನ್ ರಸ್ತೆ, ಹಕೀಕತ್ತು, ಜಪ್ತಿ, ಖುಷ್ಕಿ, ದರ್ಬಾರು, ದರಖಾಸ್ತು, ನೀಯತ್ತು, ಹಲ್ವ, ಕರ್ಮ, ಇಲಾಖಾ, ಫೇರಾವ್, ದಸ್ತಖತ್ ಮುಂತಾದ ಉರ್ದು ಪದಗಳು ಕನ್ನಡದಲ್ಲಿ ಸೇರಿಹೋಗಿ ಕನ್ನಡವೇ ಆಗಿರುವಂತೆ, ನಾಟಿ, ಸೀಗೇಕಾಯ್, ರಾಮಫಲ್, ಸೀತಾಫಲ್, ಸುಗ್ಗಿ, ಪಾಳೇಗಾರ್, ಯಾತಂ(ಏತ), ಕಾಮಾಲೆ, ಭೂತಾಳೆ ಇತ್ಯಾದಿ ಹಲವಾರು ಕನ್ನಡ ಪದಗಳು, ಉರ್ದುವಾಗಿ ಪರ್ಯಾಯ ಪದಗಳು ಆ ಭಾಷೆಯಲ್ಲಿ

ಇಲ್ಲವೆಂಬಂತೆ ಜನರಿಂದ ಬಳಸಲ್ಪಡುತ್ತಿವೆ. ಜನಪದರ ಲಾವಣಿ ಮತ್ತು ಹಾಡುಗಳಲ್ಲಿ ಈ ಎರಡೂ ಭಾಷೆಗಳನ್ನು ಸೇರಿ ರಚಿಸಿರುವ ಉದಾಹರಣೆಗಳೂ, ಕೃತಿಗಳೂ ಸಿಗುತ್ತವೆ. ಟೀಪ್ಪು ಸುಲ್ತಾನರ ಕುರಿತಾಗಿ ಇರುವ ಒಂದು ಲಾವಣಿ, 'ಅಜಬ್ ತಮಾಷ ಹೈದರ್ ನಿಷಾನ ಟಿಪ್ಪು ಸುಲ್ತಾನನ ಬಿರುದಾಯ್ತು, ಮಸಲತ್ ಮಾಡಿದ ಮೀರ್ ಸಾಧಕನಿಗೆ ದೇಶದ್ರೋಹಿ ಎಂದು ಹೆಸರಾಯ್ತು', ಎಂದು ಆರಂಭಗೊಂಡು, 'ಹರಾಮಖೋರನ ಕರಾಮತ್ತನಿತನು ಟೀಪು ಸುಲ್ತಾನನು ನಿಮಿಷದಲಿ, ಅರೇ ಹಮಾರೆ ನಮ್ಮಖರಾಮ ಕರೇಸೋ ಕಾಮ್ಮೆಂದ ಮನಸಿನಲಿ...' ಎಂದು ಮುಂದುವರಿಯುತ್ತದೆ. (ಕರ್ನಾಟಕ ಸಂಸ್ಕೃತಿ–ದೇವುಡು) ಇಡೀ ಲಾವಣಿಯಲ್ಲಿ ಉರ್ದು ಕನ್ನಡ ಒಂದೇ ಭಾಷೆಯ ಪದಗಳಂತೆ ಬಳಸಲ್ಪಟ್ಟಿವೆ. ಮೊಹರಂನಲ್ಲಿ ಹತ್ತನೆಯ ದಿನ ಬಾಬಯ್ಯನನ್ನು ಹೊತ್ತು ಊರಿಗೆ ಹಿಂತಿರುಗುವಾಗ ಮುಜಾವರ್‌ಗಳು ಹೇಳುವ ಶೋಕಗೀತೆಯ ಚರಣಗಳು ಕನ್ನಡ–ಉರ್ದು ಪದಗಳಿಂದ ರಚಿಸಲಾಗಿವೆ. 'ಅಲ್ ವಿದಾ, ಷಾಹೆ, ಷಹೀದಾನ್ ಅಲ್ ವಿದಾ........ ' ಎಂಬುದು ಪಲ್ಲವಿಯಾದರೆ, 'ಹಸನ್ ಹುಸೇನ್ ಅಣ್ಣ ತಮ್ಮಂದಿರು ಬೀಬಿ ಫಾತೀಮಾಂಕೆ ಮಕ್ಕಳು....ಜಗತ್‌ಕೆ ಎಲ್ಲಾ ಗುರುಗಳು ದೇಖೀನ್ ಚಲೋ ದಈದಾರ್ ಕು...... ' ಎಂಬ ವಾಕ್ಯಗಳು ಇದರ ಚರಣಗಳಾಗಿವೆ.

## ಜನಪದ ಸಾಹಿತ್ಯ

'ಟೀಕಾ ಸಂಭಾವನೆ', ಎಂಬ ಯಕ್ಷಗಾನದ ಆಚರಣೆಯ ನಿಯಮಗಳ ಕುರಿತಾದ ಶಾಸ್ತ್ರೀಯ ಗ್ರಂಥವು ೧೮೮೦ಕ್ಕೆ ಮುಂಚಿತವಾಗಿಯೇ ರಚಿತವಾಗಿರುವುದಾಗಿ ತಿಳಿದುಬಂದಿದೆ. ಇದನ್ನು ಬರೆದ ಕಿಕ್ಕೇರಿ ಪುಟ್ಟಸ್ವಾಮಾಚಾರ್ಯರು, ಈ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯವರೇ ಎಂದು ವಿದ್ವಾಂಸರ ಅಭಿಪ್ರಾಯ. ಯಕ್ಷಗಾನದಲ್ಲಿ ಬಹಳ ಪ್ರಾಚೀನವಾದ ಕರಿಭಂಟನ ಕಾಳಗದ ಕಥಾ ಭಾಗದಲ್ಲಿ ಲೋಕಪಾವನಿ ನದಿಯ ವರ್ಣನೆ, ಕರಿಘಟ್ಟದ ಸುತ್ತಮುತ್ತಲಿನ ಸ್ಥಳಗಳ ಪರಿಚಯ, ಪಾಂಡವಪುರ ತಾಲೂಕಿನ ಮಲ್ಲಿಗನೂರು, ತೊಂಡನೂರು ಮುಂತಾದ ಇನ್ನೂ ಹಲವಾರು ಸ್ಥಳಗಳ ಹೆಸರುಗಳು ಇರುವುದರಿಂದ ಇದನ್ನು ರಚಿಸಿದ ಕವಿ ಕೆಂಪಣ್ಣಗೌಡ, ಪಾಂಡವಪುರ ಅಥವಾ ಶ್ರೀರಂಗಪಟ್ಟಣದ ಕಡೆಯವನಿರಬೇಕೆಂದು, ತೈಲೂರು ವೆಂಕಟಕೃಷ್ಣರವರ ಅಭಿಪ್ರಾಯವಾಗಿದೆ.

### ಜನಪದ ಸಾಹಿತ್ಯ ಸಂಗ್ರಹಣೆ ಸಂಶೋಧನೆ ಮತ್ತು ಪ್ರಕಟಣೆ

೨೦ನೆಯ ಶತಮಾನದ ಪೂರ್ವಾರ್ಧಭಾಗದಲ್ಲಿ ಜಾನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯವು ಮೊದಲ ಹಂತವಾಗಿ ಹಲಸಂಗಿ ಗೆಳೆಯರು, ಎಲ್.ಗುಂಡಪ್ಪ ಮುಂತಾದವರಿಂದ ರಾಜ್ಯದಲ್ಲಿ ಆರಂಭಗೊಂಡಿದ್ದು, ಎರಡನೇ ಹಂತದಲ್ಲಿ ಇದರೊಂದಿಗೆ ಸಮೀಕ್ಷಾ ಕಾರ್ಯವೂ ಸೇರಿದಂತೆ, ಈ ಜಿಲ್ಲೆಯ ಕ.ರಾ.ಕೃ., ಜೀ.ಶಂ.ಪ., ಎಚ್.ಎಲ್.ನಾಗೇಗೌಡ ಮುಂತಾದವರಿಂದ ಬಹಳ ಗಂಭೀರವಾಗಿ ಸಂಗ್ರಹಣೆ, ಪ್ರಕಟಣೆ ಕಾರ್ಯಗಳು ಮುಂದುವರಿದು ನಡೆದವು. ಮದ್ದೂರು ತಾಲೂಕಿನ ದೇಶಹಳ್ಳಿಯ ಎಂ.ಎಲ್.ಶ್ರೀಕಂಠೇಶಗೌಡರು ೧೯೩೧ ರಿಂದಲೇ ಜಾನಪದ ಸಂಗ್ರಹ ಕಾರ್ಯವನ್ನು ಮಾಡಿರುವುದು ಕಂಡುಬರುತ್ತದೆ. ಬಂಡಿಹೊಳೆಯ ಅರ್ಚಕ ಬಿ.ರಂಗಸ್ವಾಮಿಯವರು ಒಂದು ಇಡೀ ಹಳ್ಳಿಯ ಜನಜೀವನದ ಚಿತ್ರಣವನ್ನೂ, ಕ.ರಾ.ಕೃ ಅವರು ೧೯೫೮ರಲ್ಲಿ ಜನಪದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯನ್ನೂ ಮಾಡಿದರೆ, ಎಚ್.ಎಲ್.ನಾಗೇಗೌಡರು, ರಾಮನಗರದಲ್ಲಿ ಜಾನಪದ ಲೋಕವನ್ನು ಸ್ಥಾಪಿಸಲು ಕಾರಣಕರ್ತರಾಗಿದ್ದಾರೆ. ಆನಂತರದಲ್ಲಿ ಈ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ವಿಮರ್ಶೆಯ ಕೆಲಸಗಳೂ ಆರಂಭಗೊಂಡವು. ಆ ಹಂತದಲ್ಲಿ ಈ ಜಿಲ್ಲೆಯ ಜೀ.ಶಂ.ಪ., ಎಂ.ಎ.ಜಯಚಂದ್ರ, ಹ.ಕ.ರಾಜೇಗೌಡ, ಮುಂತಾದವರು ಹಲವಾರು ಸಂಗ್ರಹಣೆ, ಸಂಶೋಧನೆ, ಪ್ರಕಟಣೆಯ ಕಾರ್ಯದಲ್ಲಿ ನಿರತರಾದುದಲ್ಲದೇ, ಇದನ್ನು ಒಂದು ಶೈಕ್ಷಣಿಕ ಹಾಗೂ ಸಂಶೋಧನಾ ವಿಷಯವಾಗಿ

ವಿ.ವಿ.ಗಳಲ್ಲಿ ಅಳವಡಿಸುವಲ್ಲಿ ಸಫಲರಾಗಿದ್ದಾರೆ. ಈ ಜಿಲ್ಲೆಯ ಕೆಲವರು ಈ ಬಗ್ಗೆ ಸಂಶೋಧನೆ ನಡೆಸಿ ಮಹಾಪ್ರಬಂಧಗಳನ್ನು ರಚಿಸಿ, ಪಿಎಚ್.ಡಿ ಪಡೆಯುವಷ್ಟರ ಮಟ್ಟಿಗೆ ಕ್ಷೇತ್ರ ಕಾರ್ಯ, ಅಧ್ಯಯನ ಮತ್ತು ಸಮೀಕ್ಷೆಗಳು ನಡೆದಿವೆ.

ಮಂಡ್ಯ ಜಿಲ್ಲೆಯನ್ನು ಜನಪದ ಸಾಹಿತ್ಯ ಹಾಗೂ ಕಲೆಗಳ 'ಗಣಿ' ಎಂದು ಕರೆಯಬಹುದು. ಕೋಮು ಸೌಹಾರ್ದತೆಯಿಂದಾಗಿ ವಿವಿಧ ಜನಾಂಗದ ಧಾರ್ಮಿಕ ಆಚರಣೆ ಜಾತ್ರೆ, ಉರುಸ್ ಇತ್ಯಾದಿಗಳು ನಿರಾತಂಕವಾಗಿ ನಡೆಯುತ್ತಿದ್ದು ಆ ವೇಳೆಯಲ್ಲಿ ಜಾನಪದ ಸಾಹಿತ್ಯ ಹಾಗೂ ಪ್ರದರ್ಶನ ಕಲೆಗಳ ಮಹಾಪೂರವೇ ಹರಿದು ಬರುತ್ತದೆ. ಟಿಪ್ಪುವಿನ ಕಾಲದಲ್ಲಿ ರಚಿತವಾದ ಹಲವಾರು ಲಾವಣಿಗಳು ಇಂದಿಗೂ ಜನಪ್ರಿಯವಾಗಿದೆ.

ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಈ ಜಿಲ್ಲೆಯಲ್ಲಿ ವಿಪುಲವಾದ ಸಾಹಿತ್ಯ ಸಂಗ್ರಹಣೆಯಾಗಿದೆ. ಜಿಲ್ಲೆಯಲ್ಲಿ ಹಲವಾರು ಗ್ರಾಮದೇವತೆಗಳಿದ್ದು, ಜನಪದರು ಈ ದೇವತೆಗಳಿಗೆ ನಡೆದುಕೊಳ್ಳುವ ರೀತಿ, ಆಚರಿಸುವ ಹಬ್ಬ, ದೇವತೆಗಳ ಕುರಿತಾದ ಕಥೆ–ಇತ್ಯಾದಿಗಳ ಬಗೆಗಿನ ಸಾಹಿತ್ಯವೂ ಇಲ್ಲಿ ದೊರೆಯುತ್ತದೆ. ಜಿಲ್ಲೆಯಲ್ಲಿರುವ ಆದಿಚುಂಚನಗಿರಿ, ಆಲತಿಗಿರಿಗಳನ್ನು ಜನಪದ ಸಾಹಿತ್ಯದ ಕೇಂದ್ರಗಳೆನ್ನಲಾಗಿದೆ (ಸಮ್ಮೇಳನಗಳು ನೋಡಿ). ಕೃಷ್ಣರಾಜಪೇಟೆ ತಾಲೂಕಿನ ಹೇಮಗಿರಿ ಬಳಿಯ ಬಂಡಿಹೊಳೆಯ ಅರ್ಚಕ ಬಿ.ರಂಗಸ್ವಾಮಿ ಭಟ್ಟರು (೧೯೦೦), ತಮ್ಮೂರಾದ ಬಂಡಿಹೊಳೆಯ ಜನಜೀವನ, ವಿವಿಧ ಪ್ರಕಾರಗಳ ಜನಪದ ಹಾಡು, ಕಥೆ, ಸಂಪ್ರದಾಯ ಮತ್ತು ಆಚರಣೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿ, 'ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು' ಎಂಬ ಕೃತಿಯಲ್ಲಿ (೧೯೩೩) ಸಮಗ್ರವಾಗಿ ಹೊರ ತಂದಿದ್ದಾರೆ. ಜಾನಪದ ಅಧ್ಯಯನವೆಂದರೆ ಕೇವಲ ಹಾಡು, ಕಥೆಗಳ ಸಂಗ್ರಹವಲ್ಲ, ಇಡೀ ಒಂದು ಜನಾಂಗದ ಅಥವಾ ಇಡೀ ಬದುಕಿನ ಅಧ್ಯಯನ ಎಂಬುದನ್ನು ತೋರಿಸಿಕೊಟ್ಟ ಈ ಕೃತಿ ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ ತಳಹದಿಯಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಪಡೆದ ೧೯೮೦ನೇ ಸಾಲಿನ ಮೊದಲ ಜನಪದ ಕಲಾವಿದರಲ್ಲಿ ಅರ್ಚಕ ರಂಗಸ್ವಾಮಿಭಟ್ಟರೂ ಒಬ್ಬರು. ಇವರ ನಂತರ ಬಿ.ಎನ್.ರಂಗಸ್ವಾಮಿಯವರು, ಮಂಡ್ಯ ಜಿಲ್ಲೆಯ ಸಾಹಿತ್ಯವನ್ನು ಕಲೆಹಾಕಿ, ೧೯೮೦ರಲ್ಲಿ 'ಹಳ್ಳಿ ಹಾಡುಗಳು' ಎಂಬ ಕೃತಿಯನ್ನು ಪ್ರಕಟಿಸಿದರು.

ನಾಗಮಂಗಲ ತಾಲೂಕಿನ ಹೆರಗನಹಳ್ಳಿಯಲ್ಲಿ ಜನಿಸಿದ (೧೯೧೬) ಎಚ್.ಎಲ್.ನಾಗೇಗೌಡರು ಜಾನಪದ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ. ನಾಡಿನಾದ್ಯಂತ ಸಂಚರಿಸಿ ಹಲವಾರು ರೀತಿಯ ಜನಪದ ಕಲೆ, ಹಬ್ಬ–ಹರಿದಿನ, ಜಾತ್ರೆ, ಪರಿಷೆ, ಮದುವೆ, ಮುಂಜಿ, ಮುಂತಾದವುಗಳ ಕುರಿತಾದ ಸಾಹಿತ್ಯವನ್ನಷ್ಟೇ ಅಲ್ಲದೆ ವಿಡಿಯೋ ಚಿತ್ರೀಕರಣ, ಆಡಿಯೋ ಧ್ವನಿ ಸಂಗ್ರಹವನ್ನು ಮಾಡಿ ಸಂಶೋಧಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವರು ಬೆಂಗಳೂರು ಹಾಗೂ ರಾಮನಗರಗಳಲ್ಲಿ ಸ್ಥಾಪಿಸಿರುವ (೧೯೭೯) ' ಕರ್ನಾಟಕ ಜಾನಪದ ಪರಿಷತ್ತು' ಒಂದು ವಿಶ್ವವಿದ್ಯಾಲಯಕ್ಕೆ ಸಮನಾಗಿ ಕೆಲಸ ಮಾಡುತ್ತಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೦ರಲ್ಲಿ ಸ್ಥಾಪನೆಯಾದ ಮೇಲೆ ಅದರ ಮೊದಲ ಅಧ್ಯಕ್ಷರಾಗಿ ನಾಗೇಗೌಡರು ನೇಮಕಗೊಂಡು, ೧೯೮೬ರವರೆಗೆ ಕಾರ್ಯನಿರ್ವಹಿಸಿದ್ದಾರೆ. ರಾಜ್ಯದಾದ್ಯಂತ ಜನಪದ ಕಲಾ ಮೇಳಗಳನ್ನು ನಡೆಸುವ ಮೂಲಕ ಜನಪದ ಕಲಾವಿದರನ್ನು ಗುರುತಿಸುವ, ಪ್ರಶಸ್ತಿಗಳ ಮೂಲಕ ಗೌರವಿಸುವ ಹಾಗೂ ಮಾಸಾಶನ ಕೊಡುವ ಕೆಲಸ ಮಾಡಿದ್ದಾರೆ. 'ಜಾನಪದ ಜಗತ್ತು', ದ್ವೈಮಾಸಿಕ ಪತ್ರಿಕೆ ನಡೆಸುತ್ತಿದ್ದಾರೆ. 'ಆರಂಭದೆತ್ತು ಐನೂರು', 'ಆನೆ ಬಂತೊಂದಾನೆ', 'ಕರ್ನಾಟಕದ ಜನಪದ ಕಥೆಗಳು' ಮುಂತಾದವು ಇವರ ಹಲವು ಪ್ರಮುಖ ಕೃತಿಗಳು. ಇವರ 'ನನ್ನೂರು' ಕೃತಿಗೆ ೧೯೬೫ ರಲ್ಲಿ; 'ವೆರಿಯರ್ ಎಲ್ವಿನ್‌ನ ಗಿರಿಜನ ಪ್ರಪಂಚ' ಕ್ಕೆ ೧೯೬೬ ರಲ್ಲಿ; 'ಸೋಬಾನೆ ಚಿಕ್ಕಮ್ಮನ ಪದಗಳು' ಕೃತಿಗೆ ೧೯೭೨ ರಲ್ಲಿ; 'ಪದವವೆ ನಮ್ಮ ಎದೆಯಲ್ಲಿ' ಕೃತಿಗೆ ೧೯೭೬ ರಲ್ಲಿ; ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು

ಬಂದಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೯ ರಲ್ಲಿ ಇವರಿಗೆ 'ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಿದೆ. ಪಂಡಿತ ಮ.ಮಲ್ಲಪ್ಪನವರು (೧೯೨೦) ಕೆಲವು ಜನಪದ ಕೃತಿಗಳನ್ನು ರಚಿಸಿದ್ದಾರೆ. ಮೊರೆ ಹೊಕ್ಕವರನ್ನು ಕಾಪಾಡುವ ನಿಯಮಕ್ಕೆ ಬದ್ಧರಾಗಿ ಶೂಲವೇರಿದ ಜನರಿಂದ ಪೂಜಿಸಲ್ಪಡುವ ಗುಂಡ ಬ್ರಹ್ಮಯ್ಯರೆಂಬ ಶಿವಭಕ್ತರು, ಮಂಡ್ಯ ಜಿಲ್ಲೆಯಲ್ಲಿರುವ ವೃಷಭಾದ್ರಿ ಪ್ರಾಂತದವರೇ ಆಗಿರುವವರೆಂದೂ, ಇಲ್ಲಿಯ ಬಸವನಬೆಟ್ಟದ ಓರುಗಲ್ಲೇ ಈ ಗುಂಡ ಬ್ರಹ್ಮಯ್ಯನ ಓರಂಗಲ್ಲು ಆಗಿರುವುದು ಸತ್ಯ ಇರಬಹುದೆಂದೂ, ತಾವು ಸಂಗ್ರಹಿಸಿದ 'ಓರಗಲ್ಲು ಸೂರೆ' ಎಂಬ ಜನಪದ ಕಥನ ಗೀತೆಯನ್ನಾಧರಿಸಿ ಇವರು ಹೇಳಿದ್ದಾರೆ.

ನಾಗಮಂಗಲ ತಾಲೂಕಿನ ಅಂಬಲಜೀರಹಳ್ಳಿಯವರಾದ ಜೀ.ಶಂ.ಪರಮಶಿವಯ್ಯನವರು ಜಾನಪದ ಕ್ಷೇತ್ರದಲ್ಲಿ ಮಾಡಿದ ಸಾಧನೆ ಮಹತ್ವದ್ದಾಗಿದೆ. ಜಾನಪದಕ್ಕೆ ಹೆಚ್ಚಿನ ಸ್ಥಾನಮಾನವಿಲ್ಲದ ಕಾಲದಲ್ಲಿ, ಜೀ.ಶಂ.ಪ ರವರು ಈ ಕ್ಷೇತ್ರಕ್ಕಿಳಿದು ಹಲವು ಪ್ರಕಾರಗಳನ್ನು ಸಂಶೋಧಿಸಿ, ಸಂಗ್ರಹಿಸಿ, ಪ್ರಕಟಿಸಿದ್ದಾರೆ. ಭಿಕ್ಷುಕರೆಂದು ಪರಿಗಣಿಸಲ್ಪಟ್ಟಿದ್ದ ಅಲೆಮಾರಿ ಹಾಡುಗಾರರನ್ನೂ ಅವರ ಪರಂಪರೆ ಮತ್ತು ಸಂಪ್ರದಾಯಗಳನ್ನೂ ಗುರುತಿಸಿ ಅವರಿಗೆ ವೃತ್ತಿ ಗಾಯಕರೆಂದು, ಸ್ಥಾನ-ಮಾನ ದೊರಕಿಸಿ ಕೊಟ್ಟಿದ್ದಾರೆ. 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು', ಈ ದಿಸೆಯಲ್ಲಿ ಹೊರ ಬಂದಿರುವ ಇವರ ಒಂದು ಮಹತ್ತರ ಗ್ರಂಥ. ಮೈಸೂರು ವಿಶ್ವವಿದ್ಯಾಲಯದಲ್ಲಿ ಮಾತ್ರವಲ್ಲದೆ ಭಾರತದ ಇನ್ನಿತರ ಕೆಲವು ವಿಶ್ವ ವಿದ್ಯಾಲಯಗಳಲ್ಲಿಯೂ 'ಜಾನಪದ'ವನ್ನು ಒಂದು ಅಧ್ಯಯನ ವಿಷಯವಾಗಿ ಅಳವಡಿಸಲು ಇವರು ಶ್ರಮಿಸಿದ್ದಾರೆ. ಜಾನಪದ ವಸ್ತು ಸಂಗ್ರಹಾಲಯದ ನಿರ್ಮಾಣದಲ್ಲಿ ಇವರದು ಗಣನೀಯ ಪಾತ್ರ. ಮೈಸೂರು ವಿಶ್ವ ವಿದ್ಯಾಲಯದಲ್ಲಿ ಮೊಟ್ಟ ಮೊದಲ ಜಾನಪದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿರುವ ಜೀ.ಶಂ.ಪ ರವರು 'ಮೂಡಲ ಪಾಯ ಯಕ್ಷಗಾನ ಕೇಂದ್ರ'ದ ಸ್ಥಾಪನೆಗೆ ಕಾರಣಕರ್ತರಾಗಿದ್ದಾರೆ. ಜಾನಪದ ಸಾಹಿತ್ಯ ಸಮೀಕ್ಷೆ, ಜಾನಪದ ಸಂಗಮ, ಹೆಂಗಸರ ಜನಪದ ಗೀತೆಗಳು, ಕಿನ್ನರಿ ಜೋಗಿಗಳು, ಮುಂತಾಗಿ ಅರವತ್ತಕ್ಕೂ ಹೆಚ್ಚು ಜಾನಪದ ಕೃತಿಗಳನ್ನು ಹೊರ ತಂದಿದ್ದಾರೆ. ಇವರು ೧೯೮೦ ರಿಂದ ೧೯೮೯ರವರೆಗೆ ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿಯೂ, ೧೯೮೯ ರಿಂದ ೧೯೯೨ರವರೆಗೆ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಫಿನ್‌ಲ್ಯಾಂಡಿನ ಜಗತ್ಪ್ರಸಿದ್ಧ 'ಫೋಕ್‌ಲೋರ್ ಫೆಲೊ' ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿವೆ. ಇವರ 'ಕನ್ನಡ ಜನಪದ ಕಥೆಗಳು' ಕೃತಿಗೆ ೧೯೬೯-೭೦ ರಲ್ಲಿ ಹಾಗೂ 'ನಾಲ್ಕು ಜನಪದ ಮೇಳಗಳು' ಕೃತಿಗೆ ೧೯೭೪ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಬಹುಮಾನಗಳು ಸಂದಿವೆ.

ಜಿಲ್ಲೆಯಲ್ಲಿ, ತಮ್ಮದೇ ಆದ ಒಂದು ಜನಪದ ಸಾಹಿತ್ಯ ಅಕಾಡೆಮಿಯನ್ನು ೧೯೫೮ರಲ್ಲಿ ಸ್ಥಾಪಿಸಿ, ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗ್ರಹ, ಪ್ರಕಟಣೆ ಮುಂತಾದ ಕಾರ್ಯಗಳನ್ನು ಆರಂಭಿಸಿದವರು, ನಾಗಮಂಗಲ ತಾಲೂಕಿನ ಕಂಬದಹಳ್ಳಿಯವರಾದ ಕ.ರಾ.ಕೃಷ್ಣಸ್ವಾಮಿಯವರು (೧೯೪೦). ಮೈಸೂರಿಗೆ ವ್ಯಾಸಂಗಕ್ಕೆಂದು ಹೋದಾಗ, ಅಲ್ಲಿ 'ಕಾವ್ಯೋದಯ ಮಾಲೆ' ಎಂಬ ಪ್ರಕಾಶನ ಪ್ರಾರಂಭಿಸಿ, 'ಜೀವನಗೀತ' ಎಂಬ ಜನಪದ ಪ್ರೇಮ ಗೀತೆಗಳ ಸಂಕಲನವನ್ನೂ, ಆನಂತರ, ತಮ್ಮ ಹದಿನಾರನೆಯ ವಯಸ್ಸಿಯಲ್ಲಿ, 'ಜೇನುಹನಿಗಳು' ಎಂಬ ಜನಪದ ಪ್ರೇಮ ಗೀತೆಗಳ ಸಂಕಲನವನ್ನೂ ಸಂಗ್ರಹಿಸಿ ಹೊರತಂದರು. ೧೯೫೬-೫೭ರಲ್ಲಿ ಹಲವಾರು ಊರುಗಳಲ್ಲಿ ಕ್ಷೇತ್ರ ಕಾರ್ಯ ನಡೆಸಿ ಸಾವಿರಾರು ಪುಟಗಳ ಜನಪದ ಸಾಹಿತ್ಯವನ್ನು ಅನೇಕ ಧ್ವನಿಸುರಳಿಗಳನ್ನು ಸಂಗ್ರಹಿಸಿದ್ದಾರೆ. 'ಕಾವ್ಯೋದಯ ಮಾಲೆ' ಯನ್ನು ಜನಪದ ಸಾಹಿತ್ಯ ಅಕಾಡೆಮಿಯಾಗಿ ೧೯೫೮ ರಲ್ಲಿ ಪರಿವರ್ತಿಸಿ, ಮೂವತ್ತೈದಕ್ಕೂ ಹೆಚ್ಚು ಜನಪದ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಜನಪದ ಪ್ರೇಮ ಗೀತೆಗಳು (ದಿನ ನಿತ್ಯದ ಹಾಡುಗಳು), ಮಲ್ಲಿಗೆ ನಗುತಾವೆ, (ಭಕ್ತಿ-ಪ್ರೇಮ ಮತ್ತು ಕೋಲಾಟದ ಪದಗಳು), ಸಂಪಿಗೆ ಅರಳಾವೆ, ಹಾಡಿನಲ್ಲಿ ನಾಡ ಕಥೆಗಳು, ಆಯ್ದ ಮುತ್ತುಗಳು

(ತ್ರಿಪದಿಗಳ ಸಂಕಲನ), ಅಂಬಿಗರ ಗಂಗ, ಚೆನ್ನಿಗ ಚೆಲುವಯ್ಯ, ಗಿರಿಕಾಣೆ ಗಿರಿ ಮೂಡಲಗಿರಿ, ಗುಡ್ಡಾಡಿನ ಹಾಡ್ಗತೆಗಳು, ನಾಡ ಹಾಡುಗಳು, ಮುಂತಾದ ಹಲವಾರು ಕೃತಿಗಳನ್ನು ಹೊರ ತಂದಿದ್ದಾರೆ. ಈ ಸಂಕಲನಗಳಿಗೆ, ಖ್ಯಾತ ಕಲಾವಿದರಿಂದ ನೂರಾರು ಚಿತ್ರಗಳನ್ನು ಬರೆಸಲಾಗಿದೆ. ೧೯೮೨ರಲ್ಲಿ ಇವರಿಗೆ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿ ಜಾನಪದ ತಜ್ಞ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೯೮ರ ರಾಜ್ಯೋತ್ಸವ ಪ್ರಶಸ್ತಿಯೂ ಇವರಿಗೆ ದೊರೆತಿದೆ.

ದೇಶಹಳ್ಳಿ ಜಿ.ನಾರಾಯಣರವರು (೧೯೨೩) ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ಹಲವಾರು ನಿಟ್ಟಿನಲ್ಲಿ ಕಾರ್ಯನಿರ್ವಹಿಸಿರುವುದರೊಂದಿಗೆ, ಜಾನಪದ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಇವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು. ರಾಜ್ಯಮಟ್ಟದ ಜಾನಪದ ಕಲಾ ಮಹೋತ್ಸವಗಳನ್ನು ನಡೆಸಿ, ಕರ್ನಾಟಕ ಜನಪದ ಕಲೆಗಳ ಸಾಕ್ಷ್ಯ ಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಇವರಿಗೆ, ೧೯೯೪ರಲ್ಲಿ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯಿಂದ ಜಾನಪದ ತಜ್ಞ ಪ್ರಶಸ್ತಿ ದೊರೆತಿದೆ. ಹ.ಕ.ರಾಜೇಗೌಡರು, (೧೯೩೮) ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು ಎಂಬ ಕೃತಿಯನ್ನೂ, ಒಂದೇ ಕೃತಿಯಲ್ಲಿ ಕರಿರಾಯ ಚರಿತ್ರೆ, ನಳ ಚರಿತ್ರೆ ಮತ್ತು ಶನಿ ಮಹಾತ್ಮೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಕರ್ನಾಟಕ ವ್ಯವಸಾಯ ಪದ್ಧತಿ, ಒಕ್ಕಲಿಗ ಜನಾಂಗದ ಸಂಪ್ರದಾಯ, ಇತಿಹಾಸ ಜಾನಪದ, ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಬಂಧಗಳನ್ನು ಬರೆದಿದ್ದಾರೆ. ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯ 'ಜಾನಪದ ಗಂಗೋತ್ರಿ' ತ್ರೈಮಾಸಿಕ ಪತ್ರಿಕೆಯ ಎಂಟು ಸಂಚಿಕೆಗಳಿಗೆ ಸಂಪಾದಕರಾಗಿದ್ದಾರೆ. ವ.ನಂ.ಶಿವರಾಮುರವರ ಜೊತೆ 'ಶ್ರೀಕಂಠೇಶಗೌಡರ ಜಾನಪದ ಕೊಡುಗೆ' ಎಂಬ ಕೃತಿ ರಚಿಸುವ ಮೂಲಕ ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್ ನಾಟಕಗಳ ಆರಂಭದ ಅನುವಾದಕರೆಂಬುದನ್ನು, ಕನ್ನಡ ಜಾನಪದದ ಮೊದಲ ಸಂಗ್ರಹಕರೆಂಬ ಅಂಶವನ್ನೂ ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. ಹ.ಕ.ರಾಜೇಗೌಡರು, ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಜಾನಪದವನ್ನು ಒಂದು ಶೈಕ್ಷಣಿಕ ವಿಷಯವಾಗಿ ಆರಂಭಿಸಲು ಪ್ರಸ್ತಾವನೆ ಸಲ್ಲಿಸಿ, ೧೯೯೫ ರಿಂದ ಈ ವಿಷಯವನ್ನು ಬಿ.ಎ.ತರಗತಿಗೆ ಅಳವಡಿಸಲು ಕಾರಣರಾಗಿದ್ದಾರೆ. ಮಾನಸ ಗಂಗೋತ್ರಿಯನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯದಲ್ಲಿ ಜಾನಪದವನ್ನು (ಫೋಕ್‌ಲೋರ್) ಶೈಕ್ಷಣಿಕ ವಿಷಯವಾಗಿ ಅಳವಡಿಸಿರುವ ಎರಡನೆಯ ಸಂಸ್ಥೆ ಇದು. ಇವರು ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಗೆ ಎರಡು ಅವಧಿಗಳಿಗೆ ಸದಸ್ಯರಾಗಿದ್ದರು. ಕಲ್ಕತ್ತದ ರವೀಂದ್ರ ವಿಶ್ವವಿದ್ಯಾಲಯದಲ್ಲಿ ೧೯೮೪ರಲ್ಲಿ ನಡೆದ ಭಾರತೀಯ ಜಾನಪದ ಕಾಂಗ್ರೆಸ್ ಹಾಗೂ ಅದೇ ವರ್ಷ ದೆಹಲಿಯಲ್ಲಿ ನಡೆದ ವಿಶ್ವ ಭಾಷಾಂತರ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ.

ಶ್ರೀರಂಗಪಟ್ಟಣ ತಾಲೂಕಿನ ಪೀಹಳ್ಳಿಯ ಡಿ.ಲಿಂಗಯ್ಯನವರು (೧೯೩೯), ಪೀಹಳ್ಳಿಯ ಕೆಳಗಲಹಟ್ಟಿ ಸಿದ್ದಮ್ಮನ ಹಾಡುಗಳ ಮೂಲಕ ಜನಪದ ಸಾಹಿತ್ಯದ ಅಧ್ಯಯನ ಆರಂಭಿಸಿದರು. ಕೊಂತಿಪೂಜೆಗೆ ಹೆಸರಾದ ಪೀಹಳ್ಳಿಯಿಂದ ಕೊಂತಿಪೂಜೆಗೆ ಸಂಬಂಧಿಸಿದ ಹಾಡುಗಳನ್ನು ೧೯೬೪ರಲ್ಲಿ ಸಂಗ್ರಹಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ವೈಜ್ಞಾನಿಕ ಅಧ್ಯಯನ ಮತ್ತು ತಳಹದಿಯ ಮೇಲೆ, ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂಶೋಧನೆ ಮಾಡಿದ್ದಾರೆ. ಮಣ್ಣಿನ ಮಿಡಿತ, ಕರ್ನಾಟಕ ಜನಪದ ಕಾವ್ಯಗಳು, ಬೋರೇದೇವರು, ಜನಪದ ಕಥಾ ಸಂಗಮ, ಗ್ರಾಮದೇವತೆ ಮೊದಲಾದ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಬಯಲು ಸೀಮೆಯ ಜನಪದ ಗೀತೆಗಳು' ಕೃತಿಗೆ ೧೯೭೩ ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ಇವರ 'ಕರ್ನಾಟಕ ಜನಪದ ಕಾವ್ಯಗಳು' ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ದೊರೆತಿದೆ. ಇವರಿಗೆ ಕ್ಷೇತ್ರ ಕಾರ್ಯಕ್ಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೫ರಲ್ಲಿ ಗೌರವ ಪ್ರಶಸ್ತಿ ದೊರೆತಿದೆ. ಮದ್ದೂರು ತಾಲೂಕಿನ ಈರೇಗೌಡನ ದೊಡ್ಡಿಯ ರಾಗೌರವರು (೧೯೪೨) ಜಾನಪದ ಕ್ಷೇತ್ರದಲ್ಲಿ ಪ್ರಮುಖ ವಿದ್ವಾಂಸರೆನಿಸಿದ್ದಾರೆ. ನಮ್ಮ ಗಾದೆಗಳು,

ನಮ್ಮ ಒಗಟುಗಳು, ಜನಪದ ಸಂಶೋಧನೆ, ಜನಪದ ರಾಮಾಯಣ, ಕರ್ನಾಟಕ ಜನಪದ ಕಥೆಗಳು, ಜನಪದ ಸಾಹಿತ್ಯ ರೂಪಗಳು ಮುಂತಾಗಿ ಹಲವಾರು ಜಾನಪದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ 'ನಮ್ಮ ಒಗಟುಗಳು' ಸಂಕಲನ ಗ್ರಂಥಕ್ಕೆ ೧೯೬೯–೭೦ ರಲ್ಲಿ ಹಾಗೂ 'ಜಾನಪದ ಸಂಕೀರ್ಣ' ವಿಮರ್ಶಾ ಕೃತಿಗೆ ೧೯೭೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳು ದೊರೆತಿವೆ. ಇವರಿಗೆ, ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯು ೧೯೯೫ರ 'ಜಾನಪದ ತಜ್ಞ' ಪ್ರಶಸ್ತಿಯನ್ನು ನೀಡಿದೆ. ಮಂಡ್ಯದವರಾದ ಎಂ.ಎ.ಜಯಚಂದ್ರ (೧೯೪೪) ರವರು, ಜೈನ ಧರ್ಮೀಯ ಜಾನಪದ ನೆಲೆಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ವೈಜ್ಞಾನಿಕ ಅಧ್ಯಯನದ ಮೂಲಕ ಸಾಹಿತ್ಯ ಮತ್ತು ಜೀವನವನ್ನು ಸಮೀಕ್ಷಿಸಿದ್ದಾರೆ. ಇವರು ಎರಡು ಸಂಪುಟಗಳಲ್ಲಿ ಸಂಪಾದಿಸಿದ ಜನಪದ ಕಥಾ ಸಂಕಲನಗಳು (೧೯೬೭–೬೮), ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ತರಗತಿಗಳು ಆರಂಭಗೊಂಡಾಗ, ಮೊದಲ ಪಠ್ಯಪುಸ್ತಕಗಳಾಗಿ ಆಯ್ಕೆಗೊಂಡಿದ್ದವು. ಇವರು 'ಫೋಕ್‌ಲೋರ್ – ಫೋಕ್‌ಲೋರ್' (೧೯೭೭) ಕೃತಿಯ ಮೂಲಕ ವಿದ್ವತ್ ವರ್ಗದಲ್ಲಿ ಹೊಸ ಜಿಜ್ಞಾಸೆ ಹುಟ್ಟಿಸಿದರು. ಇವರ ೧೧೫ 'ಜಾನಪದ ಕಿರುಕತೆಗಳು' ಎಂಬ ಜಾನಪದ ಸಾಹಿತ್ಯ ಗ್ರಂಥಕ್ಕೆ, ೧೯೮೧ ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ.

ಜಿ.ವಿ.ದಾಸೇಗೌಡರು (೧೯೪೪), ಜಿ.ವಿ.ಡಿ.ಅಂಕಿತದಲ್ಲಿ ಸಾಹಿತ್ಯದ ಇತರ ಪ್ರಕಾರಗಳೊಂದಿಗೆ, ಜಾನಪದ ಸಾಹಿತ್ಯದ ಸಂಗ್ರಹಣೆ ಮತ್ತು ಪ್ರಕಟಣೆಗಳ ಕಾರ್ಯವನ್ನು ಮಾಡಿದ್ದಾರೆ. ಜನಪದ ನಂಬಿಕೆಗಳನ್ನು 'ನಮ್ಮ ಜನಪದ ನಂಬಿಕೆಗಳು' (೧೯೭೩) ಕೃತಿಯಲ್ಲಿ, ಸಾಂಪ್ರಾದಾಯಿಕ ಐತಿಹ್ಯಗಳನ್ನು 'ಕನ್ನಡ ಐತಿಹ್ಯಗಳು' (೧೯೭೮) ಕೃತಿಯಲ್ಲಿ ಜನಪದದ ನಂಬಿಕೆ ಮತ್ತು ಕಲ್ಪನೆಗಳನ್ನು, 'ಜನಪದ ಕಲ್ಪನೆ ಮತ್ತು ಇತರ ಲೇಖನಗಳು' (೧೯೮೨) ಕೃತಿಯಲ್ಲಿ, ನಾಡಿನ ಒಗಟುಗಳನ್ನು 'ನಾನು ಯಾರು' (೧೯೮೨) ಕೃತಿಯಲ್ಲಿ, ಈಡಿಗರು ಮತ್ತು ಕುರುಬ ಸಂಸ್ಕೃತಿಯ ಅಧ್ಯಯನ ಮಾಡಿ, ಅವರ ವಿವಾಹ ಪದ್ದತಿಗಳನ್ನು 'ಈಡಿಗರ ವಿವಾಹ ಪದ್ಧತಿ' (೧೯೮೩) ಮತ್ತು ಜಾನಪದ ಚಿಂತನ (೧೯೮೪) ಎಂಬ ಕೃತಿಗಳಲ್ಲಿ ಹಾಗೂ ಸುಮಾರು ೬೦೦ ಕ್ಕೂ ಹೆಚ್ಚು ವಿಶಿಷ್ಟ ಗಾದೆಗಳನ್ನು 'ಕನ್ನಡ ಗಾದೆಗಳು' (೧೯೯೧) ಕೃತಿಯಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾವಾಗಿ ಹರಿದ ಅಣ್ಣಯ್ಯ(೧೯೭೦), ಜನಪದ ವಿವರಣಾತ್ಮಕ ಕಥೆಗಳು (೧೯೭೨), ಮುಂತಾದ ಸಂಗ್ರಹಗಳೇ ಅಲ್ಲದೆ ಇನ್ನಿತರ ಹಲವಾರು ಸಂಗ್ರಹಿತ ಕೃತಿಗಳನ್ನೂ ಹೊರತಂದಿದ್ದಾರೆ. ಇವರ 'ನಾನು ಯಾರು' ಎಂಬ ಕೃತಿಗೆ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯ ಬಹುಮಾನ ದೊರೆತಿದೆ.

'ಐದು ಜನಪದ ಕಥನ ಗೀತೆಗಳು', ಸಂಕಲನದ ಮೂಲಕ ೧೯೭೦ರ ಸುಮಾರಿನಲ್ಲಿ ಜಾನಪದ ಕ್ಷೇತ್ರಕ್ಕೆ ಪ್ರವೇಶಿಸಿದ ಕ್ಯಾತನಹಳ್ಳಿ ರಾಮಣ್ಣನವರು (೧೯೪೨), ರಾಜ್ಯದ ವಿವಿಧ ವಲಯಗಳಿಂದ ಜಾನಪದ ಸಾಮಗ್ರಿಗಳನ್ನು ಸಂಗ್ರಹಿಸಿ, ಜನಪದ ನಿಘಂಟು, ಗೊಂದಲಿಗರ ಕಥೆಗಳು, ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು, ಬೀದರ್ ಜಿಲ್ಲೆಯ ಜನಪದ ಕಥೆಗಳು, ನಂಜುಂಡೇಶ್ವರ ಕಾವ್ಯ, ದೊಡ್ಡಾಟ, ಕೊಂತಿಪೂಜೆ, ಎರಡು ಸಂಪುಟಗಳ 'ಜಾನಪದ ವಿಹಾರ' ಮುಂತಾದ ಕೃತಿಗಳನ್ನು ಹೊರ ತಂದಿದ್ದಾರೆ. ಐದು ಜನಪದ ಕಥನ ಗೀತೆಗಳು ಮತ್ತು ನಂಜುಂಡೇಶ್ವರ ಕಾವ್ಯಗಳನ್ನು ಕ್ಯಾತನಹಳ್ಳಿಯ ಸುಬ್ಬಕ್ಕನವರಿಂದ ಹಾಡಿಸಲಾಗಿದೆ. ಜಾನ್ ಫ್ಲೀಟರು ಇಂಡಿಯನ್ ಆಂಟಿಕ್ವೇರಿ ಸಂಪುಟದಲ್ಲಿ ಸಂಗ್ರಹಿಸಿ ಪ್ರಕಟಿಸಿರುವ ಕೃತಿಗಳಲ್ಲಿ ಎರಡನ್ನು ಇವರು ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ಜನಪದ ಪ್ರಕಾರ ಮಾತ್ರವಲ್ಲದೆ ರಾಮಣ್ಣನವರು ಇತರ ಪ್ರಕಾರಗಳಲ್ಲೂ ಕೃತಿ ರಚಿಸಿದ್ದಾರೆ. ಇವರ 'ಹಲಗಲಿಯ ಬೇಡರು' ನಾಟಕಕ್ಕೆ ೧೯೮೮ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿದೆ. ಇವರಿಗೆ ೧೯೯೮ರಲ್ಲಿ ಕರ್ನಾಟಕ ರಾಜ್ಯ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿ ಲಭಿಸಿದೆ. ಇವರ 'ಗೊಂದಲಿಗರು– ಒಂದು ಅಧ್ಯಯನ'ಕ್ಕೆ;

'ಜನಪದ ನಿಘಂಟು' ಕೃತಿಗೆ; ಹಾಗೂ 'ಕ್ಷೇತ್ರ ಕಾರ್ಯದ ಹಾದಿಯಲ್ಲಿ' ಕೃತಿಗೆ ವಿವಿಧ ವರ್ಷಗಳಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನಗಳು ದೊರೆತಿವೆ. ಅದರಲ್ಲೂ ಕೊನೆಯ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ೧೯೭೭೮ ಸಾಲಿನಲ್ಲಿ ಒಂದು ದತ್ತಿ ನಿಧಿ ಬಹುಮಾನವೂ ಲಭಿಸಿದೆ. ಮದ್ದೂರಿನಲ್ಲಿ ಉಪನ್ಯಾಸಕರಾಗಿರುವ ವಿ.ಎನ್.ಶಿವರಾಮುರವರು ಬುಡವೊಂದು ಕವಲೆಂಟು, ದಕ್ಷಿಣ ಕರ್ನಾಟಕದ ಒಡಪುಗಳು, ಆರಂಭದ ಹೆಜ್ಜೆ ಕಥಾ ಸಂಕಲನ, ಇತ್ಯಾದಿಗಳನ್ನು ಜನಪದರ ಭಾಷೆಯಲ್ಲಿ ಬರೆದಿದ್ದಾರೆ. ಜಾನಪದ ವಸ್ತು ಸಂಗ್ರಹಾಲಯಗಳನ್ನು ಕುರಿತು ವಿಶೇಷ ಅಧ್ಯಯನ ಮಾಡಿದ್ದಾರೆ. 'ಜಾನಪದ ಜಗತ್ತು' ಸಂಚಿಕೆಗೆ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ನಗುವನಹಳ್ಳಿ ರತ್ನ (೧೯೫೪–೧೯೯೯) ರವರು, 'ನಮ್ಮ ಹಳ್ಳಿಯ ಜನಪದ ಕಲೆಗಳು', ಜನಪದ ವಿವೇಚನೆ, ಜಾನಪದ ಸೋಪಾನ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ನರಸಿಂಹೇಗೌಡ ನಾರಣಾಪುರರವರು, ಪಿ.ಕೆ.ರಾಜಶೇಖರರವರೊಂದಿಗೆ 'ಭೂಮಿ ತೂಕದ ಮಾತು' ಎಂಬ ಗಾದೆಗಳ ಸಂಗ್ರಹವನ್ನು ಮತ್ತು ಸ್ವತಃ ಸಂಗ್ರಹಿಸಿದ 'ಮೇಲುಕೋಟೆ ಸುತ್ತಿನ ಜನಪದ ಕಥೆಗಳು' ಎಂಬ ಕೃತಿಯನ್ನು ಹೊರ ತಂದಿದ್ದಾರೆ. ಜಿಲ್ಲೆಯ ಆಲತಗಿರಿ ಮತ್ತು ಆದಿಚುಂಚುನಗಿರಿಗಳನ್ನು ಜನಪದ ಸಾಹಿತ್ಯದ ಮೂಲ ಕೇಂದ್ರಗಳೆನ್ನಲಾಗಿದೆ. ಶ್ರೀ ಆದಿಚುಂಚನಗಿರಿ ಕ್ಷೇತ್ರದಿಂದ ಜನಪದಕ್ಕೆ ಸಂಬಂಧಿಸಿದಂತೆ ಅಪಾರ ಸಾಹಿತ್ಯವನ್ನು ಸಂಗ್ರಹಿಸಲಾಗಿದ್ದು ೧೯೭೭ ರಿಂದೀಚೆಗೆ ಪ್ರತೀ ವರ್ಷವೂ ಮೂರು ದಿವಸಗಳ ಕಾಲ ೩೦೦೦ ಕ್ಕೂ ಹೆಚ್ಚು ಕಲಾವಿದರನ್ನು ಒಂದೆಡೆ ಸೇರಿಸಿ ಜಾನಪದ ಮೇಳವನ್ನು ನಡೆಸಲಾಗುತ್ತಿದೆ. ಈ ಕ್ಷೇತ್ರದ ಮಠ, ಕಲ್ಯಾಣಿ, ಗವಿಸಿದ್ಧ, ಕತ್ತಲ ಸೋಮೇಶ, ಬಾಗಿಲು ಭೈರವ, ಮಾಳವ್ವ, ಕಂಬದಮ್ಮ, ತೇರು ಇತ್ಯಾದಿಗಳ ಬಗ್ಗೆ ಹಾಡುಗಳಿದ್ದು, ಅವುಗಳ ಸಂಗ್ರಹ ಕಾರ್ಯ ನಡೆದಿದೆ. ಆದಿಚುಂಚನಗಿರಿಯ ಚಂದ್ರಶೇಖರನಾಥ ಸ್ವಾಮಿಯವರು, ತ.ಚಿ.ಚೆಲುವೇಗೌಡ, ಸುಶೀಲ ಹೊನ್ನೇಗೌಡ, ನ.ಭದ್ರಯ್ಯ, ಬಿ.ನಿಂಗಮ್ಮ, ಕೆ.ಟಿ.ವೀರಪ್ಪ, ರಾಮದೇವನ ಹಳ್ಳಿ ರಾಮಯ್ಯ, ಕಾಶಿ ಪುಟ್ಟ ಸೋಮಾರಾಧ್ಯ, ಕೆ.ನಾರಾಯಣ, ಬೋರೇಗೌಡ ಚಿಕ್ಕಮರಳಿ, ಸದಾಶಿವ ಎಣ್ಣೆಹೊಳೆ, ಜಿ.ಎ.ಸುಬ್ಬಲಕ್ಷ್ಮಿ, ಜಯಲಕ್ಷ್ಮಿ ಸೀತಾಪುರ, ತೈಲೂರು ವೆಂಕಟಕೃಷ್ಣ, ಬಿ.ಟಿ.ಶ್ರೀನಿವಾಸಗೌಡ, ಎಚ್.ಎಲ್.ಕೇಶವಮೂರ್ತಿ, ಡಿ.ಕೃಷ್ಣಪ್ಪಗೌಡ, ಮುಂತಾದವರೂ ಜಾನಪದದ ಬಗ್ಗೆ ಆಸಕ್ತಿ ವಹಿಸಿ ಸಂಗ್ರಹ ಕಾರ್ಯ ನಡೆಸಿದ್ದಾರೆ.

ಜಿಲ್ಲೆಯಲ್ಲಿ ಮಾರಮ್ಮ, ಪಟ್ಟಲದಮ್ಮ, ಕಾಳಮ್ಮ, ಕರಿಯಮ್ಮ, ಚಿಕ್ಕಮ್ಮ, ಚೌಡಮ್ಮ, ಮಾಸ್ತಮ್ಮ, ಮಸಣಿಕಮ್ಮ, ಹುಲಿಕೆರೆಯಮ್ಮ, ಹೊಂಬಾಳಮ್ಮ, ಹಟ್ಟಿಲಕ್ಕಮ್ಮ, ಕಬ್ಬಾಳಮ್ಮ ಮುಂತಾಗಿ ಹಲವಾರು ಗ್ರಾಮದೇವತೆಗಳು ಮತ್ತು ಆ ದೈವಗಳ ಹೆಸರಿನಲ್ಲಿ ಆಚರಿಸಲಾಗುವ ಹಬ್ಬಗಳ ಕುರಿತಾಗಿ ಹಾಗೂ ಇನ್ನಿತರ ದೇವತೆಗಳಾದ ಈರೋಬಿ, ಬಾಲನಾಗಮ್ಮ, ಬಳಗಾರ ಶೆಟ್ಟಿ, ವರನಂದಿ, ಈರೋಜಮ್ಮ ಮುಂತಾದವರ ಕುರಿತಾಗಿಯೂ, ಜನಪದ ಆಟಗಳು, ಮಾರೀ ಕುಣಿತ, ಪಟ ಕುಣಿತ, ಸೋಮನ ಕುಣಿತ, ಮುಂತಾದ ಜನಪದ ಕಲೆಗಳ ಕುರಿತಾಗಿಯೂ ವಿಪುಲ ಸಾಹಿತ್ಯವನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ.

ಜಿಲ್ಲೆಯಲ್ಲಿ ಕೆಲವು ಜನಪದ ಸಮ್ಮೇಳನಗಳು ನಡೆದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ನಾಗಮಂಗಲದಲ್ಲಿ ನಡೆದ ಸಮ್ಮೇಳನ, ನಂತರದಲ್ಲಿ ಮಂಡ್ಯ (೧೯೮೫); ಮದ್ದೂರು (೧೯೮೬); ಕೊಪ್ಪ (೧೯೯೨); ಹಾಗೂ ಕಾಳಮುದ್ದನ ದೊಡ್ಡಿ (೧೯೯೯) ಗಳನ್ನು ಹೆಸರಿಸಬಹುದು. ಆ ಸಂದರ್ಭಗಳಲ್ಲಿ 'ಚುಂಚನಗಿರಿ', 'ಬದಕು', 'ಜಾನಪದ ಮಂಡ್ಯ' ಹಾಗೂ 'ಹಗೇವು ತುಂಬಿವೆ ಹದಿನಾರು' ಮುಂತಾದ ಸ್ಮರಣ ಸಂಚಿಕೆಗಳನ್ನು ಹೊರತರಲಾಗಿದೆ. ಆದಿಚುಂಚನಗಿರಿಯಲ್ಲಿ ಪ್ರತೀವರ್ಷ ಸ್ವಾಮಿಜಿಗಳ ಪಟ್ಟಾಭಿಷೇಕ ವರ್ಧಂತಿ ಸಂದರ್ಭದಲ್ಲಿ ಜಾನಪದ ಕಲಾ ಪ್ರದರ್ಶನ ಜರುಗುತ್ತದೆ.

**ಜಿಲ್ಲಾ ಸಾಹಿತ್ಯ ಪರಿಷತ್ತು**

ಈ ಜಿಲ್ಲೆಯ ಅಭಿವೃದ್ಧಿಗೆ ಕಾರಣರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ೧೯೧೫ರಲ್ಲಿ, ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು (ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಎಂದಾಯಿತು) ಸ್ಥಾಪನೆಯಾಗಲು ಕಾರಣಕರ್ತರಾದರು. ಬಿ.ಎಂ.ಶ್ರೀಯವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಮೇಲೆ ಕರ್ಣಾಟಕ ಏಕೀಕರಣವನ್ನು ಗಮನದಲ್ಲಿಟ್ಟುಕೊಂಡು ೧೯೩೪ರ ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಆ ನಿಟ್ಟಿನಲ್ಲೇ ಮುನ್ನಡೆಸಿದರು.

ಈ ಜಿಲ್ಲೆಯ ಗಂಜಾಂನವರಾದ ಜಿ.ವೆಂಕಟಸುಬ್ಬಯ್ಯನವರು, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಮಯದಲ್ಲಿ (೧೯೬೪-೬೯) ಜಿಲ್ಲಾ ಪ್ರಾತಿನಿಧ್ಯ ನಿಯಮ ಅಂಗೀಕಾರಗೊಂಡಿತು. ಮದ್ದೂರು ತಾಲೂಕಿನ ದೇಶಹಳ್ಳಿ ಜಿ.ನಾರಾಯಣರವರು ಅಧ್ಯಕ್ಷರಾದಾಗ (೧೯೬೯-೭೮) ಈ ನಿಯಮವನ್ನು ಜಾರಿಗೆ ತಂದರು. ೧೯೭೦ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪರಿಷತ್ತಿನ ಜಿಲ್ಲಾ ಸಮಿತಿಗಳು ಸ್ಥಾಪಿಸಲ್ಪಟ್ಟವು. ಅ ಮೊದಲು ಜಿಲ್ಲಾ ಸಮಿತಿಯ ಅಧ್ಯಕ್ಷರನ್ನು ಜಿಲ್ಲಾ ಪ್ರತಿನಿಧಿಗಳೆಂದು ನೇಮಿಸಲಾಗುತ್ತಿತ್ತು. ಸಮೇತನಹಳ್ಳಿ ರಾಮರಾವ್, ಕೆ.ಟಿ.ಚಂದು, ಎಂ.ವಿ.ಧರಣೇಂದ್ರಯ್ಯ, ಎನ್.ಎಚ್.ರಾಜು, ಜಿ.ಟಿ.ವೀರಪ್ಪ, ತೈಲೂರು ವೆಂಕಟಕೃಷ್ಣ, ಡಿ.ಪಿ.ಸ್ವಾಮಿ ಹಾಗೂ ಬಿ.ಜಯಪ್ರಕಾಶಗೌಡ ಅವರು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಸಾಹಿತ್ಯ ಸಮ್ಮೇಳನಗಳು**

ಮಂಡ್ಯ ನಗರದಲ್ಲಿ ೧೯೭೪ರಲ್ಲಿ ಜರುಗಿದ ೪೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಜಯದೇವಿತಾಯಿ ಲಿಗಾಡೆಯವರು ಆಯ್ಕೆಗೊಂಡರು. ಮಂಡ್ಯ ನಗರದ ಚದುರಂಗರ ಅಧ್ಯಕ್ಷತೆಯಲ್ಲಿ ೧೯೯೪ ರಲ್ಲಿ ಜರುಗಿದ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ 'ಸಿರಿಯೊಡಲು' ಎಂಬ ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ.

ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಮೇತನಹಳ್ಳಿ ರಾಮರಾವ್ ಮತ್ತು ಮದ್ದೂರು ತಾಲೂಕು ಪ್ರತಿನಿಧಿ ಕೆ.ಟಿ.ಚಂದುರವರು ಸೇರಿ ಮದ್ದೂರಿನಲ್ಲಿ ೧೯೭೦ ರಲ್ಲಿ ತೀ.ತಾ.ಶರ್ಮರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿದ್ದಾರೆ. ಎರಡನೇ ಜಿಲ್ಲಾ ಸಾಹಿತ್ಯ ಸಮ್ಮೇಳನವು ಮಂಡ್ಯದ ರೈತ ಸಭಾಂಗಣದಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರ ಅಧ್ಯಕ್ಷತೆಯಲ್ಲೂ; ಮೂರನೇ ಸಮ್ಮೇಳನ ಮಂಡ್ಯದ ಕುವೆಂಪು ರಂಗ ಮಂದಿರದಲ್ಲಿ ಸಿ.ಪಿ.ಕೆ ಯವರ ಅಧ್ಯಕ್ಷತೆಯಲ್ಲೂ; ನಾಲ್ಕನೇ ಸಮ್ಮೇಳನ ಮದ್ದೂರಿನಲ್ಲಿ ೧೯೯೫ರಲ್ಲಿ ರಾಮೇಗೌಡರ ಅಧ್ಯಕ್ಷತೆಯಲ್ಲಿಯೂ; ಐದನೇ ಸಮ್ಮೇಳನ ಪಾಂಡವಪುರದಲ್ಲಿ ೧೯೯೭ರಲ್ಲಿ ಸುಜನಾರವರ ಅಧ್ಯಕ್ಷತೆಯಲ್ಲಿಯೂ; ಆರನೇ ಸಮ್ಮೇಳನ ಶ್ರೀರಂಗಪಟ್ಟಣದಲ್ಲಿ ೨೦೦೨ನೇ ಸಾಲಿನಲ್ಲಿ ಡಿ.ಲಿಂಗಯ್ಯನವರ ಅಧ್ಯಕ್ಷತೆಯಲ್ಲಿಯೂ ನಡೆದಿವೆ. ಈ ಸಮ್ಮೇಳನಗಳಲ್ಲಿ ಇಕ್ಷು ಗಂಗಾ, ಇಕ್ಷು ಸಂಚಯ, ಮೂರನೆಯದರಲ್ಲಿ 'ಸವಿ ಸಕ್ಕರೆ', 'ಪುಣ್ಯ ಕೋಟಿ', 'ಮುತ್ತಿನಕೆರೆ' ಹಾಗೂ 'ಪಶ್ಚಿಮವಾಹಿನಿ' ಎಂಬ ಸ್ಮರಣ ಸಂಚಿಕೆಗಳು ಕ್ರಮವಾಗಿ ಹೊರ ಬಂದಿವೆ. ಜಿ.ಟಿ.ವೀರಪ್ಪನವರು ಮಂಡ್ಯದಲ್ಲಿ ಅಧ್ಯಕ್ಷರಾಗಿದ್ದಾಗ ಕವಿ ಕುವೆಂಪು ಹೆಸರಿನಲ್ಲಿ ಸಾಹಿತ್ಯ ಭವನ ನಿರ್ಮಾಣಗೊಂಡಿತು. ಇವರ ಅವಧಿಯಲ್ಲಿ ೧೩ ಪುಸ್ತಕಗಳು ಪ್ರಕಟಗೊಂಡಿವೆ. ತೈಲೂರುವೆಂಕಟಕೃಷ್ಣ ರವರು 'ಸ್ಮಾರಕ ಉಳಿಸಿ, ಸಂಸ್ಕೃತಿ ಬೆಳೆಸಿ' ಕಾರ್ಯಕ್ರಮದಡಿ ಶ್ರೀರಂಗಪಟ್ಟಣದಲ್ಲಿ ಮಂಡ್ಯ ಜಿಲ್ಲಾ ವಸ್ತು ಸಂಗ್ರಹಾಲಯ ಮತ್ತು ಜಿಲ್ಲೆಯ ಹಲವು ಪ್ರಾಚೀನ ಕಲಾತ್ಮಕ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಗಳ ಕಡೆಗೂ ಗಮನ

ಪರಿಸಿದ್ದರು. ಡಿ.ಪಿ.ಸ್ವಾಮಿಯವರು ತಾಲೂಕು ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಲು ಪ್ರಾರಂಭಿಸಿ, 'ಆರಂಭದ ಹೆಜ್ಜೆ' ಕಥಾಸಂಕಲನ, ಎಂ.ಎಲ್.ಶ್ರೀಕಂಠೇಶಗೌಡರ ಪರಿಚಯ ಕೃತಿ, ಬತ್ತದಸಿರಿ ಪುಸ್ತಕಗಳನ್ನು ಪರಿಷತ್ತಿನ ಮೂಲಕ ಪ್ರಕಟಿಸಿದ್ದಾರೆ. ಜಿಲ್ಲಾ ಘಟಕದೊಂದಿಗೆ ೧೯೭೦ ರಿಂದ ತಾಲೂಕು ಘಟಕಗಳೂ ಕಾರ್ಯನಿರ್ವಹಿಸುತ್ತಿವೆ.

## ರಂಗಭೂಮಿ

ಚಿಕ್ಕದೇವರಾಯ ಒಡೆಯರ (೧೬೭೨-೧೭೦೪) ಆಸ್ಥಾನದಲ್ಲಿ ಕವಿಯಾಗಿದ್ದ ಸಿಂಗರಾರ್ಯರ 'ಮಿತ್ರವಿಂದಾ ಗೋವಿಂದ', ಎಂಬ ನಾಟಕವೇ ಕ್ರಿ.ಶ.೧೮೮೦ರವರೆಗೆ ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಮೊದಲ ಕನ್ನಡ ನಾಟಕವೆಂದು ತಿಳಿದುಬರುತ್ತದೆ. ಮದ್ದೂರು ತಾಲೂಕಿನ ದೇಶಹಳ್ಳಿಯವರಾದ ಎಂ.ಎಲ್.ಶ್ರೀಕಂಠೇಶಗೌಡರು, ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ಅನ್ನು ೧೮೬೫ರಲ್ಲಿ 'ಪ್ರತಾಪ ರುದ್ರದೇವ', ಎಂದೂ; 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ' ಅನ್ನು ೧೮೯೬ ರಲ್ಲಿ 'ಪ್ರಮೀಳಾರ್ಜುನೀಯಂ' ಎಂದೂ, 'ರೋಮಿಯೊ ಜೂಲಿಯಟ್' ಅನ್ನು 'ರಾಮವರ್ಮ- ಲೀಲಾವತಿ' ಎಂದೂ ಅನುವಾದಿಸಿ ಪ್ರಕಟಿಸಿದರು. ಸ್ವತಂತ್ರ ನಾಟಕಗಳನ್ನು ರಚಿಸುವ ಶಕ್ತಿ ಶ್ರೀಕಂಠೇಶಗೌಡರಿಗೆ ಇದ್ದರೂ ಅನುವಾದಗಳ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತದ ಮತ್ತು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದು, ಆ ಕಾಲದಲ್ಲಿ ಇವರು ಬೆಂಗಳೂರಿನಲ್ಲಿ ಶ್ರೀಕಂಠೇಶ್ವರ ನಾಟಕ ಸಭಾವನ್ನು ಸ್ಥಾಪಿಸಿ ನಾಟಕಗಳನ್ನೂ ಆಡಿಸಿದ್ದಾರೆ. ನವೋದಯದ ಆಚಾರ್ಯರೆಂದು ಗುರುತಿಸಲ್ಪಟ್ಟ ಬಿ.ಎಂ.ಶ್ರೀ (೧೮೮೪-೧೯೪೬) ಯವರು, ಪಾಶ್ಚಾತ್ಯ ನಾಟಕಗಳನ್ನು ಕನ್ನಡಕ್ಕೆ ಪರಿಚಯಿಸಿದರು. ಗ್ರೀಕ್ ನಾಟಕಕಾರ ಈಸ್ಕೀಲಸ್‌ನ 'ಪರ್ಸೆ' ನಾಟಕದ ಭಾವಾನುವಾದವಾಗಿ 'ಪಾರಸಿಕರು' ಎಂಬ ನಾಟಕವನ್ನೂ; ಮಹಾಭಾರತದ ವಸ್ತುವಿಗೆ ಗ್ರೀಕ್ ನಾಟಕದ ವಿಧಾನವನ್ನು ಅಳವಡಿಸಿ 'ಗದಾಯುದ್ಧ' ನಾಟಕವನ್ನೂ; ಸಾಫೋಕ್ಲಿಸ್‌ನ 'ಏಜಾಕ್ಸ್' ನಾಟಕದ ಚೌಕಟ್ಟಿನಲ್ಲಿ 'ಅಶ್ವತ್ಥಾಮನ್' ಎಂಬ ನಾಟಕವನ್ನೂ ರಚಿಸಿದ್ದಾರೆ. ಷೇಕ್ಸ್‌ಪಿಯರ್‌ನ ಮತ್ತು ಗ್ರೀಕ್ ನಾಟಕಗಳ ದುರಂತ ಕಲ್ಪನೆಯ ಪ್ರಭಾವ ಕನ್ನಡದ ಮೇಲೆ ಆಗಿದ್ದು ಬಿ.ಎಂ.ಶ್ರೀ ಯವರ ಕೃತಿಗಳ ಮೂಲಕವೇ. ರಾಜ್ಯದಲ್ಲಿ ಈ ಪರಂಪರೆಯನ್ನು ಮುಂದುವರಿಸಿದವರಲ್ಲಿ, ಜಿಲ್ಲೆಯವರಾದ ಪು.ತಿ.ನ.ರವರೂ ಒಬ್ಬರು. ವಸ್ತು, ತಂತ್ರ ಮತ್ತು ಭಾಷಾ ಪ್ರಯೋಗದ ದೃಷ್ಟಿಗಳಿಂದಲೂ ಬಿ.ಎಂ.ಶ್ರೀಯವರು, ಕನ್ನಡದ ನವೋದಯ ನಾಟಕಗಳಿಗೆ ಮಾರ್ಗದರ್ಶಿಯಾದರು. ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿ ಹೆಬ್ಬಾಳಿನ ಅ.ನ.ಸುಬ್ಬರಾಯರು (೧೮೯೧-೧೯೮೧) 'ಹಳ್ಳಿಯ ಬದುಕು' ಮತ್ತು ಇತರ ಕೆಲವು ನಾಟಕಗಳನ್ನು ರಚಿಸಿದ್ದಾರೆ. ಬೆಂಗಳೂರಿನಲ್ಲಿ ಪ್ರಥಮ ಕಲಾಶಾಲೆಯಾದ ಕಲಾಮಂದಿರವನ್ನು ಸ್ಥಾಪಿಸಿ ೧೯೩೨ರಲ್ಲಿ ಪ್ರಥಮ ನಾಟಕ ಸಮ್ಮೇಳನವನ್ನೂ ನಡೆಸಿದ್ದಾರೆ. ಇವರ 'ಹಳ್ಳಿಯ ಬದುಕು' ನಾಟಕದಲ್ಲಿ ಖ್ಯಾತ ಗಣಿತ ತಜ್ಞೆ ಶಕುಂತಲಾದೇವಿ ಪಾತ್ರವಹಿಸಿದ್ದಾಗಿ ದಾಖಲೆ ಇದೆ. ವೃತ್ತಿ ರಂಗಭೂಮಿಯಲ್ಲಿ ಐತಿಹಾಸಿಕ ನಾಟಕಗಳ ಪ್ರಯೋಗವಾದಾಗ, ನವೋದಯ ನಾಟಕಕಾರ ಎಂ.ಆರ್.ಶ್ರೀನಿವಾಸಮೂರ್ತಿಯವರು (೧೮೯೨-೧೯೫೩) ಐತಿಹಾಸಿಕ ನಾಟಕಗಳ ರಚನೆಗೆ ತೊಡಗಿದರು. ಇವರು ನಾಗರಿಕ, ಕಂಠೀರವ ವಿಜಯ, (೧೯೨೩), ಧರ್ಮ ದುರಂತ ಮುಂತಾದ ನಾಟಕಗಳನ್ನೂ, ಖ್ಯಾತ ಪತ್ರಿಕೋದ್ಯಮಿ ವೀರಕೇಸರಿ ಸೀತಾರಾಮಾಶಾಸ್ತ್ರಿಗಳು (೧೮೯೩-೧೯೭೧) ಇತರ ಕೃತಿಗಳೊಂದಿಗೆ, ಪರಶುರಾಮ ಮತ್ತು ಲಕ್ಷ್ಮಿಯ ಸಂಸಾರ ಎಂಬ ನಾಟಕಗಳನ್ನೂ ಬರೆದಿದ್ದಾರೆ. ಮದ್ದೂರಿನ ಎಚ್.ಕೆ.ವೀರಣ್ಣಗೌಡರು (೧೮೯೯-೧೯೭೬) ಶಿವಾಜಿಯ ವಿಜಯ, ಬುದ್ಧದೇವ ಎಂಬೆರಡು ನಾಟಕಗಳನ್ನು ಬರೆದಿದ್ದಾರೆ.

ಎ.ಎನ್.ಮೂರ್ತಿರಾಯರು (೧೯೦೦) ಬರೆದ 'ಆಷಾಢಭೂತಿ' ನಾಟಕ ಅತ್ಯಂತ ಜನಪ್ರಿಯವಾಗಿದ್ದು, ಚಲನಚಿತ್ರವೂ ಆಯಿತು. ಮೋಲಿಯರ್‌ನ 'ಎರಡು ನಾಟಕಗಳು', 'ಸಾಕ್ರಟೀಸ್‌ನ ಕೊನೆಯ ದಿನಗಳು', ಇವರು ರೂಪಾಂತರಿಸಿದ ಇತರ ಕೃತಿಗಳಾಗಿವೆ. ಮೇಲುಕೋಟೆಯಲ್ಲಿ ಜನಿಸಿದ ಪು.ತಿ.ನ (೧೯೦೫-೧೯೯೮) ರವರು

ಗೀತನಾಟಕಗಳ ರಚನೆಗೆ ಹೆಸರಾದವರು. ಸಾಹಿತ್ಯ ಮತ್ತು ಸಂಗೀತ ಪ್ರಧಾನವಾದ ಅಹಲ್ಯೆ, ಗೋಕುಲ ನಿರ್ಗಮನ, ಹಂಸ–ದಮಯಂತಿ ಮುಂತಾದ ರೂಪಕ ಮತ್ತು ನಾಟಕಗಳನ್ನು ಬರೆದು ರಾಜ್ಯಾದ್ಯಂತ ಒಂದು ಹೊಸ ಅಲೆಯನ್ನು ಹರಡಿದರು. ಶಬರಿ, ವಿಕಟಕವಿ ವಿಜಯ, ಸತ್ಯಾಯನ ಹರಿಶ್ಚಂದ್ರ ಅವರ ಇನ್ನಿತರ ಗೀತ ರಚನೆಗಳು. ಆದರೆ ಈ ನಾಟಕಗಳ ರಚನೆಗೂ ಹೆಚ್ಚಿನ ಪರಿಶ್ರಮ, ವಿಶೇಷ ಗಾಯನ ಪ್ರತಿಭೆ, ಸಂಗೀತ ಜ್ಞಾನಗಳ ಅಗತ್ಯವಿದ್ದುದರಿಂದ ಹಾಗೂ ಪ್ರದರ್ಶನಕ್ಕೂ ಹೆಚ್ಚಿನ ಸಮಯ ಬೇಕಾಗುತ್ತಿದ್ದುದರಿಂದ, ಈ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿಯೇ ಇವರೊಂದಿಗೆ ಕಾರಂತರನ್ನು ಬಿಟ್ಟರೆ ಹೆಚ್ಚಿನವರು ಈ ಪ್ರಕಾರವನ್ನು ಆಸಕ್ತಿಯಿಂದ ಮುಂದುವರಿಸಲಿಲ್ಲ. (ಸಾಹಿತ್ಯ ವಿಭಾಗ ನೋಡಿ) ಮಳವಳ್ಳಿ ತಾಲೂಕಿನ ಮ.ಮಲ್ಲಪ್ಪನವರು (೧೯೨೦) ರಾಜರ ಹಬ್ಬ, ಮುಂತಾದ ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಮಹಿಳಾ ಸಾಹಿತಿಗಳಲ್ಲಿ ವಾಣಿ (ಬಿ.ಎನ್.ಸುಬ್ಬಮ್ಮ ೧೯೧೭–೧೯೮೮), ಆರ್ಯಾಂಭ ಪಟ್ಟಾಭಿ (೧೯೩೬) ಒಂದೆರಡು ನಾಟಕಗಳನ್ನು ಬರೆದಿದ್ದಾರೆ.

ನಟ, ನಾಟಕಕಾರ, ಗೀತ ರಚನೆಕಾರ, ಸಂಗೀತ ನಿರ್ದೇಶಕ, ಸಂಭಾಷಣೆಕಾರ ಮುಂತಾಗಿ ಸಾಹಿತ್ಯ ಮತ್ತು ಕಲಾ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿ ಹೆಸರು ಗಳಿಸಿರುವ ಪಾಂಡವಪುರ ತಾಲೂಕಿನ ಹೆಚ್.ಕೆ.ಯೋಗಾನರಸಿಂಹ (೧೯೨೭–೨೦೦೧) ರವರು, ಚಿರಂಜೀವಿ, ಕಳ್ಳಬಟ್ಟಿ, ಬಿಕನಾಸಿ, ರಾಮಾವತಾರ, ನಾಡಮನೆ, ಭೂಕೈಲಾಸ ಮುಂತಾದ ಹಲವಾರು ನಾಟಕಗಳನ್ನು ಬರೆದಿದ್ದಾರೆ. ಇವರ ಎಲ್ಲಾ ನಾಟಕಗಳೂ ಹಲವಾರು ಬಾರಿ ಪ್ರಯೋಗಗೊಂಡಿವೆ. ಇವರು ಸಂಗೀತ ನಿರ್ದೇಶನ, ನಾಟಕ ನಿರ್ದೇಶನ, ಗೀತ ರಚನೆ ಇತ್ಯಾದಿ ಕಾರ್ಯಗಳನ್ನು ಮಾಡಿದ್ದಾರೆ. ಚಲನಚಿತ್ರಗಳಿಗೆ ಸಂಭಾಷಣೆ ಮತ್ತು ಹಾಡುಗಳನ್ನು ಬರೆದಿದ್ದು ಮೈಸೂರಿನ ಕರ್ನಾಟಕ ರಂಗಾಯಣ ತಂಡ, ಇವರ ರಂಗಗೀತೆಗಳನ್ನು ಹಲವಾರು ನಾಟಕಗಳಿಗೆ ಬಳಸಿಕೊಂಡಿದೆ.

ಅಕ್ಕಿಹೆಬ್ಬಾಳಿನ ಕೃ.ನ.ಮೂರ್ತಿ (ಕೃಷ್ಣಪ್ಪ ನರಸಿಂಹಮೂರ್ತಿ ೧೯೨೮) ಇವರು ಚಿನ್ನದ ಜಿಂಕೆ, ಸರ್ವೋದಯ, ಕಲ್ಲ ನಾಗರ ಕಂಡರೆ, ಮೂವರ ಕತೆಗಳು, ಗುರುಕಾಣಿಕೆ, ಮುಂತಾದ ೨೦ ಕ್ಕೂ ಹೆಚ್ಚು ಕೃತಿಗಳನ್ನು ವಿವಿಧ ಪ್ರಕಾರಗಳಲ್ಲಿ ರಚಿಸಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಜಿಲ್ಲಾ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿದ್ದರು. ಇವರ 'ಸರ್ವೋದಯ' ಕೃತಿಗೆ ನವದೆಹಲಿಯ ಸಂಗೀತ ನಾಟಕ ವಿಭಾಗದ ಬಹುಮಾನ ದೊರೆತಿದೆ.

ಮಂಡ್ಯಕ್ಕೆ ೧೯೫೨ರಲ್ಲಿ ಬಂದು ನೆಲೆಸಿದ ಕೆ.ಗುಂಡಣ್ಣ (೧೯೨೮–೧೯೮೭) ನವರು, ಸುಲಭವಾಗಿ ಆಡಲು ಸಾಧ್ಯವಾಗುವಂತಹ ಹಲವಾರು ಸರಳ ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ಏಕಾಂಕ ನಾಟಕಗಳನ್ನು ಕನ್ನಡ ಕ್ಷೇತ್ರಕ್ಕೆ ತಂದು ಕೊಟ್ಟ ಮೊದಲಿಗರಲ್ಲಿ ಇವರೂ ಒಬ್ಬರು. ಈ ಜಿಲ್ಲೆಯಲ್ಲಿ ಸಾಮಾನ್ಯ ನಾಟಕಗಳ ಹೆಚ್ಚಿನ ರಚನೆಗೆ ಇವರ ಕೃತಿಗಳು ಕಾರಣವಾದವು. ಅಲ್ಲದೆ ಡಿ.ಲಿಂಗಯ್ಯ, ಸಿ.ಪಿ.ನಾಗರಾಜು, ರಮೇಶ್ ಹುಲ್ಲುಕೆರೆ, ರಾಮಲಿಂಗಯ್ಯ ಹುಲಿವಾನ, ಆರ್.ಡಿ.ಈಶ್ವರಾಚಾರ್, ಪಿ.ಅಬ್ದುಲ್ ಸತ್ತಾರ್, ಹನಂಬಾಡಿ ರಾಜು, ಗಂಟೆಗೌಡನಹಳ್ಳಿಯ ಸೋಮಶೇಖರಾಚಾರ್ ಮುಂತಾದ ನಾಟಕಕಾರರು ಬೆಳಕಿಗೆ ಬಂದರು. ಶಾಲಾ ಕಾಲೇಜುಗಳಲ್ಲಿ, ಉತ್ಸವ ಮತ್ತು ಹಬ್ಬ ಹರಿದಿನಗಳಲ್ಲಿ ಗುಂಡಣ್ಣನವರ ನಾಟಕಗಳನ್ನು, ಈಗಲೂ ಹೆಚ್ಚು ಆಡಿಸಲಾಗುತ್ತದೆ. 'ಕಣ್ಣಿಗೆ ಮಣ್ಣು', 'ಬಕಪಕ್ಷಿ', 'ಹರಿದ್ರಾ ಕುಂಕುಮ', 'ಗಂಡ್ಸಲ್ವೆ ಗಂಡ್ಸು', 'ಶಂಖವಾದ್ಯ', 'ಬ್ರಹ್ಮಗಂಟು', 'ಅಶ್ವಮೇಧ', ಮುಂತಾದವು ಇವರ ಕೆಲವು ನಾಟಕ ಕೃತಿಗಳು. ಇವರು 'ಪೌರವಾಣಿ' ಪತ್ರಿಕೆಗೆ ವಿಚಾರಾತ್ಮಕ ಲೇಖನಗಳನ್ನು ಬರೆಯುತ್ತಿದ್ದು ಅವರ ಲೇಖನಗಳಿಗಾಗಿ ಜನರು ಅತ್ಯಾಸಕ್ತಿಯಿಂದ ಕಾಯುತ್ತಿದ್ದರೆನ್ನಲಾಗಿದೆ. ಮುಸುರಿ ಕೃಷ್ಣಮೂರ್ತಿಯವರಿಂದ, ಇವರ ಪಂಚಭೂತ ಎಂಬ ನಾಟಕ 'ನಂಬರ್ ಐದೂ ಎಕ್ಕ' ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ. 'ಪಂಚಭೂತ', ದೂರದರ್ಶನದಲ್ಲಿಯೂ ಪ್ರಸಾರವಾಗಿದೆ. ಇವರ 'ಹರಿದ್ರಾ ಕುಂಕುಮ' ಕ್ಕೆ ೧೯೬೧ರಲ್ಲಿ ರಾಜ್ಯ ಪ್ರಶಸ್ತಿ ಲಭಿಸಿದೆ.

ಪಾಂಡವಪುರ ತಾಲೂಕಿನ ಪಟ್ಟಸೋಮನಹಳ್ಳಿಯ ಅಬ್ದುಲ್ ಸತ್ತಾರ್ (೧೯೨೯) ರವರು, ನಾಲ್ಕು ನಾಟಕಗಳನ್ನು ಬರೆದಿದ್ದಾರೆ. ಹೊನಗಾನಹಳ್ಳಿ ಮೂಲದ ಎಚ್.ಎ.ರಾಮಕೃಷ್ಣ (೧೯೩೨) ರವರು ಜಾರ್ಜ್ ಬರ್ನಾಡ್ ಷಾ ರವರ 'ಆರ್ಮ್ಸ್ ಅಂಡ್ ದಿ ಮ್ಯಾನ್' ನಾಟಕವನ್ನು ಚಾಕೋಲೇಟ್ ಸಿಪಾಯಿಯಾಗಿ ೧೯೭೩ ರಲ್ಲೂ; ಜಾನ್ ಗಾಲ್ಸ್‌ವರ್ದಿಯವರ 'ದಿ ಸಿಲ್ವರ್ ಬಾಕ್ಸ್' ನಾಟಕವನ್ನು ಬೆಳ್ಳಿಭರಣಿಯಾಗಿ; 'ಹೆನ್ರಿಕ್ ಇಬ್ಸನ್‌ನ ಎ ಡಾಲ್ಸ್ ಹೌಸ್' ನಾಟಕವನ್ನು 'ನೋರಾ' ಆಗಿ ಕನ್ನಡಕ್ಕೆ ತಂದಿದ್ದಾರೆ.

ಜಾನಪದ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಜೀ.ಶಂ.ಪ (೧೯೩೩) ರವರು 'ಸೋಲು ತಂದ ಸ್ವಯಂವರ' 'ನಾಡಿನ ಕರೆ', 'ಬಾಬರ್' ಮುಂತಾದ ಉಲ್ಲೇಖಾರ್ಹ ನಾಟಕಗಳನ್ನು ಬರೆದಿದ್ದಾರೆ. 'ಸುಜನಾ' ಎಂಬ ಕಾವ್ಯನಾಮದಲ್ಲಿ ಬರೆಯುವ ಎಸ್.ನಾರಾಯಣಶೆಟ್ಟಿ (೧೯೩೦) ಯವರು ಸಫೋಕ್ಲಿಸ್‌ನ 'ಏಜಾಕ್ಸ್' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹುಲ್ಲುಕೆರೆ ರಮೇಶ್‌ರವರು, ರಂಗಭೂಮಿಯ ಪೌರಾಣಿಕ ನಾಟಕಗಳ ಸಂಭಾಷಣೆಯಲ್ಲಿ ಸುಧಾರಣೆ ತರುವ ಪ್ರಯತ್ನದಲ್ಲಿ ಮತ್ತು ಸಾಹಿತ್ಯದ ಕಡೆ ಹೆಚ್ಚು ಗಮನ ನೀಡಬೇಕೆಂಬ ದೃಷ್ಟಿಯಿಂದ, 'ಮಂಥರೆ' ಮತ್ತು 'ದೊರೆ ಲಂಕೇಶ್ವರ' ನಾಟಕಗಳನ್ನು ರಚಿಸಿದ್ದಾರೆ. ಪೀಹಳ್ಳಿಯ ಡಿ.ಲಿಂಗಯ್ಯನವರು (೧೯೩೯) 'ದಡ್ಡ ಶಿಖಾಮಣಿ', 'ಬಡತನದ ಬಾಳು' ಮತ್ತು 'ಬ್ರಹ್ಮ ಗಂಟು, ಮುಂತಾದ ನಾಟಕಗಳನ್ನೂ ರಚಿಸಿದ್ದಾರೆ. ಕ್ಯಾತನಹಳ್ಳಿಯ ರಾಮಣ್ಣನವರು ಜನಪದ ಪ್ರಕಾರದಲ್ಲಿ 'ಹಲಗಲಿ ಬೇಡರು' ಎಂಬ ನಾಟಕವನ್ನೂ ಬರೆದಿದ್ದು, ಆ ನಾಟಕಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿಯಿಂದ ೧೯೯೦ರ ಪುಸ್ತಕ ಬಹುಮಾನ ದೊರೆತಿದೆ.

ಜವರನಹಳ್ಳಿ ಸಿದ್ಧಪ್ಪನವರು 'ಕಲ್ಲ ಹಿಡಿದೋರು' ಎಂಬ ನಾಟಕವನ್ನೂ; ನಟ, ನಾಟಕಕಾರ ಹಾಗೂ ಮೃದಂಗವಾದಕರೂ ಆದ ಎನ್.ಸುದರ್ಶನ್‌ರವರು 'ತೀರ್ಥಯಾತ್ರೆ', 'ಜರಾಸಂಧ', 'ಶಿಶುಪಾಲ', 'ಅಂತರಂಗದಾ ಮೃದಂಗ' ಮುಂತಾದ ಪೌರಾಣಿಕ ಹಾಗೂ ಚಾವುಂಡರಾಯ ಎಂಬ ಐತಿಹಾಸಿಕ ನಾಟಕವನ್ನೂ; ಕೆರಗೋಡು ಸಮೀಪದ ಗಂಟಗೌಡನಹಳ್ಳಿಯ ಸೋಮಶೇಖರಾಚಾರ್ (೧೯೫೩)ರವರು ಬದುಕು ಬಾಡಿತು, ಹೂವು ಅರಳಿತು, ಚೆನ್ನಿ ದೊಡ್ಡಿ ಚರಿತ್ರೆ, ಕೊಳ್ಳಿ ದೆವ್ವ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಇವರ 'ಆಷಾಢದಲ್ಲಿ ಅಳಿಯ', ನಾಟಕ ದೂರದರ್ಶನದಲ್ಲಿ ಕಿರುಚಿತ್ರವಾಗಿ ಪ್ರಸಾರಗೊಂಡಿದೆ. ಸಿ.ಪಿ.ನಾಗರಾಜುರವರು ಅಂಗಿ ಬಟ್ಟೆ, 'ಒಂದು ರೂಪಾಯಿ', 'ಹಾವು' ಮುಂತಾದ ಸಾಮಾಜಿಕ ನಾಟಕಗಳನ್ನೂ ಹಾಗೂ 'ಭಾಗೀರಥಿ', 'ಅಂಬೆ', ಮುಂತಾದ ಜಾನಪದ ಹಾಗೂ ಪೌರಾಣಿಕ ನಾಟಕಗಳನ್ನೂ; ರಾಮಲಿಂಗಯ್ಯ ಹುಲಿವಾನರವರು, ಬದಲಾಗದವರು, ಬದುಕು, ಮುಂತಾದ ನಾಟಕಗಳನ್ನೂ; ಹನಂಬಾಡಿ ರಾಜು 'ಹೆಬ್ಬೆಟ್ಟು' ನಾಟಕವನ್ನೂ ಬರೆದಿದ್ದಾರೆ. ಇವುಗಳಲ್ಲಿ ಹಲವು ನಾಟಕಗಳು ಪ್ರದರ್ಶನ ಕಂಡಿವೆ. ಆರ್.ಡಿ.ಈಶ್ವರಚಾರ್ (೧೯೫೨) ರವರು, 'ಕುರಿದೊಡ್ಡಿ ಕುರುಕ್ಷೇತ್ರ, 'ರಂಗಿದೊಡ್ಡಿ ರಾಮಾಯಣ', 'ಹೆರಬೇಡ್ಲೆ ನಾ ಹೊರಲಾರೆ', ಮುಂತಾದವನ್ನು ಬರೆದಿದ್ದು ಮಂಡ್ಯದ ಭಾಷೆಯ ಸೊಗಡನ್ನು ಈ ನಾಟಕಗಳಲ್ಲಿ ತಂದು ಯಶಸ್ವಿಯಾಗಿದ್ದಾರೆ. ಇವರ 'ಕುರಿದೊಡ್ಡಿ ಕುರುಕ್ಷೇತ್ರ', ಯಶಸ್ವಿ ನಾಟಕವಾಗಿ ರಾಜ್ಯದ ಅನೇಕ ಕಡೆ ಪ್ರದರ್ಶನಗೊಂಡಿದ್ದು ಚಲನಚಿತ್ರವಾಗಿಯೂ ಪ್ರಯೋಗಗೊಂಡಿದೆ. ಡಾ.ಅರ್ಜುನಪುರಿ ಅಪ್ಪಾಜಿಗೌಡರು, 'ನಿಸರ್ಗದ ಕರೆ'; ಬಿಂಡಿಗನವಿಲೆ ಭಗವಾನ್‌ರವರು 'ಕೈಮೀರಿದ್ದು'; ಕೆ.ಆರ್.ಸತ್ಯಾನಂದರು 'ಕೀಲಾರ', 'ಇದು ಊರೆ'; ಬ.ಮ.ಶಿವರಾಜು ಅವರು 'ಒಂದು ಪ್ರೇಮದ ಕತೆ, ' ಪ್ರೇಮ ದುರಂತ'; ಅನಸೋಸಲು ಶಂಕರ್ ಅವರು 'ಜಾತಿ ಬರೀ ಭ್ರಾಂತಿ' ಮತ್ತು 'ಶುಭಾರಂಭ'; ಬಿ.ಗಂಗಾಧರ್ ಅವರು 'ದುರ್ಗಾಪುರದ ದಾನವರು'; ಕೆ.ಟಿ.ರಾಜು(ಬುಕ್ಕ) ಅವರು 'ಬಡ್ಡಿ ಭದ್ರೇಗೌಡ'; ಹಲ್ಲೇಗೆರೆ ಶಂಕರ್ ಅವರು 'ಕೊಂಕು ಬಾಲದ ನಾಯಕರು'; ಎಸ್.ಎಂ.ಜಯಪ್ರಕಾಶ್‌ರವರು 'ಭೂಲೋಕವೇ ಯಮಲೋಕ' ಮತ್ತು 'ಸಾಕಪ್ಪ

ಸಾಕು'; ಡಿ.ಆರ್.ನಾರಾಯಣರು 'ಶೂನ್ಯ'; ಎಂ.ನಾರಾಯಣಸ್ವಾಮಿಯವರು 'ಸಾಕ್ಷಿ'; ಮಾರಗೌಡನಹಳ್ಳಿ ಚನ್ನೇಗೌಡರು 'ವಿಧಿ ಸಂಕಲ್ಪ'; ದೊಡ್ಡರಸಿನಕೆರೆ ತೋಟಶೆಟ್ಟಿ ಅವರು 'ಬಾಳಿನ ಅಂತ್ಯ' ಮತ್ತು 'ಮರೆಯದ ಕನಸು'; ಕುಂಟನಹಳ್ಳಿ ರಾಮಕೃಷ್ಣ ಅವರು 'ಜನಮರಳೊ ಜಾತ್ರೆ ಮರಳೊ' ಎಂಬ ನಾಟಕಗಳನ್ನು ಬರೆದಿದ್ದಾರೆ.

**ರಂಗಭೂಮಿಯ ಪ್ರಕಾರಗಳು**

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಪ್ರಧಾನವಾಗಿ ಮೂರು ಪರಂಪರೆಗಳನ್ನು ಗುರುತಿಸಲಾಗಿದೆ. ಜಾನಪದ ರಂಗಭೂಮಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ. ಇವುಗಳಲ್ಲಿ ವಾಕ್‌ಸಂಪ್ರದಾಯದ ಮೂಲಕ ಮುಂದುವರಿದು ಬಂದಿರುವ ಜಾನಪದ ರಂಗಭೂಮಿ ಎಲ್ಲಕ್ಕಿಂತ ಪ್ರಾಚೀನವಾಗಿದ್ದು, ಉಳಿದೆರಡು ಪ್ರಕಾರಗಳಿಗೆ ಹಿನ್ನೆಲೆಯಾಗಿ ನಿಲ್ಲುತ್ತದೆ.

**ಜಾನಪದ ರಂಗಭೂಮಿ**

ಯಾವುದೇ ಪ್ರದೇಶದ ಧರ್ಮ, ಸಂಸ್ಕೃತಿ, ವ್ರತ, ಹಬ್ಬ ಹರಿದಿನ, ಇತ್ಯಾದಿಗಳ ಬಗ್ಗೆ ಕಲೆಯ ರೂಪದಲ್ಲಿ ಮನರಂಜನೆ ಬೆರೆಸಿ ಸಾಮಾನ್ಯ ಜನರಿಗೆ ತಿಳಿಯಪಡಿಸುತ್ತಾ ಬಂದಿರುವ ವಿಧಾನವೇ ಬಯಲಾಟ, ಯಕ್ಷಗಾನ, ಪೂಜಾ ಕುಣಿತ ಮುಂತಾದ ಜಾನಪದ ರಂಗ ಪ್ರದರ್ಶನಗಳು.

ಯಾವುದೇ ಜಿಲ್ಲೆಯ ಜಾನಪದ ರಂಗಭೂಮಿಯಲ್ಲಿ ಕಂಡುಬರುವಂತೆ, ಈ ಜಿಲ್ಲೆಯಲ್ಲಿಯೂ ಸಂಪ್ರದಾಯ, ಭಕ್ತಿ ಹಾಗೂ ನೀತಿಗಳನ್ನು ಎತ್ತಿ ಹಿಡಿಯುವುದು ಪ್ರಧಾನ ಅಂಶವಾಗಿ ಕಾಣಬರುತ್ತದೆ. ಪರಂಪರಾಗತವಾಗಿ ಬಂದ ಸಂಪ್ರದಾಯಗಳ ಅರ್ಥ–ಅವಶ್ಯಕತೆಗಳ ಬಗ್ಗೆ ಆಳವಾದ ಪರಿಶೀಲನೆಗೆ ಹೋಗದೆ ಅದನ್ನು ಪಾಲಿಸುವುದರಲ್ಲಿ ಮೋಕ್ಷವಿದೆ ಎಂಬ ನಂಬಿಕೆ ಈ ಜಾನಪದ ರಂಗಭೂಮಿಯ ಹೆಚ್ಚಿನ ಜನರದು. ಸೂತ್ರದ ಬೊಂಬೆಯಾಟ, ತೊಗಲು ಬೊಂಬೆಯಾಟ, ಯಕ್ಷಗಾನ, ಬಯಲಾಟ, ಇತ್ಯಾದಿ ಎಲ್ಲ ಜನಪದ ರಂಗಕಲೆಗಳಲ್ಲಿ, ಪುರಾಣ, ರಾಮಾಯಣ, ಮತ್ತು ಮಹಾಭಾರತದ ವಸ್ತುಗಳನ್ನು ಆಧರಿಸಿದ ಕಥೆಗಳನ್ನು ಹೆಚ್ಚಾಗಿ ಅಳವಡಿಸಿಕೊಳ್ಳಲಾಗುತ್ತದೆ. ಅಗತ್ಯ ಇರುವ ಕೆಲವು ಬದಲಾವಣೆಗಳೊಂದಿಗೆ ಈ ಪ್ರಕಾರದ ಹಲವು ಕಲೆಗಳಲ್ಲಿ, ಎಲ್ಲಾ ಜಿಲ್ಲೆಗಳಲ್ಲೂ ಏಕರೂಪವಿರುವುದು ಕಂಡುಬರುತ್ತದೆ. ದೊಡ್ಡಾಟ, ಸಣ್ಣಾಟಗಳು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಹೋಲಿಸಿದರೆ, ಈ ಜಿಲ್ಲೆಯಲ್ಲಿ ತುಂಬ ಕಡಿಮೆ. ಮೂಡಲಪಾಯ ಯಕ್ಷಗಾನ, ಪಟ ಕುಣಿತ, ಪೂಜಾ ಕುಣಿತ, ನಂದೀಧ್ವಜ ಕುಣಿತ, ಸೂತ್ರದ ಬೊಂಬೆಯಾಟ, ತೊಗಲು ಬೊಂಬೆಯಾಟ, ಸೋಮನ ಕುಣಿತ, ಬೀಸು ಕಂಸಾಳೆ, ಚೌಡಿಕೆ ಮೇಳ, ಭಾಗವಂತಿಕೆ ಮೇಳ, ಕೋಲಾಟ, ಖಡ್ಗದ ಕುಣಿತ, ವೀರಮಕ್ಕಳ ಕುಣಿತ, ಹನ್ನೆರಡು ಸೆರಗಿನ ಕುಣಿತ, ಪಂಜಿನ ಕುಣಿತ, ಇತ್ಯಾದಿಗಳು ಇಲ್ಲಿ ಕಾಣ ಸಿಗುವ ಜನಪದ ರಂಗಪ್ರಕಾರಗಳು. ಈ ಪ್ರಕಾರದಲ್ಲಿ ಪ್ರದರ್ಶನ ನಡೆಸುವ ತಂಡಗಳು ಮತ್ತು ಕಲಾವಿದರು ಹಲವರು ಇದ್ದು ಅವರು ಇದನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಜಿಲ್ಲೆಯ ಜನರಿಗೆ ಜನಪದ ರಂಗ ಪ್ರಕಾರಗಳ ಬಗ್ಗೆ ಹೆಚ್ಚಿನ ಆಸಕ್ತಿ ಇದೆ. ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಇದನ್ನು ಶೈಕ್ಷಣಿಕ ವಿಷಯವನ್ನಾಗಿ ಬಿ.ಎ.ತರಗತಿಗೆ ಅಳವಡಿಸಿದ್ದು, ಆ ವಿದ್ಯಾರ್ಥಿಗಳಿಗೆ, ವೀರಗಾಸೆ, ಕಂಸಾಳೆ ನೃತ್ಯ, ನಂದೀಧ್ವಜ ಕುಣಿತ ಇತ್ಯಾದಿಗಳಲ್ಲಿ ತರಬೇತಿ ನೀಡಲು, ವೃತ್ತಿನಿರತ ಕಲಾವಿದರನ್ನು ಬೇರೆ ಬೇರೆ ಹಳ್ಳಿಗಳಿಂದ ಕರೆಸಿ, ತಿಂಗಳ ಕಾಲ ಉಳಿಸಿಕೊಂಡು ತರಬೇತಿ ಕೊಡಿಸಲಾಗುತ್ತದೆ.

**ಜನಪದ ಕಲಾವಿದರು ಮತ್ತು ಜನಪದ ಕಲಾ ತಂಡಗಳು**

ಸುಮಾರು ಐವತ್ತು ವರ್ಷಗಳ ಹಿಂದೆ ಜಾನಪದ ಕಲಾ ತಂಡಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಇದ್ದು, ಜನಪದ ಕಲೆಗಳಲ್ಲಿ ಆಸಕ್ತಿಯುಳ್ಳ ಕೆಲವು ಕಲಾವಿದರಿಂದಾಗಿ, ಹಲವಾರು ಕಲಾ ತಂಡಗಳು ಈಗಲೂ ಅಲ್ಲಲ್ಲಿ ಉಳಿದುಕೊಂಡು ಬಂದಿವೆ.

**ಯಕ್ಷಗಾನ :** ಮಳವಳ್ಳಿ ತಾಲೂಕಿನ ಕಿರುಗಾವಲು ಹೋಬಳಿ ಹನುಮೇಗೌಡ ಉರುಫ್ ಬೊದಗೇಗೌಡ (ಸು.೧೯೦೨) ಅವರು ಯಕ್ಷಗಾನದ ಹೆಸರಾಂತ ಕಲಾವಿದರಾಗಿದ್ದಾರೆ. ಬಯಲಾಟದ ಪಾತ್ರ ಮಾಡುವುದಲ್ಲದೇ ಪೂಜಾ ಕುಣಿತ, ಪಟ ಕುಣಿತ, ಹನ್ನೆರಡು ಸೆರಗಿನ ನೃತ್ಯ ಮುಂತಾದ ಜಾನಪದ ಕಲೆಗಳಲ್ಲಿ ನುರಿತಿದ್ದಾರೆ. ಇವರಿಗೆ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯಿಂದ ಯಕ್ಷಗಾನ ಸೇವೆಗಾಗಿ ೧೯೮೭ರಲ್ಲಿ ಪ್ರಶಸ್ತಿ ದೊರೆತಿದೆ.

ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲು ಮತ್ತು ಕಿಕ್ಕೇರಿಗಳು ಹಿಂದೆ ಯಕ್ಷಗಾನ ಬಯಲಾಟದ ಪ್ರಮುಖ ಕೇಂದ್ರಗಳಾಗಿದ್ದು, ಮಂಡ್ಯ ಜಿಲ್ಲೆಯ ಯಕ್ಷಗಾನವು, ಮೂಡಲಪಾಯ ಅಥವಾ ದಕ್ಷಿಣ ಸಂಪ್ರದಾಯಕ್ಕೆ ಸೇರುತ್ತದೆ. ಮದ್ದೂರು ಮತ್ತು ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಹಿಂದೆ ಇದ್ದ ಯಕ್ಷಗಾನ ಬಯಲಾಟಗಳು ಈಗ ನಶಿಸಿ ಹೋಗಿವೆ. ಕೀಲಾರದ ಹಿರಿಯ ಕಲಾವಿದರೊಬ್ಬರು ರಂಗವೇರುವ ಮುನ್ನ ತಮ್ಮ ಕಿರೀಟಕ್ಕೆ ಮಿಂಚು ಹುಳುಗಳನ್ನು ಹಿಡಿದು ಅಂಟಿಸಿಕೊಂಡು ಬರುತ್ತಿದ್ದರೆಂದು ಇಲ್ಲಿಯ ಜನರು ಹೇಳುತ್ತಾರೆ. ಮಳವಳ್ಳಿ ತಾಲೂಕಿನ ಹೆಮ್ಮಿಗೆಯಲ್ಲಿ 'ಪಂಚವಟಿ ರಾಮಾಯಣ' ದ ಪ್ರಾಚೀನ ವಿಧಾನವಿರುವುದಾಗಿಯೂ, ಅತಿ ಪ್ರಾಚೀನವಾದ 'ಕರಿಭಂಟನ ಕಾಳಗ', ಪಾಂಡವಪುರ ಮತ್ತು ಶ್ರೀರಂಗಪಟ್ಟಣಗಳಲ್ಲಿ ಇದ್ದು ಈಗ ನಶಿಸಿ ಹೋಗಿದೆ ಎಂದೂ ಹೇಳಲಾಗುತ್ತದೆ. ನಾಗಮಂಗಲ ತಾಲೂಕಿನ ತಿಪ್ಪೋನ ಹೊಸಹಳ್ಳಿ, ಗೂಡೇನಹಳ್ಳಿ, ನರಗಲುಗಳಲ್ಲಿ ತಾಳ ಮದ್ದಲೆಯೂ, ಬೆಳ್ಳೂರು, ಅಂಬಲಜೀರಹಳ್ಳಿ, ನೆಲ್ಲೀಗೆರೆ, ಕರಿಜೀರಹಳ್ಳಿ, ತಾವರೆಕೆರೆ, ಅಗಸಹಳ್ಳಿ ಮೊದಲಾದ ಕಡೆ ಯಕ್ಷಗಾನ, ಬಯಲಾಟಗಳೂ ಜೀವಂತವಾಗಿವೆ. ಅಂಬಲಜೀರಹಳ್ಳಿಯ 'ಶ್ರೀ ಕಾಲಭೈರವೇಶ್ವರ ಯಕ್ಷಗಾನ ಮಂಡಳಿಯು' ಯಕ್ಷಗಾನ ಪ್ರದರ್ಶನ ಮತ್ತು ಗೋಷ್ಠಿಗಳನ್ನು ನಡೆಸುವ ಮೂಲಕ ಮೂಡಲಪಾಯ ಯಕ್ಷಗಾನ ಕಲೆಯ ಉಳಿವಿಗೆ ದುಡಿದಿದೆ.

**ಮುಖವೀಣೆ:** ಹಿರಿದಾದ ನಾದವನ್ನು ಹೊರಡಿಸುವ ಗೇಣುದ್ದುದ ಓಲಗದಾಕಾರದ ಪೀಪಿಯಂತಹ ವಾದ್ಯಕ್ಕೆ 'ಮುಖವೀಣೆ' ಎಂದು ಹೇಳಲಾಗುತ್ತದೆ. ಮೂವತ್ತೆರಡು ರಾಗಗಳನ್ನು ಹೊರಡಿಸುವ ಈ ವಾದ್ಯವನ್ನು ಯಕ್ಷಗಾನ ಸಂಗೀತ ಬಹಳವಾಗಿ ಅವಲಂಬಿಸಿರುತ್ತದೆ. ನಾಗಮಂಗಲ ತಾಲೂಕಿನ ನರಗನಹಳ್ಳಿಯ ಮಾಯಣ್ಣ (ಸು.೧೯೪೨) ಇಂಥ ಮುಖವೀಣೆ ನುಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಯಕ್ಷಗಾನ ಭಾಗವಂತಿಕೆಯಲ್ಲೂ ಉತ್ತಮ ಕಲಾವಿದರೆಂದು ಹೆಸರಾಗಿದ್ದ ಮಾಯಣ್ಣನವರು, ನಾಗಮಂಗಲ, ಕೃಷ್ಣರಾಜಪೇಟೆ, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಲ್ಲಷ್ಟೇ ಅಲ್ಲದೇ ದೆಹಲಿಗೂ ಹೋಗಿ ಮುಖವೀಣೆ ನುಡಿಸಿ ಬಂದಿದ್ದಾರೆ. ಇವರಿಗೆ ೧೯೮೨ ರಲ್ಲಿ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿಯೂ ದೊರೆತಿದೆ.

**ಭಾಗವಂತಿಕೆ:** ಮೂಲತಃ ಶ್ರೀವೈಷ್ಣವಧರ್ಮದ ಪ್ರಚಾರಕ್ಕಾಗಿ ಮೇಲುಕೋಟೆಯಿಂದ ಭಾಗವಂತಿಕೆ ಸೃಷ್ಟಿಗೊಂಡಿತೆಂದು ತಿಳಿದುಬರುತ್ತದೆ. ಇದರಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತ ಸಂಪ್ರದಾಯದ ಹಾಡು ಮತ್ತು ಕುಣಿತಗಳಿದ್ದು, ಶೈವ ಸಂಪ್ರದಾಯದ ಕಥೆಗಳನ್ನೂ ಹಾಡಲಾಗುತ್ತದೆ. ಹಲವೊಮ್ಮೆ ಒಂದೇ ಕಥೆಯು ಹಗಲೂ ರಾತ್ರಿ ಸೇರಿ ಇಡೀ ದಿನ ಹೇಳಬಹುದಾದಷ್ಟು ಸುದೀರ್ಘವಾಗಿರುತ್ತದೆ. ದೀಪಾವಳಿ ಕಾಲದಲ್ಲಿ ಊರೂರಿಗೆ ಹೋಗಿ ಹಾಡುವ ಪದ್ಧತಿಗೆ 'ಊರಾಡುವುದು' ಅಥವಾ 'ಭಾಗವಂತಿಕೆ ಹೋಗುವುದು' ಇಲ್ಲವೇ ದೀವಳಿಗೆ ದಂಡು

ಎಂದೂ ಹೇಳಲಾಗುತ್ತದೆ. ನಾಗಮಂಗಲ ತಾಲೂಕಿನ ನಲ್ಕುಂದಿ, ಭೈರಸಂದ್ರ, ಎಲೆಕೊಪ್ಪ, ಬೆಟ್ಟದಕೋಟೆ, ಕರೀಜೀರಳ್ಳಿ, ಕಂಬದಹಳ್ಳಿ, ಕನ್ನೇನಹಳ್ಳಿ, ಚಿಣ್ಯ ಮುಂತಾದ ಕಡೆಗಳಲ್ಲಿ ಬಹಳವಾಗಿಯೂ, ಪಾಂಡವಪುರ ತಾಲೂಕಿನ ಮೇಲುಕೋಟೆ ಮುಂತಾದ ಕಡೆಗಳಲ್ಲಿ ವಿರಳವಾಗಿಯೂ ಈ ಸಂಪ್ರದಾಯ ಇಂದಿಗೂ ಉಳಿದು ಬಂದಿದೆ.

ಮೇಲುಕೋಟೆಯ ಬೆಟ್ಟದ ಬುಡದಲ್ಲಿರುವ ಕದಲಗೆರೆ ಗ್ರಾಮದಲ್ಲಿ ಹಲವು ತಲೆಮಾರುಗಳಿಂದ ಭಾಗವಂತಿಕೆ ಕಲೆ ಉಳಿದು ಬಂದಿದ್ದು, ರಾಜೇಗೌಡರು, ಆನಂತರ ಅವರ ಮಗ ಸಿಂಗೇಗೌಡರು ಈ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರಿಬ್ಬರೂ ರಾಮಾಯಣ, ಚೆಲುವನಾರಾಯಣ, ನರಸಿಂಹ, ಆಂಜನೇಯರನ್ನು ಕುರಿತು ಹಾಡುವುದರಲ್ಲಿ ಪ್ರವೀಣರಾಗಿದ್ದು, ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೯೩ರಲ್ಲಿ ಪ್ರಶಸ್ತಿ ಲಭಿಸಿದೆ. ಕದಲಗೆರೆಯ ಆರ್. ಶಿವಣ್ಣಗೌಡ ಹಾಗೂ ಎಲೆಕೊಪ್ಪದ ಬಸವೇಗೌಡ, ಪಟಕುಣಿತ ಮತ್ತು ಭಾಗವಂತಿಕೆ ನಡೆಸುವ ಕಲಾವಿದರಾಗಿದ್ದಾರೆ.

**ತೊಗಲು ಗೊಂಬೆಯಾಟ:** ತೊಗಲು ಗೊಂಬೆಯಾಟ ಆಡಿಸುವವರಿಗೆ ಗೊಂಬೆರಾಮರೆಂದು ಕರೆಯಲಾಗುತ್ತದೆ. ಈ ಗೊಂಬೆರಾಮರು ಮೂಲತ; ಮರಾಠಿಗರೆಂದೂ ಮೈಸೂರಿನ ಮೇಲೆ ದಂಡೆತ್ತಿ ಬಂದ ಮರಾಠ ಸೇನೆಯೊಂದಿಗೆ ಈ ಪ್ರದೇಶಕ್ಕೆ ಬಂದವರೆಂದೂ ಹೇಳಲಾಗುತ್ತದೆ. ಈ ಕಲಾವಿದರು ಮರಾಠಿ ಮತ್ತು ಕನ್ನಡವನ್ನು ಬೆರೆಸಿ ಮಾತನಾಡುತ್ತಾರೆ. ಇವರು ಮೂಡಲಪಾಯದ ಯಕ್ಷಗಾನಗಳನ್ನೇ ಆಡಿಸುತ್ತಾರೆ. ಅಲೆಮಾರಿ ಜನರಾದ ಇವರಿಗೆ ಮನೆ ಮತ್ತು ಭೂಮಿಗಳನ್ನು ನೀಡುವ ಸರ್ಕಾರಿ ಯೋಜನೆ ಜಾರಿಗೆ ಬಂದ ಮೇಲೆ ಈ ಜನರು ಆಯಾ ಹಳ್ಳಿಗಳಲ್ಲಿ ವ್ಯವಸಾಯ ಆರಂಭಿಸಿ ನೆಲೆಗೊಂಡಿದ್ದಾರೆ. ಇವರು ನುಡಿಸುವ ಉದ್ದನೆಯ ನುಣುಪು ಕಡ್ಡಿಯ ವಾದ್ಯಕ್ಕೆ 'ಉಪ್ಪಂಗ' ಎಂದೂ ಕರೆಯಲಾಗುತ್ತಿತ್ತು. ಕಿಳ್ಳೇಕ್ಯಾತನನ್ನು ಕುಣಿಸುವ ಗೊಂಬೆರಾಮರನ್ನು 'ಕಿಳ್ಳಿಕ್ಯಾತರು' ಎಂದು ಕರೆಯಲಾಗುತ್ತದೆ. ನಾಗಮಂಗಲ ತಾಲೂಕಿನ ಕೆಲವು ಬೊಂಬೆಯಾಟದ ಕಲಾವಿದರು, ವಿದೇಶಗಳಿಗೂ ಹೋಗಿ ಬಂದಿದ್ದಾರೆ. ಈ ತಾಲೂಕಿನ, ತೊಗಲು ಗೊಂಬೆಯಾಟದ ಕಲಾವಿದರಾದ ಹೊಂಬಯ್ಯನವರು, ದೆಹಲಿಯೂ ಸೇರಿದಂತೆ ಹೊರನಾಡುಗಳಲ್ಲಿ, ಹಲವಾರು ಪ್ರದರ್ಶನ ನೀಡಿದ್ದಾರೆ. ಇವರಿಗೆ ೧೯೮೦ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯೂ, ೧೯೮೯ ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ದೊರೆತಿವೆ. ಕಳಸಯ್ಯ ಮತ್ತು ದೊಡ್ಡ ಹನುಮಂತಯ್ಯ ಅವರು ವೀರ ಅಭಿಮನ್ಯು, ಬಬ್ರುವಾಹನ, ಭಕ್ತ ಸುಧನ್ವ ಮುಂತಾದ ಕಥೆಗಳನ್ನು ನಡೆಸುತ್ತಾರೆ. ಕಳಸಯ್ಯನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೬ರಲ್ಲಿ ಪ್ರಶಸ್ತಿ ದೊರೆತಿದೆ.

**ಸೂತ್ರದ ಬೊಂಬೆಯಾಟ:** ಜೀವಂತ ವೇಷಧಾರಿಗಳ ಬದಲು, ವೇಷ ಕಟ್ಟಿದ ಬೊಂಬೆಗಳನ್ನು ಸೂತ್ರದ ಹಿಡಿತದಲ್ಲಿ ಆಡಿಸುವ ಸೂತ್ರಧಾರನ ಕೌಶಲ್ಯವೇ ಈ ಆಟದ ಜೀವಾಳವಾಗಿದ್ದು, ಅನೇಕ ಕಥಾಪ್ರಸಂಗಗಳೊಡನೆ ಮನರಂಜನೆಗಾಗಿ ರೂಪುಗೊಂಡು ಬೆಳೆದು ಬಂದಿರುವ ಕಲೆಯಾಗಿದೆ. ಆಟವು ಹೆಚ್ಚಾಗಿ ಶಿಷ್ಟ ಸಂಪ್ರದಾಯದಲ್ಲಿ ಕಂಡುಬರುತ್ತದೆ. ನಾಗಮಂಗಲ ತಾಲೂಕಿನ ಬೆಳ್ಳೂರು ಮತ್ತು ನೆಲ್ಲೀಕೆರೆಗಳಲ್ಲಿ ಇದನ್ನು ಗುರುತಿಸಲಾಗಿದ್ದು, ಬೆಳ್ಳೂರಿನ ಪುತ್ಥಳಿ ಮೇಳ ಹೆಸರುವಾಸಿಯಾಗಿದೆ. ನಾಗಮಂಗಲ ತಾಲೂಕಿನ ಬೆಳ್ಳೂರು ಗ್ರಾಮದ ಪುಟ್ಟ ರಾಮಾಚಾರ್ ಕೇವಲ ಪಂಚಲೋಹದ ವಿಗ್ರಹಗಳನ್ನೂ, ಮರದ ಬೊಂಬೆಗಳನ್ನೂ ತಯಾರಿಸುವ ಕಲಾವಿದ ಮಾತ್ರವಾಗಿರದೆ, ಯಕ್ಷಗಾನ, ಭಾಗವಂತಿಕೆ ಹಾಗೂ ಸೂತ್ರದ ಗೊಂಬೆಯಾಟ ಆಡಿಸುತ್ತಾ, ಯಕ್ಷಗಾನದ ಅತ್ಯಂತ ಹಳೆಯ ವಿಧಿ ವಿಧಾನಗಳನ್ನೂ ಉಳಿಸಿಕೊಂಡು ಬಂದಿದ್ದಾರೆ. ಅಂಬಲಜೀರಹಳ್ಳಿಯಲ್ಲಿ ಇವರು ರಚಿಸಿಕೊಂಡಿರುವ ಯಕ್ಷಗಾನ ತಂಡ ಹಲವಾರು ಪ್ರದರ್ಶನಗಳನ್ನು ನೀಡಿದೆ. ಪುಟ್ಟಶ್ಯಾಮಾಚಾರ್‌ರವರು ಮೈಸೂರು ವಿಶ್ವವಿದ್ಯಾಲಯದ ಜಾನಪದ ಮತ್ತು ವಸ್ತು ಸಂಗ್ರಹಾಲಯದಲ್ಲಿ ಕೆಲಕಾಲ ಜಾನಪದ ನಮೂನೆಗಾರರಾಗಿ ಕೆಲಸ ಮಾಡಿ ಕಲಾಕೃತಿಗಳನ್ನೂ ರಚಿಸಿದ್ದಾರೆ.

ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೮ರಲ್ಲಿ ಪ್ರಶಸ್ತಿ ಲಭಿಸಿದೆ. ಇವರ ತಂದೆ ಹುಚ್ಚಣ್ಣಾಚಾರ್‌ರವರೂ ಸೂತ್ರದ ಗೊಂಬೆಯಾಟದ ಕಲಾವಿದರಾಗಿದ್ದರು.

ನಾಗಮಂಗಲ ತಾಲೂಕಿನ ತಿಮ್ಮಪ್ಪಾಚಾರ್ಯರು 'ಶ್ರೀ ಕಾಳಿಕಾಂಬ ಪ್ರಸನ್ನ ಪುತ್ಥಳಿಗೊಂಬೆ ಮತ್ತು ಯಕ್ಷಗಾನ ಸಂಘ'ವನ್ನು ಸ್ಥಾಪಿಸಿ ಸೂತ್ರದ ಬೊಂಬೆಯಾಟದಲ್ಲಿ ಕೋಲಾಟವನ್ನೂ ಅಳವಡಿಸಿ ಪ್ರದರ್ಶಿಸಿದ್ದಾರೆ. ಇವರು ಸ್ವತಃ ತಯಾರಿಸಿದ ಬೊಂಬೆಗಳು ಅಮೆರಿಕಾ ದೇಶಕ್ಕೆ ರವಾನೆಯಾಗಿವೆ. ಇವರು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸೂತ್ರದ ಬೊಂಬೆಯಾಟ ಕಲಿಸಿದ್ದಾರೆ. ಕಾಳೇನಹಳ್ಳಿ (ಮೇಲುಕೋಟೆ ಹೋಬಳಿ)ಯ ಪಾಪಣ್ಣ, ದೊಡ್ಡೇನಹಳ್ಳಿಯ ಎಚ್.ರಾಮಯ್ಯ ಮುಂತಾದವರು ತೊಗಲುಗೊಂಬೆ ಯಕ್ಷಗಾನ ಕಲೆಯನ್ನು ಜೀವಂತವಿರಿಸಿರುವ ಇನ್ನಿತರ ಕಲಾವಿದರಾಗಿದ್ದಾರೆ.

**ಜನಪದ ಕಾವ್ಯ ಮೇಳಗಳು:** ಪಾಂಡವಪುರ, ಮದ್ದೂರು, ಹಾಗೂ ಮಳವಳ್ಳಿಯ ಸುತ್ತ ಮುತ್ತ ಕಂಡುಬರುವ ನೀಲಗಾರರು ಪ್ರಮುಖ ಧಾರ್ಮಿಕ ವೃತ್ತಿ ಗಾಯಕರಾಗಿದ್ದಾರೆ. ಇವರನ್ನು ಮಂಟೇದವರು, ಮಂಟೇದಯ್ಯ, ಮಂಟೇಸ್ವಾಮಿ, ಧರೆಗೆ ದೊಡ್ಡವರು ಎಂಬುದಾಗಿಯೂ ಕರೆಯುತ್ತಾರೆ. ಬೆಳಕವಾಡಿಯ ಬಳಿಯ ಬೊಪ್ಪಗೌಡನಪುರ ಇವರ ಮುಖ್ಯ ಕೇಂದ್ರ. ಮಳವಳ್ಳಿಯಲ್ಲಿಯೂ ಈ ಸಂಪ್ರದಾಯದವರಿದ್ದಾರೆ. 'ಮಂಟೇಸ್ವಾಮಿ ಕಾವ್ಯ', ನೀಲಗಾರರ ಧಾರ್ಮಿಕ ಕಾವ್ಯವಾದರೂ ಅದನ್ನಲ್ಲದೆ, ಇವರು ಬಿಳಿಗಿರಿ ರಂಗಯ್ಯ, ಮುಡುಕುತೊರೆ ಮಲ್ಲಯ್ಯ, ಬಸವಣ್ಣ, ಅಕ್ಕ ನಾಗಮ್ಮ, ಗುಂಡ ಬ್ರಹ್ಮಯ್ಯ, ಮೈದುನ ರಾಮಣ್ಣ, ಮಡಿವಾಳ ಮಾಚಯ್ಯ, ಮುಂತಾದ ಕಾವ್ಯಗಳನ್ನೂ ಹಾಡುತ್ತಾರೆ.

ಮಳವಳ್ಳಿಯ ರಾಚಯ್ಯನವರು ಮಂಟೆಸ್ವಾಮಿ ಕಾವ್ಯವೂ ಸೇರಿದಂತೆ ಇತರ ದೀರ್ಘ ಜನಪದ ಕಾವ್ಯಗಳನ್ನು ಹಾಡುವ ಕಲಾವಿದರು. ಅವರ ಶಿಷ್ಯರಾದ ಬೊಪ್ಪಗೌಡನಪುರದ ಗುರುಬಸವಯ್ಯನವರು ೧೯೬೭ರಲ್ಲಿ ತರೀಕೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜನಪದ ಸಮ್ಮೇಳನವೂ ಸೇರಿದಂತೆ ಹಲವಾರು ಸಮ್ಮೇಳನಗಳಲ್ಲಿ ಭಾಗವಹಿಸಿದ್ದು, ಇವರು ಹಾಡಿರುವ ಅರ್ಜುನ ಜೋಗಿ, ಮೈದುನ ರಾಮಣ್ಣ, ಮುಡುಕು ತೊರೆ ಮಲ್ಲಿಕಾರ್ಜುನ, ಪಿರಿಯಾಪಟ್ಟಣದ ಕಾಳಗ ಮುಂತಾದ ಕಾವ್ಯಗಳನ್ನು ಜೀ.ಶಂ.ಪ ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಗುರುಬಸವಯ್ಯನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ದೊರೆತಿದೆ.

ನಂಜುಂಡೇಶ್ವರ ಕಾವ್ಯವನ್ನು ಹಾಡುವ ಮೂಲಕ ಹೆಸರು ಮಾಡಿರುವ ಕ್ಯಾತನಹಳ್ಳಿಯ ಸುಬ್ಬಕ್ಕನವರು ಜನಿಸಿದ್ದು ಪಾಂಡವಪುರ ತಾಲೂಕಿನ ಸೀತಾಪುರ ಗ್ರಾಮದಲ್ಲಿ (ಸು.೧೯೨೦). ಯಮಳ್ಳಿಯ ಹಾಡುಗಾರ್ತಿ ಲಕ್ಷಮ್ಮನವರಿಂದ ಹಾಡುಗಾರಿಕೆಯ ಬಗ್ಗೆ ಒಲವು ಹೆಚ್ಚಿಸಿಕೊಂಡು ಜನಪದದ ಎಲ್ಲ ಪ್ರಕಾರದ ಹಾಡುಗಳನ್ನು ಹೇಳುವ ಕಲೆಯನ್ನು ಇವರು ಬೆಳೆಸಿಕೊಂಡಿದ್ದಾರೆ. ಸೊಸೆ ಸಣ್ಣ ತಾಯಿ, ಚಿಕ್ಕ ತಾಯಮ್ಮ ಮತ್ತಿತರರು ಸುಬ್ಬಕ್ಕನಿಂದ ಕಲಿತು ಹಾಡುತ್ತಾರೆ. ಇವರು ಹಾಡಿರುವ 'ಸುಬ್ಬಕ್ಕ ಹಾಡಿದ ನಂಜುಂಡೇಶ್ವರ ಕಾವ್ಯ' ಮತ್ತು ಕೆಲವು ಕಥೆಗಳೂ ಸಂಗ್ರಹಗೊಂಡು ಪ್ರಕಟವಾಗಿವೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೫ನೇ ಸಾಲಿನಲ್ಲಿ ಪ್ರಶಸ್ತಿ ಲಭಿಸಿದೆ.

**ಜನಪದಗೀತೆ**

ಕಥೆ, ತ್ರಿಪದಿ, ಕಥನ ಗೀತೆ ಮುಂತಾದ ಎಲ್ಲ ಪ್ರಕಾರಗಳಲ್ಲೂ ಹಾಡುವ ಹೆಳವರ ಲಕ್ಕಯ್ಯ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಹೆಳವರಕಟ್ಟೆ ಗ್ರಾಮದವರು. ಇವರು ಮೈಸೂರು, ನಾಗಮಂಗಲ ಚುಂಚನಗಿರಿ ಇತ್ಯಾದಿ ಸ್ಥಳಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಇವರಿಗೆ ೧೯೮೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ಬಳೆ ವೆಂಕಟಪ್ಪ ಎಂದು ಹೆಸರಾಗಿರುವ ಶ್ರೀರಂಗಪಟ್ಟಣದ ತಾಲೂಕಿನ

ಚಿಮ್ಮನಹಳ್ಳಿಯ ದೊಂಬಿದಾಸರ ವೆಂಕಟಪ್ಪ ಊರೂರು ಸುತ್ತಿ, ದೈನಂದಿನ ವಿಚಾರಗಳ ಬಗ್ಗೆ ಲಾವಣಿ ಕಟ್ಟಿ ೨೫ ಕ್ಕಿಂತ ಹೆಚ್ಚು ಸುದೀರ್ಘ ಲಾವಣಿಗಳನ್ನೂ, ಮಾಗಡಿ ಕೆಂಪೇಗೌಡ, ಬಾಲನಾಗಮ್ಮ, ಗಂಗೆ–ಗೌರಿ ಮುಂತಾದ ಜನಪದ ಕಾವ್ಯಗಳನ್ನೂ ಹಾಡುತ್ತಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೯ನೇ ಸಾಲಿನ ಪ್ರಶಸ್ತಿ ದೊರೆತಿದೆ. ಜನಪದ ಗಾಯಕಿ ನಂಜಮ್ಮ, ಮದ್ದೂರು ತಾಲೂಕಿನ ಶಿರಂಗೂರು ಬೆಕ್ಕಳಲೆ ಗ್ರಾಮದವರು. ಸೋಬಾನೆ ಪದ, ಬೀಸೋ ಪದ, ಒಸಗೆ ಪದ, ಗ್ರಾಮದೇವತೆಗಳಾದ ಮಾರಮ್ಮ, ಚಿಕ್ಕಮ್ಮ, ತೋಪಿನಪ್ಪ, ಅರೆತಿಮ್ಮಪ್ಪ, ಚುಂಚನಗಿರಿ ಭೈರಪ್ಪ, ಮೇಲುಕೋಟೆ ಚೆಲುವರಾಯ, ವರದಪ್ಪ, ದೇವಿರಮ್ಮ, ನಂದಿ, ಬಳೆಗಾರ, ಉತ್ತರದೇವಿ, ಸಂಗಾತಿ, ಅಣ್ಣತಂಗಿ ಮುಂತಾದ ಇನ್ನೂ ಅನೇಕ ಕಥನ ಕವನಗಳನ್ನು ಹಾಡುವ ನಿಪುಣೆಯಾಗಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೯೨ನೇ ಸಾಲಿನ ಪ್ರಶಸ್ತಿ ಲಭಿಸಿದೆ. ಮುದುಕನ ಮದುವೆ, ನಾಟಕದಲ್ಲಿರುವ ಮದುವೆ ಪ್ರಸಂಗದ ಸೋಬಾನೆ ಪದಗಳನ್ನು ಹಾಡುವ ಮೂಲಕ 'ಸೋಬಾನೆ ಕೃಷ್ಣೇಗೌಡ' ಎಂಬ ಹೆಸರನ್ನೂ ಪ್ರಸಿದ್ಧಿಯನ್ನೂ ಪಡೆದ ಕೃಷ್ಣೇಗೌಡರು, ನಾಟಕ, ಜಾತ್ರೆ, ಉತ್ಸವ, ಮದುವೆ, ಹಬ್ಬ–ಹರಿದಿನ ಮುಂತಾದ ಸಂದರ್ಭಗಳಲ್ಲಿ ದೇವರಪದ, ಸೋಬಾನೆ ಪದ, ದೂರೀ ಹಾಡು, ಲಾಲೀ ಹಾಡು, ಬೀಗರ ಪದ, ತಿಂಗಳ ಮಾವನ ಪದ, ಇತ್ಯಾದಿ ಜನಪದ ಗೀತೆಗಳನ್ನು ಹಾಡಿ ಹೆಸರು ಗಳಿಸಿದ್ದಾರೆ. ಹಲವು ಗ್ರಾಮಗಳ ಜನರಿಗೆ ಕೋಲಾಟ ಕಲಿಸಿಕೊಟ್ಟಿದ್ದಾರೆ. ಇವರಿಗೆ ೧೯೯೪ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ಲಭಿಸಿದೆ. ಲಕ್ಕೀಸಾಗರದ ಹನುಮಮ್ಮ, ಜನಪದ ಹಾಗೂ ಸೋಬಾನೆ ಹಾಡುಗಾರ್ತಿಯಾಗಿ ಪ್ರಸಿದ್ಧರಾಗಿದ್ದಾರೆ. ಬೆಂಗಳೂರು ಮತ್ತು ಮೈಸೂರು ಆಕಾಶವಾಣಿಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿರುವ ಇವರಿಗೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೯–೨೦೦೦ನೇ ಸಾಲಿನ ರಾಜ್ಯ ಪ್ರಶಸ್ತಿ ನೀಡಿದೆ.

ಹೆಮ್ಮಿಗೆ ಬಸವರಾಜು, ಕೆ.ಸುರೇಶ, ಎಚ್.ಎಂ.ಕೋಮಲ, ನೀಲಗಾರ ಮಹಾದೇವಸ್ವಾಮಿ, ಕೆ.ಎಸ್.ಮಹದೇವ, ಎಂ.ಮಹದೇವ, ಶಿವಮಹಾದೇವ, ಎಂ.ರವಿಗೌಡ, ಮುಂತಾದವರು ಜನಪದ ಗೀತೆಗಳನ್ನು ಹಾಡುವ ಹೆಸರಾಂತ ಗಾಯಕರಾಗಿದ್ದಾರೆ. ಮಂಚಮ್ಮ, ಸುಬ್ಬಮ್ಮ, ಕಲ್ಯಾಣಮ್ಮ, ನರಸಮ್ಮ ಮತ್ತು ತಂಡ, ಕೆಂಪಮ್ಮ, ಸ್ವಾಮಿ ಮತ್ತು ತಂಡ, ನರಸಮ್ಮ, ಇವರುಗಳೆಲ್ಲ ಸೋಬಾನೆ ಪದಗಳನ್ನು ಹಾಡುವ ಉತ್ಸಾಹಿ ಕಲಾವಿದರಾಗಿದ್ದಾರೆ. ಗೊಲ್ಲರ ಸಿಡ್ಲಮ್ಮ, ಯಾಚೇನಹಳ್ಳಿ ಸುಬ್ಬಮ್ಮ ಉತ್ತಮ ಜನಪದ ಗಾಯಕಿಯರು.

**ಬುರ್ರ ಕಥಾ:** ತೆಲುಗಿನಲ್ಲಿ ಪ್ರಚಲಿತವಿರುವ ಬುರ್ರ (ಬುರುಡೆ) ಕಥಾ ಪ್ರಕಾರ ಗಡಿನಾಡ ಕಲಾವಿದರಿಂದಾಗಿ ಕನ್ನಡ ನಾಡಿನಲ್ಲಿಯೂ ಪ್ರಚಾರಗೊಂಡು ಜನಪ್ರಿಯಗೊಂಡಿರುವ ಒಂದು ಜನಪದ ಕಲಾಪ್ರಕಾರವಾಗಿದೆ. ಮಳವಳ್ಳಿ ತಾಲೂಕಿನ ಹುಚ್ಚೇಗೌಡನ ದೊಡ್ಡಿಯ ಜಯಮ್ಮ ಅವರ ತಂದೆ ವೆಂಕಟಸ್ವಾಮಿದಾಸ ಮತ್ತು ಅವರ ತಾತ ತೊಳಸಿರಾಮದಾಸ್ ಬುರ್ರಕಥಾ ಕಲಾವಿದರಾಗಿದ್ದರು. ತೊಳಸಿ ರಾಮದಾಸ್‌ರವರು, ಮೈಸೂರು ಮಹಾರಾಜರಿಂದ ತಮ್ಮ ಬುರ್ರಕಥೆಗಾಗಿ ಜರೀಪೇಟ ಪಡೆದು ಸನ್ಮಾನಿತರಾಗಿದ್ದರು. ಜಯಮ್ಮನವರು ಬಾಲನಾಗಮ್ಮನ ಕತೆ, ಧನಲಕ್ಷ್ಮಿ ದೇಸಿಂಗನ ಕತೆ, ಕಾಂಬೋದಿರಾಜನ ಕತೆ ಮೊದಲಾದವುಗಳನ್ನು ಗಂಟೆಗಟ್ಟಲೆ ಹಾಡುತ್ತಾ ಬುರ್ರಕಥಾ ನಡೆಸುತ್ತಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೯೫ರ 'ಜನಪದ ಕಲಾವಿದ' ಪ್ರಶಸ್ತಿ ದೊರೆತಿದೆ.

**ವೀರಮಕ್ಕಳ ಕುಣಿತ:** ಇದು ಜಿಲ್ಲೆಯ ವಿಶಿಷ್ಟ ಅಚರಣೆಯಾಗಿದ್ದು ಹಿಂದೆ ನಾಡಿಗಾಗಿ ಹೋರಾಡಿ ಮಡಿದ ವೀರರ ಸಲುವಾಗಿ ಜರುಗುವ ಈ ಹಬ್ಬದಲ್ಲಿ, ಸಂತೇಕಸಲಗೆರೆ ಮುಂತಾದೆಡೆಯಲ್ಲಿ ವೀರಗೀತೆಯನ್ನು ಹಾಡುತ್ತ ಕುಣಿಯುವ ನೃತ್ಯವಾಗಿದೆ. ಇದನ್ನು ಇಂದಿಗೂ ಆಚರಿಸಲಾಗುತ್ತಿದ್ದು ಬಹಳಷ್ಟು ವೀರ ಮಕ್ಕಳು ನಿಮ್ನವರ್ಗಕ್ಕೆ

ಸೇರಿದವರಾಗಿರುತ್ತಾರೆ. ಮಂಡ್ಯ ತಾಲೂಕಿನ ಕೊತ್ತತ್ತಿ ಗ್ರಾಮದ ಯಜಮಾನ್ ಸಿದ್ದಯ್ಯನವರು ವೀರಮಕ್ಕಳ ಕುಣಿತದ, ಹಾಡುಗಳನ್ನು ಹೇಳುವಲ್ಲಿ ಖ್ಯಾತಿ ಪಡೆದಿರುವ ಕಲಾವಿದರು. ಮೈಸೂರು ಮಹಾರಾಜರ ಕಾಲದಲ್ಲಿ ಅರಮನೆಯ ಆವರಣದಲ್ಲಿ, ಮೈಸೂರು ದಸರಾ ಉತ್ಸವಗಳಲ್ಲಿ, ನಾಗಮಂಗಲ, ಮೈಸೂರು, ಮಂಡ್ಯ, ಮದ್ದೂರು ಮೊದಲಾದ ಊರುಗಳಲ್ಲಿ ವೀರಮಕ್ಕಳ ಕುಣಿತ ಹಾಗೂ ತೆಂಗಿನಕಾಯಿ ಪವಾಡ ಪ್ರದರ್ಶನವನ್ನು ಮಾಡುತ್ತಿದ್ದರು. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೯೬ರಲ್ಲಿ ಪ್ರಶಸ್ತಿ ನೀಡಲಾಗಿದೆ. ಎ.ಗಂಗಾಧರ ಅವರು ಈ ಪ್ರಕಾರದ ಇನ್ನೊಬ್ಬ ಕಲಾವಿದ.

**ಚೌಡಿಕೆ:** ಸವದತ್ತಿ ಎಲ್ಲಮ್ಮನ ಭಕ್ತರು ತಂತಿವಾದ್ಯದೊಂದಿಗೆ ಹೇಳುವ ಒಂದು ಕಲಾಪ್ರಕಾರವಾದ ಇದು ಉತ್ತರ ಕರ್ನಾಟಕದಿಂದ ಹಳೇ ಮೈಸೂರು ಸೀಮೆಯ ಕೆಲವು ಪ್ರದೇಶಗಳಲ್ಲಿ ಹರಡಿದ್ದು, ಕೃಷ್ಣರಾಜಪೇಟೆ ತಾಲೂಕಿನ ಹರಿಹರಪುರದ ಯಲ್ಲಯ್ಯನ ಮೂಲಕ ಈ ಜಿಲ್ಲೆಗೆ ಬಂದಿದೆ. ಇವರು ಹೆಂಡತಿ ಕೋಡಿಯಮ್ಮನ ಹಿಮ್ಮೇಳದೊಂದಿಗೆ ಯಲ್ಲಮ್ಮನ ಕಥೆಯೇ ಅಲ್ಲದೇ ಸತ್ಯಶರಣೆಸಂಕಮ್ಮ, ಮಲೆಮಹದೇಶ್ವರ, ನಂಜುಂಡೇಶ್ವರ, ಉತ್ತನಹಳ್ಳಿ ಮಾರಮ್ಮ, ಚುಂಚನಗಿರಿ ಭೈರವ, ಪಿರಿಯಾಪಟ್ಟಣದ ಕಾಳಗ, ತೋಡರ ತಮಾಷೆ, ಮುಂತಾದ ಹಲವಾರು ಕಥನ ಕವನಗಳನ್ನು ಹಾಡುತ್ತಿದ್ದರು. ಅವರ ಮರಣಾನಂತರ ಶಿಷ್ಯೆ ಚನ್ನಮ್ಮ, ಕೋಡಿಯಮ್ಮ ಹಾಗೂ ಹಲಗಮ್ಮ ಇವರುಗಳೊಂದಿಗೆ ಚೌಡಿಕೆ ನುಡಿಸುತ್ತಾ ಹಾಡುವ ಕಲೆಯನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡಿದ್ದಾರೆ.

**ಪಟದ ಕುಣಿತ:** ಸುಮಾರು ೧೦-೧೫ ಅಡಿ ಉದ್ದದ ಬಿದಿರಿನ ಬೊಂಬುಗಳಿಗೆ ಬಣ್ಣದ ರೇಷ್ಮೆ ಬಟ್ಟೆಯ ಪಟ್ಟಿಗಳನ್ನು ಸುತ್ತಿ ಅಲಂಕರಿಸಿ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿ ಅಳವಡಿಸಿದ್ದನ್ನು 'ಪಟ' ವೆಂದು ಕರೆಯಲಾಗುತ್ತದೆ. ಇದನ್ನು ಬಲಗೈಯಲ್ಲಿ ಹಿಡಿದು ಕುಣಿಯುತ್ತಾರೆ. ಬಿ.ಕೆ.ರಾಮಣ್ಣ , ಬಿ.ಟಿ.ಹನುಮೇಗೌಡ, ಮೋಟೇಗೌಡ, ಛೇರ್ಮನ್ ನಿಂಗೇಗೌಡ, ಅ.ಗಂಗಾಧರ, (ಕೋಲಾಟ, ವೀರಮಕ್ಕಳ ಕುಣಿತವನ್ನೂ ಮಾಡುತ್ತಾರೆ) ಮುಂತಾದವರು ಪಟ ಕುಣಿತದಲ್ಲಿ ನುರಿತವರಾಗಿದ್ದಾರೆ.

**ಸೋಮನ ಕುಣಿತ:** ಗ್ರಾಮವನ್ನು ರಕ್ಷಿಸುವ ಗ್ರಾಮ ದೈವವೇ 'ಸೋಮ' ಅಂದರೆ, 'ಅಂಗರಕ್ಷಕ' ಎಂಬ ನಂಬಿಕೆ ಜನಪದರಿಗಿದೆ. ಹಳದಿಸೋಮ, ಕೆಂಪುಸೋಮ (ಕೆಂಪರಾಯ) ಎಂಬ ಇಬ್ಬರು ಅಂಗರಕ್ಷಕರಿರುತ್ತಾರೆಂದು ಹೇಳಲಾಗುತ್ತದೆ. ಈ ಸೋಮಗಳ ಮುಖವಾಡವನ್ನು ಧರಿಸಿ ಕುಣಿಯುವುದಕ್ಕೆ ಸೋಮನ ಕುಣಿತ ಎನ್ನಲಾಗುತ್ತದೆ. ಜಿಲ್ಲೆಯ ಸಂತೇಬಾಚಹಳ್ಳಿ, ಮುದಗುಂಡೂರು, ಕಂಚಿನ ಕೋಟೆ, ಲಕ್ಷ್ಮೀಸಾಗರ ಮುಂತಾದೆಡೆಗಳಲ್ಲಿ ಈ ಕಲೆಯು ಬಳಕೆಯಲ್ಲಿದೆ.

**ಪೂಜಾ ಕುಣಿತ:** ಇದು ಈ ಜಿಲ್ಲೆಯ ಜಾತ್ರೆ, ಹಬ್ಬ, ಮತ್ತು ಉತ್ಸವಗಳಲ್ಲಿ ಕಂಡುಬರುವ ಒಂದು ಮಹತ್ವದ ಕುಣಿತವಾಗಿದೆ. ಚೌಕಾಕಾರದ ಮರದ ಚೌಕಟ್ಟಿನೊಳಗೆ ಬಿಗಿದ, ಭಾರವಾದ ದೇವರ ಮುಖವಾಡವನ್ನು ಸಕಲ ರೀತಿಯಲ್ಲಿ ಅಲಂಕರಿಸಿ ತಲೆಯ ಮೇಲೆ ಹೊತ್ತು ವಿವಿಧ ಭಂಗಿಗಳಲ್ಲಿ ಕುಣಿಯುತ್ತಾ ಮೆರೆಸುವುದಕ್ಕೆ 'ಪೂಜಾ ಕುಣಿತ' ಎನ್ನಲಾಗುತ್ತದೆ. ಜೆ.ಶಂಕರ್, ಬೋರಯ್ಯ, ಕೆ.ಪಿ.ದೇವರಾಜು, ಎಚ್.ಎನ್.ನಾಗೇಂದ್ರ, ಸಿದ್ಧಯ್ಯ ಮತ್ತು ತಂಡ, ಬಿ.ಸಿ.ಚಂದ್ರಶೇಖರ್, ಕೆ.ಜಿ.ಕೃಷ್ಣ, ಚನ್ನೇಶ ಮುಂತಾದವರು ಈ ಪೂಜಾ ಕುಣಿತದ ಕಲೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅನೇಕರು ಪೂಜಾ ಕುಣಿತ ಒಂದೇ ಅಲ್ಲದೆ, ದೊಣ್ಣೆ ವರಸೆ, ಕತ್ತಿ ವರಸೆ, ಬೆಂಕಿ ಭರಾಟೆ, ಬಿಜಲಿ ವರಸೆ, ಕೋಲಾಟ, ಸೋಬಾನೆಪದ ಮತ್ತು ಹನ್ನೆರಡು ಸೆರಗಿನ ಕುಣಿತಗಳನ್ನೂ ಬಲ್ಲವರಾಗಿದ್ದಾರೆ. ತಳಗೂದಿಯ ಚೀರ್ಕಣಯ್ಯ ಈ ಕಲೆಯಲ್ಲಿ ಸುಪ್ರಸಿದ್ಧ. ರಾಷ್ಟ್ರೀಯ ಉತ್ಸವಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ.

**ಕೋಲಾಟ:** ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಬರುವ ಕಾಡುಗೊಲ್ಲರು, ಈ ಜಿಲ್ಲೆಯ ಕೆಲವು ಭಾಗಗಳಲ್ಲಿದ್ದಾರೆ. ಇವರ ಗೆಜ್ಜೆ ಕೋಲಾಟ ಬಹಳ ಪ್ರಾಚೀನ ಮತ್ತು ಜನಪ್ರಿಯ. ಗೊಲ್ಲರ ದೈವಗಳಿಗೆ ಸಂಬಂಧಿಸಿದ ಕಥನ ಗೀತೆಗಳನ್ನೂ, ಬಿಡಿ ಹಾಡುಗಳನ್ನೂ ಇವರು ಹಾಡುತ್ತಾರೆ. ಚುಂಚನಗಿರಿಯ ತಪ್ಪಲಿನ ಹಟ್ಟಿ ಮತ್ತು ಮದ್ದೂರು ತಾಲ್ಲೂಕು ಗೊಲ್ಲರದೊಡ್ಡಿಯ ಗೊಲ್ಲರ ಕೋಲಾಟ ಅತ್ಯಂತ ಆಕರ್ಷಕವೆಂದೂ, ಹಟ್ಟಿಯ ಚಿಕ್ಕೀರಯ್ಯ, ಒಬ್ಬ ಮೇಧಾವಿ ಜನಪದ ಕಲಾವಿದನಾಗಿದ್ದಾನೆಂದೂ ತಿಳಿದು ಬರುತ್ತದೆ. ಕೋಲಾಟದಲ್ಲಿ ಅನೇಕ ಪ್ರಕಾರಗಳಿದ್ದು ಜಿಲ್ಲೆಯಲ್ಲಿ ವ್ಯಾಪಕವಾಗಿದೆ.

ಕೃಷ್ಣೇಗೌಡ, ರಾಚಪ್ಪ, (ಮರಗಾಲು ಕುಣಿತ, ಬೆಂಕಿ ಭರಾಟೆ, ಕತ್ತಿ ವರಸೆಯನ್ನೂ ನಡೆಸಿಕೊಡುತ್ತಾರೆ); ಸೋಬಾನೆ ಕೃಷ್ಣೇಗೌಡ, (ಗಾರುಡಿ ಗೊಂಬೆ ಮತ್ತು ಸೋಬಾನೆ ಪದ); ಎ.ಎಸ್.ರಾಮೇಗೌಡ, (ಪಂಜಿನ ಕುಣಿತ ಮತ್ತು ಹರಿಗೆ ಕುಣಿತ) ಮಹೇಶ್, ಶಿವಣ್ಣ, ಬಿ.ಎಂ.ರಾಮಕೃಷ್ಣ, ಬೇಕರಿ ಕಾಳ, (ಕೊರವಂಜಿ ಕೋಲಾಟ) ರಮೇಶ ಅಗಟಹಳ್ಳಿ, ಇವರು ಕೊಡದ ಕೋಲಾಟವನ್ನೂ ಆಡುವುದರಲ್ಲಿ ನುರಿತಿದ್ದಾರೆ. ಅಂಬರೀಶ್, ತಂಬೂರಿ ಜವರಯ್ಯ, ತಂಬೂರಿ ಸಿದ್ಧಯ್ಯ, ಮಂಟೇಲಿಂಗಯ್ಯ, ಪುಟ್ಟೇಗೌಡ, ಕೆ.ಎಲ್.ರಾಜಣ್ಣ, ಬಿ.ಎಂ.ರಾಜು, ಜಿ.ಆರ್.ಚಂದ್ರಶೇಖರ್, ಸಾಕಮ್ಮ, ಬಿ.ಎಂ.ಮಹೇಶ ಇವರುಗಳು ತತ್ವ ಪದಗಳನ್ನು ಹೇಳುವ ತಂಡಗಳನ್ನುಳ್ಳವರಾಗಿದ್ದಾರೆ. ಸೋಬಾನೆ ಕೃಷ್ಣಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಗಳೂ ಲಭಿಸಿವೆ.

**ತಮಟೆ ವಾದ್ಯ:** ಚರ್ಮವಾದ್ಯವಾದ ಇದೊಂದು ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಇದಿಲ್ಲದೆ ಯಾವುದೇ ಜಾತ್ರೆ, ಉತ್ಸವ ಜರುಗುವುದಿಲ್ಲ. ಜಿಲ್ಲೆಯ ಪ್ರತೀ ಗ್ರಾಮದಲ್ಲೂ ತಮಟೆ ಬಡಿಯುವ ಕಲಾವಿದರಿದ್ದಾರೆ.

**ನಂದಿಧ್ವಜ :** ಲೋಹದ ಹೊದಿಕೆ ಹಾಕಿದ ಸುಮಾರು ೧೫-೨೦ ಅಡಿ ಎತ್ತರದ ಕಂಬಕ್ಕೆ ನಂದಿಯ ಪಂಚಲೋಹದ ಕಿರುಮೂರ್ತಿಯನ್ನು ಹೊಂದಿಸಲಾಗಿದ್ದು, ಮುಂದೆ ಧ್ವಜವಿರುತ್ತದೆ. ನಾಲ್ಕಾರು ಜನ ಹೊರಬೇಕಾಗುವ ನಂದಿ ಧ್ವಜವನ್ನು ಏಕವ್ಯಕ್ತಿಯೇ ಮೇಲ್ಮುಖನಾಗಿ ಎತ್ತಿ, ತಮಟೆ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ನಡು - ನಡುವೆ ನಂದಿಧ್ವಜವನ್ನು ಕುಲುಕಾಡಿಸುತ್ತಾನೆ. ವಿಶೇಷ ಉತ್ಸವ ಸಂದರ್ಭಗಳಲ್ಲಿ ಮೆರೆಸುವ ಈ ಕಲಾ ಪ್ರದರ್ಶನವನ್ನು ಜಿಲ್ಲೆಯಲ್ಲಿ ಉಳಿಸಿಕೊಂಡು ಬಂದಿರುವ ಕಲಾವಿದರಲ್ಲಿ ಅಚ್ಚಪ್ಪನ ಕೊಪ್ಪಲಿನ ಸುಬ್ಬೇಗೌಡ, ಸೋಮವಾರಪೇಟೆಯ ಲೋಕೇಶ್, ಕ್ಯಾತನಹಳ್ಳಿಯ ಜೆ.ಶ್ರೀನಿವಾಸ್, ಇಂಗಲಗುಪ್ಪೆಯ ಬಸವಯ್ಯ ಹಾಗೂ ಕೀಲಾರದ ಬೋರೇಗೌಡ ಮುಂತಾದವರಿದ್ದಾರೆ. ಜಿಲ್ಲೆಯ ಗೆಜ್ಜಲಗೆರೆ, ಆಲ್ಕೆರೆ, ಸಾದೊಳಲು ಗ್ರಾಮಗಳು ನಂದಿಧ್ವಜ ಕುಣಿತಕ್ಕೆ ಪ್ರಸಿದ್ಧವಾಗಿವೆ.

**ವೀರಗಾಸೆ:** ಇಬ್ಬರಿಂದ ಇಪ್ಪತ್ತು ಮಂದಿವರೆಗೆ ಪಾಲ್ಗೊಳ್ಳಬಹುದಾದ ಇದರಲ್ಲಿ ವೀರಭದ್ರನ ಹಲಗೆಯನ್ನು ಕೊರಳಿಗೆ ಹಾಕಿಕೊಂಡು ಬಲಗೈಯಲ್ಲಿ ಖಡ್ಗ ಹಿಡಿದು, ತಮಟೆಯ ಸದ್ದಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ, ೬೩ ಪುರಾತನರು, ವೀರಭದ್ರ, ಬಸವಣ್ಣಾದಿ ಶರಣರ ಜೀವನಚರಿತ್ರೆಯನ್ನು ಹೇಳುತ್ತಾ ನಡುವೆ ಖಡ್ಗ ಝಳಪಿಸುತ್ತಾ ಕುಣಿಯುವ ಈ ಕುಣಿತ ವೀರಶೈವರ ವಿಶಿಷ್ಟ ಕಲೆಯಾಗಿದೆ. ವೀರಗಾಸೆಯ ಕಲಾವಿದರಾದ ಹಳೆಬೂದನೂರಿನ ಸದಾಶಿವಮೂರ್ತಿ ಹಾಗೂ ಹೆಚ್.ಎನ್.ಪರಶಿವಮೂರ್ತಿ, ನಾಗಮಂಗಲದ ಎನ್.ರುದ್ರೇಶ್, ಹುಳ್ಳೇನಹಳ್ಳಿಯ ಹೆಚ್.ಡಿ.ಆನಂದ ಹಾಗೂ ಮಾರ್ಗೋನಹಳ್ಳಿಯ ಎಸ್.ತಮ್ಮೇಗೌಡ ಇವರುಗಳು ವೀರಗಾಸೆಯ ಕಲೆಯನ್ನು ಮುಂದುವರಿಸಿದ್ದಾರೆ.

**ವೃತ್ತಿ ರಂಗಭೂಮಿ**

ಹರಿಕಥೆ, ಪುರಾಣ ಶ್ರವಣ, ವಾಚನ ಮುಂತಾದವುಗಳೇ ಮುಖ್ಯ ಮನರಂಜನಾ ಸಾಧನಗಳಾಗಿದ್ದ ಕಾಲದಲ್ಲಿ, ರಾಜ್ಯದಲ್ಲಿ, ಪಾರ್ಸಿ ನಾಟಕಗಳ ಪ್ರಭಾವದಿಂದ (ಸು.೧೮೭೦) ಮರಾಠಿ ನಾಟಕಗಳೂ, ಮರಾಠಿಯಿಂದ ಕನ್ನಡ ನಾಟಕಗಳೂ ಪ್ರಭಾವಿತಗೊಂಡು, ಮೈಸೂರು ಅರಮನೆಯ ಆಶ್ರಯದಲ್ಲಿ ನಾಟಕಗಳ ಪ್ರದರ್ಶನಗಳಾಗತೊಡಗಿ, ಕ್ರಮೇಣ ನಾಟಕ ಕಂಪನಿಗಳೂ ಸ್ಥಾಪಿಸಲ್ಪಟ್ಟವು. ಈ ಜಿಲ್ಲೆಯ ಜನರೂ ಅದರಿಂದ ಪ್ರಭಾವಿತರಾಗಿ ಕೆಲವು ನಾಟಕ ಕಂಪನಿಗಳನ್ನು ಕಟ್ಟಿರಬಹುದಾಗಿದ್ದರೂ, ಹೆಚ್ಚು ಬೆಳಕಿಗೆ ಬಂದಂತಹ ಕಂಪನಿಗಳನ್ನು ಈ ಜಿಲ್ಲೆಯವರು ಕಟ್ಟಿದ್ದು ಮಾತ್ರ ಮೈಸೂರಿನಲ್ಲಿಯೆ. ಮಂಡ್ಯದ ರಂಗಾಚಾರ್ಯರು (ರಾಜಧಾನಿ ನಾಟಕ ಮಂಡಲಿ) ಮತ್ತು ಶ್ರೀರಂಗಪಟ್ಟಣದ ವ್ಯಾಸರಾಯರು, ಅರಮನೆಯೊಂದಿಗೆ ಒಪ್ಪಂದ ಮಾಡಿಕೊಂಡು ಮೈಸೂರಿನಲ್ಲಿ ವೃತ್ತಿನಾಟಕ ಸಂಸ್ಥೆಗಳನ್ನು ಕಟ್ಟಿದರು. ಆಗ ಮಂಡ್ಯ ಹಳೆಯ ಮೈಸೂರು ಜಿಲ್ಲೆಯ ತಾಲೂಕಾಗಿದ್ದಿತು. ಅದ್ದರಿಂದ ಅಲ್ಲಿನ ಜನರಿಗೆ ರಾಜಧಾನಿ ಆಗಿದ್ದ ಮೈಸೂರಿನ ಸಂಪರ್ಕ ಹೆಚ್ಚಾಗಿತ್ತು. ಪ್ರಸಿದ್ಧ ಸಂಗೀತ ವಿದ್ವಾಂಸರಾದ ಮಳವಳ್ಳಿ ಸುಬ್ಬಣ್ಣನವರು 'ಶ್ರೀ ಸಾಮ್ರಾಜ್ಯ ಲಕ್ಷ್ಮೀ ನಾಟಕ ಸಭಾ'ವನ್ನೂ; ಎ.ಎನ್.ಶೇಷಾಚಾರ್ಯರು 'ಶೇಷ ಕಮಲ ಕಲಾ ಮಂಡಲಿ'ಯನ್ನೂ; ಎಂ.ಎಲ್.ಶ್ರೀಕಂಠೇಶಗೌಡರು 'ಕರ್ನಾಟಕ ನಾಟಕ ಸಭಾ'ವನ್ನೂ ಕಟ್ಟಿ ನಡೆಸಿದ್ದು ಪರಸ್ಥಳಗಳಲ್ಲಿಯೇ. ಈ ಕಲಾವಿದರು ಪ್ರವರ್ಧಮಾನಕ್ಕೆ ಬಂದುದೂ ಹೆಚ್ಚಿನ ಉತ್ತೇಜನ ಸಿಗುತ್ತಿದ್ದ ಮೈಸೂರು ಮತ್ತು ಬೆಂಗಳೂರುಗಳಿಗೆ ವಲಸೆ ಹೋಗಿ ನೆಲೆಸಿದ ನಂತರವೇ. ಎಚ್.ಎಲ್.ಎನ್.ಸಿಂಹ, ಎಂ.ಆರ್.ಶ್ರೀನಿವಾಸಮೂರ್ತಿ, ಮಳವಳ್ಳಿ ಸುಬ್ಬಣ್ಣ, ಗರುಡನಗಿರಿ ನಾಗೇಶರಾಯರು, ಅ.ನ.ಸು., ಮುಂತಾದವರೆಲ್ಲರೂ ಮೂಲತಃ ಮಂಡ್ಯ ಜಿಲ್ಲೆಯವರೆಂದು ಗುರುತಿಸಲ್ಪಡುವುದರಿಂದ, ಇಂತಹ ಎಲ್ಲ ರಂಗ ಕಲಾವಿದರ ಬಗ್ಗೆ ಇಲ್ಲಿ ಉಲ್ಲೇಖಿಸಲಾಗಿದೆ.

ಕೊಡಿಯಾಲದ ಲಕ್ಷ್ಮಯ್ಯ ಮತ್ತು ಸೋದರರು ೧೯ನೇ ಶತಮಾನದಲ್ಲಿ, ಸಿನಿಮಾ ಮಾದರಿಯಲ್ಲಿ ಭವ್ಯವಾದ, ಚಲಿಸುವ ರಂಗಭೂಮಿಯನ್ನು ನಿರ್ಮಿಸುತ್ತಿದ್ದರು. ಮಂಡ್ಯ, ಮೈಸೂರು ಮತ್ತು ಇತರ ಹಳ್ಳಿಗಳಿಗೆ ನಾಟಕದ ಸೀನರಿಗಳನ್ನು ಒದಗಿಸಿಕೊಡುವುದರಲ್ಲಿಯೂ 'ಕೊಡಿಯಾಲ' ಪ್ರಖ್ಯಾತವಾಗಿತ್ತು. ನರಸಯ್ಯ 'ಸೀನರಿ' ಗಳನ್ನು ರೂಪಿಸುವುದರಲ್ಲಿ ಖ್ಯಾತರಾಗಿದ್ದರು.

ಶ್ರೀವಿಜಯಲಕ್ಷ್ಮೀ ನಾಟಕ ಸಭಾ, ಆಲಹಳ್ಳಿ (ಕ್ಷೀರಪುರಿ) ನಾಟಕ ಮಂಡಳಿಯನ್ನು ಸಿ.ಮರಿದೇವರು ೧೯೨೦ರಲ್ಲಿ ಸ್ಥಾಪಿಸಿದರು. ೧೫ ವರ್ಷಗಳ ಕಾಲ ಪೌರಾಣಿಕ, ಸಾಮಾಜಿಕ ಮತ್ತು ಐತಿಹಾಸಿಕ ನಾಟಕಗಳನ್ನು ಈ ಮಂಡಳಿಯು ಮುಡುಕುತೊರೆ, ಕೊಳ್ಳೆಗಾಲ, ಮಳವಳ್ಳಿ, ಮೈಸೂರು ಮೊದಲಾದ ಸ್ಥಳಗಳಲ್ಲಿ ಪ್ರದರ್ಶಿಸಿದೆ. ಈ ಕಂಪನಿಯು ಆಡುತ್ತಿದ್ದ ಪ್ರಸಿದ್ಧ ನಾಟಕವೆಂದರೆ ರಾಜರಾಯಕೃತ 'ರಾಮಾಂಜನೇಯ ಯುದ್ಧ', ತುಮಕೂರು ಲಕ್ಷ್ಮೀನಾರಣಪ್ಪ, ಹಿರೋಡೆ ರಾಘವಯ್ಯ, ಮಿರ್ಲೆ ಶ್ರೀನಿವಾಸರಾಯರು, ತಾವರೆಕೆರೆ ಪುಟ್ಟನಂಜಪ್ಪ. ಬೆಂಗಳೂರಿನ ರಾಣಿಪಾರ್ಟು ಜಿ.ಮುನಿಸ್ವಾಮಯ್ಯ, (ಈ ಹೆಸರು ಅವರಿಗೆ ಬಂದಿತ್ತು) ಲಕ್ಷ್ಮಣ ರಾವ್, ತಿಮ್ಮೋಜಿ, ಬಫೂನ್ ರಾಘವೇಂದ್ರರಾವ್, ಮೈಸೂರು ಜಯಮ್ಮ, ನಾಗರತ್ನಮ್ಮ ಮುಂತಾದವರು ಈ ಕಂಪನಿಯಲ್ಲಿ ಅಭಿನಯಿಸುತ್ತಿದ್ದ ಮುಖ್ಯ ಕಲಾವಿದರಾಗಿದ್ದರು. ಮಂಡ್ಯದ ಮಣಿರಾಯರು ಪತ್ನಿ ಶಂಕರಮ್ಮನವರೊಂದಿಗೆ, ತಮ್ಮದೇ ಆದ 'ಲಕ್ಷ್ಮೀನಾರಾಯಣ ಕೃಪಾ ಪೋಷಿತ ನಾಟಕ ಮಂಡಲಿ' ಯನ್ನು ನಡೆಸುತ್ತಿದ್ದರು. ಇವರ ಮಗಳು ಆಶಾ ಪಾಟೀಲ್, ಜನಪ್ರಿಯ ಗಾಯಕಿ, ನಟಿಯಾಗಿದ್ದು, ಕಂಪನಿ ನಟ ಹುಬ್ಬಳ್ಳಿಯ ಚೆನ್ನಪ್ಪ ಪಾಟೀಲ್‌ರನ್ನು ೧೯೬೨ರಲ್ಲಿ ವಿವಾಹವಾಗಿ, ಅವರೊಂದಿಗೆ ತಮ್ಮ ಅಭಿನಯ ವೃತ್ತಿಯನ್ನು ಮುಂದುವರಿಸಿದ್ದಾರೆ. ಸಂಕೀಘಟ್ಟದ ಗೋಪಾಯಲ್ಯನವರ ವೃತ್ತಿ ರಂಗ ಕಂಪನಿ; ಹಾರೋಹಳ್ಳಿಯ ನರಸಪ್ಪನವರ ಕಂಪನಿ; ವ್ಯಾಸರಾಯರ ಕಂಪನಿ, ಮಂಡ್ಯದ ಚಿನ್ನಪ್ಪನವರ ಕಂಪನಿ, ಇತ್ಯಾದಿಗಳು ಇಲ್ಲಿಯವರದೇ ಆದ ವೃತ್ತಿ ನಾಟಕ ಕಂಪನಿಗಳಾಗಿದ್ದವು. ಬೇರೆ ಜಿಲ್ಲೆಗಳಿಂದ ಬಂದ ನಾಟಕದ ಕಂಪನಿಗಳು ಜಿಲ್ಲೆಯಲ್ಲಿ ಆಡುವ

ನಾಟಕಗಳನ್ನು ನೋಡುವ ಪ್ರೇಕ್ಷಕರ ಸಂಖ್ಯೆ ಹೆಚ್ಚು. ಉತ್ತರ ಕರ್ನಾಟಕದ ಓಬಳೇಶ್ವರ, ಹುಚ್ಚೇಶ್ವರ ಮುಂತಾದ ನಾಟಕ ಕಂಪನಿಗಳು, ಗುಬ್ಬಿ ವೀರಣ್ಣ ಕಂಪನಿ, ಇಲ್ಲಿಯವರೇ ಆದ ಅಘಲಯದ ಶೇಷಾಚಾರರ 'ಶೇಷ ಕಮಲ ನಾಟಕ ಕಂಪನಿ' ಮುಂತಾದ ಹಲವಾರು ಕಂಪನಿಗಳು ಬಂದು ಇಲ್ಲಿ ನಾಟಕ ಪ್ರದರ್ಶನ ನೀಡಿವೆ. ಹೀಗೆ ಇಲ್ಲಿ ಬೀಡು ಬಿಟ್ಟು, ಜಿಲ್ಲೆಯ ಜನರ ಮೇಲೆ ಅಳಿಸಲಾಗದ ಪ್ರಭಾವ ಬೀರಿದವುಗಳಲ್ಲಿ ಗುಬ್ಬಿ ವೀರಣ್ಣ ನಾಟಕ ಕಂಪನಿ, ಶ್ರೀ ಚಾಮುಂಡೇಶ್ವರಿ ನಾಟಕ ಕಂಪನಿಗಳು ಬಹಳ ಪ್ರಮುಖವಾದುವು. ೧೯೫೦ ರಿಂದ ೧೯೬೦ರ ಅವಧಿಯಲ್ಲಿ ಮಂಡ್ಯ ನಗರದಲ್ಲಿ ಗುಬ್ಬಿ ವೀರಣ್ಣ ಕಂಪನಿಯು ಬೀಡು ಬಿಟ್ಟು, ಸದಾರಮೆ, ಸಾಹುಕಾರ, ಪ್ರೇಮಲೀಲಾ, ಮುಂತಾದ ಸಾಮಾಜಿಕ ನಾಟಕಗಳನ್ನೂ ಪ್ರದರ್ಶಿಸಿದೆ. ಎ.ವಿ.ವರದಾಚಾರ್ಯರ ' ರತ್ನಾವಳಿ ಥಿಯೇಟ್ರಿಕಲ್ ಕಂಪನಿ'ಯು ಮಂಡ್ಯದಲ್ಲಿ ಮೊಕ್ಕಾಂ ಹೂಡಿ, 'ಶಾಕುಂತಲ, ರತ್ನಾವಳಿ, ಮನ್ಮಥ ವಿಜಯ, ವಿರಾಟಪರ್ವ, ರಾಮವರ್ಮ ಲೀಲಾವತಿ, ನಿರುಪಮ' ಮೊದಲಾದ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿದೆ. ಆಗ ಈ ನಾಟಕಗಳ ಪ್ರದರ್ಶನಕ್ಕೆ ಲಭ್ಯವಿದ್ದ ಒಂದೇ ಒಂದು ರಂಗಮಂದಿರವೆಂದರೆ ಮಂಡ್ಯದ ಶ್ರೀ ಲಕ್ಷ್ಮೀಜನಾರ್ಧನ ರಂಗ ಮಂದಿರ. ಎಂ.ವಿ.ಸುಬ್ಬಯ್ಯನಾಯ್ಡುರವರ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ' ೧೯೬೨ರಲ್ಲಿ ಮಂಡ್ಯದಲ್ಲಿ ಬೀಡು ಬಿಟ್ಟಿದ್ದಾಗಲೇ, ನಾಯ್ಡುರವರು ಹೃದಯಾಘಾತದಿಂದ ನಿಧನರಾದರು. ಮಂಡ್ಯ ನಗರದ ಹೊಸಹಳ್ಳಿಯಲ್ಲಿ ಹೆಚ್ಚಿನ ಸಂಖ್ಯೆಯ ವೃತ್ತಿ ನಿರತ ಕಲಾವಿದೆಯರು ಇದ್ದು ಹಲವಾರು ವರ್ಷಗಳಿಂದಲೂ ಸಾರ್ವಜನಿಕರ ಅಥವಾ ಕಂಪನಿಗಳ ಆಹ್ವಾನದ ಮೇರೆಗೆ, ನಾಟಕಗಳಲ್ಲಿ ಅಭಿಯನಯಿಸುವ ವೃತ್ತಿ ನಡೆಸುತ್ತಿದ್ದಾರೆ. ೧೯೯೮ ರಲ್ಲಿ ಹೊಸಹಳ್ಳಿಯ ೪೨ ಕಲಾವಿದೆಯರು ಸೇರಿ 'ಸ್ತ್ರೀ ನಾಟಕ ಮಂಡಳಿ' ಯೊಂದನ್ನು ಸ್ಥಾಪಿಸಿದ್ದಾರೆ. ಪಾಂಡಪುರದ ನಾಗರತ್ನ ಇದಕ್ಕೆ ಅಧ್ಯಕ್ಷೆಯಾಗಿಯೂ, ಭಾಗ್ಯಶ್ರೀ ಇದರ ಕಾರ್ಯದರ್ಶಿಯಾಗಿಯೂ ಮಂಡಳಿಯನ್ನು ನಡೆಸುತ್ತಿದ್ದಾರೆ. ಈ ಸ್ತ್ರೀ ನಾಟಕ ಮಂಡಳಿಯಲ್ಲಿ ಎಲ್ಲರೂ ಸ್ತ್ರೀಯರೇ ಇದ್ದು, ಪುರುಷ ಪಾತ್ರಗಳನ್ನೂ ಇವರೇ ನಿರ್ವಹಿಸುತ್ತಾರೆ. ಆಹ್ವಾನದ ಮೇರೆಗೆ ಈ ಮಂಡಳಿಯು ತನ್ನ ಕಲಾವಿದೆಯರ ತಂಡವೊಂದನ್ನು ಕಳಿಸಿ ನಾಟಕ ಪ್ರದರ್ಶನ ನೀಡುವ ವ್ಯವಸ್ಥೆ ಮಾಡುತ್ತದೆ. ಜನವರಿಯಿಂದ ಮೇ ತಿಂಗಳವರೆಗಿನ ಅವಧಿಯಲ್ಲಿ ಈ ಮಂಡಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಗಳು ದೊರೆಯುತ್ತವೆ. ಎಲ್ಲಾ ಕಲಾವಿದೆಯರ ಅನುಕೂಲಕ್ಕಾಗಿ ಒಂದು ಆಪತ್ ನಿಧಿಯನ್ನೂ ಆರಂಭಿಸಿದ್ದು, ಈ ಮಂಡಳಿಯ ಕಲಾವಿದೆಯರಿಗೆ ಮದುವೆ, ಸಂಸ್ಕಾರ, ಚಿಕಿತ್ಸೆ, ಆಪರೇಷನ್ ಮುಂತಾದ ಸಂದರ್ಭಗಳಲ್ಲಿ ಈ ನಿಧಿಯಿಂದ ಆರ್ಥಿಕ ನೆರವು ನೀಡಲಾಗುತ್ತದೆ.

### ವೃತ್ತಿ ರಂಗ ಕಲಾವಿದರು

ಜಿಲ್ಲೆಯಲ್ಲಿ ಉಲ್ಲೇಖನಾರ್ಹ ವೃತ್ತಿ ನಾಟಕ ಸಂಸ್ಥೆಗಳು ಇಲ್ಲವಾದರೂ, ಕನ್ನಡ ರಂಗಭೂಮಿಗೆ ಅನೇಕ ರಂಗ ಕಲಾವಿದರನ್ನು ಈ ಜಿಲ್ಲೆ ಒದಗಿಸಿ ಕೊಟ್ಟಿದೆ. ಮಂಡ್ಯದ ರಂಗಾಚಾರ್ಯರು (೧೮೫೬–೧೯೮೬) ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಹೋಬಳಿಯ ಕೊಪ್ಪಲು ಗ್ರಾಮದವರು. ಬಾಲ್ಯದಿಂದಲೂ ಓದು ವಿದ್ಯೆಗಿಂತ ರಂಗ ಚಟುವಟಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ೧೮೭೮ರವರೆಗೆ ಮಂಡ್ಯದಲ್ಲಿದ್ದು, ಆ ನಂತರ ಮೈಸೂರಿಗೆ ಸೇರಿದ ಮೇಲೆ ಅರಮನೆಯಲ್ಲಿ, ರಾಜಸಮ್ಮುಖದಲ್ಲಿ, ನಾಟಕ ಪ್ರದರ್ಶನಗಳನ್ನು ಮಾಡಿ ಅರಸರ ಮೆಚ್ಚುಗೆಗೆ ಪಾತ್ರರಾದರು. ಚಾಮರಾಜ ಒಡೆಯರು ೧೮೮೧ರಲ್ಲಿ ಅರಮನೆಯಲ್ಲಿಯೇ ಸಂಘಟಿಸಿದ ನಾಟಕ ಮಂಡಳಿಗೆ ಸೇರಿಕೊಳ್ಳಲು ಇವರನ್ನು ಆಹ್ವಾನಿಸಿದರೂ, ಸೇರದೆ ತಾವೇ 'ರಾಜಧಾನಿ ನಾಟಕ ಮಂಡಳಿ' ಕಟ್ಟಿದರು. ಇವರು ಮಂಡಳಿಯಿಂದ ಸತ್ಯವರ್ಮ ಚರಿತ್ರೆ, ರತ್ನಾವಳಿ, ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು. ೧೮೮೩ರಲ್ಲಿ ಇದು 'ಮೆಟ್ರೊ ಪಾಲಿಟನ್ ಆಪರೇಟ್ ಟ್ರೂಪ್' ಎಂದು ಬದಲಾವಣೆಗೊಂಡಿತು. ಯು.ಕೆ.ವ್ಯಾಸರಾಯರು ಗುಬ್ಬಿ ಕಂಪನಿಯಲ್ಲಿ ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದು, ಆನಂತರ ಮಂಡ್ಯದಲ್ಲಿದ್ದು, ಮದ್ದೂರು, ಶ್ರೀರಂಗಪಟ್ಟಣಗಳಲ್ಲಿ ವೃತ್ತಿ ನಾಟಕ ಕಂಪನಿಯನ್ನು ನಡೆಸುತ್ತಿದ್ದರೆಂದು

ತಿಳಿದುಬರುತ್ತದೆ. ಮದ್ದೂರು ಶ್ಯಾಮರಾಯರು ಪಾಠಶಾಲೆಯ ಮೂಲಕ ಮೈಸೂರಿಗೆ ಹೋಗಿ ಆಡಿದ ನಾಟಕಗಳಲ್ಲಿ, ತಮ್ಮ ಸ್ತ್ರೀ ಪಾತ್ರಗಳಿಂದ, ಲಕ್ಷ್ಮೀ ನರಸಿಂಹರಾಯರು, ಹನುಮಂತಗೌಡರು ಮತ್ತು ನಾಟಕಕರ್ತ ತೋರಣಗಲ್ ರಾಜಾರಾಯರುಗಳ ದೃಷ್ಟಿಗೆ ಬಿದ್ದು ೧೯೨೧ ರಲ್ಲಿ 'ಸಾಹಿತ್ಯ ನಾಟಕ ಮಂಡಲಿಗೆ' ಸೇರುವಂತಾಯಿತು. ಇವರು ರಾಮದಾಸ್, ವಿದ್ಯಾರಣ್ಯ, ಲವ-ಕುಶ, ಇಂಗ್ಲೆಂಡು ರಾಣಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದುದಲ್ಲದೆ, ಮುಂದೆ ಪ್ರಾಚೀನ ಮತ್ತು ಆಧುನಿಕ ರೀತಿಯ ಪ್ರಸಾಧನಗಳಲ್ಲೂ ಇವರು ಪಾಂಡಿತ್ಯವನ್ನು ಪಡೆದರು.

ಅಗ್ರಪಂಕ್ತಿಯ ಗಾಯಕ ನಟರೆಂದು ಖ್ಯಾತರಾಗಿದ್ದ, ವ್ಯಾಸರಾಯ ಮಠದ ಸ್ವಾಮಿಗಳಿಂದ 'ಅಭಿನಯ ವಿಶಾರದ' ಎಂಬ ಬಿರುದನ್ನು ಪಡೆದಿದ್ದ ಜಿ.(ಗರುಡನಗಿರಿ) ನಾಗೇಶರಾಯರು ಜನಿಸಿದ್ದು ಶ್ರೀರಂಗಪಟ್ಟಣದಲ್ಲಿ. ಪ್ರಾಥಮಿಕ ವಿದ್ಯಾಭ್ಯಾಸವಾದದ್ದು ಈ ಜಿಲ್ಲೆಯಲ್ಲಿಯೇ. ರತ್ನಾವಳಿ ಥಿಯೇಟ್ರಿಕಲ್ ಕಂಪನಿ, ಮಂಡ್ಯದಲ್ಲಿ ಬೀಡು ಬಿಟ್ಟಾಗ ವರದಾಚಾರ್ಯರ ಎಲ್ಲಾ ನಾಟಕಗಳನ್ನು ವೀಕ್ಷಿಸಿ ಪ್ರಭಾವಿತರಾದವರು. ಓದನ್ನು ಕಡೆಗಣಿಸಿ ನಾಟಕ ಕ್ಷೇತ್ರಕ್ಕೆ ಇಳಿದು, ವಿವಿಧ ನಾಟಕ ಕಂಪನಿಗಳಲ್ಲಿ ಅಭಿನಯಿಸಿದವರು. ಇವರ ಹಾಡುಗಾರಿಕೆಯನ್ನು ಸಂಗೀತ ವಿದ್ವಾನ್ ಚೆಂಬೈ ವೈದ್ಯನಾಥ ಭಾಗವತರ್, ಪದ್ಮಶ್ರೀ ಸ್ಥಾನಂ ನರಸಿಂಹರಾವ್, ಉಸ್ತಾದ್ ಕರೀಂಖಾನ್ ಮುಂತಾದವರು ಮೆಚ್ಚಿದ್ದರು. ಮದರಾಸಿನ ಖ್ಯಾತ ಧ್ವನಿ ಮುದ್ರಿಕೆ ಸಂಸ್ಥೆಯಾದ 'ಓಡಿಯನ್' ೧೯೨೪ರಲ್ಲಿ, ಅಭೀಷಣ ತಪೋ ಮಹಾಗ್ನಿ, (ಮನ್ಮಥ ವಿಜಯ); 'ಏಕೆ ಕೋಪಿಪೆ' ಮತ್ತು 'ಹೋಗುವೆ ಎಲ್ಲಿಗೆ' (ವಿರಾಟ ಪರ್ವ); ಮೊದಲಾದ ಹಾಡುಗಳನ್ನು ಜಿ.ನಾಗೇಶರಾಯರಿಂದ ಹಾಡಿಸಿ ಹೊರ ತಂದ ಧ್ವನಿ ಮುದ್ರಿಕೆ ನಾಡಿನ ತುಂಬ ಜನಪ್ರಿಯಗೊಂಡವು. ನಟ, ಲೇಖಕ ಹಾಗೂ ದಿಗ್ದರ್ಶಕರಾಗಿ ಹೆಸರಾಗಿದ್ದ ಎಚ್.ಎಲ್.ಎನ್.ಸಿಂಹ (೧೯೦೪-೧೯೭೨) ರವರು ಜನಿಸಿದ್ದು ಮಳವಳ್ಳಿಯಲ್ಲಿ. ಕನ್ನಡ ರಂಗಭೂಮಿಗೆ ಹೊಸ ಹಾದಿ ತೋರಿದ್ದು, ಕನ್ನಡ ಚಿತ್ರಗಳ ಉತ್ಕರ್ಷಕ್ಕಾಗಿ ಶ್ರಮಿಸಿದ್ದಾರೆ. ಹಲವಾರು ನಟ-ನಟಿಯರನ್ನು ನಾಟಕ ಕ್ಷೇತ್ರಕ್ಕೆ ಹಾಗೂ ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಹಲವಾರು ನಾಟಕ ಕಂಪನಿಗಳಲ್ಲಿ ಅಭಿನಯಿಸಿ, 'ಅಬ್ಬಾ ಆ ಹುಡುಗಿ', ಶೇಕ್ಸ್‌ಪಿಯರಿನಿಂದ ಅನುವಾದಿಸಿದ 'ಬಂಗಾರದ ಬರ', 'ದಂಡ್ ರಾಜ್' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ೧೯೩೧ರಲ್ಲಿ ಇವರು ರಚಿಸಿದ 'ಸಂಸಾರ ನೌಕೆ' ರಾಜ್ಯಾದಾದ್ಯಂತ ಅಪಾರ ಜನಪ್ರಿಯತೆ ಗಳಿಸಿತಲ್ಲದೆ, ಚಲನಚಿತ್ರವಾಗಿಯೂ ಖ್ಯಾತಿಗಳಿಸಿತು. ಇವರು ಚಿತ್ರರಂಗದಲ್ಲೂ ಶ್ರಮಿಸಿದ್ದಾರೆ. ವರದಾಚಾರ್ಯರ ಕಂಪನಿಯಲ್ಲಿ ನಟರಾಗಿದ್ದ ಮೇಲುಕೋಟೆಯ ವಜ್ರಕಂಠಂ ಶ್ರಿಂಗ್ರೈಯ್ಯಂಗಾರ್, ಮುಂದೆ ಸ್ವತಃ 'ಮಣಿಮಾಲಿನಿ ನಾಟಕ ಕಂಪನಿ' ಕಟ್ಟಿ ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದರು.

ಎಚ್.ಆರ್.ಶಾಸ್ತ್ರಿಯವರು (ಎಚ್.ರಾಮಚಂದ್ರ ಶಾಸ್ತ್ರಿ - ೧೯೦೫) ಮೂಲತಃ ಈ ಜಿಲ್ಲೆಯ ಮೇಲುಕೋಟೆ ಬಳಿಯ ಹಳೇಬೀಡಿನವರು. ಕ್ರಿ.ಶ.೧೯೨೦ರಲ್ಲಿ 'ಭಾರತ ಜನಮನೋಲ್ಲಾಸಿನಿ ನಾಟಕ ಸಭಾ', ಸೇರಿ ಆನಂತರ ವಿವಿಧ ಕಂಪನಿಗಳಲ್ಲಿ ಹಲವಾರು ನಾಟಕಗಳಲ್ಲಿ, ಹಾಗೂ ೨೦೫ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಕೊಡಿಯಾಲದಲ್ಲಿ ೧೯೪೨ರಲ್ಲಿ, 'ಶ್ರೀ ಮಂಜುನಾಥೇಶ್ವರ ನಾಟಕ ಮಂಡಳಿ' ಸ್ಥಾಪಿಸಿ ಮೂರು ವರ್ಷಗಳ ಕಾಲ ರಾಜ್ಯಾದಾದ್ಯಂತ ನಾಟಕ ಪ್ರದರ್ಶನ ಮಾಡಿದರು. ಆದರೆ ಆರ್ಥಿಕ ಮುಗ್ಗಟ್ಟಿನಿಂದ ಇದು ನಿಂತು ಹೋಯಿತು. ನಲವತ್ತು ವೃತ್ತಿ ನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ ಆರ್.ಜಿ.ಹೊನ್ನಂಜಾಚಾರ್‌ರವರು ತಮ್ಮ ಬಾಲ್ಯವನ್ನು ಕಳೆದದ್ದು ಈ ಜಿಲ್ಲೆಯಲ್ಲಿ. ಸಂಕೀಘಟ್ಟದ ಗೋಪಾಲಯ್ಯ ಮತ್ತು ಹಾರೋಹಳ್ಳಿ ನರಸಪ್ಪನವರ ವೃತ್ತಿ ನಾಟಕ ಕಂಪನಿಗಳಲ್ಲಿ ತಮ್ಮ ಸೇವೆಯನ್ನು ೧೧ನೇ ವರ್ಷದಲ್ಲಿ ಪ್ರಾರಂಭಿಸಿ, ಆ ನಂತರ ಹಲವಾರು ಕಂಪನಿಗಳಲ್ಲಿ ದುಡಿದ ಇವರಿಗೆ 'ಗಾಯನ ಗಂಧರ್ವ' ಎಂಬ ಬಿರುದಿತ್ತು. ಎ.ಎನ್.ಶೇಷಾಚಾರ್ (ಅಘಲಯಂ ನರಸಿಂಹ ಅಯ್ಯಂಗಾರ್-೧೯೧೫) ರವರು ಹನ್ನೊಂದನೇ ವಯಸ್ಸಿನಲ್ಲಿ ಮೈಸೂರಿಗೆ ತೆರಳಿ ಉತ್ತಮ ರಂಗ ಕಲಾವಿದರಾಗಿ ಹೆಸರು ಪಡೆದವರು. ಸ್ವಂತ ನಾಟಕ ಕಂಪನಿ ಸ್ಥಾಪಿಸಿ, ೧೯೭೧ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯಿಂದ ಪ್ರಶಸ್ತಿಯನ್ನು

ಪಡೆದವರು. ಈ ಜಿಲ್ಲೆಯ ಕೊಡಿಯಾಲ ಗ್ರಾಮದಲ್ಲಿ ಜನಿಸಿ, ರಂಗ ಕಲಾವಿದರಾಗಿ ಹೆಸರು ಗಳಿಸಿದ ಯು.ಆರ್.ನಾರಾಯಣಯ್ಯನವರು (೧೯೧೮) ತಮ್ಮ ಹುಟ್ಟೂರಿನಲ್ಲಿ ಒಂದು ನಾಟಕ ಸಂಸ್ಥೆಯನ್ನು ೧೯೩೩ರಲ್ಲಿ ಕಟ್ಟಿದ್ದರು. ಅನೇಕ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಇವರ ನಾರದ ಮತ್ತು ಕೃಷ್ಣನ ಪಾತ್ರಗಳನ್ನು ನೋಡಲು ಹಾಗೂ ಇವರ ಇಂಪಾದ ಹಾಡು ಕೇಳಲು ಜನರು ಮುಗಿ ಬೀಳುವಂತೆ ಸೇರುತ್ತಿದ್ದರು. ಗುಬ್ಬಿ ವೀರಣ್ಣ ಮುಂತಾದ ಹಲವಾರು ಕಂಪನಿಗಳಲ್ಲಿ ಇವರು ದುಡಿದಿದ್ದಾರೆ. ನಟ ಸಾರ್ವಭೌಮ ರಾಜ್‌ಕುಮಾರ್‌ರವರನ್ನೂ ಸೇರಿದಂತೆ ಅನೇಕರಿಗೆ ಆ ದಿನಗಳಲ್ಲಿ ಸಂಗೀತ ಶಿಕ್ಷಣ ನೀಡಿದ್ದಾರೆ. ಆಕಾಶವಾಣಿ ಕಲಾವಿದರೂ ಆದ ಇವರು ವಾಣಿ ಸಂಗೀತ ಶಾಲೆಯನ್ನು ನಡೆಸಿದ್ದಾರೆ. ಇವರಿಗೆ 'ಸಂಗೀತ ಕಲಾ ಕೇಸರಿ' ಎಂಬ ಬಿರುದೂ, ೧೯೯೬ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯೂ ದೊರೆತಿವೆ. ಲಕ್ಷ್ಮೀಸಾನಿ ಕಂಪನಿಯು ಕೊಡಿಯಾಲದ ಬಾಲಕಲಾವಿದರ ಒಂದು ನಾಟಕ ಸಂಸ್ಥೆಯಾಗಿದೆ. ಕನ್ನಡ ರಂಗಭೂಮಿಯ ಆಂಜನೇಯನೆನಿಸಿಕೊಂಡ, ಬೆಳ್ಳೂರು ನಂಜುಂಡಯ್ಯನವರು 'ಆಂಜನೇಯ' ನ ಪಾತ್ರದಿಂದಲೇ ಪ್ರಸಿದ್ಧರಾದವರು. ಕನ್ನಡ ನಾಡಿನ ಅನೇಕ ಕಂಪನಿಗಳೂ ಇವರ ಅಭಿನಯ ಸೇವೆ ಪಡೆದಿವೆ. ಸಾಲಸೋಲಗಳಿಂದ ನರಳುತ್ತಿದ್ದ ಹಲವಾರು ವೃತ್ತಿನಾಟಕ ಸಂಸ್ಥೆಗಳು ನಂಜುಂಡಯ್ಯನವರನ್ನು ಕರೆಸಿ, ಸಂಪೂರ್ಣ ರಾಮಾಯಣ, ಲಂಕಾದಹನ ಅಥವಾ ರಾಮಾಂಜನೇಯ ಯುದ್ಧವನ್ನು ಆಡಿಸಿ, ಕಲೆಕ್ಷನ್ ಹೆಚ್ಚಿಸಿಕೊಂಡು ಸಾಲದಿಂದ ಪಾರಾಗುತ್ತಿದ್ದರೆಂದೂ; ಕೇವಲ ಇಪ್ಪತ್ತು, ಇಪ್ಪತ್ತೆರಡು ರೂಪಾಯಿಗಳಿದ್ದ ದೈನಂದಿನ ಕಲೆಕ್ಷನ್ ಇವರಿದ್ದಲ್ಲಿ. ಒಮ್ಮೆಲೆ ದಿನಕ್ಕೆ ಎಂಟುನೂರಕ್ಕೆ ಏರುತ್ತಿತ್ತೆಂದೂ ಎಚ್.ಕೆ.ರಂಗನಾಥ್‌ರವರು, 'ಬಣ್ಣಬೆಳಕು' ಪುಸ್ತಕದಲ್ಲಿ ಹೇಳಿದ್ದಾರೆ. ಯಾವುದೇ ಸಂಸ್ಥೆ ಕರೆದರೂ 'ಸಂಪೂರ್ಣ ರಾಮಾಯಣ' ನಾಟಕಕ್ಕೆ ಮೂವತ್ತು ರೂಪಾಯಿ 'ರಾಮಾಂಜನೇಯ ಯುದ್ಧವಾದರೆ ೨೫, 'ಲಂಕಾದಹನ' ೨೦ ರೂಪಾಯಿಗಳ ನಿಗದಿತ ದರವನ್ನು ಪಡೆದು ನಂಜುಂಡಯ್ಯನವರು ನಾಟಕದಲ್ಲಿ ಅಭಿನಯಿಸುತ್ತಿದ್ದರು.

ಮೇಲುಕೋಟೆಯವರಾದ ಎಂ.ಎಸ್.ಪುಟ್ಟಮ್ಮ, ಅಲ್ಲಿಯ 'ಶ್ರೀ ಯದುಗಿರಿ ಚೆಲ್ವ ನಾರಾಯಣ ಥಿಯೇಟ್ರಿಕಲ್ ಕಂಪನಿ' ಯ 'ಕೃಷ್ಣ ಲೀಲಾ' ನಾಟಕದಲ್ಲಿ ರಾಧೆಯ ಪಾತ್ರದ ಮೂಲಕ ಬಾಲ ಕಲಾವಿದೆಯಾಗಿ ಸೇರಿ, ಮಂಡ್ಯದಲ್ಲಿ ೧೯೫೦ರಲ್ಲಿ ವೃತ್ತಿ ರಂಗಭೂಮಿ ಕಲಾವಿದೆಯಾಗಿ ಬೆಳೆದರು. 'ಸಂಗೀತ ಸಾಮ್ರಾಜ್ಯ ನಾಟಕ ಮಂಡಲಿ' ಯಲ್ಲಿ 'ಭಕ್ತ ಅಂಬರೀಷ' ದ ಲೀಲೂ ಆಗಿ, ಸತ್ಯ ಪರಿಶ್ಚಂದ್ರದ ಕಾಲಕಂಠನಾಗಿ ಹೆಸರು ಮಾಡಿದರು. 'ಜಯಲಕ್ಷ್ಮಿ ನಾಟಕ ಸಭಾ', ಲಲಿತಮ್ಮನ 'ಮಿತ್ರ ಮಂಡಲಿ', ಖ್ಯಾತ ಚಲನಚಿತ್ರ ನಟಿ ಕಲ್ಪನಾರ 'ಮಿನುಗು ತಾರಾ ಮಂಡಲಿ' ಮುಂತಾದವುಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಖ್ಯಾತಿ ಪಡೆದ ಇವರು ಪ್ರಸಿದ್ಧ ನಟಿಯಾಗಿದ್ದಾರೆ.

ಪಾಂಡವಪುರ ತಾಲೂಕು ಹಳೇಬೀಡಿನ ಹೆಚ್.ಕೆ.ಯೋಗಾನರಸಿಂಹ (೧೯೨೭–೨೦೦೨) ರವರು ನಟ, ಗಾಯಕ, ಹಾರ್ಮೋನಿಯಂ ಮಾಸ್ತರ, ಕವಿ, ನಾಟಕಕಾರ, ನಾಟಕ ಕಂಪನಿಯ ಮಾಲೀಕ ಹಾಗೂ ಸಂಗೀತ ನಿರ್ದೇಶಕ ಎಲ್ಲವೂ ಆಗಿ ಹೆಸರು ಗಳಿಸಿದ್ದಾರೆ. ಸಮಯ ಬಿದ್ದಾಗ ಯಾವುದೇ ರೀತಿಯ ಕೆಲಸಕ್ಕೂ ಸಿದ್ಧರಾಗುತ್ತಿದ್ದ ಯೋಗಾನರಸಿಂಹರು, ಚಾಮರಾಜನಗರದಲ್ಲಿದ್ದ ಅವರ ಚಿಕ್ಕಪ್ಪ ಹೆಚ್.ರಾಮಚಂದ್ರಶಾಸ್ತ್ರಿಗಳ ಮಂಜುನಾಥೇಶ್ವರ ನಾಟಕ ಮಂಡಲಿಯಲ್ಲಿ ನಟನೆ ಆರಂಭಿಸಿದರು. ಹಳ್ಳಿಯಲ್ಲೇ ಉಳಿದು, ಹಳ್ಳಿಗರಿಗೆ ನಾಟಕ ಕಲಿಸಿ, ಆಡಿಸಿ, ನಾಟಕದ ಮೇಷ್ಟ್ರು ಎನಿಸಿಕೊಂಡರು. ಮೇಲುಕೋಟೆಯ ಹವ್ಯಾಸಿ ನಾಟಕ ಸಂಸ್ಥೆಯಲ್ಲಿ ನಾಟಕ ನಿರ್ದೇಶಕರಾಗಿ, ವೈರಮುಡಿ ಉತ್ಸವದಲ್ಲಿ ನಾಟಕಗಳನ್ನು ಆಡಿಸುತ್ತಿದ್ದರು. ಇತರ ಕೆಲವು ಮಂಡಳಿಗಳಲ್ಲೂ ಕೆಲಸ ಮಾಡಿದ್ದಾರೆ. ಸ್ವತಃ 'ಸರ್ವೋದಯ ನಾಟಕ ಮಂಡಳಿ' ಯನ್ನೂ ಸ್ಥಾಪಿಸಿ ರಾಜ್ಯದಾದ್ಯಂತ ಸಂಚರಿಸಿ, ೧೨ ವರ್ಷಗಳ ಕಾಲ ನಡೆಸಿದ್ದಾರೆ. ಕಲ್ಬುರ್ಗಿಯ ಮೊಕ್ಕಾಂನಲ್ಲಿ ಚಂಡಮಾರುತ ಬೀಸಿದಾಗ ಈ ಕಂಪನಿ ಸ್ಥಗಿತಗೊಂಡಿತು. ಚಲನಚಿತ್ರರಂಗಕ್ಕೂ ಇವರ ಸೇವೆ ಸಂದಿದೆ. ಕರ್ನಾಟಕ ನಾಟಕ ಅಕಾಡೆಮಿಯು ಇವರಿಗೆ ೧೯೯೮ರಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿ ನೀಡಿದೆ. ಮಂಡ್ಯ ಜಿಲ್ಲೆಯ ಕುಂದೂರು

ಗ್ರಾಮದ ಕೆ.ಎಲ್.ನಾಗರಾಜ ಶಾಸ್ತ್ರಿ (೧೯೨೬) ರವರು, ೧೯೪೨ ರಿಂದ ವಿವಿಧ ವೃತ್ತಿ ನಾಟಕ ಕಂಪನಿಗಳಿಗೆ ಮತ್ತು ಕೆಲವು ಹವ್ಯಾಸಿ ತಂಡಗಳಿಗೂ ಕೊಳಲು ನುಡಿಸುವ ಮೂಲಕ ನಾಟಕ ಕ್ಷೇತ್ರದಲ್ಲಿ ಹೆಸರಾಗಿದ್ದಾರೆ. ಮಂಡ್ಯ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಂಗೀತಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯಿಂದ ೧೯೯೮ರಲ್ಲಿ ಪ್ರಶಸ್ತಿ ದೊರೆತಿದೆ. ರಂಗ ಎಂದು ಜನಪ್ರಿಯರಾಗಿದ್ದ ಎಚ್.ಆರ್.ರಂಗಸ್ವಾಮಿ (೧೯೩೩) ಯವರು, ಈ ಜಿಲ್ಲೆಯ ಹೊಳಲು ಗ್ರಾಮದವರು. ಮಂಡ್ಯದ ರೊಳ್ಳೆ ವೆಂಕಟಾಚಲಯ್ಯನವರ ಮೂಲಕ ಘಟೋದ್ಘಜನಾಗಿ ರಂಗವನ್ನು ಹತ್ತಿದರು. 'ಭ್ರಷ್ಟಾಚಾರ' ದ ಶ್ಯಾಮಸುಂದರ, 'ಲಂಚಾವತಾರ' ದ ಗುಮಾಸ್ತೆ ರಾಜಣ್ಣ, 'ಅನಾಚಾರ' ದ ಬಂಗಲೆ ಭೀಮಯ್ಯ ಪಾತ್ರಗಳಿಗೆ ಇವರು ಹೆಸರಾಗಿದ್ದರು.

ಕೊಡಿಯಾಲದ ಬಿ.ಎನ್.ಮೂರ್ತಿ ಉತ್ತಮ ಕಲಾವಿದರು. ಮಂಡ್ಯದ ಸತ್ಯನ್ ಅತ್ಯಧಿಕ ಪ್ರಮಾಣದಲ್ಲಿ ಸಂಚಾರಿ ರಂಗಸಜ್ಜಿಕೆಯನ್ನು ಹೊಂದಿದವರೆನ್ನಲಾಗಿದೆ. ಶ್ರೀರಂಗಪಟ್ಟಣದ ವ್ಯಾಸರಾಯರ ನಾಟಕ ಸಂಘದಲ್ಲಿ ಪುಟ್ಟಾರಿ ಶಾಸ್ತ್ರಿಗಳು ಅಭಿನಯಿಸುತ್ತಿದ್ದರು. ಈತ ಹಾಸ್ಯಾಭಿನಯದಲ್ಲಿ ಹೆಸರು ಪಡೆದ ನಟ. ಸ್ತ್ರೀಯರು ಪಾತ್ರ ಮಾಡಿದರೆ ಒಂದು ವಿಶೇಷ ಆಕರ್ಷಣೆಯಾಗಿ ಕಲೆಕ್ಷನ್ ಹೆಚ್ಚಾಗುತ್ತದೆಂಬ ನಂಬಿಕೆ ಇದ್ದ ಕಾಲದಲ್ಲಿ ಅಭಿನಯಿಸುತ್ತಿದ್ದ ಕಲಾವಿದೆ ಮಳವಳ್ಳಿ ಸುಂದರಮ್ಮನವರು (೧೯೦೫). ಈಕೆಯ ತಂದೆ ಮಳವಳ್ಳಿ ಸುಬ್ಬಣ್ಣನವರು ಮಂಡ್ಯ ಮೂಲದವರು. ಬೆಂಗಳೂರಿನಲ್ಲಿ ಶಾರದಾ ನಾಟಕ ಮಂಡಳಿ ಕಟ್ಟಿ ಅಲ್ಪ ಕಾಲ ನಡೆಸಿದ್ದರು. ನಾಟಕಗಳಿಗೆ ತಬಲಾ ವಾದನ ನೀಡಿ ಹೆಸರು ಪಡೆದ ಕಲಾವಿದರಾದ ವಿ.ಎಂ.ಗುರುಸ್ವಾಮಿಯವರು ಕ್ಲಾರಿಯೊನೆಟ್ ವಿದ್ವಾಂಸರಾದ ಮುನಿಸ್ವಾಮಪ್ಪನವರ ಮುಖಾಂತರ ಮಂಡ್ಯ ಸೇರಿದರು. ಮಂಡ್ಯದ ಸಕ್ಕರೆ ಕಂಪನಿಯ ಕಲಾ ಸಂಘವು ಜಯಚಾಮರಾಜ ಒಡೆಯರ್‌ರವರ ಸಮ್ಮುಖದಲ್ಲಿ ಆಡಿದ 'ಅಮರ ಪ್ರೇಮ' ನಾಟಕಕ್ಕೆ ಇವರು ವಾದ್ಯ ನೀಡಿ ವಿಶೇಷ ಮೆಚ್ಚುಗೆ ಗಳಿಸಿದ್ದರು. ಇವರಿಗೆ ೧೯೯೭ರಲ್ಲಿ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯ ಪ್ರಶಸ್ತಿ ದೊರೆತಿದೆ.

ಸೀನರಿಗಳನ್ನು ತಯಾರಿಸುತ್ತಿದ್ದ ಬಿ.ಎನ್.ಲಕ್ಷ್ಮೀನರಸಿಂಹಮೂರ್ತಿ (೧೯೪೫) ಯವರು ಪ್ರಸಾಧನ, ದೀಪಾಲಂಕಾರ, ವಸ್ತ್ರಾಲಂಕಾರಗಳಲ್ಲದೆ ೧೯೬೪ರಿಂದ ಅಭಿನಯವನ್ನೂ ಆರಂಭಿಸಿದ್ದಾರೆ. ಲಾರಿಯಲ್ಲಿ ಸೀನರಿಗಳನ್ನು ತುಂಬಿಕೊಂಡು ಊರಿಂದೂರಿಗೆ ಹೋಗಿ ಬರಿದಾದ ನೆಲದ ಮೇಲೆ ಭವ್ಯವಾದ ರಂಗದೃಶ್ಯಗಳನ್ನು ನಿರ್ಮಿಸುವ ಕಲಾವಂತಿಕೆಯುಳ್ಳವರು. ವಿವಿಧ ರೀತಿಯ ರಂಗಸಜ್ಜಿಕೆ (ಸ್ಟೇಜ್ ಸೆಟ್ಟಿಂಗ್) ಯಲ್ಲಿ ಹೆಸರುವಾಸಿಯಾದ ಇವರಿಗೆ ೧೯೯೮ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ 'ಪದ್ದಣ್ಣ ಶ್ರಮ ಪ್ರಶಸ್ತಿ' ಲಭಿಸಿದೆ.

ಈ ಜಿಲ್ಲೆಯ ಅಂಕನಹಳ್ಳಿಯ ಪುಟ್ಟಯ್ಯ (೧೯೪೯) ನವರು, ಸಂಗೀತ ನಾಟಕ ಅಕಾಡೆಮಿಯಲ್ಲಿ ತಾಂತ್ರಿಕ ನೌಕರರಾಗಿ ೧೯೭೦ರಲ್ಲಿ ಸೇರಿ, ಆ ನಂತರ ಹಲವಾರು ಸಂಘ ಸಂಸ್ಥೆಗಳಲ್ಲಿ ತೊಡಗಿ, ತುಘಲಕ್, ಒಡಲಾಳ, ಪೋಲಿಕಿಟ್ಟಿ, ಕಾಕನಕೋಟೆ, ಒಥೆಲೊ ಮುಂತಾದ ಹಲವಾರು ನಾಟಕಗಳಿಗೆ ಬೆಳಕಿನ ವಿನ್ಯಾಸ ಮಾಡಿದ್ದಾರೆ. ಇವರಿಗೆ ೧೯೯೮ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ 'ಪದ್ದಣ್ಣ ಶ್ರಮ ಪ್ರಶಸ್ತಿ' ಲಭಿಸಿದೆ.

ಮಂಡ್ಯದ ತಬಲಾ ಮಾಸ್ತರ್ ವಿ.ಎಂ.ಧನಪಾಲ್‌ರವರು ರಂಗನಾಟಕಗಳಿಗಾಗಿಯೇ, ತಬಲಾ ನುಡಿಸುವ ವಿದ್ವಾಂಸರಾಗಿದ್ದಾರೆ. ಸ್ತ್ರೀ ನಾಟಕ ಮಂಡಳಿ, ಚಾಮುಂಡೇಶ್ವರಿ ಕಂಪನಿ, ಶೇಷಚಾರ್, ಸುಬ್ಬಯ್ಯ ನಾಯ್ಡು, ಯೋಗಾನರಸಿಂಹ, ಮಾಸ್ಟರ್ ಹಿರಣ್ಣಯ್ಯ ಮುಂತಾದವರ ಕಂಪನಿಗಳಲ್ಲಿ ಹಾಗೂ ಹವ್ಯಾಸಿ ಕಂಪನಿಗಳಲ್ಲಿ ತಬಲಾ ನುಡಿಸಿದ್ದಾರೆ. ಇವರ ಇಡೀ ಕುಟುಂಬವೇ ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

**ನಾಟಕ ಮಾಸ್ತರರು:** ಈ ಜಿಲ್ಲೆಯಲ್ಲಿ ನಾಟಕ ಅಭ್ಯಾಸ ಮಾಡಿಸುವ ವೃತ್ತಿ ನಿರತ ನಾಟಕದ ಮೇಷ್ಟ್ರುಗಳಿದ್ದು ಇವರಿಂದ, ಪರಸ್ಥಳಗಳಿಂದ ಬರುವ ವೃತ್ತಿ ನಾಟಕ ಕಂಪನಿಗಳಿಂದ ಹಾಗೂ ಇಲ್ಲಿಯ ವೃತ್ತಿ ರಂಗ ಕಲಾವಿದೆಯರಿಂದ, ಈ ಜಿಲ್ಲೆಯ ನಾಟಕ ಕಲೆ ಮುಂದುವರಿದು ಬಂದಿದೆ.

**ಹವ್ಯಾಸಿ ರಂಗಭೂಮಿ**

ಈ ಜಿಲ್ಲೆಯಲ್ಲಿ ರೈತಾಪಿ ಜನಸಂಖ್ಯೆ ಹೆಚ್ಚಾಗಿದ್ದು, ಹವ್ಯಾಸಿ ನಾಟಕ ತಂಡಗಳು ಕ್ರಮಬದ್ಧವಾದ ಸ್ಥಾಪನೆಯನ್ನಾಗಲೀ ಇಲ್ಲವೇ ವ್ಯವಸ್ಥೆಯನ್ನಾಗಲೀ ಹೊಂದಿರದೆ ಕೇವಲ ನಾಟಕಗಳನ್ನು ಆಡಿಸುವ ಸಲುವಾಗಿ ವೃತ್ತಿ ಕಲಾವಿದರು ಹಾಗೂ ಕೆಲವು ಹವ್ಯಾಸಿ ಮೇಷ್ಟ್ರುಗಳಲ್ಲದೆ ನಾಟಕದ ಮೇಷ್ಟ್ರುಗಳೂ ಇದ್ದಾರೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿರುವ ಕೆಲವು ವೃತ್ತಿ ನಾಟಕ ಮಾಸ್ತರರು ಮತ್ತು ಕಲಾವಿದರ ಹೆಸರನ್ನು ಇಲ್ಲಿ ನಮೂದಿಸಲಾಗಿದೆ.

**ಮಂಡ್ಯ ತಾಲೂಕು,** ಪರಪ್ಪ ಮೈಕ್ರೋವೇವ್ ಹೊಸಹಳ್ಳಿ; ಸಿ.ಕೆ.ಗಂಗಾಧರಪ್ಪ ಬೀರಗೌಡನಹಳ್ಳಿ; ದುದ್ದ ಮರಿವೀರಶೆಟ್ಟಿ; ಸೂರಪ್ಪ ಹೊಳಲು; ಹೊಳಲು ಚಂದ್ರಶೇಖರ್; ಕೃಷ್ಣಾಚಾರ್ ಕಸಲಗೆರೆ; ವೀರಭದ್ರಾಚಾರ್, ಉಪ್ಪರಕನಹಳ್ಳಿ ; ಸಂಜೀವಾಚಾರ್ ಗಂಟಗೌಡನಹಳ್ಳಿ; ಗಣೇಶಪ್ಪ ಹಾರ್ಮೋನಿಯಂ ಮಾಸ್ಟರ್; ಕರಿಯಾಚಾರ್ ಚಿಕ್ಕಬಳ್ಳಿ; ಚೆಲುವಯ್ಯ ಗೋಪಾಲಪುರ; ಮಂಡ್ಯದ ಭೈರಪ್ಪದಾಸರು ; ಡಿ.ಎಂ.ಲಕ್ಷ್ಮಯ್ಯ ಹಾಗೂ ಶಿವರಾಮು; ಲಿಂಗಪ್ಪ ಎಲೆಚಾಕನಹಳ್ಳಿ; ಸಿದ್ಧರಾಮಯ್ಯ ಹೊನಗಾನಹಳ್ಳಿ; ಕೆ.ಕೆಂಪಯ್ಯ ಕಾಡುಕೊತ್ತನಹಳ್ಳಿ; ರಾಮಯ್ಯ ತಗ್ಗಹಳ್ಳಿ; ಶಂಭುಲಿಂಗಾಚಾರ್ ತೂಬಿನಕೆರೆ; ಮಾಧುರಾವ್ ಇಂಡುವಾಳು; ಪಾಪಣ್ಣಾಚಾರ್ ಪಣಕನಹಳ್ಳಿ; ಚಿಕ್ಕಣ್ಣ ಗಾಣದಾಳು; ಗೋವಿಂದಾಚಾರ್ ತೂಬಿನಕೆರೆ; ಕಾಳೇಗೌಡ, ಕಾಳೇನಹಳ್ಳಿ; ದೊಡ್ಡ ಅಂಕಾಚಾರ್ (ತಗಡಾಚಾರ್); ಚಿಕ್ಕ ಅಂಕಾಚಾರ್ ಬೆಳ್ಳುಂಡಗೆರೆ; ಮುನಿಯಪ್ಪ ಹಾಗೂ ದೇವರಾಜು ಗರುಡನಹಳ್ಳಿ; ಶಿವಣ್ಣ ಹಂಪಾಪುರ; ರಾಮಕೃಷ್ಣಪ್ಪ ಥಣಾಯ್ಕನಪುರ; ಶಿವನಂಜಪ್ಪ ಕೆರಗೋಡು; ಗಮಕಿ ಶೇಷಗಿರಿರಾಯರು; ಹರಿಕಥೆ ಬೋರಪ್ಪದಾಸರು; ಹೊಸಹೊಳ್ಳಿಯ ಅನುಕುಮಾರಿ ಎಂ.ಎಸ್; ನೃತ್ಯ ಕಲಾವಿದೆ ಕನ್ನಿಕಾ; ಎಂ.ಎಸ್.ಗುಣಮಧುಕುಮಾರ್; ಕೆ.ಗಾಯತ್ರಿ, ಜಯಮ್ಮ; ಜ್ಯೋತಿ ಕಲಾ ಸ್ತ್ರೀ ನಾಟಕ ಮಂಡಳಿಯ ಅಧ್ಯಕ್ಷೆ ಎ.ನಾಗರತ್ನ; ಮಂಡ್ಯ ನಗರದ ಗೀತಾ, ಎಸ್.ಗಾಯತ್ರಿ, ಎಂ.ಎಸ್.ನಾಗರತ್ನ, ಎಂ.ಎಸ್.ಭಾನುಮತಿ ; ಮಂಜುಳಾ ಮತ್ತು ಕಮಲಮ್ಮ; **ಮದ್ದೂರು ತಾಲೂಕು,** ಮರಿವೀರಶೆಟ್ಟರು ಗುರುದೇವರಹಳ್ಳಿ; ಕಂಪನಿ ಎಸ್.ಎಂ.ನಾಗರಾಜಾಚಾರ್ ಕೊಪ್ಪ; ಎಂ.ಬಸವರಾಜು, ಚಂದುಪುರ; ನಾಗರಾಜು, ಸಬ್ಬನಹಳ್ಳಿ; ನಾಗರಾಜು ಹನುಮಂತನಗರ; ಬೋರಪ್ಪ ಕಡಲೆವಾಗಿಲು; ಸಚ್ಚಿದಾನಂದ ಮೂರ್ತಿ, ಅಂಬಲವಾಡಿ, ವೆಂಕಟೇಶ್, ಕೊಪ್ಪ; ಎ.ಕುಮಾರ್ ಕೆಸ್ತೂರು; ಗೋಪಾಲ್ ಹೆಮ್ಮನಹಳ್ಳಿ; **ಪಾಂಡವಪುರ ತಾಲೂಕು,** ಪದ್ಮನಾಭ ಪಂಡಿತರು ಅನುವನಹಳ್ಳಿ; ದರಸಗುಪ್ಪೆ ರಾಘವನ್; ಶ್ರೀಧರ ಬೆಳ್ಳಾಳೆ; ಗರುಡಾಚಾರ್ ನೀಲನಹಳ್ಳಿ; ನಾಗರಾಜು ಜಕ್ಕನಹಳ್ಳಿ; ಸುಬ್ಬಯ್ಯ ಸೀತಾಪುರ. **ಶ್ರೀರಂಗಪಟ್ಟಣ ತಾಲೂಕು,** ಹೊಳಲು, ಚಂದ್ರಶೇಖರ್; ವೈಕುಂಠಯ್ಯ ಗಣಂಗೂರು; ಬಿ.ಎನ್.ಸ್ವಾಮಿಗೌಡ ಹಾಗೂ ನಾಗರಾಜು ಬೆಳಗೊಳ; ರಂಗಪ್ಪ ಶ್ರೀರಂಗಪಟ್ಟಣ; ರಾಮಣ್ಣ ನಗುವನಹಳ್ಳಿ; ಪುಟ್ಟಸ್ವಾಮಿ ನೇರಲಕೆರೆ; **ಮಳವಳ್ಳಿ ತಾಲೂಕು** ಕಂದೇಗಾಲದ ಎನ್.ಲಿಂಗಾಚಾರ್ ಹಾಗೂ ವೀರಾಚಾರ್ ಕಂದೇಗಾಲ; ಸಿದ್ಧಯ್ಯ ಕಲ್ಕುಣಿ; ರಾಜಶೇಖರಾಚಾರ್, ಮಳವಳ್ಳಿ; **ಕೃಷ್ಣರಾಜಪೇಟೆ ತಾಲೂಕು** ತಮ್ಮಯ್ಯ ಕೃಷ್ಣರಾಜಪೇಟೆ; ಮುಂತಾದವರು.

ಪಾಂಡವಪುರದ ಕನ್ನಡ ಸಾಹಿತ್ಯ ಸಂಘದ ಅಂಗ ಸಂಸ್ಥೆಯಾಗಿ, ಕೇವಲ ನಾಟಕಗಳನ್ನು ಆಡುವ ಉದ್ದೇಶದಿಂದಲೇ ಸ್ಥಾಪನೆಗೊಂಡಿದ್ದ 'ರಂಗಮಂಟಪ' ತಂಡವು ಪಿ.ಅಬ್ದುಲ್ ಸತ್ತಾರ್, ಟಿ.ವಿ.ವಿಶ್ವನಾಥ್, ಎಂ.ರಾಮಲಿಂಗಯ್ಯ ಮುಂತಾದವರಿಂದಾಗಿ ಸುಮಾರು ಹತ್ತು ವರ್ಷಗಳ ಕಾಲ ಕಾರ್ಯಶೀಲವಾಗಿತ್ತು. ಈ ತಂಡ ತಿಂಗಳಿಗೆ ಒಂದು

ಸಾಮಾಜಿಕ ನಾಟಕವನ್ನೂ, ವರ್ಷಕ್ಕೆ ಎರಡು ಕಂಪನಿ ನಾಟಕಗಳನ್ನೂ ಆಡುವ ಉದ್ದೇಶವಿಟ್ಟುಕೊಂಡಿದ್ದು, ಈ ಉದ್ದೇಶವು ಎ.ಎನ್.ಸೂರ್ಯನಾರಾಯಣರಾವ್ ಹಾಗೂ ಡಿ.ಆರ್.ಮುರುಗೇಂದ್ರಪ್ಪ, ಅವರಿಂದಾಗಿ ಯಶಸ್ಸು ಕಂಡಿತೆಂದು ತಿಳಿದುಬರುತ್ತದೆ. ಈ ಸಂಘದ ಕಾರ್ಯಕರ್ತರು ವಿವಿಧೆಡೆಗೆ ಚದುರಿದ್ದರಿಂದ, ೧೯೬೨ರ ವೇಳೆಗೆ ಸ್ಥಗಿತಗೊಂಡಿತು.

ಮಂಡ್ಯ ಸಕ್ಕರೆ ಕಂಪನಿಯ ಕೆಲಸಗಾರರು ಸುಮಾರು ೧೯೫೨ರಲ್ಲಿ ಸ್ಥಾಪಿಸಿದ 'ಷುಗರ್ ಟೌನ್ ಅಮೆಚೂರ್ ನಾಟಕ ಸಂಘ' ವು 'ವಿಧಿ ಅಥವಾ ಮದೋನ್ಮತ್ತ ಜಗದೀಶ' ಎಂಬ ಹೊಸ ನಾಟಕದ ಪ್ರಯೋಗದೊಂದಿಗೆ ರಂಗ ಚಟುವಟಿಕೆಯನ್ನು ಆರಂಭಿಸಿತು. ಎಸ್.ಜಿ.ಕಲ್‌ಬಾಗಲ್ ಅಧ್ಯಕ್ಷರೂ, ಸಿ.ವಿ.ಕೃಷ್ಣರಾವ್ ಉಪಾಧ್ಯಕ್ಷರೂ, ಇ.ವಿ.ರಾಮಚಂದ್ರ ಅಯ್ಯರ್ ಮತ್ತು ಎಸ್.ಧನರಾಜರು ಕಾರ್ಯದರ್ಶಿಗಳೂ, ವೈ.ಎನ್.ಎನ್.ರಾಯರು ಕೋಶಾಧಿಕಾರಿಯೂ ಆಗಿದ್ದು, ಈ ಸಂಘದ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಎ.ಎನ್.ಮೂರ್ತಿರಾಯರ 'ಆಷಾಢಭೂತಿ', ಪರ್ವತವಾಣಿಯವರ 'ಉಂಡಾಡಿ ಗುಂಡ', 'ವಿಪರ್ಯಾಸ' ಮತ್ತು ಎ.ಆರ್.ಸುಬ್ಬರಾಯರಿಂದ ನಾಟಕವಾಗಿ ರೂಪಾಂತರಗೊಂಡ ವೀರಕೇಸರಿಯವರ 'ದೌಲತ್' (ಕಾದಂಬರಿ) ಮುಂತಾದ ಹಲವಾರು ನಾಟಕಗಳನ್ನು ಈ ಸಂಘದ ವತಿಯಿಂದ ಆಡಲಾಯಿತು. ಈ ತಂಡದ ಚಟುವಟಿಕೆಗಳು ಇತರ ಕಾರ್ಖಾನೆಗಳ ಕಾರ್ಮಿಕರ ಹವ್ಯಾಸಿ ತಂಡಗಳಿಗೆ ಹೆಚ್ಚಿನ ಸ್ಫೂರ್ತಿ ನೀಡಿತು. ಕ್ರಮೇಣ ಈ ತಂಡದ ಕಾರ್ಯಕ್ರಮಗಳು, ನಾಟಕ ಪ್ರದರ್ಶನಗಳು ಕಡಿಮೆಯಾಯಿತಾದರೂ ನಿಲ್ಲದೆ ಪುನಃ ಚೇತರಿಸಿಕೊಂಡು ಮುಂದುವರಿಯುತ್ತಿವೆ. ಕಾರ್ಮಿಕರ ದಿನಾಚರಣೆ, ರಾಜ್ಯೋತ್ಸವ, ಮುಂತಾದ ಪ್ರಮುಖ ದಿನಗಳಲ್ಲಿ ಈ ಸಂಘದ ವತಿಯಿಂದ ನಾಟಕಗಳನ್ನು ಆಡಲಾಗುತ್ತದೆ.

ಮಂಡ್ಯದ 'ಮಂಡ್ಯ ನಾಟಕ ಕಲಾ ಸಾಧನ' ೧೯೫೪ರಲ್ಲಿ ಸ್ಥಾಪನೆಗೊಂಡಿತು. ನಾಟಕ ಮತ್ತು ನೃತ್ಯ ಕಲೆಯನ್ನು ಪ್ರೋತ್ಸಾಹಿಸಲು ಹಾಗೂ ಸಾರ್ವಜನಿಕ ಕೆಲಸ-ಕಾರ್ಯಗಳಿಗೆ ದಾನ ದತ್ತಿ ನೀಡಲು, ನಾಟಕಗಳನ್ನು ಆಡುವುದು ಈ ಸಂಸ್ಥೆಯ ಉದ್ದೇಶವಾಗಿತ್ತು. ರಾಷ್ಟ್ರೀಯ ರಜಾ ದಿನಗಳಲ್ಲಿ ಮತ್ತು ನಾಡ ಹಬ್ಬಗಳ ಸಂದರ್ಭದಲ್ಲಿ ಈ ಸಂಸ್ಥೆಯಿಂದ ನಾಟಕಗಳನ್ನು ಆಡಿಸಲಾಗುತ್ತಿತ್ತು. ಮೇಲುಕೋಟೆಯ ಒಕ್ಕಲಿಗರ ಸಂಘದ 'ಶ್ರೀಯದುಗಿರಿ ಚೆಲ್ವನಾರಾಯಣ ಥಿಯೇಟ್ರಿಕಲ್ ಕಂಪನಿ', ವೈರಮುಡಿ ಉತ್ಸವದ ಸಮಯದಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಮಂಡ್ಯದ ಜನರಲ್ಲಿ ನಾಟಕಗಳ ಬಗ್ಗೆ ಆಸಕ್ತಿಯನ್ನು ಹೆಚ್ಚಾಗಿಸಿದವರು, ಹಿಂದೆ ಶಿಕ್ಷಣ ಸಚಿವರಾಗಿದ್ದ ಕೆ.ವಿ.ಶಂಕರಗೌಡರು. ಇವರೇ ಅಲ್ಲದೆ ಮಂಡ್ಯ ಜಿಲ್ಲೆಯ ಕೆಲವು ರಾಜಕಾರಣಿಗಳು ಒಂದಲ್ಲ ಒಂದು ರೀತಿಯಲ್ಲಿ ನಾಟಕ ಕ್ಷೇತ್ರದೊಂದಿಗೆ ಬೆರೆತು, ಈ ಕ್ಷೇತ್ರದ ಪ್ರಗತಿಗಾಗಿ ಶ್ರಮಿಸಿದ್ದಾರೆ. ವಿಧಾನಸಭಾ ಸದಸ್ಯರುಗಳಾದ ಎಂ.ಹೆಚ್.ಬೋರಯ್ಯನವರು ಮತ್ತು ಆತ್ಮಾನಂದರವರು, ವಿಧಾನಪರಿಷತ್ ಸದಸ್ಯರಾದ ಶಿವನಂಜಪ್ಪ ಹಾಗೂ ಸಚ್ಚಿದಾನಂದರವರು ನಾಟಕಾಸಕ್ತಿಯುಳ್ಳ ರಾಜಕಾರಣಿಗಳಾಗಿದ್ದಾರೆ.

ಕೆ.ವಿ.ಶಂಕರಗೌಡರು ನಾಟಕಕಾರರಾಗಿ, 'ಕೂಡಿ ಬಾಳೋಣ', 'ಪಾದುಕಾ ಕಿರೀಟ' 'ಶಿಷ್ಟಾಚಾರ', 'ಅಪರಂಜಿ', 'ದನಿ', ಮುಂತಾದ ನಾಟಕಗಳನ್ನು ರಚಿಸಿದ್ದಾರಲ್ಲದೆ, ನಾಟಕ ಕಂಪನಿಯೊಂದನ್ನು ಸ್ಥಾಪಿಸಿ ಸಮಾಜದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಸುಧಾರಣೆ ತರುವಂಥ ಪ್ರಯತ್ನಗಳನ್ನೂ ನಾಟಕ ಪ್ರದರ್ಶನಗಳ ಮೂಲಕ ಮಾಡಿದ್ದಾರೆ. ಮಂಡ್ಯದ ಪಿ.ಇ.ಎಸ್.ವಿಜ್ಞಾನ ಕಾಲೇಜಿನ ಆವರಣದಲ್ಲಿ ಭವ್ಯವಾದ ರಂಗಮಂದಿರವನ್ನೂ, ತಮ್ಮ ಹುಟ್ಟೂರಾದ ಕೀಲಾರ ಗ್ರಾಮದಲ್ಲಿ ಒಂದು ರಂಗಮಂದಿರವನ್ನೂ, ಸರ್ಕಾರದ ಧನ ಸಹಾಯ ಪಡೆಯದೆ ನಿರ್ಮಿಸಿದ್ದಾರೆ. ಇವರು ಜಿಲ್ಲೆಯ ನಾಟಕ ರಂಗಕ್ಕೆ ಪೈಪ್ ಸೆಟ್ ಮತ್ತು ಶ್ಯೂರ್ ಮೈಕನ್ನು ತಂದ ಮೊದಲಿಗರು. ಇವರಿಗೆ ೧೯೮೯ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಶಂಕರಗೌಡರ ಹೆಸರಿನಲ್ಲಿ, ಅವರ ಕುಟುಂಬದವರು ಮತ್ತು ಅಭಿಮಾನಿಗಳು ಸೇರಿ 'ಕೆ.ವಿ.ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ' ವನ್ನು ೧೯೮೯ರಲ್ಲಿ ಸ್ಥಾಪಿಸಿದ್ದು, ರಂಗಭೂಮಿ

ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಪ್ರತಿ ವರ್ಷ (ತಲಾ ೧೫,೦೦೦/- ರೂ.ಗಳನ್ನು ಒಳಗೊಂಡ) ಪ್ರಶಸ್ತಿಯನ್ನು ನೀಡಲಾಗುತ್ತದೆ. ಶಾಸಕ ಎಚ್.ಹೊನ್ನಪ್ಪನವರು ಈ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದು. ಜೆ.ಟಿ.ವೀರಪ್ಪ, ನರಸಿಂಹಮೂರ್ತಿ, ಶಂಕರಗೌಡ ಮುಂತಾದವರು ಸದಸ್ಯರಾಗಿದ್ದಾರೆ. ೨೦೦೦ನೇ ಸಾಲಿನ ರಂಗಭೂಮಿ ಪ್ರಶಸ್ತಿಯನ್ನು, ನಾಟಕಕಾರ ಏಣಗಿ ಬಾಳಪ್ಪ ಮತ್ತು ತಬಲ ಕಲಾವಿದ ವಿ.ಎಂ.ಗುರುಸ್ವಾಮಿಯವರಿಗೆ ನೀಡಲಾಯಿತು. ಕೆ.ಗುಂಡಣ್ಣನವರಿಂದಾಗಿ, ಮಂಡ್ಯ ಡ್ರಮಾಟಿಕ್ ಅಸೋಸಿಯೇಷನ್ (ಎಂ.ಡಿ.ಎ) ಎಂಬ ಹವ್ಯಾಸಿ ಸಂಸ್ಥೆಯು ೧೯೫೫ರಲ್ಲಿ ಸ್ಥಾಪನೆಗೊಂಡು ಅನೇಕ ಪ್ರದರ್ಶನಗಳನ್ನು ನೀಡಿದೆಯಲ್ಲದೆ ಹಲವಾರು ಹವ್ಯಾಸಿ ಕಲಾವಿದರನ್ನೂ ರೂಪಿಸಿದೆ.

ಹಲವು ಪೌರಾಣಿಕ ನಾಟಕಗಳಲ್ಲಿ ಅಭಿನಯ ಮಾಡಿದ, ಮಂಡ್ಯದ ಪಿ.ವೆಂಕಟರಾಮಯ್ಯ, ೧೯೬೯ ರಲ್ಲಿ 'ಪ್ರಕಾಶ್ ಕಲಾ ಸಂಘ' ಎಂಬ ಹವ್ಯಾಸಿ ಕಲಾ ಸಂಘವನ್ನು ಸ್ಥಾಪಿಸಿ, ಅನೇಕ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ನವ್ಯ ಪ್ರಯೋಗಾತ್ಮಕ ನಾಟಕಗಳನ್ನು ಆಡಿಸಿದ್ದಾರೆ. ಇವರು ನಾಟಕ ರಚನೆ, ನಿರ್ದೇಶನ ಮತ್ತು ಚಲನಚಿತ್ರ ನಿರ್ಮಾಣವನ್ನೂ ಮಾಡಿದ್ದಾರೆ. ಈ ಸಂಘವು, ಕೆ.ಹಿರಣ್ಣಯ್ಯ ಸ್ಮಾರಕ ಅಖಿಲ ಕರ್ನಾಟಕ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯನ್ನು ೨೦೦೦ನೇ ಸಾಲಿನಿಂದ ನಡೆಸಿ, ಶ್ರೇಷ್ಠ ಸಂಗೀತಗಾರ, ನಟ, ನಟಿಯರು ಮುಂತಾಗಿ ಗುರುತಿಸಿ ಪ್ರಶಸ್ತಿ ನೀಡುವ ಕೆಲಸ ಮಾಡುತ್ತಿದೆ. ಎಚ್.ವಿ.ಜಯರಾಂ, ಸಂಘದ ಅಧ್ಯಕ್ಷರಾಗಿದ್ದು, ಪಿ.ವಿ.ವೆಂಕಟರಾಮಯ್ಯನವರು ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲರಾದ ರಾಮಲಿಂಗಯ್ಯ, ಎಚ್.ಎಸ್.ಸುಭಾಶ್ ಚಂದ್ರ, ಮುಂತಾದವರು ಈ ಸಂಘದ ಚಟುವಟಿಕೆಗಳಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಎಚ್.ಬಿ.ತ್ಯಾಗರಾಜ್, ಪ್ರಕಾಶ್ ಕಲಾ ಬಳಗದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಮ.ಮಲ್ಲಪ್ಪನವರ ನೇತೃತ್ವದಲ್ಲಿ ಸುಮಾರು ೧೯೭೫ರಲ್ಲಿ, ಮಳವಳ್ಳಿಯ ಕರ್ನಾಟಕ ಸಂಘ, ಆರಂಭಗೊಂಡಾಗ, ಚಲುವೇಗೌಡ, ಡಿ.ದೊಡ್ಡಲಿಂಗೇಗೌಡ ಮೊದಲಾದವರು ಸೇರಿ ನಾಟಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಮಂಡ್ಯದ ಪಿ.ಇ.ಎಸ್. ಸಂಸ್ಥೆಯ ಆಧ್ಯಾಪಕ ಮಿತ್ರರು ಹಾಗೂ ಜಿಲ್ಲೆಯ ಕಲಾ ರಸಿಕರು ಒಂದೆಡೆ ಸೇರಿ, ಕ್ರಿಯಾತ್ಮಕವಾದ ಚಟುವಟಿಕೆಗಳನ್ನು ನಡೆಸಬೇಕೆಂದು ಉದ್ದೇಶಿಸಿ, ೧೯೭೭ರಲ್ಲಿ 'ಗೆಳೆಯರ ಬಳಗ' ವನ್ನು ಆರಂಭಿಸಿದರು. ಬೆಂಗಳೂರಿನ ಸಮುದಾಯ ಮತ್ತು ರಂಗ ಸಂಪದ ತಂಡಗಳನ್ನು ಮೊದಲಿಗೆ ಕರೆಸಿ, 'ಕತ್ತಲೆ ದಾರಿ ದೂರ', 'ಕುರಿ', 'ಸಂಗ್ಯಾ-ಬಾಳ್ಯಾ', 'ಕದಡಿದ ನೀರು' ಇತ್ಯಾದಿ ನಾಟಕಗಳನ್ನು ಆಡಿಸುವುದರ ಮೂಲಕ ಆರಂಭಗೊಂಡ ಈ ತಂಡವು, ಆ ನಂತರ ಕೆ.ವಿ.ಶಂಕರಗೌಡರ ಕುರಿತಾದ ವಿಚಾರ ಸಂಕಿರಣ, ರಂಗ ತರಬೇತಿ ಶಿಬಿರಗಳ ಸಂಯೋಜನೆ, ನಾಟಕಗಳ ಅಭ್ಯಾಸ, ಹಾಗೂ ಪ್ರಯೊಗಗಳ ಮೂಲಕ ತನ್ನ ಚಟುವಟಿಕೆಯನ್ನು ಮುಂದುವರಿಸಿತು. 'ದನಿ ಇಲ್ಲದವರು', 'ಸಾಯೋ ಜಾತ್ರೆ', 'ಕರಿಯ ದೇವರ ಹುಡುಕಿ', 'ಕುರಿದೊಡ್ಡಿ ಕುರುಕ್ಷೇತ್ರ' ಮುಂತಾದ ನಾಟಕಗಳ ನಿರಂತರ ಪ್ರದರ್ಶನಗಳನ್ನು ನಡೆಸಿ, ಹಲವಾರು ಕಲಾವಿದರನ್ನು ರೂಪಿಸಿದೆ. ಕಲಾವಿದರಾಗಿ ಹೆಸರು ಗಳಿಸಿರುವ ಮಂಡ್ಯ ರಮೇಶ್ ಮತ್ತು ಗಾಯಕರಾಗಿ ಹೆಸರು ಗಳಿಸಿರುವ ಲಕ್ಷ್ಮೀನರಸಿಂಹ ಶಾಸ್ತ್ರಿ ಈ ಬಳಗದಿಂದ ಬೆಳೆದು ಬಂದವರಾಗಿದ್ದಾರೆ. ಮೋಹನ್‌ರಾಜ್, ಶಿವರಾಮು, ಬಾಲಕೃಷ್ಣ, ಸಿ.ಎಸ್.ರಾಮಕೃಷ್ಣ, ಕಾಂತರಾಜು, ಜಿ.ಆರ್.ಗಂಗಾಧರ್, ಜಿ.ಎಂ.ಶಿವಣ್ಣ, ವಿಜಯಾಶಂಕರ್, ಲಿಂಗಣ್ಣ ಬಂಧೂಕಾರ್ ಮುಂತಾದವರು ಕಲಾವಿದರಾದದ್ದು ಈ ಬಳಗದಿಂದಲೇ. ಕೆ.ವಿ.ಶಂಕರಗೌಡರು, ಮತ್ತು ಆನಂತರ ಅವರ ಮಗ ಕೆ.ಎಸ್.ಸಚ್ಚಿದಾನಂದ ಹಾಗೂ ಎಚ್.ಹೊನ್ನಪ್ಪ ಇವರುಗಳು ಈ ತಂಡವನ್ನು ಪೋಷಿಸಿ ಉತ್ತೇಜನ ನೀಡಿದರು. ಬಿ.ಜಯಪ್ರಕಾಶಗೌಡ, ಶಿವರಾಮು, ಕೆ.ಎಸ್.ಚಂದ್ರಶೇಖರ್, ಎಸ್.ಬಿ.ಸಂಕರಗೌಡ, ರಾಮೇಗೌಡ, ಸಿ.ಪದ್ಮನಾಭ, ಕೆ.ಆರ್.ಶಿವಾನಂದ, ಆರ್.ಎ.ಕುಮಾರ್, ಮುಂತಾದವರು ಗೆಳೆಯರ ಬಳಗದ ಕ್ರಿಯಾಶೀಲ ಸದಸ್ಯರಾಗಿದ್ದು, ಇವರಲ್ಲಿರುವ ಕ್ರಿಯಾಶೀಲತೆಯನ್ನು ಗುರುತಿಸಿ, ಕರ್ನಾಟಕ ನಾಟಕ ಅಕಾಡೆಮಿಯು ಇವರನ್ನು ಸದಸ್ಯರನ್ನಾಗಿ

ನೇಮಿಸಿಕೊಂಡಿದೆ. ಕೆ.ಶಿವರಾಮುರವರು 'ಅಂಧಯುಗ', 'ಸಂಕ್ರಾಂತಿ', 'ಸಾಯೋ ಆಟ', 'ದನಿ ಇಲ್ಲದವರು' ಮುಂತಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಜಿಲ್ಲೆಯಲ್ಲಿ ಹೆಸರು ಗಳಿಸಿದ್ದಾರೆ. ಕೆ.ವಿ.ಶಂಕರಗೌಡರ ಮಗ 'ಕೆ.ಎಸ್.ಸಚ್ಚಿದಾನಂದರವರು, ಹವ್ಯಾಸಿ ರಂಗ ಕಲಾವಿದರಾಗಿದ್ದು 'ರಂಗ ಸಮೂಹ', 'ಮಂಕ' (ಮಂಡ್ಯ ಕಲಾವಿದರ) ಸಂಘ ಸ್ಥಾಪಿಸಿ, ಹವ್ಯಾಸಿ ರಂಗಭೂಮಿಯನ್ನು ಪೋಷಿಸುತ್ತಿದ್ದಾರೆ. 'ಗೆಳೆಯರ ಬಳಗ' ದ ಪೋಷಕರೂ ಆಗಿದ್ದಾರೆ. 'ಪಾದುಕಾ ಕಿರೀಟ' ದಲ್ಲಿ ದಶರಥ, 'ಮೃಚ್ಛಕಟಿಕ' ದಲ್ಲಿ ಚಾರುದತ್ತ 'ಬೆರಳ್‌ಗೆ ಕೊರಳ್'ನಲ್ಲಿ ಅರ್ಜುನ, 'ಜಲಗಾರ' ದಲ್ಲಿ ರೈತ, ಹೀಗೆ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಇವರು, ಚಲನಚಿತ್ರರಂಗದಲ್ಲೂ ನಿರ್ಮಾಣದ ಕೆಲಸ ಮಾಡಿರುವುದಲ್ಲದೆ ವಿಧಾನಪರಿಷತ್ತಿನ ಸದಸ್ಯರಾಗಿ, ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿ, ತಂದೆ ಕೆ.ವಿ.ಶಂಕರಗೌಡರ ಪ್ರತಿಷ್ಠಾನದ ಸಲಹೆಗಾರರಾಗಿ ವಿಭಿನ್ನ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ೧೯೯೯ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಿ.ಜಿ.ಕೃಷ್ಣಮೂರ್ತಿಯವರು ಮೂಲತಃ ಮಂಡ್ಯದವರು. ನಾಟಕಗಳಲ್ಲಿ ಅಭಿನಯಿಸುವುದಲ್ಲದೆ ಹಲವು ರೀತಿಯಲ್ಲಿ ನಾಟಕ ತಂಡಗಳ ಪ್ರಗತಿಗೆ ಪ್ರೋತ್ಸಾಹಿಸಿದ್ದಾರೆ. ಇವರು, ಸೌತ್ ಝೋನ್ ಕಲ್ಚರಲ್ ಸೆಂಟರ್‌ಗೆ ಸದಸ್ಯರಾಗಿದ್ದರು. ಪ್ರಖ್ಯಾತ ನಾಟಕ ತಂಡವಾದ 'ಸಮುದಾಯ' ಮತ್ತು ಥಿಯೇಟರ್ ಗಿಲ್ಡ್ (ರಂಗ ಕ್ರಿಯಾ ಸಮಿತಿ) ಗಳ, ಸ್ಥಾಪಕ ಕಾರ್ಯದಶಿಯಾಗಿದ್ದಾರೆ. ಇವರಿಗೆ ೧೯೯೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯೂ, ೧೯೯೫–೯೬ರಲ್ಲಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಬಂದಿದೆ. ಇವರು 'ಭುಜಂಗಯ್ಯನ ದಶಾವತಾರ' ಕ್ಕೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ಸಾಂಗ್ಲಿಯಾನ' ಕ್ಕೆ ಸಂಭಾಷಣೆಯನ್ನೂ, 'ವೀರಪ್ಪನ್' ಗೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಗಳನ್ನೂ ಬರೆದಿದ್ದಾರೆ. ಅರಳುಗುಪ್ಪೆ ಗ್ರಾಮದ 'ಭೈರವೇಶ್ವರ ಕಲಾ ಸಂಘ' ವು ಅ.ಸಿ.ಸಿದ್ದೇಗೌಡರ ಪ್ರೋತ್ಸಾಹ ಮತ್ತು ಆಸಕ್ತಿಯಿಂದಾಗಿ ನಾಟಕಗಳನ್ನು ಆಡುವ, ಮತ್ತು ರಾಜ್ಯದ ಹೆಸರಾಂತ ತಂಡಗಳನ್ನು ಕರೆಸಿ ನಾಟಕ ಆಡಿಸುವ ಕೆಲಸ ಮಾಡುತ್ತಿದೆ. ಕ್ಯಾತನಹಳ್ಳಿಯ 'ಹಸಿರು ಕಲಾವಿದರು', ಗ್ರಾಮೀಣ ಬದುಕಿಗೆ ಸಂಬಂಧಿಸಿದ ಪ್ರಗತಿಪರ ಸಾಮಾಜಿಕ ನಾಟಕಗಳನ್ನು ಆಡುತ್ತಾರೆ. ಪಾಂಡವಪುರ ತಾಲೂಕಿನ ದೇಶವಳ್ಳಿಯ ಒಂದು ನಾಟಕ ತಂಡ, ಪರಂಪರಾಗತವಾಗಿ ಪಳಗಿದ ಕಲಾವಿದರನ್ನು ಹೊಂದಿದೆ. ಪೌರಾಣಿಕ ನಾಟಕಗಳನ್ನು ಕಲಿಸಿ ಆಡಿಸುವವರ ಪೈಕಿ ಪ್ರಖ್ಯಾತರಾದವರಲ್ಲಿ, ತೀರ ವೃದ್ಧರಾದ, ಅರಳುಗುಪ್ಪೆಯ ಬೋರಾಬಾಯಿ, ನರಸಿಂಹಶೆಟ್ಟಿ ಮತ್ತು ಬೆಟ್ಟಹಳ್ಳಿಯ ದಾಸಾಚಾರಿಯವರು ಉಳಿದಿದ್ದಾರೆ. ಹರವು, ಚಿಕ್ಕಾಡೆ, ಪಟ್ಟಸೋಮನಹಳ್ಳಿಗಳಲ್ಲಿ ಕಲಾ ಸಂಘಗಳನ್ನು ಕಟ್ಟಿಕೊಂಡು ಸಾಮಾಜಿಕ ನಾಟಕಗಳನ್ನು ಆಡುವ ಹವ್ಯಾಸಿಗಳಿದ್ದಾರೆ.

ಭೀಮನಕಂಡಿ ಬೆಟ್ಟದ (ಕನಕಪುರ ತಾಲ್ಲೂಕು) ಬಗ್ಗೆ ಜನಪದರು ಹೇಳುವ ಕಥೆಯನ್ನು ಒಳಗೊಂಡಂತೆ ಲಾವಣಿಯನ್ನು ರಚಿಸಿರುವ ಭೀಮನಕಂಡಿ ಬೆಟ್ಟದ ಹೋಟಲು ಮಂಚೇಗೌಡರು 'ಉದಯ ಕಲಾ ಮಂಡಳಿ' ಎಂಬ ತಂಡ ಕಟ್ಟಿ ನಾಟಕವನ್ನು ಆಡಿಸಿದ್ದಾರೆ. ರಂಗಭೂಮಿ, ಚಲನಚಿತ್ರಗಳಲ್ಲಿ ಕಲಾ ನಿರ್ದೇಶಕರಾಗಿ ದುಡಿದಿರುವ, ನಟ ಅಕ್ಮಲ್ ಪಾಶಾ (೧೯೬೧) ರವರು ಜನಿಸಿದ್ದು ನಾಗಮಂಗಲದಲ್ಲಿ. ಕೋಡಿಹಳ್ಳಿ ಶ್ರೀನಿವಾಸುರವರನ್ನು ಅಧ್ಯಕ್ಷರಾಗಿ ಹೊಂದಿರುವ ಮದ್ದೂರು ತಾಲೂಕು ರಂಗಭೂಮಿ ಕಲಾವಿದರ ಸಂಘ; ರಂಗರತ್ನ ಕಲಾವಿದರು, ಮಂಡ್ಯ; ವಾಣಿಶ್ರೀ ನಾಟಕ ಮಂಡಳಿ, ಹೊಸಹಳ್ಳಿ ಬಡಾವಣೆ; ಮಿತ್ರ ಕಲಾ ಸಂಘ ಗುತ್ತಲು; ಕುವೆಂಪು ಹವ್ಯಾಸಿ ಕಲಾ ಸಂಘ; ಕೆ.ವೈ.ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ (೧೯೯೯) ಆರಂಭಗೊಂಡಿರುವ ಪಾಂಡವಪುರದ ಗೆಳೆಯರ ಬಳಗ; ಪಾಂಡವಪುರ ಮತ್ತು ಮದ್ದೂರುಗಳ ಭಾರತ ವಿಕಾಸ ಪರಿಷತ್ತುಗಳು; ಜೈ ಹಿಂದ್ ಯುವಕ ಸಂಘ, ನಾಗಮಂಗಲದ

ಕನ್ನಡ ಸಂಘ; ಮುಂತಾದವು ರಂಗ ಚಟುವಟಿಕೆಗಳಲ್ಲಿ ತೊಡಗಿರುವ ಇತರ ಹವ್ಯಾಸಿ ತಂಡಗಳಾಗಿವೆ. ಕೆರಗೋಡು ಸಮೀಪದ ಗಂಟೆಗೌಡನಹಳ್ಳಿ ಸೋಮಶೇಖರಾಚಾರ್ (೧೯೫೩) ರವರು 'ಸಮಸ್ಯೆಯ ಸುಳಿಯಲ್ಲಿ', 'ಪ್ರೇಮ ಅಳಿಯಿತು', 'ಶಿಶುಹತ್ಯೆ', 'ಬ್ರಹ್ಮರ್ಷಿ ವಿಶ್ವಾಮಿತ್ರ' ಎಂಬ ಸಂಗೀತ ನಾಟಕ, 'ಪತಿಯೇ ಪರದೈವ' ಮುಂತಾದ ನಾಟಕಗಳನ್ನು ರಂಗ ಪ್ರಯೋಗ ಮಾಡಿದ್ದಾರೆ. ಅಲ್ಲದೆ ರಂಗಾಭಿನಯ, ನಿರ್ದೇಶನ, ವರ್ಣಾಲಂಕಾರ, ಹಾರ್ಮೋನಿಯಂ, ಶಾಸ್ತ್ರೀಯ ಸಂಗೀತಗಳಲ್ಲೂ ಇವರು ಕಾರ್ಯನಿರತರಾಗಿದ್ದು, ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ 'ಆಷಾಢದಲ್ಲಿ ಅಳಿಯ' ನಾಟಕ ದೂರದರ್ಶನದಲ್ಲಿ ಕಿರುಚಿತ್ರವಾಗಿ ಪ್ರಸಾರವಾಗಿದೆ. ತಮ್ಮ ಗ್ರಾಮದಲ್ಲಿ 'ಸಾಹಿತ್ಯ ಕಲಾವೇದಿಕೆ' ಸ್ಥಾಪಿಸಿ, ಸಾಹಿತ್ಯ ಮತ್ತು ರಂಗಾಸಕ್ತರನ್ನು ಸಂಘಟಿಸಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕಿಕ್ಕೇರಿಯ ಕೆ.ಜೆ.ನಾರಾಯಣರವರು ಗಂಗಾಧರ್, ದೇವರಾಜ್, ಮುಂತಾದವರೊಡಗೂಡಿ, ಕಿಕ್ಕೇರಿಯಲ್ಲಿ 'ಕನ್ನಡ ಕಲಾ ಸಂಘ'ವನ್ನು ಕಟ್ಟಿದ್ದು, ಇತರೇ ಕಾರ್ಯಕ್ರಮಗಳೊಂದಿಗೆ ನಾಟಕಗಳನ್ನೂ ಇಲ್ಲಿ ಆಡಲಾಗುತ್ತದೆ. ಗಂಗಾಧರ್ ಅವರು 'ಪಾಪದ ಫಲ', 'ವಧು ಮೆಚ್ಚಿದ ವರ' ಎಂಬ ನಾಟಕಗಳನ್ನು ಪ್ರದರ್ಶಿಸಿದ್ದಾರೆ. 'ಹನುಮಂತ ಪಶ್ಚಾತ್ತಾಪ' ನಾಟಕ ಬರೆದಿದ್ದಾರೆ. ಮಂಡ್ಯದ ಶ್ರೀ ತಾಂಡವೇಶ್ವರ ಕಾಲೇಜ್ ಆಫ್ ಮ್ಯೂಸಿಕ್‌ನ ಎಂ.ಜಿ.ಲಕ್ಷ್ಮೀಕಾಂತ್‌ರವರು 'ರಾಜಲಕ್ಷ್ಮೀ ಸಂಚಾರಿ ನಾಟಕ ಕಂಪನಿ' ಯನ್ನು ಸ್ಥಾಪಿಸಿ, ಕೆಲವಾರು ನಾಟಕಗಳನ್ನು ಪ್ರದರ್ಶಿಸಿ ಮಂಡ್ಯದ ರಂಗಭೂಮಿಯ ಪ್ರಗತಿಗೆ ನೆರವಾಗಿದ್ದಾರೆ.

'ಸಮುದಾಯ ಸಾಂಸ್ಕೃತಿಕ ಸಂಘಟನೆ'ಯ ಬೆಂಗಳೂರು ಘಟಕದ ಕಾರ್ಯದರ್ಶಿಯಾಗಿರುವ ಶಶಿಧರ ಭಾರಿಘಾಟ್ (೧೯೬೦) ರವರು, ಮೂಲತಃ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು ಗ್ರಾಮದವರು. ಹಲವಾರು ನಾಟಕ, ಧಾರವಾಹಿಗಳಲ್ಲಿ ಅಭಿನಯಿಸಿ, ನಿರ್ದೇಶಿಸಿದ್ದಾರೆ. 'ಸಾಯುವವನೇ ಚಿರಂಜೀವಿ', 'ಮಾದೇವಿ', 'ಕಡೆಗೋಲು', 'ಗೊಂಬೆ ಹೇಳಿದ ಕಥೆ', 'ಮಂತ್ರದ ಕೋಲು' ನಾಟಕಗಳನ್ನು ಬರೆದು, ಈಶ್ವರ ಅಲ್ಲಾ, ದೇವರುಗಳು ಮುಂತಾದವನ್ನು ರೂಪಾಂತರಿಸಿದ್ದಾರೆ. ಸಾಕ್ಷ್ಯಚಿತ್ರ, ವೇದಿಕೆ ನಿರ್ಮಾಣ, ಬರವಣಿಗೆ ಮುಂತಾಗಿ ವಿವಿಧ ರೀತಿಯಲ್ಲಿ ರಂಗ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ಭಾರತ್ ವಿಕಾಸ್ ಪರಿಷತ್, ನಾಗಮಂಗಲದ ಕನ್ನಡ ಸಂಘ, ಪಾಂಡವಪುರದ ಕುವೆಂಪು ಹವ್ಯಾಸಿ ಕಲಾ ಸಂಘ, ಮದ್ದೂರು ತಾಲೂಕು ರಂಗಭೂಮಿ ಕಲಾವಿದರ ಸಂಘ, ಶಿವಪುರ, ಮುಂತಾದ ಸಂಘ ಸಂಸ್ಥೆಗಳು ಇತರೇ ಕನ್ನಡ ಕಾರ್ಯಕ್ರಮಗಳನ್ನೂ, ನಾಟಕ ಪ್ರದರ್ಶನಗಳನ್ನೂ ಏರ್ಪಡಿಸುತ್ತಿವೆ.

ಬಿ.ಜಯಪ್ರಕಾಶ್‌ಗೌಡರು ಅಧ್ಯಕ್ಷರಾಗಿಯೂ, ಎಚ್.ಎಸ್.ಮುದ್ದೇಗೌಡರು ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಿರುವ ಮಂಡ್ಯದ 'ಜನದನಿ' ಸಾಂಸ್ಕೃತಿಕ ಸಂಘಟನೆ, ವರ್ಷದಲ್ಲಿ ಎರಡು ಅಥವಾ ಮೂರು ರಂಗ ಶಿಬಿರಗಳನ್ನೂ ನಾಟಕಗಳನ್ನೂ ನಡೆಸುತ್ತಿದೆ.

ಮಂಡ್ಯ ತಾಲೂಕಿನ ಹುಲಿವಾನ ಗ್ರಾಮದ ರಾಮಲಿಂಗು ಅವರು ಬರೆದ ಹಲವಾರು ನಾಟಕಗಳು ನೂರಾರು ಪ್ರದರ್ಶನಗಳನ್ನು ಕಂಡಿವೆ. ಮಂಡ್ಯ ತಾಲೂಕಿನ ರಾಜು ಇನ್ನೊಬ್ಬ ನಾಟಕಕಾರ ಮತ್ತು ನಟ. ಇವರ 'ಹೆಬ್ಬೆಟ್ಟು' ನಾಟಕ ಹಲವಾರು ಬಾರಿ ಯಶಸ್ವಿಯಾಗಿ ಪ್ರದರ್ಶಿತಗೊಂಡಿದೆ. ರಾಜುರವರು ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಾರೆ. ಗೆಜ್ಜಲಗೆರೆಯ ಜಿ.ಡಿ.ಚಂದ್ರಶೇಖರ್‌ರವರು ನಾಟಕಗಳನ್ನು ಆಡಿಸುವಲ್ಲಿ ಆಸಕ್ತಿ ಹೊಂದಿದ್ದು, ಹಳ್ಳಿ-ಹಳ್ಳಿಗೆ ಹೋಗಿ, ಪೌರಾಣಿಕ ನಾಟಕಗಳನ್ನು ನಿರ್ದೇಶಿಸಿ ಆಡಿಸುತ್ತಾರೆ. ಮದ್ದೂರು ವಾಸು, ನಾಟಕಗಳಲ್ಲದೆ ದೂರದರ್ಶನದಲ್ಲೂ ಅಭಿನಯಿಸಿದ್ದಾರೆ. ಪಾಂಡವಪುರದ ಚ.ನಾರಾಯಣಸ್ವಾಮಿಯವರು ಹಲವಾರು ನಾಟಕಗಳಲ್ಲಿ ನಟಿಸಿದ್ದು. 'ಕಿಸಾಗೌತಮಿ', 'ಕತ್ತೆ ಬಾಲ ಕುದುರೆ ಜುಟ್ಟು', 'ಬೆಟ್ಟಕ್ಕೆ ಚಳಿಯಾದರೆ', 'ಹೆಡ್ಡಾಯಣ', 'ಮೂಕನ ಮಕ್ಕಳು',

'ಸಿದ್ಧಪ್ಪಾಜಿ ಪವಾಡ', 'ಒಗಟಿನ ರಾಣಿ' ಮುಂತಾದ ನಾಟಕಗಳನ್ನು ಮಕ್ಕಳಿಗಾಗಿ ನಿರ್ದೇಶಿಸಿದ್ದಾರೆ. ಪಾರ್ಥೇಗೌಡ, ಪುರುಷೋತ್ತಮ್, ಆನಂದ, ನಂಜುಂಡಸ್ವಾಮಿ, ಶ್ರೀನಿವಾಸ, ಎಲ್, ಹನುಮಂತಪ್ಪ ಬಿ.ಕೆ., ಸಿದ್ದೇಗೌಡ, ಸುನೀತಾ.ಸಿ, ಪ್ರೇಮಾನಂದ್, ಲಕ್ಕೇಗೌಡ, ಲಕ್ಷ್ಮೀ ನಾರಾಯಣಯ್ಯ, ಧನ್ಯಕುಮಾರ್, ಕೃಷ್ಣ.ಬಿ, ಜಯರಾಮು.ಬಿ.ಎಸ್, ಚಿಕ್ಕಸಿದ್ದೇಗೌಡ, ಗುಣಶೇಖರ ಕೆ.ಪಿ., ಚಂದ್ರಶೇಖರಯ್ಯ, ಪುಟ್ಟಸ್ವಾಮಿ, ಶೋಭಾ, ತಿಮ್ಮೇಗೌಡ ಚಿಕ್ಕಮರಳಿ, ಮಧು, ಅಶ್ವತ್ಥನಾರಾಯಣ್, ರಮೇಶ್, ಶ್ರೀಧರ್, ಹೆಚ್.ಡಿ.ಸುಪ್ರೀತ್, ಅನಿತಾ.ಸಿ, ದಿವ್ಯಾಗೌಡ, ಸ್ವಾತಿಕೃಷ್ಣ, ವಿಜಯಲಕ್ಷ್ಮಿ ಎಸ್. ಮುಂತಾದವರು ಇನ್ನಿತರ ರಂಗ ಕಲಾವಿದರಾಗಿದ್ದಾರೆ.

**ರಂಗಮಂದಿರಗಳು**

ಜಿಲ್ಲೆಯಲ್ಲಿ ೧೯೮೬ಕ್ಕಿಂತ ಹಿಂದಿನಿಂದಲೂ, ನಾಟಕಗಳ ಪ್ರದರ್ಶನಕ್ಕಾಗಿ ಒಂಬತ್ತೂ ಹೆಚ್ಚು ರಂಗಮಂದಿರಗಳು ಬಳಸಲ್ಪಡುತ್ತಿವೆ. 'ಲಕ್ಷ್ಮಿ ಜನಾರ್ಧನ ಸ್ವಾಮಿ' ನಾಟಕ ಮಂದಿರ ಜಿಲ್ಲೆಯ ಅತ್ಯಂತ ಹಳೆಯ ರಂಗಮಂದಿರವಾಗಿದೆ. ಮಂಡ್ಯದ ಪಿ.ಇ.ಎಸ್. ಕಾಲೇಜಿನ ಸ್ವಾಮಿ ವಿವೇಕಾನಂದ ವಿದ್ಯಾರ್ಥಿ ಸಭಾ ಭವನ, ಕೀಲಾರದ ಶಂಕರೇಗೌಡ ಟ್ರಸ್ಟ್ ನಡೆಸುವ 'ಶಂಕರಗೌಡರ ರಂಗಮಂದಿರ' ಗಳು ಪ್ರೋಸೀನಿಯಂ ಮಾದರಿಯವಾಗಿದ್ದು, ೧,೦೦೦ ಆಸನಗಳ ಸಾಮರ್ಥ್ಯವನ್ನು ಹೊಂದಿವೆ. ಕಾರ್ಮೆಲ್ ಮತ್ತು ಸೆಂಟ್ ಜೋಸೆಫ್ ಆಡಿಟೋರಿಯಂ ಹಾಗೂ ಸಕ್ಕರೆ ಕಾರ್ಖಾನೆ ರಂಗಮಂದಿರ ಮಂಡ್ಯ ನಗರದ ಇನ್ನಿತರ ಹಳೆಯ ರಂಗಮಂದಿರಗಳಾಗಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇತ್ತೀಚೆಗೆ (ವ್ಯಾಖ್ಯಾನ ಮಂಟಪ) ಜಿಲ್ಲಾ ಕೇಂದ್ರ ಮಂಡ್ಯದಲ್ಲಿ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವು ಅಕರ್ಷಕ ರಂಗಮಂಟಪವನ್ನೂ ಹೊಂದಿದೆ.

**ಸಭಾಂಗಣ ಮತ್ತು ಆಡಿಟೋರಿಯಂಗಳು:–** ರೈತ ಸಭಾಂಗಣ ಮತ್ತು ಡಿ.ಸಿ.ಸಿ ಬ್ಯಾಂಕ್ ಬೆಳ್ಳಿ ಮಹೋತ್ಸವ ಸಭಾಂಗಣ, ನಾಗಮಂಗಲದ ಗಾಂಧಿ ಭವನದ ಸಭಾಂಗಣ, ಮದ್ದೂರಿನ ಪುರಸಭಾ ಭವನ ಇತರ ಸಭಾಂಗಣಗಳಾಗಿವೆ ಹಾಗೂ ಮಂಡ್ಯದ ಜಿಲ್ಲೆಯಲ್ಲಿ ಕುವೆಂಪು ಬಯಲುರಂಗಮಂದಿರ ಉಲ್ಲೇಖಾರ್ಹವಾಗಿದ್ದು ಇನ್ನೂ ಹಲವಾರು ಬಯಲು ರಂಗಮಂದಿರಗಳಿವೆ.

## ಪತ್ರಿಕೋದ್ಯಮ

ಹರ್ಮನ್ ಮೋಗ್ಲಿಂಗ್ ೧೮೪೩ರಲ್ಲಿ ಆರಂಭಿಸಿದ 'ಮಂಗಳೂರು ಸಮಾಚಾರ' ಪತ್ರಿಕೆಯೇ ರಾಜ್ಯದಲ್ಲಿ ಹೊರ ಬಂದ ಮೊಟ್ಟ ಮೊದಲ 'ಕನ್ನಡ ಪತ್ರಿಕೆ' ಎಂದು ತಿಳಿದು ಬಂದಿದ್ದರೂ, ನಾಡಿಗ ಕೃಷ್ಣ ಮೂರ್ತಿಯವರು ಸಂಶೋಧಿಸಿರುವ ಪ್ರಕಾರ, ೧೭೭೪ರಲ್ಲಿ ಶ್ರೀರಂಗಪಟ್ಟಣವು ಮೈಸೂರು ಸಂಸ್ಥಾನದ ರಾಜಧಾನಿಯಾಗಿದ್ದ ಕಾಲದಲ್ಲಿ, ಶ್ರೀರಂಗಪಟ್ಟಣದಿಂದ ಪ್ರಕಟವಾಗುತ್ತಿದ್ದ 'ಫೌಜಿ ಅಖ್‌ಬಾರ್' ಎಂಬ ಉರ್ದು ವಾರಪತ್ರಿಕೆ ಮೈಸೂರು ಸಂಸ್ಥಾನದ ಹಾಗೂ ರಾಜ್ಯದ ಮೊದಲ ಪತ್ರಿಕೆಯಾಗುತ್ತದೆ.

ಜಿಲ್ಲೆಯಲ್ಲಿ ಕನ್ನಡ ಪತ್ರಿಕೋದ್ಯಮ ಆರಂಭಗೊಂಡುದು ಪಾಂಡವಪುರ ತಾಲೂಕಿನ ಮೇಲುಕೋಟೆಯಿಂದ. ಆಜಿ.ರಾಮಾನುಜ ಅಯ್ಯಂಗಾರ್‍ಯರ ಸಂಪಾದಕತ್ವದಲ್ಲಿ 'ಪಾಂಡಿತ್ಯ ವರ್ಧಿನಿ ಸಭಾ'ದ ವತಿಯಿಂದ, 'ಹಿಂದೂ ಮತ ಪ್ರಕಾಶಿಕಾ' ಎಂಬ ಮಾಸ ಪತ್ರಿಕೆಯು ೧೮೮೨ ರಿಂದ ೧೯೦೦ರವರೆಗೆ ಹೊರಬಂದಿತು. ೧೮೮೭ರಲ್ಲಿ ಸದಾನಂದ ವರ್ಧಿನಿ ಸಭಾದಿಂದ ರಾಮಾಸ್ವಾಮಿ ಶೆಲ್ವಯ್ಯಂಗಾರ್‍ಯರ ಸಂಪಾದಕತ್ವದಲ್ಲಿ 'ಆರ್ಯ ವಿದ್ಯಾ ಸಂಜೀವಿನಿ' ಎಂಬ ಮಾಸ ಪತ್ರಿಕೆ, ಆನಂತರ ಎ.ಎಲ್.ಪಿಳ್ಳೆಯವರು ೧೯೩೬ ರಿಂದ ೧೯೫೨ರವರೆಗೆ ನಡೆಸಿದ 'ಯದುಗಿರಿ' ಎಂಬ ತ್ರೈಮಾಸಿಕ ಪತ್ರಿಕೆಗಳೂ ಹೊರಬಂದಿವೆ.

ಎಸ್.ವಿ.ವೆಂಕಟರಾಮಯ್ಯನವರು ೧೯೦೫ರಲ್ಲಿಯೇ ತಾಲೂಕು ಕೇಂದ್ರವಾದ ಶ್ರೀರಂಗಪಟ್ಟಣದಲ್ಲಿ 'ವಿವೇಕೋದಯ' ಎಂಬ ಪ್ರಸಿದ್ಧ ಮಾಸಪತ್ರಿಕೆಯನ್ನು ಪ್ರಕಟಿಸಿ ಹೆಸರಾದವರು. ಆ ಮೂಲಕ ಹೊಸಗನ್ನಡದ ಬೆಳವಣಿಗೆಗೆ ೧೯ನೇ ಶತಮಾನದ ಆದಿಯಲ್ಲಿಯೇ ದುಡಿದವರು. ಇವರು ಪ್ರಮುಖ ಮುಖಂಡರೂ, ಆಗಿನ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರೂ, ಮಂಡ್ಯ ಜಿಲ್ಲೆಯ ರಚನೆಗೆ ಪ್ರಮುಖ ಕಾರಣಕರ್ತರೂ ಆದ ಎಂ.ಸಿ.ಲಿಂಗೇಗೌಡರ ಮಾವಂದಿರು. ವೆಂಕಟರಾಮಯ್ಯನವರು ಕನ್ನಡ, ಸಂಸ್ಕೃತ, ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿ ಪಂಡಿತರಾಗಿದ್ದರು. ಅವರ ಮಾಸಪತ್ರಿಕೆಗೆ ಆಗಿನ ವಿದ್ವಾಂಸರಾದ ಕವಿರತ್ನ ಎಚ್.ಚಿದಂಬರಯ್ಯ, ಬಿ.ವೆಂಕಟಾಚಾರ್ಯ, ಆರ್.ಶ್ರೀನಿವಾಸರಾವ್ ಮೊದಲಾದವರು ಲೇಖಕರಾಗಿದ್ದರು. 'ವಿವೇಕೋದಯ' ಪ್ರಕಟಣೆ ನಿಂತ ನಂತರ ಬೆಂಗಳೂರಿನ 'ಒಕ್ಕಲಿಗರ ಪತ್ರಿಕೆ'ಯ ಸಂಪಾದಕರಾಗಿ ಅವರು ದುಡಿದರು. ಸ್ವಲ್ಪ ಕಾಲದ ಬಳಿಕ ಸರ್ಕಾರದ ಆಗಿನ 'ಸಾಮಾನ್ಯ ಮತ್ತು ಕಂದಾಯ ಸಚಿವಾಲಯ' ದ ಅಂಗವಾಗಿದ್ದ ಭಾಷಾಂತರ ಶಾಖೆಯಲ್ಲಿ ಗುಮಾಸ್ತರಾಗಿ ಸೇರಿ, ಭಾಷಾಂತರಕಾರರಾಗಿಯೂ ಸೇವೆ ಸಲ್ಲಿಸಿದರು. 'ಶ್ರೀ ವೆಂಕಟರಾಮಯ್ಯನವರು ಕನ್ನಡದಲ್ಲಿ ವೈಜ್ಞಾನಿಕ ಗ್ರಂಥಗಳನ್ನು ವಿಶೇಷವಾಗಿ ನೋಡಬೇಕೆಂಬ ಆಸೆ ಉಳ್ಳವರಾಗಿದ್ದರು' ಎಂದು ಅವರೊಂದಿಗೆ ಒಕ್ಕಲಿಗರ ಪತ್ರಿಕೆಯಲ್ಲಿ ಸಹಾಯಕ ಸಂಪಾದಕರಾಗಿ ದುಡಿದ ದ.ಕೃ.ಭಾರದ್ವಾಜ ಅವರು ೧೧-೦೮-೧೯೩೮ರ 'ಕನ್ನಡನುಡಿ' ಯ ಸಂಚಿಕೆಯಲ್ಲಿ ವಿಶೇಷವಾಗಿ ಸ್ಮರಿಸಿದ್ದಾರೆ. 'ಸ್ವಾಮಿ ವಿವೇಕಾನಂದರವರ ಜೀವಿತ ಚರಿತ್ರೆ' (೧೯೦೪) ಮೊದಲಾದ ಕೃತಿಗಳನ್ನೂ ಪ್ರಕಟಿಸಿದ್ದ ಶ್ರೀರಂಗಪಟ್ಟಣದ ಸುಬೇದಾರ್ ವೆಂಕಟರಮಣಯ್ಯ ವೆಂಕಟರಾಮಯ್ಯ ಅವರು ಆಗಸ್ಟ್ ೧೯೩೫ರಲ್ಲಿ ನಿಧನ ಹೊಂದಿದರು. ಕನ್ನಡ ಪತ್ರಿಕೋದ್ಯಮ ಹೆಚ್ಚಿನ ಬೆಳವಣಿಗೆ ಕಾಣತೊಡಗಿದ ಕಾಲದಲ್ಲಿ ಈ ಜಿಲ್ಲೆಯ ಅವ್ವೇರಹಳ್ಳಿಯಲ್ಲಿ ಬೆಳೆದು ಮದ್ದೂರಿನಲ್ಲಿ ನೆಲೆಸಿದ, ಎಚ್.ಕೆ.ವೀರಣ್ಣಗೌಡರು ಮತ್ತು ಮದ್ದೂರಿನವರಾದ ಸೀತಾರಾಮಶಾಸ್ತ್ರಿಗಳು ಕ್ರಮವಾಗಿ ನಡೆಸಿದ 'ಚಿತ್ರ ಗುಪ್ತ' ಮತ್ತು ವೀರಕೇಸರಿ ಪತ್ರಿಕೆಗಳು ಬೆಂಗಳೂರಿನಲ್ಲಿ ಪ್ರಾರಂಭಗೊಂಡ, ಆಗಿನ ಮೈಸೂರು ಸಂಸ್ಥಾನದ ಉಲ್ಲೇಖನೀಯ ಪತ್ರಿಕೆಗಳಾಗಿದ್ದವು.

ಮದ್ದೂರಿನ 'ತೋಟದ ಮನೆ'ಯ ಎಚ್.ಕೆ.ವೀರಣ್ಣಗೌಡರು 'ಚಿತ್ರಗುಪ್ತ' ಮತ್ತು ಒಕ್ಕಲಿಗರ ಪತ್ರಿಕೆಗಳ ಮೂಲಕ ಬೀರಿದ ಪ್ರಭಾವ ಈ ಜಿಲ್ಲೆಗೆ ಮಾತ್ರವಲ್ಲ ಇಡೀ ಮೈಸೂರು ರಾಜ್ಯಕ್ಕೆ ಅನ್ವಯಿಸುವಂತಿತ್ತು. ಹುಟ್ಟು ಚಳುವಳಿಗಾರರಾದ ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ 'ಕರ್ನಾಟಕ ವಿದ್ಯಾರ್ಥಿ' ಎಂಬ ದ್ವೈಮಾಸಿಕ ಪತ್ರಿಕೆಯ ಉಪಸಂಪಾದಕರಾಗಿದ್ದರು. ನಂತರ 'ಚಿತ್ರಗುಪ್ತ' ದಿನ ಪತ್ರಿಕೆಯನ್ನು ೧೯೨೮ ರಲ್ಲಿ ಆರಂಭಿಸಿದ್ದು ಬೆಂಗಳೂರಿನಲ್ಲಿ. ಆನಂತರ ಇದು ಮೈಸೂರಿಗೆ ಸ್ಥಳಾಂತರಗೊಂಡು ೧೯೩೧ರವರೆಗೆ ನಡೆಯಿತು. 'ಪ್ರಜಾವಾಣಿ' ಪತ್ರಿಕೆಯ ಆಕಾರದ ನಾಲ್ಕು ಪುಟಗಳ, ಮೂರು ಕಾಸಿನ ಬೆಲೆಯ, ಈ ಪತ್ರಿಕೆಯ ಮೊದಲ ಪುಟದ ಮೇಲ್ಭಾಗದಲ್ಲಿ 'ಚಿತ್ರಗುಪ್ತ' ಎಂಬ ದಪ್ಪಕ್ಷರದ ಹೆಸರಿನ ಕೆಳಗೆ 'ನಿರ್ಭಯ, ನಿಷ್ಪಕ್ಷಪಾತ, ನಿರ್ದಾಕ್ಷಿಣ್ಯ ಕನ್ನಡ ದಿನಪತ್ರಿಕೆ' ಎಂಬ ಧ್ಯೇಯ ವಾಕ್ಯವಿರುತ್ತಿತ್ತು. ಈ ವಾಕ್ಯಕ್ಕೆ ಅನುಗುಣವಾಗಿಯೇ ನಡೆದ ಅವರು ಪತ್ರಿಕೆಯನ್ನು ನಡೆಸಿದರು. ದಾವಣಗೆರೆಯಲ್ಲಿ ೧೯೨೯ರಲ್ಲಿ ನಡೆದ ಕೋಮುಗಲಭೆಯ ಕಾಲದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿಗಳಿಂದ ಪತ್ರಿಕೆ ದೇಶದಲ್ಲೇ ಪ್ರಾಮುಖ್ಯತೆ ಕೂಡ ಗಳಿಸಿ, ಪ್ರಸಾರ ಸಂಖ್ಯೆ ಬಹಳಷ್ಟು ಹೆಚ್ಚಾಯಿತು. ಅಲ್ಲದೆ ೧೯೨೮ರಲ್ಲೇ ಇವರ ಸಂಪಾದಕತ್ವದಲ್ಲಿ 'ಪಟೇಲರ ಪತ್ರಿಕೆ' ಆರಂಭಗೊಂಡಿತು.

ರಾಷ್ಟ್ರೀಯ ಚಳವಳಿಯ ಬಿಸಿ ಏರಿದ ಕಾಲದಲ್ಲಿ, ದೇಶಾಭಿಮಾನ ಬೆಳೆಸುವ ಛಲದಿಂದ ತಿಲಕರ ಸ್ವಾತಂತ್ರ್ಯಾಂದೋಲನದಿಂದ ಪ್ರಭಾವಿತರಾಗಿದ್ದ ಮದ್ದೂರಿನ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು (೧೮೯೩-೧೯೭೧) 'ಆರ್ಯ ಮಹಿಳಾ' ಎಂಬ ಮಾಸ ಪತ್ರಿಕೆಯನ್ನೂ, ಆನಂತರ ೧೯೨೮ರಲ್ಲಿ 'ವೀರಕೇಸರಿ' ಎಂಬ ಪತ್ರಿಕೆಯನ್ನೂ

ಆರಂಭಿಸಿದರು. ತಮ್ಮ ವಿಶಿಷ್ಟ ಶೈಲಿಯಿಂದ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ನೀಡಿದರು. ಸರ್ಕಾರದ ನಿರ್ಬಂಧಕ್ಕೆ ಗುರಿಯಾಗಿ ೧೯೨೯ರಲ್ಲಿ ಸೆರೆಮನೆಗೆ ಹೋಗಿ ಬಂದರಾದರೂ ಪತ್ರಿಕೆಯನ್ನು ೧೯೩೩ರಲ್ಲಿ, ಪುನಃ ಆರಂಭಿಸಿದರು. ಸರ್ಕಾರದ ನಿರ್ಬಂಧ ನಿಯಮಗಳಿಗೆ ಸಿಲುಕದಿರಲು ಪತ್ರಿಕೆಯನ್ನು ಪಾಕ್ಷಿಕ, ವಾರ, ದಿನಪತ್ರಿಕೆಯಾಗಿ ಕ್ರಮೇಣ ಮಾರ್ಪಡಿಸಿ, ಹೊರಡಿಸುತ್ತಿದ್ದುದಲ್ಲದೆ ಮದ್ರಾಸು, ಮುಂಬಯಿ, ಇತ್ಯಾದಿ ಸ್ಥಳಗಳಿಗೇ ಒಯ್ದು ಅಲ್ಲಿಂದಲೇ ತಮ್ಮ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಪತ್ರಿಕೆಯ ಹೆಸರಿನಿಂದಲೇ ಸೀತಾರಾಮ ಶಾಸ್ತ್ರಿಗಳು ಗುರುತಿಸಲ್ಪಡತೊಡಗಿದರು. ಈ ಪತ್ರಿಕೆಯ ೧೫ ಸಾವಿರ ಪ್ರತಿಗಳು ಖರ್ಚಾಗುತ್ತಿದ್ದವು. (ಸಾಹಿತ್ಯ ವಿಭಾಗ ನೋಡಿ)

ಸ್ವಾತಂತ್ರ್ಯ, ಚಳವಳಿ, ಸ್ವಾವಲಂಬನೆ, ಮುಂತಾದವುಗಳ ಬಗ್ಗೆ ಆದರ್ಶ ಮತ್ತು ಆಸಕ್ತಿಗಳನ್ನಿಟ್ಟುಕೊಂಡಿದ್ದ ಮಂಡ್ಯದ ಎಂ.ಎಸ್.ಶ್ರೀನಿವಾಸರಾವ್ ಅವರು ಜನರಲ್ಲಿ ಜಾಗೃತಿ, ರಾಷ್ಟ್ರಪ್ರಜ್ಞೆಗಳನ್ನು ಮೂಡಿಸುವ ಉದ್ದೇಶದಿಂದ, ೧೯೪೦ರಲ್ಲಿ ಆರಂಭಿಸಿದ ಮಾಸ ಪತ್ರಿಕೆ 'ಪ್ರತಿಭಾ' ಸ್ವಾತಂತ್ರ್ಯ ಪೂರ್ವದಲ್ಲಿ ಚಳವಳಿಯ ಒಂದು ಅಂಗವಾಗಿ ಆರಂಭಗೊಂಡ ಜಿಲ್ಲೆಯ ಏಕೈಕ ಪತ್ರಿಕೆ. ಸ್ವಾತಂತ್ರ್ಯ ಹೋರಾಟದ ಸಂಗತಿ, ಚಳವಳಿಗಳ ಸುದ್ದಿ, ಗಾಂಧಿ, ನೆಹರು, ತಿಲಕ್ ಮುಂತಾದ ರಾಷ್ಟ್ರೀಯ ನಾಯಕರ ಭಾಷಣ ಹೋರಾಟದ ತತ್ವಗಳೇ ಮುಂತಾದವು ಈ ಪತ್ರಿಕೆಯ ಪ್ರಮುಖ ವಿಷಯಗಳಾಗಿದ್ದವು. ಕಾಂಗ್ರೆಸ್‌ಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿತ್ತು. ೧೯೪೭ರಲ್ಲಿ 'ಪ್ರತಿಭಾ' ಪತ್ರಿಕೆಯನ್ನು ನಿಲ್ಲಿಸಿ, 'ಉದಯ' ಎಂಬ ವಾರಪತ್ರಿಕೆಯನ್ನು ಆರಂಭಿಸಿ ಕೆಲಕಾಲ ನಡೆಸಿದರು. 'ಉದಯ ಶ್ರೀನಿವಾಸರಾವ್' ಎಂದೇ ಕರೆಯಲ್ಪಡುತ್ತಿದ್ದ ಇವರು ತಮ್ಮ ಪತ್ರಿಕೆಯ ಆರಂಭಕ್ಕೆ ಮೊದಲು ಮದರಾಸಿನಿಂದ ಪ್ರಕಟವಾಗುತ್ತಿದ್ದ ಸಂಜೆಪತ್ರಿಕೆ, ' ದಿ ಮೇಲ್' ನ ಮಂಡ್ಯ ಜಿಲ್ಲಾ ಏಜೆಂಟರಾಗಿ, ಬಾತ್ಮೀದಾರರಾಗಿ ಕೆಲಸ ನಿರ್ವಹಿಸಿದ್ದರು. ಆ ನಂತರ 'ಉದಯ' ದಿನಪತ್ರಿಕೆಯಾಗಿ ಕೆಲವು ಸಮಯ ನಡೆದು ನಿಂತು ಹೋಯಿತು. ಶ್ರೀನಿವಾಸರಾವ್‌ರವರು 'ಉದಯ ಪ್ರಕಾಶನ' ಎಂಬ ಪ್ರಕಾಶನವನ್ನು ಹೊಂದಿದ್ದು ಗೊರೂರು ರಾಮಸ್ವಾಮಿ ಅಯ್ಯಂಗಾರರ ಎರಡು ಕೃತಿಗಳನ್ನು ಪ್ರಕಾಶಿಸಿದ್ದರು. ದೇಶದ ಸ್ವಾತಂತ್ರ್ಯಾನಂತರ, ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಳ ಕಾರ್ಯಕ್ರಮಗಳಿಂದಾಗಿ, ಜಿಲ್ಲೆಯಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕ ಬೆಳವಣಿಗೆಗಳು ಕಾಣತೊಡಗಿದ ಮೇಲೆ, ಪತ್ರಿಕೋದ್ಯಮ ರಂಗದಲ್ಲಿ ಕ್ರಮೇಣ ಬೆಳವಣಿಗೆಯಾಗತೊಡಗಿತು. ಮಂಡ್ಯ ನಗರದಲ್ಲಿ ೧೯೫೦ರಲ್ಲಿ ಆರಂಭವಾಗಿದ್ದ 'ಕಿರಣ ಸಾಹಿತ್ಯ ಸಂಘ'ವು ಕಿರಿಯ ಬರಹಗಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 'ಜನ್ಮ ಭೂಮಿ' ಎಂಬ ಕೈ ಬರಹದ ಪತ್ರಿಕೆಯನ್ನು ಪ್ರಾರಂಭಿಸಿತು. 'ಪುಷ್ಪಾಂಜಲಿ' ಎಂಬ ಪ್ರಬಂಧ ಸಂಕಲನವನ್ನು ಪ್ರಕಟಿಸಿದ ಈ ಸಂಘ, ಕಿರಿಯರಲ್ಲಿ ಸಾಹಿತ್ಯಾಸಕ್ತಿ ಹುಟ್ಟಿಸಲು, ಸಾಹಿತ್ಯೋತ್ಸವ, ಕಲಾ ಪ್ರದರ್ಶನ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದೆ. 'ಉದ್ಧರೇದಾತ್ಮನಾತ್ಮನಂ' ಎಂದರೆ ತನ್ನನ್ನು ತಾನೇ ಉದ್ಧಾರ ಮಾಡಿಕೊಳ್ಳಬೇಕು ಎಂಬ ಪ್ರಮುಖ ಧ್ಯೇಯದೊಂದಿಗೆ ೧೯೫೧ರಲ್ಲಿ 'ಸ್ಥಳೀಯ ಪತ್ರಿಕೆ' ಎಂಬ ವಾರಪತ್ರಿಕೆಯನ್ನು ಆರಂಭಿಸಿದವರು, ಮೇಲುಕೋಟೆಯ ಅರೆಯರ್‌ರವರು. ಇದರಲ್ಲಿ ಸ್ಥಳೀಯ ಸುದ್ದಿ–ಸಮಸ್ಯೆ, ಜನರ ನೋವು ಆಶಯಗಳು ಪ್ರಕಟಗೊಳ್ಳುತ್ತಿದ್ದವು. ಅರೆಯರ್‌ರವರು ವಿದ್ಯಾರ್ಥಿಗಳ ನೆರವು ಪಡೆದು ಈ ಪತ್ರಿಕೆಯನ್ನು ಬರೆಸುತ್ತಿದ್ದರು. ಇದರಲ್ಲಿ ಶಾಂತಿ, ಉತ್ಸವ, ಸ್ವಾತಂತ್ರ್ಯ ದಿನಾಚರಣೆ, ಗೀತಾರ್ಥ ಸಂಗ್ರಹ, ಮುಕ್ಕಟ್ಟೆ ಚಾವಡಿ ಮುಂತಾದ ಶೀರ್ಷಿಕೆಗಳಿರುತ್ತಿದ್ದವು. ನಾಲ್ಕು ಪುಟಗಳ ಈ ಪತ್ರಿಕೆಯನ್ನು ಅರೆಯರ್‌ರವರು ಮೂರು ವರ್ಷಗಳ ಕಾಲ ನಡೆಸಿದರು. ಈ ಪತ್ರಿಕೆ ೭೦ ಜನ ಚಂದಾದಾರರನ್ನು ಹೊಂದಿತ್ತು. ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ಎ.ಸಿ.ಮಾದೇಗೌಡರು ೧೯೫೬ರಲ್ಲಿ ಪ್ರಜಾವಾಣಿ ಪತ್ರಿಕೆಯ ಆಕಾರದಲ್ಲಿ, 'ಜನಜೀವನ' ಎಂಬ ಮೂರು ಕಾಸಿನ ಪತ್ರಿಕೆಯನ್ನು ಪ್ರಕಟಿಸತೊಡಗಿದರು. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯು ಅಭಿವೃದ್ಧಿಗೊಳ್ಳುತ್ತಾ ಹೋದಂತೆ ಇದರ ಮುದ್ರಣ ಕಾರ್ಯಗಳು ಹೆಚ್ಚಾಗತೊಡಗಿದಾಗ

ಒಂದು ಮುದ್ರಣಾಲಯವನ್ನೂ ಆರಂಭಿಸಿದರು. ಆನಂತರ ಸ್ನೇಹಿತರ ಸಲಹೆ ಮೇರೆಗೆ ಪತ್ರಿಕೆ ಆರಂಭಿಸಿದರು ಈ ಪತ್ರಿಕೆಯ ೨೦೦೦ ಪ್ರತಿಗಳು ಅಚ್ಚಾಗುತ್ತಿದ್ದವು. ನಡೆದ ಸುದ್ದಿಗಳು ತಕ್ಷಣವೇ ಇದರಲ್ಲಿ ಪ್ರಕಟಗೊಳ್ಳುತ್ತಿದ್ದುವಾದರೂ ಈ ಪತ್ರಿಕೆ ೧೫ ತಿಂಗಳಿಗಿಂತ ಹೆಚ್ಚು ಕಾಲ ನಡೆಯದೇ ಹೋಯಿತು. ಈ ಪತ್ರಿಕೆಯು ಬಳಸುತ್ತಿದ್ದ ಸಿಲಿಂಡರ್, ಮುದ್ರಣಯಂತ್ರ, ಆಗಿನ ಮಂಡ್ಯ ಸೀಮೆಯಲ್ಲಿ ಮುದ್ರಣಾಲಯಗಳು ಬಳಸುತ್ತಿದ್ದ ಅತ್ಯಾಧುನಿಕ ಮಾದರಿಯದಾಗಿದ್ದವು. ಸಾಹಿತ್ಯ, ಸಂಸ್ಕೃತಿ, ಮತ್ತು ಸುದ್ದಿಗಳ ಸದಭಿರುಚಿಯ ವಾರ ಪತ್ರಿಕೆಯಾಗಿ ೧೯೫೬ರಲ್ಲಿ ಕೆ.ವಿ.ಶಂಕರಗೌಡರು 'ಜನಮನ' ಎಂಬ ಪತ್ರಿಕೆಯನ್ನು ಹೊರತಂದರು. ಇವರು ರಾಜ್ಯದ ಶಿಕ್ಷಣ ಸಚಿವರೂ, ಸಾಹಿತಿಗಳೂ, ನಾಟಕಕಾರರೂ ಆಗಿದ್ದರು. 'ತನ್ನ ತಾನಿಲ್ಲಗೈವುದೇ ಎಲ್ಲ ಸಾಧನೆಗೆ ಕೊನೆಯ ಗುರಿ' ಎಂಬುದು ಈ ಪತ್ರಿಕೆಯ ಪರಮ ಧ್ಯೇಯವಾಗಿತ್ತು. ಜಿ.ಪಿ.ರಾಜರತ್ನಂ, ನಾ ಕಸ್ತೂರಿ, ಉ.ಕಾ.ಸುಬ್ಬರಾಯಚಾರ್ ಮುಂತಾದ ಹೆಸರಾಂತ ಬರಹಗಾರರು ಈ ಪತ್ರಿಕೆಗೆ ಲೇಖನಗಳನ್ನು ಬರೆದಿದ್ದಾರೆ. ೩,೦೦೦ ಪ್ರತಿಗಳು ಅಚ್ಚಾಗುತ್ತಿದ್ದು, ಬೆಂಗಳೂರು, ಚಿತ್ರದುರ್ಗ, ಮೈಸೂರು ಮುಂತಾದ ಊರುಗಳಲ್ಲೂ ಈ ಪತ್ರಿಕೆಗಳು ಮಾರಾಟವಾಗುತ್ತಿದ್ದವು. ಈ ಪತ್ರಿಕೆಯಿಂದಾಗಿ ಶಂಕರಗೌಡರು ಉತ್ತಮ ಪತ್ರಕರ್ತರಾಗಿ ಹೆಸರು ಪಡೆದರು. ಆದರೆ ಅವರೇ ಮಾಡಿಕೊಂಡ ಕೆಲವು ಕಟ್ಟುಪಾಡುಗಳಿಂದಾಗಿ ಪತ್ರಿಕೆ ಒಂದು ವರ್ಷ ನಡೆದು, ಆನಂತರ ನಿಂತುಹೋಯಿತು.

ಮೈಸೂರು ಸಕ್ಕರೆ ಕಾರ್ಖಾನೆ ಮೂಲಕ, ರೈತ ಜನಾಂಗಕ್ಕೆ ಸಕ್ಕರೆ ಹಾಗೂ ಕಬ್ಬಿನ ಬೆಳೆಯ ಬಗ್ಗೆ ಉಚಿತ ಸಲಹೆ ಸೂಚನೆಗಳನ್ನು ನೀಡುವ ಉದ್ದೇಶದಿಂದ ವಾಣಿಜ್ಯ ಪತ್ರಿಕೆಯಾಗಿ ೧೯೫೭ರಲ್ಲಿ, 'ಮೈಸೂರು ಸಕ್ಕರೆ' ಎಂಬ ಮಾಸ ಪತ್ರಿಕೆ ಆರಂಭಗೊಂಡಿತು. ಮೊದಲು ನಾಗಪ್ಪ ಎಂಬುವವರೂ ಆನಂತರ ಕೆ.ಎನ್.ನರಸಿಂಹೇಗೌಡ ಎಂಬುವವರೂ ಇದರ ಸಂಸ್ಥಾಪಕ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಈ ಪತ್ರಿಕೆಯು ಆಕರ್ಷಕವಾಗಿ, ರೈತೋಪಯೋಗಿಯಾಗಿ ಹಲವು ವರ್ಷಗಳ ಕಾಲ ನಡೆಯಿತು. ರೈತರ ಸಮಸ್ಯೆ, ಸಂದೇಹ ಮತ್ತು ಪ್ರಶ್ನೆಗಳಿಗೆ ಕೃಷಿ ತಜ್ಞರಿಂದ ಉತ್ತಮ ಸಲಹೆಗಳು ಪ್ರಕಟಗೊಳ್ಳುತ್ತಿದ್ದವು. ಸಕ್ಕರೆ ಕಂಪನಿ ಕಾರಣಾಂತರಗಳಿಂದಾಗಿ ಈ ಪತ್ರಿಕೆಯನ್ನು ನಿಲ್ಲಿಸಬೇಕೆಂಬ ಸ್ಥಿತಿಗೆ ಬಂದಾಗ, ಇದರ ವ್ಯವಸ್ಥೆ ನಿರ್ವಹಣೆಗಳ ಪೂರ್ಣ ಒಡೆತನ ಮತ್ತು ಹೊಣೆಗಾರಿಕೆಯನ್ನು ಸಂಪಾದಕರಾದ ಕೆ.ಎನ್.ನರಸಿಂಹೇಗೌಡರಿಗೆ ವಹಿಸಿಕೊಟ್ಟಿತು. ಇವರು ಮಂಡ್ಯ ಜಿಲ್ಲೆಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದು ಟೈಮ್ಸ್ ಆಫ್ ಇಂಡಿಯಾ ಮತ್ತು ಪಿ.ಟಿ.ಐ.ಸಂಸ್ಥೆಯ ಮಂಡ್ಯ ಜಿಲ್ಲೆಯ ವರದಿಗಾರರೂ ಆಗಿದ್ದು, 'ಮೈಸೂರು ಪತ್ರಿಕೆ' ಯಲ್ಲದೆ, 'ಸಂಜೆವಾಣಿ ವಾರ್ತೆ' ಎಂಬ ಸಂಜೆ ದಿನಪತ್ರಿಕೆಯನ್ನೂ ಕೆಲವು ತಿಂಗಳು ನಡೆಸಿದರು. ಗ್ರಾಮಾಂತರ ಪತ್ರಕರ್ತರಿಗಾಗಿ ಸಮ್ಮೇಳನ ಮತ್ತು ತರಬೇತಿ ಶಿಬಿರಗಳನ್ನು ಸಂಘಟಿಸಿದ್ದಾರೆ. ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಯನ ತಂಡದ ಸದಸ್ಯರಾಗಿ ಮೂರು ಬಾರಿ ವಿದೇಶ ಪ್ರವಾಸ ಮಾಡಿರುವ ಇವರಿಗೆ, ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ೧೯೯೭ರಲ್ಲಿ ಪ್ರಶಸ್ತಿ ದೊರೆತಿದೆ.

ಆಧ್ಯಾತ್ಮಿಕ, ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸುದ್ದಿ ಪತ್ರಿಕೆಗಳ ನಂತರ, ೧೯೬೦ರಲ್ಲಿ ಹುಲಿಗೆರೆಪುರದ ಮಲ್ಲಯ್ಯನವರಿಂದ ಮದ್ದೂರಿನಲ್ಲಿ ಆರಂಭಗೊಂಡ 'ಜಾಗೃತ ಕೇಸರಿ' ಎಂಬ ಪತ್ರಿಕೆ ಜನರ ಬುದ್ಧಿ ಮತ್ತು ಮನಸ್ಸನ್ನು ಜಾಗೃತಗೊಳಿಸುವತ್ತ ಹೊರಳಿತು.

ಪತ್ರಿಕೆಯನ್ನು ಮಾಧ್ಯಮವಾಗಿ ಬಳಸಿಕೊಳ್ಳುವುದರಲ್ಲಿರುವ ಲಾಭ ಮತ್ತು ಪ್ರಯೋಜನಗಳ ಬಗ್ಗೆ ಜನರಿಗೆ ಈ ವೇಳೆಗಾಗಲೇ ಅರಿವು ಮೂಡತೊಡಗಿತ್ತು. ತಂತಮ್ಮ ಕ್ಷೇತ್ರದ ಸುದ್ದಿಗಳನ್ನು, ವಿಚಾರ ಲಹರಿಗಳನ್ನು, ಕಾರ್ಯಕ್ರಮಗಳನ್ನೂ ಜನರಿಗೆ ತಿಳಿಯಪಡಿಸುವ ಉದ್ದೇಶದಿಂದ ಹಲವಾರು ಪತ್ರಿಕೆಗಳು ಹುಟ್ಟಿಕೊಂಡವು. ಕೆಲವರು ಪತ್ರಿಕೋದ್ಯಮವನ್ನು ಗಂಭೀರವಾಗಿ ತೆಗೆದುಕೊಳ್ಳದೆ ಯಾವುದೇ ಉದ್ದೇಶವೂ ಇಲ್ಲದೆ ಕೇವಲ ಒಂದು ಉದ್ಯೋಗವೆಂಬಂತೆ ಭಾವಿಸಿ,

ವೃತ್ತಿಯಾಗಿ, ಉಪವೃತ್ತಿಯಾಗಿ ಪತ್ರಿಕೆ ನಡೆಸಿ ಹೆಚ್ಚು ದಿನಗಳ ಕಾಲ ನಡೆಸಲಾಗದೆ ನಿಲ್ಲಿಸಿದ್ದಾರೆ ಎಂಬುದು ಹಲ ಪ್ರಾಜ್ಞರ ಅಭಿಪ್ರಾಯವಾಗಿದೆ.

ಜ್ಞಾನಸಿಂಧು, ಚಾಮುಂಡಿ ವಾಣಿ, ಚಾವಟಿ, ಜನಜೀವನ, ವನಸುಮ, ಸಮಾಜಕಲ್ಯಾಣ, ಸಕ್ಕರೆಸೀಮೆ, ಪಾರಿಜಾತ, ಈ ಎಲ್ಲವೂ ಕ್ರಿ.ಶ.೧೯೬೦ರಲ್ಲಿ ಪ್ರಾರಂಭಗೊಂಡು ಹೊರ ಬಂದ ಪತ್ರಿಕೆಗಳು. ಇವುಗಳಲ್ಲಿ ಕೆಲವು, ತಾತ್ಕಾಲಿಕವಾಗಿ ಕೆಲ ಸಮಯ ನಡೆದು ನಿಂತು ಹೋದುವು. ಮಂಡ್ಯ ನಗರದ ಹೆಸರಾಂತ ಪುರೋಹಿತರೂ, ಧಾರ್ಮಿಕ ಪುಸ್ತಕಗಳ ಲೇಖಕರೂ ಆದ ಗೌಡಗೆರೆ ಸೀತಾರಾಮ ಶಾಸ್ತ್ರಿಗಳು ಸ್ವಂತ ಮುದ್ರಣಾಲಯವಿಟ್ಟುಕೊಂಡು ಧಾರ್ಮಿಕ ವಿಚಾರಗಳ ಪ್ರಸಾರಕ್ಕಾಗಿ 'ಜ್ಞಾನ ಸಿಂಧು' ಪತ್ರಿಕೆಯನ್ನು ಹೆಚ್ಚು ಕಾಲ ನಡೆಸುವ ಛಲದಿಂದ, ಪ್ರಜಾವಾಣಿಯ ಮಂಡ್ಯ ವರದಿಗಾರ ಸಿ.ಎಸ್.ಸಾಂಬಶಿವನ್ ಅವರೊಂದಿಗೆ ಶ್ರಮಿಸಿದರಾದರೂ, ಪತ್ರಿಕೆಯನ್ನು ಬಹಳ ಕಾಲ ನಡೆಸಲು ಸಾಧ್ಯವಾಗದೆ ಹೋಯಿತು. ಸಿ.ಎಸ್.ಸಾಂಬಶಿವನ್‌ರವರು ಪತ್ರಕರ್ತರಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಕರ್ನಾಟಕ ಪತ್ರಿಕಾ ಅಕಾಡೆಮಿಯು, ೨೦೦೦ನೇ ಸಾಲಿನ ಪ್ರಶಸ್ತಿ ನೀಡಿದೆ. ಎಂ.ಎಸ್.ಸಿದ್ಧಪ್ಪನವರು, ೧೯೬೪ರಲ್ಲಿ ದಲಿತರಿಗೆ ಸಂಬಂಧಿಸಿದ ವಿಷಯ–ವಿಚಾರಗಳನ್ನು ಪ್ರಕಟಿಸುವ ದೃಷ್ಟಿಯಿಂದ 'ದಲಿತವಾಣಿ' ಎಂಬ ವಾರಪತ್ರಿಕೆಯ ಪ್ರಕಟಣೆಯನ್ನು ಪ್ರಾರಂಭಿಸಿ ದಶಕಕ್ಕೂ ಹೆಚ್ಚು ಕಾಲ ನಡೆಸಿದರು. ಅಂಬೇಡ್ಕರರ ವಿಚಾರ ಧಾರೆಗಳನ್ನು ಈ ಪತ್ರಿಕೆಯ ಮೂಲಕ ದಲಿತರಿಗೆ ತಿಳಿಯಪಡಿಸುತ್ತಿದ್ದುದಲ್ಲದೆ, ದಲಿತರ ಮೇಲೆ ಆಗುವ ಅನ್ಯಾಯಗಳನ್ನು ಖಂಡಿಸಿ, ಅವರಿಗೆ ಧೈರ್ಯ–ಸ್ಥೈರ್ಯಗಳನ್ನು ತುಂಬಿ ಕೊಡುವ ಪತ್ರಿಕೆ ಇದಾಗಿತ್ತು. ಇವರು 'ದಲಿತ ವಾಣಿ' ಯನ್ನು ಕೆಲಕಾಲ ದಿನಪತ್ರಿಕೆಯಾಗಿ ಪರಿವರ್ತಿಸಿ ನಡೆಸಿದರು. ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಇದಕ್ಕಾಗಿ ಮುದ್ರಾಣಾಲಯ ಆರಂಭಿಸಿದರು. ಆನಂತರದ ಕೆಲವು ತಿಂಗಳಲ್ಲಿ ಹಣದ ಮುಗ್ಗಟ್ಟಿನಿಂದಾಗಿ ಈ ಪತ್ರಿಕೆ ನಿಂತು ಹೋಯಿತು. ಶ್ರೀ ಆದಿಚುಂಚನಗಿರಿ ಮಠದಿಂದ 'ಆದಿಚುಂಚನಗಿರಿ' ಎಂಬ ಮಾಸಿಕವು ಹೊ.ಶ್ರೀನಿವಾಸಯ್ಯನವರ ಸಂಪಾದಕತ್ವದಲ್ಲಿ ೧೯೬೪ರಲ್ಲಿ ಆರಂಭಗೊಂಡು ರಾಜ್ಯದಾದ್ಯಂತ ಜನಪ್ರಿಯವಾಗಿದೆ. ಇದರ ಯಶಸ್ಸಿಗೆ ನಂತರದಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಎಚ್. ಕೆ. ಸಿದ್ಧಗಂಗಯ್ಯನವರು ಶ್ರಮಿಸಿದ್ದಾರೆ. ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳು, ಶ್ರೀ ಆದಿಚುಂಚನಗಿರಿ ಮಠದ ವಿಷಯಗಳು, ಕಾರ್ಯಕ್ರಮಗಳು ಈ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತವೆ.

ಅರಣ್ಯ ಸಂರಕ್ಷಣೆ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ದುಡಿಯುತ್ತಿದ್ದ ಆರ್.ಎಲ್.ವಾಸುದೇವರಾವ್‌ರವರು ಕಾಳಜಿಯೊಂದಿಗೆ ೧೯೬೫ ರಿಂದ ಹೊರ ತರತೊಡಗಿದ ಪತ್ರಿಕೆ 'ವಾಯ್ಸ್ ಆಫ್ ಮೈನಾರಿಟೀಸ್'ಗೆ ಕನ್ನಡದಲ್ಲಿ 'ವನಸುಮ' ಎಂದೂ ಹೆಸರಿಡಲಾಗಿದೆ. 'ವಾಯ್ಸ್ ಆಫ್ ಮೈನಾರಿಟೀಸ್' ಎಂಬ ಹೆಸರಿದ್ದರೂ ವನ್ಯ ಸಂಪತ್ತಿಗೆ ಸಂಬಂಧಿಸಿದ ಸುದ್ದಿಗಳೂ ಮಾತ್ರವೇ ಇದರಲ್ಲಿ ಪ್ರಕಟಗೊಳ್ಳುತ್ತಿದ್ದು. 'ಅರಣ್ಯಗಳ ಏಳಿಗೆಗಾಗಿ ಮೀಸಲಾದ ಅಧಿಕ ಪ್ರಸಾರವುಳ್ಳ ರಾಜ್ಯದ ಏಕೈಕ ಪತ್ರಿಕೆ' ಎಂಬ ಧ್ಯೇಯ ವಾಕ್ಯ ಈ ಪತ್ರಿಕೆಯು ಮ್ಯಾಸ್ಟ್‌ಹೆಡ್‌ನಲ್ಲಿದ್ದು ಆರ್.ಎಲ್.ವಾಸುದೇವರಾವ್‌ರವರೆಗೆ ಅರಣ್ಯದ ಬೆಳವಣಿಗೆಯ ಜೊತೆಗೆ ಅಲ್ಪಸಂಖ್ಯಾತರ ಅಭಿವೃದ್ಧಿಯ ಬಗ್ಗೆಯೂ ಆಸಕ್ತಿ ಇದ್ದುದರಿಂದ ಅಲ್ಪ ಸಂಖ್ಯಾತರ ಪ್ರತಿನಿಧಿಯಾಗಿ ಜಿಲ್ಲಾ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

ಬೆಂಗಳೂರಿನಿಂದ ಮಂಡ್ಯಕ್ಕೆ ಬಂದು ನೆಲೆಸಿದ ಕೆ.ಗುಂಡಣ್ಣನವರ ಸಂಪಾದಕತ್ವದಲ್ಲಿ 'ಪೌರವಾಣಿ' ವಾರಪತ್ರಿಕೆ ೧೯೬೬ ರಿಂದ ಆರಂಭಗೊಂಡಿತು. ಪತ್ರಿಕೋದ್ಯಮದಲ್ಲಿ ನುರಿತಿದ್ದ ಗುಂಡಣ್ಣರವರು ರಾಜಕೀಯ ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆ ನೀಡಿ ಪತ್ರಿಕೆಯನ್ನು ಜನಪ್ರಿಯಗೊಳಿಸಿದ್ದರು. ೧೯೭೬ರ ತುರ್ತು ಪರಿಸ್ಥಿತಿ ಸಮಯದಲ್ಲಿ, ಸುದ್ದಿಯನ್ನು ಸೆನ್ಸಾರ್ ಮಾಡಿಸದೆ ಪ್ರಕಟಿಸಿದರೆಂಬ ಕಾರಣಕ್ಕೆ ಗುಂಡಣ್ಣನವರು ೧೮ ದಿನಗಳ ಕಾಲ ಜೈಲಿನಲ್ಲಿದ್ದರು. ಗುಂಡಣ್ಣನವರ ಮರಣಾನಂತರ, ಅವರ ಅಳಿಯ ಎಂ.ಆರ್.ಪ್ರಸನ್ನಕುಮಾರ್, ಸಂಪಾದಕರಾಗಿ ಪತ್ರಿಕೆಯನ್ನು ಮುನ್ನಡೆಸುತ್ತಿದ್ದಾರೆ.

ಈಗ ಇದು ದಿನಪತ್ರಿಕೆಯಾಗಿದೆ. ಕೆ.ಗುಂಡಣ್ಣನವರು ಜನಪ್ರಿಯ ನಾಟಕಕಾರರೂ ಆಗಿದ್ದರು. 'ಪೌರವಾಣಿ ಪತ್ರಿಕೆ'ಯು ರಜತ ಮಹೋತ್ಸವವನ್ನು ಆಚರಿಸಿ ಮುಂದುವರಿಯುತ್ತಿದೆ.

ಡಿ.ಮಂಚಯ್ಯನವರು 'ಹರಿಜನ ಬಂಧು' ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಜನರಲ್ಲಿ ಕಾನೂನು ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ, ಎಡ ಪಂಥೀಯ ಧೋರಣೆಯ ಬಾಲಸುಂದರಂ ಎಂಬುವವರು, 'ಜೈ ಭೀಮ್ಸ್' ಎಂಬ ವಾರಪತ್ರಿಕೆಯನ್ನು ೧೯೬೯ರಲ್ಲಿ ಪ್ರಾರಂಭಿಸಿ ಕೆಲಕಾಲ ನಡೆಸಿ ನಿಲ್ಲಿಸಿದರು.

'ಚಿಗುರೆಲೆ' ಎಂಬ ಮಾಸಪತ್ರಿಕೆ ೧೯೬೯ರಲ್ಲಿ ಪಂಡಿತ ಮಲ್ಲಪ್ಪನವರಿಂದ ಆರಂಭಗೊಂಡಿತು. ೧/೮ ಕ್ರಾನ್ ಅಳತೆಯ, ೮೦ ರಿಂದ ೧೨೦ ಪುಟಗಳ ಈ ಪತ್ರಿಕೆಯಲ್ಲಿ, ಕಥೆ, ಕವನ, ವೈಚಾರಿಕ ಲೇಖನ ಮತ್ತು ಧಾರಾವಾಹಿಗಳನ್ನು ಪ್ರಕಟಿಸಲಾಗುತ್ತಿತ್ತು. ಇದರ ೧೫ ಸಂಚಿಕೆಗಳು ಹೊರಬಂದ ನಂತರ, ಹಣಕಾಸಿನ ಮುಗ್ಗಟ್ಟು ಹಾಗೂ ಅರ್ಥಪೂರ್ಣ ಲೇಖನಗಳ ಕೊರತೆಯಿಂದಾಗಿ ನಿಂತುಹೋಯಿತು.

ಎಪ್ಪತ್ತರ ದಶಕದಲ್ಲಿ, ಮಂಡ್ಯದ ಪತ್ರಿಕೋದ್ಯಮದಲ್ಲಿ ಇನ್ನಷ್ಟು ಬೆಳವಣಿಗೆ ಕಂಡುಬರುತ್ತದೆ. ೧೯೭೩ರಿಂದ ಹೊರ ಬರತೊಡಗಿದ ರಮೇಶ್ ಹುಲ್ಲುಕೆರೆಯವರ 'ವೀಕ್ಷಕ' ಹಾಗೂ ಕೌಡ್ಲೆ ಚನ್ನಪ್ಪನವರ 'ದೇಶಹಿತ' ಪ್ರಭಾವೀ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿದ ಎರಡು ಪ್ರಮುಖ ಪತ್ರಿಕೆಗಳು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸರ್ಕಾರದ ಸವಾಲುಗಳನ್ನು ಎದುರಿಸಿ ಮುಂದುವರಿದ ಪತ್ರಿಕೆಗಳಿವು. ಆರಂಭದಲ್ಲಿ, ೧೬ ಪುಟಗಳ ವಾರ ಪತ್ರಿಕೆಯಾಗಿ ಓದುಗರ ಕೈಸೇರಿದ 'ವೀಕ್ಷಕ' ೧೯೯೧ರಲ್ಲಿ ದಿನಪತ್ರಿಕೆಯಾಗಿ ಮಾರ್ಪಟ್ಟಿತು. ಓದುಗರ ಅನಿಸಿಕೆಗಳ 'ಅಭಿರುಚಿ' ಓದುಗರ ಪತ್ರಗಳಿಗೆ ಮೀಸಲಾದ 'ಮಾತುಕತೆ', ಕಲಾಕ್ಷೇತ್ರಕ್ಕಾಗಿ ಇದ್ದ 'ಅಭಿನಯ ಜಗತ್ತು', ಮಿನಿಕತೆ ಮತ್ತು 'ಪುಸ್ತಕ ವಿಮರ್ಶೆ' ಎಂಬ ಸ್ಥಿರ ಅಂಕಣಗಳು ಜನಪ್ರಿಯವಾಗಿದ್ದವು. ತೈಲೂರು ವೆಂಕಟಕೃಷ್ಣರವರ 'ಒನ್ ಮಿನಿಟ್ ಪ್ಲೀಸ್', ಸಂಪಾದಕರ 'ಕಚಗುಳಿ' ಮತ್ತು ಬೆಸಗರಹಳ್ಳಿ ರಾಮಣ್ಣನವರ 'ಒರೆಗಲ್ಲು' ಅಂಕಣಗಳು ಜನಪ್ರಿಯವಾಗಿದ್ದವು. ವರುಣ ನಾಲಾ ವಿರೋಧಿ ಚಳವಳಿಗೆ ಈ ಪತ್ರಿಕೆ ಒಂದು ಉತ್ತಮ ವೇದಿಕೆಯಾಗಿ ಕೆಲಸ ಮಾಡಿದೆ. ಹುಲ್ಲುಕೆರೆ ರಮೇಶ್‌ರವರು, ಜಿಲ್ಲಾ ಸಣ್ಣ ಪತ್ರಿಕಾ ಸಂಪಾದಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ದೆಹಲಿಯ ಅಖಿಲ ಭಾರತ ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ಒಕ್ಕೂಟಕ್ಕೆ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷರೂ ಆಗಿದ್ದರು. ಅಧಿಕ ಪ್ರಸಾರವುಳ್ಳ ಈ ಪತ್ರಿಕೆಗೆ ಇತರೇ ಜಿಲ್ಲೆಗಳಲ್ಲೂ ಓದುಗರಿದ್ದಾರೆ. 'ಸತ್ಯ ಹೇಳುವುದು ಬಂಡಾಯವಾದರೆ ನಾನೊಬ್ಬ ಬಂಡಾಯಗಾರ' ಎನ್ನುವುದು ೧೯೭೩ರಿಂದ ಹೊರಬರುತ್ತಿರುವ 'ದೇಶಹಿತ' ಪತ್ರಿಕೆಯ ಧ್ಯೇಯವಾಕ್ಯ. ಜಯಪ್ರಕಾಶ್‌ನಾರಾಯಣ್ ಮತ್ತು ಲೋಹಿಯಾ ವಿಚಾರಗಳು ಮೊದಲಿಗೆ ಇದರಲ್ಲಿ ಪ್ರಕಟಗೊಳ್ಳುತ್ತಿದ್ದವು. ರಾಜಕೀಯದಲ್ಲಿನ ಅನಿಷ್ಟಗಳನ್ನು ತೊಡೆಯುವ ಗುರಿ ಇದ್ದುದರಿಂದ, ಇದರಲ್ಲಿ ರಾಜಕೀಯದ ಆಗುಹೋಗುಗಳಿಗೆ, ಆ ಸಂಬಂಧದ ಲೇಖನಗಳಿಗೆ ಹೆಚ್ಚಿನ ಆದ್ಯತೆಯಿದೆ. ರಾಜಕೀಯದಲ್ಲಿ ಸಕ್ರಿಯವಾಗಿರುವ ಚನ್ನಪ್ಪನವರು ಹಲವಾರು ಸಂಘ-ಸಂಸ್ಥೆಗಳಲ್ಲಿ ತೊಡಗಿಕೊಂಡಿದ್ದು, 'ದೇಶಹಿತ' ಪತ್ರಿಕೆಯನ್ನು ಕೆಲವು ಕಾಲ ದಿನಪತ್ರಿಕೆಯಾಗಿ, ಆ ನಂತರ ವಾರಪತ್ರಿಕೆಯಾಗಿ ನಡೆಸಿದರು. ಮಹಾತ್ಮ ಗಾಂಧೀಜಿಯವರ ಕುರಿತಾದ 'ದೇವ ಮಾನವ' ಎಂಬ ಕೃತಿಯನ್ನೂ ರಚಿಸಿದ್ದಾರೆ. ಜಿಲ್ಲೆಯ ಜನರ ಗಮನ ಸೆಳೆದ ಕೆ.ಲಕ್ಷ್ಮಣರ 'ಪರಿಕಾರ' ಪತ್ರಿಕೆ ೧೯೮೦ರಲ್ಲಿ ಮಂಡ್ಯ ಮತ್ತು ಮೈಸೂರುಗಳಿಂದ ಏಕಕಾಲಕ್ಕೆ ಪ್ರಕಟವಾಗುತ್ತಿತ್ತು. 'ಹೊನ್ನಾರು' ಎಂಬ ಇನ್ನೊಂದು ವಾರಪತ್ರಿಕೆಯನ್ನೂ ೧೯೮೧ರಲ್ಲಿ ಪ್ರಾರಂಭಿಸಿದ ಇವರು ನಂತರ ಅದನ್ನು ತಮ್ಮ ಸಹೋದರರಿಗೆ ವಹಿಸಿಕೊಟ್ಟರು.

ರಂಗಭೂಮಿ, ಕೃಷಿ ವ್ಯವಸಾಯ, ಯುವಜನ ಮತ್ತು ಬಾಲ ವಿಕಾಸ–ಇವುಗಳ ಕಡೆ ಹೆಚ್ಚಿನ ಗಮನ ಹರಿಸಲು ೮೦ರ ದಶಕದಲ್ಲಿ, ಕೆಲವು ಪತ್ರಿಕೆಗಳು ಹೊರ ಬಂದವು. ಹವ್ಯಾಸಿ ನಟ ಮತ್ತು ನಿರ್ದೇಶಕರಾದ ಪಿ.ವಿ.ವೆಂಕಟರಾಮಯ್ಯನವರು ರಂಗಭೂಮಿಯ ವಿಷಯಗಳ ಮೇಲೆ ಬೆಳಕು ಚೆಲ್ಲಲು ೧೯೮೦ರಲ್ಲಿ 'ಪಿ.ವಿ.ಆರ್.ಪತ್ರಿಕೆ' ಎಂಬ ವಾರ ಪತ್ರಿಕೆಯನ್ನೂ; ರೈತರ ಸಮಸ್ಯೆ–ಸಂಕಷ್ಟಗಳ ತಿಳಿಯಪಡಿಸಲು, ಶಿವಳ್ಳಿ ಕೆಂಪೇಗೌಡರು, ೧೯೮೨ರಲ್ಲಿ 'ರೈತ ಜ್ಯೋತಿ' ಮತ್ತು 'ಕೇಳು ಜನಮೇಜಯ' ಎಂಬ ಪತ್ರಿಕೆಗಳನ್ನೂ ಆರಂಭಿಸಿ ಕೆಲಕಾಲ ನಡೆಸಿದರು. ಸಮಾಜ ಸೇವಾಸಕ್ತರಾದ ಶ್ರೀಪಾದುರವರು ೧೯೮೪ರಲ್ಲಿ ಆರಂಭಿಸಿದ 'ಕೊಳಲು' ವಾರ ಪತ್ರಿಕೆಯಲ್ಲಿ ಯುವಜನ ಸಂಘಟನೆ ಮತ್ತು ಬಾಲ ವಿಕಾಸ ಯೋಜನೆಗಳಿಗೆ ಒತ್ತು ನೀಡಲಾಗುತ್ತಿದೆ. 'ಮೂರು ದಿನ ಬಾಳು ಆದರೆ ಹುಲಿಯಂತಿರು' ಎಂಬ ತತ್ವ ಹೊಂದಿದ್ದ, ಜನಮನಗೆದ್ದಿದ್ದ ಎಸ್.ಪುಟ್ಟರಾಮುರವರ 'ದಾರಿದೀಪ' ಮತ್ತು 'ಮಂಡ್ಯ ವಾರ್ತೆಗಳು' ೧೯೮೧ ರಲ್ಲೂ; ಆರ್.ಜೆ.ಪದ್ಮರತ್ನರ 'ಸಂಜೆ ಮಲ್ಲಿಗೆ', ವಾರಪತ್ರಿಕೆ ೧೯೮೨ರಲ್ಲೂ; ಜೆ.ಹೊನ್ನೇಗೌಡರ 'ಪೂರ್ಣಿಮಾ' ವಾರ ಪತ್ರಿಕೆ ೧೯೮೩ರಲ್ಲಿ; ಜವರೇಗೌಡರ 'ಪ್ರಜಾವಾರ್ತೆ' ವಾರಪತ್ರಿಕೆ ೧೯೮೪ರಲ್ಲೂ ಹಾಗೂ ಎನ್.ಜಿ.ಪಟೇಲರ 'ಪಟೇಲ್ ಪತ್ರಿಕೆ' ವಾರಪತ್ರಿಕೆ ೧೯೮೪ರಲ್ಲಿ ಪ್ರಾರಂಭಗೊಂಡವು. ಜನರಿಗಾಗಿ ಹಮ್ಮಿಕೊಂಡಿರುವ ಸರ್ಕಾರದ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಜಿಲ್ಲಾ ಘಟಕದಿಂದ 'ಕರ್ನಾಟಕ ವಾರ್ತೆ' ಎಂಬ ಪಾಕ್ಷಿಕ ಪತ್ರಿಕೆ ೧೯೮೪ರಿಂದ ಹೊರಬರುತ್ತಿದೆ. ಈ ಅವಧಿಯಲ್ಲಿ ಕೆ.ಮಲ್ಲೇಶ್‌ರವರ 'ಮಂಡ್ಯ ವಾಣಿ'; ಕಲಾವಿದ ಸಿದ್ಧರಾಮುರವರ 'ಹಿತೈಷಿ'; ಕೆ.ಮಾಯಗೌಡ ಅವರ 'ನೇಗಿಲ ಯೋಗಿ' ಪತ್ರಿಕೆಗಳು ಕೆಲ ಸಮಯ ನಡೆದವು. ಜೆ.ಬಿ.ಪುಟ್ಟಸ್ವಾಮಯ್ಯನವರ 'ಜೆ.ಬಿ.ಪತ್ರಿಕೆ' ಶ್ರೀರಂಗಪಟ್ಟಣದಿಂದ, ಡಿ.ಆರ್.ನಾರಾಯಣರ 'ನಾಲಾ ಬಯಲು' ಎಂಬ ವಾರ ಪತ್ರಿಕೆಗಳು ೧೯೮೬ರಿಂದ ಪ್ರಕಟಗೊಳ್ಳುತ್ತಿವೆ. ಉದಯವಾಣಿ ಮತ್ತು ಹಿಂದೂ ಪತ್ರಿಕೆಗಳ ವರದಿಗಾರ ಸಿ.ಪಿ.ಮೂರ್ತಿಯವರ 'ಮಂಡ್ಯ ಸುದ್ದಿ', ಎಂ.ಎಸ್.ಪ್ರಸನ್ನರ 'ಮಾನಸ ಕಿರಣ' ವಾರ ಪತ್ರಿಕೆ, ಆರ್.ತಾರಾ ಅವರ 'ಬಯಲು ನಾಡು' ವಾರ ಪತ್ರಿಕೆ, ವಿಶುಕುಮಾರ್‌ರವರ 'ಕನ್ನಂಬಾಡಿ' ವಾರ ಪತ್ರಿಕೆಗಳು ಹೊರಬಂದವು. ಈ ನಾಲ್ಕು ಪತ್ರಿಕೆಗಳ ಪೈಕಿ ಮಂಡ್ಯ ಸುದ್ದಿ ೧೯೮೮ರಲ್ಲೂ, ಉಳಿದವು ೧೯೮೯ರಲ್ಲೂ ಆರಂಭಗೊಂಡವು. ಸ್ವಲ್ಪ ಭಿನ್ನವಾಗಿ ಬೌದ್ಧಿಕ ಬೆಳವಣಿಗೆಯ ವಿಚಾರಗಳಿಂದ ಹೊಸ ಆಯಾಮ ಪಡೆದು ಪ್ರಕಟಗೊಳ್ಳುತ್ತಿದ್ದ, ಎನ್.ವಿಶುಕುಮಾರರ 'ಕನ್ನಂಬಾಡಿ' ಜಿಲ್ಲೆಯ ಲೇಖಕರ ಅಂಕಣಗಳಿಂದ, ತನಿಖಾ ವರದಿಗಳಿಂದ ವಿದ್ಯಾವಂತರ ಗಮನಸೆಳೆದ ದಿನಪತ್ರಿಕೆಯಾಗಿತ್ತು. ಆದರೆ ನಂತರದಲ್ಲಿ ನಿಂತು ಹೋಯಿತು.

ಪತ್ರಿಕೋದ್ಯಮಕ್ಕೆ ಇಳಿದ ಅನೇಕ ಪತ್ರಕರ್ತರು ಹೆಚ್ಚು ಕಾಲ ತಮ್ಮ ಪತ್ರಿಕೆಗಳನ್ನು ನಡೆಸಲಾಗದೇ ನಿಲ್ಲಿಸಿದ ನಿದರ್ಶನಗಳಿದ್ದರೂ ಈ ಕ್ಷೇತ್ರದಲ್ಲಿ ಅತ್ಯಾಸಕ್ತಿ ಹೊಂದಿದವರು, ಆನಂತರವೂ ಈ ಉದ್ಯಮವನ್ನು ಕೈಗೊಂಡಿದ್ದಾರೆ ಎಂಬುದಕ್ಕೆ ೧೯೯೦ರ ನಂತರ ಆರಂಭಗೊಂಡ ಕೆಲವು ಪತ್ರಿಕೆಗಳು ಉದಾಹರಣೆಯಾಗಿ ನಿಲ್ಲುತ್ತವೆ. ಎಂ.ಎಸ್.ಕೆಂಪೇಗೌಡರ 'ಪ್ರಚಲಿತ ವಿದ್ಯಮಾನ' ೧೯೯೩ರಲ್ಲೂ; ಪತ್ರಕರ್ತೆ ಶ್ರೀಮತಿ ರೋಸ್ ಲೀಲಾ ಸತ್ಕುಮಾರರ 'ಜನಜೀವನ', ಕೃಷ್ಣರಾಜಪೇಟೆಯಿಂದ ಗುರುಬಸಯ್ಯನವರು ಪ್ರಕಟಿಸುತ್ತಿರುವ 'ಹೇಮಾವತಿ ಬಯಲು', ಡಿ.ಪಿ.ಸ್ವಾಮಿಯವರ ಸಂಪಾದಕತ್ವದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹೊರಬಂದ 'ತಾಯಿನುಡಿ' (೧೯೯೫) 'ಹಾಯ್ ಬೆಂಗಳೂರು' ವಾರ ಪತ್ರಿಕೆಯಲ್ಲಿ ಅಂಕಣಕಾರರಾಗಿರುವ ಚಂದ್ರಶೇಖರ್ ಆಲೂರರು ಮಿತ್ರರೊಂದಿಗೆ ಆರಂಭಿಸಿದ 'ಈ ವಾರ ಕರ್ನಾಟಕ' (೧೯೯೪), ಮಂಡ್ಯದಿಂದ 'ಲೀಡರ್' ಎಂಬ ಉರ್ದು ಪತ್ರಿಕೆಯನ್ನೂ; 'ಜಾಫರ್' ಎಂಬ ಕನ್ನಡ ಪತ್ರಿಕೆಯನ್ನೂ ನೂರುಲ್ಲಾ ಷರೀಫ್‌ರವರೂ ನಡೆಸುತ್ತಿದ್ದರು. ಈ ಪತ್ರಿಕೆಗಳು ರಾಜಕೀಯ ಸಾಹಿತ್ಯ ಧರ್ಮ ಮುಂತಾದ ಅಂಶಗಳನ್ನು ಒಳಗೊಂಡಿದ್ದು ಕೆಲಕಾಲ ನಡೆದವು. ಕೆ.ಎಸ್.ಚಂದ್ರಶೇಖರಯ್ಯ ಅವರ 'ಗಾನವಾಹಿ' ಡಿ.ನರಸಿಂಹರಾಜು ಅವರ 'ಹಕ್ಕು ರಕ್ಷಕ', ಮದ್ದೂರಿನ ಎಂ.ಸಿ.ಲಿಂಗೇಗೌಡರ 'ತ್ರಿಶೂಲ'; ಉಡುಪಿ ದೇವರಾಜರವರ

'ವೇದೋದ್ಭವ'; ಮಂಡ್ಯದ ಸುಬ್ಬೇಗೌಡರ 'ಥಳಕು', ಬಸರಾಳಿನ ಮಂಗಲದಯ್ಯರವರ 'ಜೀವಜಲ' ಈ ಜಿಲ್ಲೆಯಲ್ಲಿ ಪ್ರಕಟಗೊಂಡು ಆನಂತರ ನಿಂತುಹೋದ ಇತರ ಕೆಲವು ಪತ್ರಿಕೆಗಳಾಗಿವೆ. ದೇವಲಾಪುರದ ಡಿ. ಬಿ. ಮಲ್ಲಿಕಾರ್ಜುನ ಸ್ವಾಮಿ ಅವರು ಮಾರ್ದನಿ, ಅನ್ವೇಷಣೆ, ಬೀದಿ ಇತ್ಯಾದಿ ಪತ್ರಿಕೆಯ ಸಹ ಸಂಪಾದಕ, ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರಲ್ಲದೆ ಸಾಹಿತ್ಯ, ನಾಟಕ ಕ್ಷೇತ್ರಗಳಲ್ಲೂ ಪರಿಶ್ರಮಿಸಿದ್ದಾರೆ.

ಈ ಜಿಲ್ಲೆಯವರಾಗಿ ಪರಸ್ಥಳದಲ್ಲಿ ಇತರ ವೃತ್ತಿಗಳೊಂದಿಗೆ ಪತ್ರಿಕಾವೃತ್ತಿಯಲ್ಲೂ ಸೇವೆ ಸಲ್ಲಿಸಿರುವ ಕೆಲವು ಮಹನೀಯರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಎಚ್.ಎಲ್.ನಾಗೇಗೌಡರು 'ಜಾನಪದ ಪರಿಷತ್ತು' ಮೂಲಕ ಹೊರಬರುತ್ತಿದ್ದ 'ಜಾನಪದ ಜಗತ್ತು' ತ್ರೈಮಾಸಿಕ ಪತ್ರಿಕೆ; ಮೈಸೂರಿನಿಂದ ಜೀ.ಶಂ.ಪರಮಶಿವಯ್ಯನವರ 'ತಾವರೆ' ಮತ್ತು 'ಪ್ರಸಾದ'; ಹ.ಕ.ರಾಜೇಗೌಡರ 'ಜಾನಪದ' ಹಾಗೂ 'ಪರಂಪರೆ'; ನೆಲಮನೆ ಚನ್ನೇಗೌಡರ 'ರೈತ'; ಹಾಸನದಿಂದ ಕೃ.ನಾ.ಮೂರ್ತಿಯವರು ತರುತ್ತಿದ್ದ 'ಜನಮಿತ್ರ' ದಿನಪತ್ರಿಕೆ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಪತ್ರಿಕೆಗಳು. 'ಜನಮಿತ್ರ' ಮಂಡ್ಯದಿಂದಲೂ ಪ್ರಕಟಗೊಳ್ಳುತ್ತಿದೆ. 'ವಾರ್ತಾ ಪತ್ರಿಕೆ' ಹಾಗೂ ಮುದ್ರಣಾಲಯದ ವ್ಯವಸ್ಥಾಪಕರಾಗಿ, 'ಚಿತ್ರಗುಪ್ತ' ಪತ್ರಿಕೆಯ ವ್ಯವಸ್ಥಾಪಕರಾಗಿ 'ಸ್ವತಂತ್ರ' ಮುದ್ರಣಾಲಯದ ಸ್ಥಾಪಕರಾಗಿ ಹಾಸ್ಯಕ್ಕೆ ಮೀಸಲಾದ 'ವಿನೋದ' ಮಾಸ ಪತ್ರಿಕೆಯನ್ನು ೫೦ಕ್ಕೂ ಹೆಚ್ಚು ವರ್ಷಗಳಿಂದ ಬೆಂಗಳೂರಿನಲ್ಲಿ ನಡೆಸುತ್ತ ಬಂದಿರುವ ಜಿ.ನಾರಾಯಣರವರು ಜನಪದ, ಸಾಹಿತ್ಯ, ಪತ್ರಿಕೋದ್ಯಮ, ಇತ್ಯಾದಿ ಕ್ಷೇತ್ರಗಳಲ್ಲೂ ಅನುಪಮ ಸೇವೆ ಸಲ್ಲಿಸಿರುವ ಇವರಿಗೆ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ೧೯೯೨ರಲ್ಲಿ ಪ್ರಶಸ್ತಿ ದೊರೆತಿದೆ. ಇವರು ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲಿ ' ದಿ ಗ್ರಾಜುಯೇಟ್ಸ್ ಅಸೋಸಿಯೇಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ 'ವಿದ್ಯಾದಾಯಿನಿ' ಎಂಬ ಪತ್ರಿಕೆಯನ್ನೂ ಆ ನಂತರ ಸ್ವಂತವಾಗಿ 'ಸುರಭಿ' ಎಂಬ ಪತ್ರಿಕೆಯನ್ನೂ ಹೊರ ತರುತ್ತಿದ್ದ ಎಂ.ಎಲ್.ಶ್ರೀಕಂಠೇಶಗೌಡರು, ಮದ್ದೂರು ತಾಲೂಕಿನ ದೇಶಹಳ್ಳಿಯವರು.

ತಂದೆಯ ಪತ್ರಿಕಾ ವೃತ್ತಿಯನ್ನು ಮುಂದುವರಿಸಿ 'ವಾರ್ತಾ', 'ಬಾಲವಾಣಿ', 'ಕನ್ನಡ ಯುವಜನ', 'ಸುಜನಾ', 'ವಂದೇ ಮಾತರಂ' ಮುಂತಾದ ದೇಶದ ಸುವ್ಯವಸ್ಥೆಗಳ ಕುರಿತಾದ ಪತ್ರಿಕೆಗಳಲ್ಲದೆ ಸಾಹಿತ್ಯಾಸಕ್ತರಿಗಾಗಿ ವಿನೋದಿನಿ, ಕಥಾವಾಣಿ ಹಾಗೂ ವಿನೋದವಾಹಿನಿ ಪತ್ರಿಕೆಗಳನ್ನೂ ನಡೆಸಿ, ಜನರಲ್ಲಿ ದೇಶಭಕ್ತಿ ಮತ್ತು ಸಾಹಿತ್ಯಾಸಕ್ತಿಗಳನ್ನು ತುಂಬುವ ಕೆಲಸ ಮಾಡಿದ 'ವೀರಕೇಸರಿ' ಸೀತಾರಾಮಶಾಸ್ತ್ರಿಯವರ ಮಗ ಮ.ರಾಮಮೂರ್ತಿ ಮೂಲತಃ ಮದ್ದೂರಿನವರು.

ನಾಗಮಂಗಲ ತಾಲೂಕಿನ ಚೌದರಿ ಕೊಪ್ಪಲು ಮೂಲದ ಹೊ.ಶ್ರೀನಿವಾಸಯ್ಯ (ಹೊನ್ನಪ್ಪ)ರವರು, ಸ್ವಾತಂತ್ರ್ಯಪೂರ್ವದಲ್ಲಿ ಅಕ್ಕಪಕ್ಕದ ಹಳ್ಳಿಗಳಿಗೆ ಭೂಗತ ಪತ್ರಿಕೆಗಳನ್ನು ಹಂಚಿ ಸ್ವರಾಜ್ಯ ಚಳವಳಿಯ ಕಿಚ್ಚು ಮೂಡಿಸುವಲ್ಲಿ ಭಾಗವಹಿಸಿದವರು. ೧೯೪೨-೪೩ರ ಚಳವಳಿ ನಂತರ, 'ವಿಶ್ವ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿದ್ದು, ಮಂಡ್ಯಕ್ಕೆ ಬರುವಾಗ ಪ್ರತಿಗಳನ್ನು ಹೊತ್ತು ತಂದು ಮಂಡ್ಯದಲ್ಲಿ ವಿತರಣೆ ಮಾಡುತ್ತಿದ್ದರೆನ್ನಲಾಗಿದೆ. ಬೆಂಗಳೂರಿನಲ್ಲಿ 'ಪ್ರಕೃತಿ ಜೀವನ ಕೇಂದ್ರ' ಎಂಬ ಸಂಸ್ಥೆಯನ್ನು ಸ್ಥಾಪಿಸಿ 'ಪ್ರಕೃತಿ ಜೀವನ' ಎಂಬ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದರು. ಇವರಿಗೆ ಕರ್ನಾಟಕ ಸರ್ಕಾರದಿಂದ 'ಪತಂಜಲೀ' ಪದಕವನ್ನೂ ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರದಾನಿಸಲಾಗಿದೆ. ಹಿಂದೂ ಪತ್ರಿಕೆಯ ಪಿ.ರಾಮಯ್ಯ ಹಾಗೂ ಪ್ರಜಾವಾಣಿಯ ಸಿದ್ಧಲಿಂಗಯ್ಯ ಪತ್ರಕರ್ತರಾಗಿ, ಉತ್ತಮ ಕಾರ್ಯನಿರ್ವಹಣೆಯಿಂದಾಗಿ ಹೆಸರು ಗಳಿಸಿದ್ದಾರೆ. ಉಪ್ಪಿನಕೆರೆ ರಾಮಲಿಂಗಯ್ಯನವರ 'ಆರೋಗ್ಯ ನಿಧಿ' ಮಾಸಿಕ; ಕೆ.ಶಿವಯ್ಯನವರ 'ವಿಪ್ರಮಿತ್ರ', ನೀಲಕಂಠನಹಳ್ಳಿ ತಮ್ಮಣ್ಣಗೌಡರ 'ನವ ನಿರ್ಮಾಣ' ಜನಪ್ರಿಯ ಪತ್ರಿಕೆಗಳಾಗಿದ್ದವು.

ಈ ಜಿಲ್ಲೆಯ ಮೇಲುಕೋಟೆಯವರಾದ ಖಾದ್ರಿ ಶ್ಯಾಮಣ್ಣನವರು ನಾಡಿನ ಪತ್ರಿಕಾರಂಗದ ಹಿರಿಯ ಚೇತನವಾಗಿದ್ದು, ಪ್ರಜಾವಾಣಿ, ಕನ್ನಡಪ್ರಭ ಮುಂತಾದ ಪತ್ರಿಕೆಗಳ ಶ್ರೇಯಸ್ಸಿಗಾಗಿ ದುಡಿದವರು. ಬಹಳ ಕಾಲ 'ಕನ್ನಡಪ್ರಭ' ಪತ್ರಿಕೆಯ ಸಂಪಾದಕರಾಗಿದ್ದವರು. ಕೆ.ಎನ್.ರಾಮಚಂದ್ರ 'ದಿ ಹಿಂದೂ'ನಲ್ಲೂ; ಕೆ.ಟಿ.ಕೃಷ್ಣಸ್ವಾಮಿ ಪಿ.ಟಿ.ಐ.ನಲ್ಲೂ; ಮತ್ತಿಕೆರೆ ಜಯರಾಮು 'ಈ ಸಂಜೆ'ಯಲ್ಲೂ; ಜಯಕುಮಾರ್ 'ಸಂಯುಕ್ತ ಕರ್ನಾಟಕ'ದಲ್ಲೂ ಹಾಗೂ ಬಾಲಕೃಷ್ಣ ಪುತ್ತಿಗೆ 'ಪ್ರಜಾವಾಣಿ'ಯಲ್ಲೂ ಪತ್ರಿಕಾ ಪ್ರತಿನಿಧಿ/ವರದಿಗಾರರಾಗಿ ಕೆಲಸ ನಿರ್ವಹಿಸುತ್ತಾ, ಈ ಜಿಲ್ಲೆಯ ಪತ್ರಿಕೋದ್ಯಮಕ್ಕೆ ಸೇವೆ ಸಲ್ಲಿಸಿದ್ದಾರೆ. ಮೇಲುಕೋಟೆಯ ಖಾದ್ರಿ ಅಚ್ಯುತನ್‌ರವರು ಆಕಾಶವಾಣಿ ಮತ್ತು ದೂರದರ್ಶನಗಳ ವಾರ್ತಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಖಾದ್ರಿ ಶ್ಯಾಮಣ್ಣನವರ ಹೆಸರಿನಲ್ಲಿ, ಅವರ ತಮ್ಮಂದಿರಾದ, ಖಾದ್ರಿ ಅಚ್ಯುತನ್ ಮತ್ತು ನಾರಾಯಣರವರು ಮೇಲುಕೋಟೆಯಲ್ಲಿ ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ. ಪ್ರತೀ ವರ್ಷ ಪತ್ರಿಕಾ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದವರನ್ನು ಗುರುತಿಸಿ ಈ ಪ್ರತಿಷ್ಠಾನದ ಮೂಲಕ ಪ್ರಶಸ್ತಿ ನೀಡಲಾಗುತ್ತಿದೆ. ಗಂಜಾಮಿನ ಜಿ.ವೆಂಕಟಸುಬ್ಬಯ್ಯನವರು, ಬೆಂಗಳೂರು 'ಪತ್ರಿಕಾ ಪದಕೋಶ'ದ ಸಂಪಾದಕರಾಗಿದ್ದು, ಪ್ರಜಾವಾಣಿ ದಿನಪತ್ರಿಕೆಯ 'ಇಗೋ ಕನ್ನಡ' ಎಂಬ ಅಂಕಣವನ್ನು ಹಲವಾರು ವರ್ಷಗಳಿಂದ ಬರೆಯುತ್ತಿದ್ದಾರೆ. ವೆಂಕಟಸುಬ್ಬಯ್ಯನವರಿಗೆ, ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ೨೦೦೦ನೇ ಸಾಲಿನಲ್ಲಿ ವಿಶೇಷ ಪ್ರಶಸ್ತಿ ದೊರೆತಿದೆ. ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ೨೦೦೦ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪಡೆದ ಮಳವಳ್ಳಿಯ ಎಸ್.ಗಣೇಶನ್‌ರವರು ಪ್ರಜಾವಾಣಿಯ ಮುಖ್ಯ ಉಪಸಂಪಾದಕರು.

## ಚಿತ್ರಕಲೆ

ಮಂಡ್ಯ ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ಗುಹಾ ಚಿತ್ರಗಳಾಗಲಿ, ಬಯಲು ಬಂಡೆ ಚಿತ್ರಗಳಾಗಲೀ ಈವರೆಗೆ ಶೋಧಿತವಾಗಿಲ್ಲ. ಪಾಂಡವಪುರ ಬಳಿಯ ಕುಂತಿಬೆಟ್ಟದ ಕಲ್ಲಾಸರೆಯಲ್ಲಿ ಕೆಲವು ಬಣ್ಣದ ಹರಿವಿನ ಗುರುತುಗಳು ಇದೆಯೆಂದು ಹೇಳಿಕೆಗಳಿವೆ. ಆದರೆ ಮೇಲುಕೋಟೆಯ ಬೆಟ್ಟದ ಸರಣಿಯ ಆಚೆ ಬದಿಯಲ್ಲಿ ಹೊಗರಿಗುಡಿಯೆಂದು ಹೇಳಲಾಗುವ ಗುಹಾಂತರ ದೇವಾಲಯದ ಮೇಲುಭಾಗದಲ್ಲಿ ಕಲ್ಲಿನಲ್ಲಿ ಕುಟ್ಟಿ ತೆಗೆದ ಮನುಷ್ಯಾಕೃತಿಯ ಚಿತ್ರವೊಂದು ದೊರೆಯುತ್ತದೆ. ಸುಮಾರು ಐದು ಅಡಿ ಉದ್ದವಿರುವ ಮನುಷ್ಯನೊಬ್ಬ ಕೈ-ಕಾಲು ಚಾಚಿ ಮಲಗಿರುವಂತೆ, ಆತನ ಅಸ್ಥಿಪಂಜರ ಗೋಚರವಾಗುವಂತೆ ರೇಖಾಚಿತ್ರದ ವಿನ್ಯಾಸದಲ್ಲಿ ಬರೆಯಲಾಗಿದೆ. ಈ ಬಗೆಯ ಚಿತ್ರಗಳು ಇತಿಹಾಸ ಆರಂಭದ ಕಾಲದ್ದಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಅಂದರೆ ಇಂದಿಗೆ ೨೫೦೦ ರಿಂದ ೩೦೦೦ ವರ್ಷಗಳ ಹಿಂದಿನದೆಂದು ಊಹಿಸಬಹುದು.

ಜಿಲ್ಲೆಯಲ್ಲಿ ಹಲವಾರು ಕಡೆಗಳಲ್ಲಿ ಉತ್ಖನನಗಳು ನಡೆದಿದ್ದು ಅನೇಕ ಬಗೆಯ ಪುರಾತನ ವಸ್ತುಗಳನ್ನು ಶೋಧಿಸಲಾಗಿದೆ. ಅವುಗಳಲ್ಲಿ ದೊರೆತ ಮಣ್ಣಿನ ಮಡಕೆಯ ಚೂರುಗಳ ಮೇಲೆ ಕೆಲವು ರೇಖೆಗಳಂತಹ ವಿನ್ಯಾಸಗಳನ್ನು ಗುರುತಿಸಲಾಗಿದೆ. ಜಿಲ್ಲೆಯ ದಕ್ಷಿಣ ಭಾಗಕ್ಕೆ ಸಮೀಪದಲ್ಲಿರುವ ತಿರುಮಕೂಡ್ಲು ನರಸೀಪುರದಲ್ಲಿ ಬುದ್ಧಿಪೂರ್ವಕವಾಗಿ ಗೀಚಿದ ಗುರುತುಗಳು ಉಳ್ಳ ಇತಿಹಾಸ ಪೂರ್ವ ಕಾಲದ ಮಡಕೆಯ ಚೂರುಗಳು ದೊರೆತಿದ್ದು, ಈ ಗೀಚುಗಳು ಬ್ರಾಹ್ಮಿಲಿಪಿಯ ಮೂಲ ರೂಪದ್ದಿರಬಹುದೆಂದು ಅ.ಸುಂದರ ಅವರು ಅಭಿಪ್ರಾಯಪಡುತ್ತಾರೆ. ಇತ್ತೀಚೆಗೆ ಮಂಡ್ಯದ, ತೂಬಿನಕೆರೆಯ ಹತ್ತಿರದ ವೇದಿಕ್ ನಗರದ ಬಳಿ ಗುಡ್ಡದಲ್ಲಿ ಬಯಲುಬಂಡೆ ರೇಖಾಚಿತ್ರಗಳನ್ನು ಗುರುತಿಸಲಾಗಿದೆ. ಚಕ್ರವ್ಯೂಹದಂತಹ ಈ ರಚನೆ ಶಿಲಾಯುಗದ ಕಾಲದ್ದೆಂದು ಸಂಶೋಧಕರ ಅಭಿಪ್ರಾಯ.

ಇತಿಹಾಸ ಕಾಲದ ಗಂಗ ಹಾಗೂ ಹೊಯ್ಸಳ ಶಿಲ್ಪ, ವಾಸ್ತುಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತದೆಯಾದರೂ ಚಿತ್ರಕಲೆಯ ಕುರುಹುಗಳು ದೊರೆಯುವುದಿಲ್ಲ. ನಾಗಮಂಗಲದ ಕ್ರಿ.ಶ.೭೭೬ರ ಶಾಸನವೊಂದರಲ್ಲಿ ಶಾಸನವನ್ನು ಬರೆದಾತನನ್ನು 'ಸರ್ವ ಕಲಾಧಾರಭೂತ ಚಿತ್ರ ಕಲಾಭಿಜ್ಞಾನ ವಿಶ್ವ ಕರ್ಮಾಚರ್ಯೇಣೇದಂ ಶಾಸನಂ ಲಿಖಿತಂ' ಎಂದು ಕರೆದಿದ್ದು, ಆತನಿಗೆ ಚಿತ್ರಕಲೆಯ ಬಗ್ಗೆಯೂ ಇದ್ದ ಪರಿಣತಿಯನ್ನು ಸೂಚಿಸುತ್ತದೆ. (ಇ.ಸಿ.–೭. ನಾಗಮಂಗಲ ೧೪೯, ಪು ೧೪೭ ಹೊಸ ಆವೃತ್ತಿ) ಈತನದೇ ಹೆಸರನ್ನು (ಬಿರುದನ್ನು) ಕ್ರಿ.ಶ.೭೯೯ರ ಮೂಡಿಗೆರೆ ಶಾಸನದಲ್ಲೂ; ಕ್ರಿ.ಶ.೭೯೭ರ ನೆಲಮಂಗಲ ಶಾಸನಗಳಲ್ಲೂ ಉಲ್ಲೇಖಿಸಲಾಗಿದೆ. (ಇ.ಸಿ.೬, ಮೂಡಿಗೆರೆ ೩೬; ಇ.ಸಿ.೯, ನೆಲಮಂಗಲ ೬೦ ಹಳೇ ಆವೃತ್ತಿ), ಅಂತೆಯೆ ಕೃಷ್ಣರಾಜಪೇಟೆಯ ಸಂತೆಬಾಚಹಳ್ಳಿ ಹೋಬಳಿಯ ಮಾಳಗುಂದ ಗ್ರಾಮದ ಕ್ರಿ.ಶ. ೧೧೧೬ರ ಶಾಸನವು 'ಹೇಮಕರ್ಮ', ಲೋಹಕರ್ಮ, ಶಿಲಾಕರ್ಮ, ರತ್ನಕರ್ಮ, ಕಾಷ್ಟಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾಲಕ್ಷಣ, ಸಮಸ್ತ ಹಸ್ತ ಕುಶಲತೆಯುಳ್ಳ, ವಿಶ್ವಕರ್ಮಾಚಾರ್ಯನಂತಿದ್ದ ಗವರಾಚಾರ್ಯ ಎಂಬಾತನನ್ನು ಹೆಸರಿಸುತ್ತದೆ. ಈತನಿಗೆ ತಕ್ಕ ಮಗನಾಗಿದ್ದ ಹೊಯ್ಸಳಾಚಾರಿ ಎಂಬಾತ ಆ ಗ್ರಾಮದಲ್ಲಿ ಕರ್ಮಟೇಶ್ವರ ದೇವಾಲಯವನ್ನು ನಿರ್ಮಿಸಿದ. (ಇ.ಸಿ.೬,ಕೃ.ಪೇಟೆ,೬೮) ಹೊಯ್ಸಳಾಚಾರಿಯ ತಂದೆಯಲ್ಲದೆ ಮಗ, ಅಣ್ಣ–ತಮ್ಮಂದಿರೂ ಕುಶಲಕಲಾವಿದರಾಗಿದ್ದು ಈ ವಂಶವೇ 'ಕುಲಾನ್ವಯ ಕೊತ್ತಳಿ' (ಇವರ ವಂಶವೇ ಒಂದು ಶ್ರೇಣಿ ಅಥವಾ ಸಂಘ) ಎಂಬಂತೆ ಇತ್ತು ಎಂದು ತಿಳಿದುಬರುತ್ತದೆ. ಇಂತಹ ಕೆಲವು ಉದಾಹರಣೆಗಳಿಂದಾಗಿ ಜಿಲ್ಲೆಯಲ್ಲಿ ಚಿತ್ರಕಲಾವಿದರು ಇದ್ದ ಬಗ್ಗೆ ತಿಳಿದುಬರುತ್ತದೆ. ಮುಂದೆ ಗಂಗ, ಹೊಯ್ಸಳರ ಅನೇಕ ದೇವಾಲಯಗಳು ಜಿಲ್ಲೆಯಲ್ಲಿ ಕಂಡುಬಂದರೂ ಆ ಕಾಲದ ಚಿತ್ರಕಲೆ ಉಳಿದು ಬಂದಿಲ್ಲ. ತೊಣ್ಣೂರಿನ ನರಸಿಂಹ ದೇವಾಲಯದಲ್ಲಿ ರಾಮನುಜಾಚಾರ್ಯರ ನೆನಪಿಗಾಗಿ ನಿರ್ಮಿಸಿದ ಗಾರೆಯ ಉಬ್ಬು ಶಿಲ್ಪವೊಂದಿದ್ದು ಅದನ್ನು ಬಣ್ಣದಿಂದ ಅಲಂಕೃತಗೊಳಿಸಿದೆ. ಇದು ಸಮಕಾಲೀನ ಕೃತಿಯೆಂದು ನಂಬಲಾಗಿದೆಯಲ್ಲದೆ ದೇವಾಲಯದಲ್ಲಿ ಇನ್ನಿತರ ಭಾಗಗಳಲ್ಲೂ ಚಿತ್ರಕಲೆ ಇದ್ದ ಕುರುಹುಗಳಿವೆ. ಸಿ.ಎ.ಪಾರ್ಸನ್ ಅವರು ಜೈನ–ಶ್ರೀವೈಷ್ಣವ ವೈಷಮ್ಯ ಕುರಿತ ಚಿತ್ರಗಳು ಈ ದೇವಾಲಯದಲ್ಲಿ ಸುಸ್ಥಿತಿಯಲ್ಲಿ ಇವೆಯೆಂದು ೧೯೩೦ರ ವೇಳೆಯಲ್ಲಿ ಹೇಳುತ್ತಾರಾದರೂ ಇಂದು ಇಲ್ಲಿ ಯಾವುದೇ ಚಿತ್ರಕಲೆ ಕಂಡುಬರುವುದಿಲ್ಲ.

ಮುಂದೆ ಚಿತ್ರಕಲೆಯ ಕುರುಹು ದೊರೆಯುವುದೆಂದರೆ ಶ್ರೀರಂಗಪಟ್ಟಣದಲ್ಲಿ ೧೭೮೪ರಲ್ಲಿ ಟಿಪ್ಪು ನಿರ್ಮಿಸಿದ ದರಿಯಾದೌಲತಾಬಾಗ್‌ನ ಅರಮನೆಯಲ್ಲಿ. ಇದರಲ್ಲಿ ಹೈದರ್ ಮತ್ತು ಟಿಪ್ಪು ಅವರುಗಳು ೧೭೮೦ರಲ್ಲಿ ಬ್ರಿಟಿಷರೊಂದಿಗೆ ಕಾದಾಡಿದ ಎರಡನೇ ಮೈಸೂರು ಯುದ್ಧದ ದೃಶ್ಯಗಳನ್ನು ನಾಲ್ಕು ಅಂಕಣಗಳಲ್ಲಿ ವಿಸ್ತಾರವಾಗಿ ಭಿತ್ತಿಯಲ್ಲಿ ರಚನೆ ಮಾಡಲಾಗಿದೆ. ಈ ಚಿತ್ರಗಳನ್ನು ರಚಿಸಿದ ಕಾಲದಿಂದ ಹಲವಾರು ಗಣ್ಯರು ಇವುಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಲಾರ್ಡ್‌ಕಾರನ್‌ವಾಲೀಸ್ ೧೭೯೧ರಲ್ಲಿ ಶ್ರೀರಂಗಪಟ್ಟಣವನ್ನು ಮುತ್ತಿದಾಗ ನಗರದ ಪ್ರಮುಖ ಬೀದಿಗಳಲ್ಲಿಯ ಮನೆಗಳ ಗೋಡೆಗಳ ಮೇಲೆ ಬ್ರಿಟಿಷರನ್ನು ಹೀಯಾಳಿಸುವಂತೆ ವ್ಯಂಗ್ಯಚಿತ್ರಗಳನ್ನು ನೈಜಪ್ರಮಾಣದಲ್ಲಿ ಟಿಪ್ಪುವು ಬರೆಯಿಸಿದ್ದನೆಂದೂ, ಅವುಗಳಲ್ಲಿ ಹುಲಿಯೊಂದು ಇಂಗ್ಲಿಷ್ ಮನುಷ್ಯನೊಬ್ಬನನ್ನು ಸೀಳಿಹಾಕುತ್ತಿರುವಂತೆ, ಇಬ್ಬರು ಆಂಗ್ಲ ಸೈನಿಕರ ಶಿರಸ್ಸನ್ನು ಕುದುರೆ ಸವಾರನೊಬ್ಬ ಒಂದೇ ಏಟಿಗೆ ಕತ್ತರಿಸುತ್ತಿರುವಂತೆಯೂ ಚಿತ್ರಗಳು ಇದ್ದುವೆಂದೂ, ಬ್ರಿಟಿಷರು ಮುತ್ತಿದಾಗ ಈ ಚಿತ್ರಗಳನ್ನು ಅಳಿಸಿ ಹಾಕಬೇಕೆಂದು ಟಿಪ್ಪುವೇ ಆಜ್ಞೆ ಮಾಡಿದ್ದನೆಂದೂ, ಅದೇ ವೇಳೆಯಲ್ಲಿ ದರಿಯಾದೌಲತ್‌ನ ಚಿತ್ರಗಳನ್ನು ಭಾಗಶಃ ನಾಶಪಡಿಸಲಾಯಿತೆಂದು ಕರ್ನಲ್ ವಿಲ್ಕ್ಸ್ ಹೇಳುವುದಾಗಿ ಪಾರ್ಸನ್ ಅವರು ತಿಳಿಸುತ್ತಾರೆ. ಆದರೆ ಯುದ್ಧಾನಂತರ ಇಲ್ಲೇ ತಂಗಿದ್ದ ಕರ್ನಲ್ ವೆಲ್ಲಸ್ಲಿಯು ದರಿಯಾ ದೌಲತ್ ಚಿತ್ರಗಳನ್ನು ಹಾಳಾಗದಂತೆ ಉಳಿಸಿದ. ಫ್ರಾನ್ಸಿಸ್ ಬುಕನನ್, ಟಿಪ್ಪು ಸತ್ತ ಮರುವರ್ಷ ಎಂದರೆ ೧೮೦೦ರಲ್ಲಿ ಟಿಪ್ಪುವಿನ ರಾಜ್ಯದಲ್ಲಿ ಸಂಚರಿಸಿ, ಇಲ್ಲಿಯ ಜನತೆ, ಸಂಸ್ಕೃತಿ, ಕಸುಬು ಇತ್ಯಾದಿಗಳ ಬಗ್ಗೆ ಅಭ್ಯಸಿಸಿ, ಸಮಗ್ರವಾಗಿ ನೀಡಿದ ವರದಿಯಲ್ಲಿ

ದರಿಯಾದೌಲತ್‌ನ ಚಿತ್ರಗಳ ಬಗ್ಗೆಯೂ ವಿಸ್ತಾರವಾಗಿ ಹೇಳಿದ್ದಾನೆ. ಈ ಅರಮನೆಯಲ್ಲಿ ಟಿಪ್ಪು ವಿಶ್ರಾಂತಿಗಾಗಿ ತಂಗುತ್ತಿದ್ದನೆಂದೂ, ಇಲ್ಲಿಯ ಗೋಡೆಗಳ ಮೇಲೆ ಇಬ್ಬರು ಅರಸರಾದ ಹೈದರ್ ಮತ್ತು ಟಿಪ್ಪು ಅವರು ಸಾರ್ವಜನಿಕವಾಗಿ ಮೆರವಣಿಗೆಯಲ್ಲಿ ಬರುತ್ತಿರುವುದು, ಕರ್ನಲ್ ಬೇಲಿಯ ಸೋಲು ಹಾಗೂ ಮೈಸೂರು ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ವಿವಿಧ ಜಾತಿಯ ಜನರು ಅಥವಾ ಕಸುಬುಗಾರಿಕೆಯಲ್ಲಿ ನಿರತರಾದವರ ಉಡುಗೆ–ತೊಡುಗೆಗಳ ಚಿತ್ರಗಳನ್ನು ರಚಿಸಿರುವುದಾಗಿಯೂ ತಿಳಿಸುತ್ತಾನೆ. ಈ ಚಿತ್ರಗಳಲ್ಲಿಯ ಆಕೃತಿಗಳು ವ್ಯಂಗ್ಯ ಚಿತ್ರಗಳನ್ನು (ಕ್ಯಾರಿಕೇಚರ್ಸ್) ಹೋಲುವಂತೆ ಕಂಡುಬರುತ್ತದೆಯಾದರೂ ಇವುಗಳಲ್ಲಿಯ ವೈಲಕ್ಷಣ (ಮ್ಯಾನರ್) ಹಾಗೂ ಮುಖಭಾವಗಳು ದೇಶೀಯತೆಯಲ್ಲಿ ನೈಜತೆ ತರುವಂತೆ ಇದೆಯೆಂದೂ ಬುಕನನ್ ಹೇಳುತ್ತಾನೆ. ಅಲ್ಲದೆ ಸ್ಥಳೀಯ ಕಲಾವಿದನೊಬ್ಬನಿಂದ ಒಬ್ಬ ಪುರುಷ, ಮಹಿಳೆ ಹಾಗೂ ಬಾಲಕನೊಬ್ಬನ ರೇಖಾ ಚಿತ್ರಗಳನ್ನು ರಚಿಸಿ ತನ್ನ ಪುಸ್ತಕದಲ್ಲಿ ಅಳವಡಿಸಿದ್ದು 'ಇಲ್ಲಿಯ ಚಿತ್ರಗಳ ಬಗ್ಗೆ ಎಷ್ಟೇ ಹೇಳಿದರೂ ಅದು ಕಣ್ಣಿಗೆ ಕಟ್ಟುವುದಿಲ್ಲವಾದ್ದರಿಂದ ಸ್ಥಳೀಯ ಕಲಾವಿದನೊಬ್ಬನಿಂದ (ಭಿತ್ತಿಚಿತ್ರಗಳನ್ನು ಹೋಲುವಂತಹ) ಚಿತ್ರವೊಂದನ್ನು ಬರೆಯಿಸಿ ಪುಸ್ತಕದಲ್ಲಿ ನೀಡಿದ್ದೇನೆ' ಎಂದು ತಿಳಿಸುತ್ತಾನೆ. ಇದರೊಂದಿಗೆ ಬ್ರಿಟಿಷ್ ಕಲಾವಿದ ಸಿ.ಪಿಕಾರ್ಟ್ ಕಲಾವಿದ ರಚಿಸಿದ ಮಗುವಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ (ಅಧಿಕಾರ ಸ್ವೀಕರಿಸಿದಾಗ), ನಂದಿರಾಜ, ಟಿಪ್ಪುವಿನ ಮಕ್ಕಳ ರೇಖಾಚಿತ್ರಗಳನ್ನು ಪುಸ್ತಕದಲ್ಲಿ ನೀಡಿದ್ದಾನೆ. (ಇವುಗಳು ಮರದ ಪಡಿಯಚ್ಚಿನಂತೆ ತೋರುತ್ತವೆ) ಇವಲ್ಲದೆ ದರಿಯಾದೌಲತ್ ಅರಮನೆಯನ್ನು ಕರ್ನಲ್ ಕ್ಲೋಸ್‌ನ ಆಜ್ಞೆಯಂತೆ ದುರಸ್ತಿ ಮಾಡುತ್ತಿದ್ದಾಗ ಮುಖ್ಯ ಕೆಲಸಗಾರನು ಭಿತ್ತಿಚಿತ್ರಗಳಲ್ಲಿ ಚಿನ್ನದ ಲೇಪನವನ್ನು ಮಾಡಿರುವ ಬಗೆಯನ್ನು ಕುರಿತು (ಫಾಲ್ಸ್ ಗಿಲ್ಡಿಂಗ್) ಬುಕನನ್‌ಗೆ ಹೇಳಿದ್ದು, ಚಿನ್ನದ ಲೇಪವನ್ನು ಹೇಗೆ ಮಾಡಿಕೊಳ್ಳುತ್ತಿದ್ದರೆಂಬ ಬಗ್ಗೆ ವಿವರವಾಗಿ ವರದಿ ಮಾಡಿದ್ದಾನೆ. ಕರ್ನಲ್ ವೆಲ್ಲೆಸ್ಲಿ ೩೦–೧೨–೧೮೦೦ ರಂದು ಕರ್ನಲ್‌ರೋಸ್‌ಗೆ ಬರೆದ ಕಾಗದದಲ್ಲಿ ಲಾರ್ಡ್ ವೆಲ್ಲೆಸ್ಲಿ ಮೈಸೂರು ಸೀಮೆಯಲ್ಲಿ ಸಂಚರಿಸಲಿದ್ದಾನೆಂದೂ ಆಗ ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಯಲ್ಲಿ ತಂಗಲಿದ್ದಾನೆಂದೂ, ಆ ಕಾರಣ ಆಗಾಗ್ಗೆ ಅಲ್ಲಿ ಹೋಗಿ ನೋಡಿ ಬರುವುದಲ್ಲದೆ ಚಿತ್ರಗಳ ಬಗ್ಗೆಯೂ ಗಮನಹರಿಸಬೇಕೆಂದು ತಿಳಿಸುತ್ತಾನೆ. ಕರ್ನಲ್‌ವೆಲ್ಲಸ್ಲಿ ಯುದ್ಧಾನಂತರ ದರಿಯಾದೌಲತ್ ಅರಮನೆಯನ್ನು ಕೆಲಕಾಲ ತನ್ನ ವಾಸದ ಮನೆಯನ್ನಾಗಿ ಮಾಡಿಕೊಂಡಿದ್ದ. ಇದೇ ವೇಳೆಯಲ್ಲಿ ಭಾರತದಲ್ಲಿ ಪ್ರವಾಸ ಮಾಡಿ (೧೮೦೩ರಲ್ಲಿ) ಪುಸ್ತಕ ರಚಿಸಿದ ಲಾರ್ಡ್ ವ್ಯಾಲೆಂಟಿಯಾ ಇಲ್ಲಿಯ ಚಿತ್ರಗಳ ಬಗ್ಗೆ ಹೇಳುತ್ತಾ 'ಟಿಪ್ಪುವಿನಿಂದ ದ್ವೇಷಿಸಲ್ಪಟ್ಟ ಬ್ರಿಟಿಷ ಸೈನ್ಯಾಧಿಕಾರಿಯೊಬ್ಬ ನೃತ್ಯಗಾರ್ತಿಯೊಂದಿಗೆ ಕುಣಿಯುತ್ತಾ ಮಹಿಳೆಯೊಬ್ಬಳಿಗೆ ಕತ್ತಿಯಿಂದ ತಿವಿಯುತ್ತಿರುವಂತಹ' ಚಿತ್ರವೊಂದನ್ನು ಇಲ್ಲಿ ನೋಡಿರುವುದಾಗಿ ತಿಳಿಸುತ್ತಾನೆ. ಇಲ್ಲಿಯ ಚಿತ್ರಗಳು ಆಗಾಗ್ಗೆ ಬಣ್ಣಗೆಡುತ್ತಿದ್ದು ಮತ್ತೆ ಮತ್ತೆ ತಿದ್ದಿ ಬರೆಯಿಸಿದಾಗ ಹಿಂದಿನ ಹಲವಾರು ವಿವರಗಳು ಬಿಟ್ಟು ಹೋಗಿರುವ ಸಾಧ್ಯತೆಗಳಿವೆ. ಕರ್ನಲ್‌ವಿಲ್ಕ್ಸ್ ೧೮೧೦ರಲ್ಲಿ ರಚಿಸಿದ ತಮ್ಮ 'ಮೈಸೂರಿನ ಇತಿಹಾಸ' ಗ್ರಂಥದಲ್ಲಿ ಪೊಲ್ಲೈಯೂರಿನ ಯುದ್ಧದ ವಿವರಣೆಯ ಸಂದರ್ಭದಲ್ಲಿ ದರಿಯಾದೌಲತ್‌ನ ಚಿತ್ರಗಳ ಬಗ್ಗೆ ಹೇಳುತ್ತಾ ಮದ್ದಿನ ಗಾಡಿಗೆ ಬೆಂಕಿ ಬಿದ್ದು ಉರಿಯುತ್ತಿರುವ ದೃಶ್ಯವನ್ನು ಕರ್ನಲ್‌ಬೇಲಿ ಆಶ್ಚರ್ಯಚಕಿತನಾಗಿ ನೋಡುತ್ತಿರುವಂತೆ ಇರುವ ಭಿತ್ತಿ ಚಿತ್ರದ ಬಗ್ಗೆಯೂ ಗಮನ ಸೆಳೆಯುತ್ತಾನೆ.

ಕರ್ನಲ್ ವಾಲ್ಟೇರ್ ಕ್ಯಾಂಪ್‌ಬಲ್ ೧೮೩೩ರಲ್ಲಿ ಇಲ್ಲಿಗೆ ಬಂದಿದ್ದು ಇಲ್ಲಿಯ ಭಿತ್ತಿ ಚಿತ್ರಗಳು ಟಿಪ್ಪು ಬ್ರಿಟಿಷರೊಂದಿಗೆ ಕಾದಿ ಪಡೆದ ವಿಜಯವೊಂದರ ಚಿತ್ರವೆಂದೂ, ಇಡೀ ದೃಶ್ಯ ವೈಭವದಿಂದ ಇರುವಂತೆ ಕಂಡುಬರುತ್ತದೆಯಾದರೂ ಆಕೃತಿಗಳ ರೇಖಾಚಿತ್ರಗಳು (ಹೊರರೇಖೆಗಳು–ಡ್ರಾಯಿಂಗ್ಸ್) ಉತ್ತಮವಾಗಿಲ್ಲವೆಂದೂ, ಬಣ್ಣಗಾರಿಕೆಯಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದಂತಿದೆಯೆಂದೂ ತಿಳಿಸುತ್ತಾನೆ. ಬೂದುಬಣ್ಣದ ಆನೆಗಳು, ಹಳದಿ ಬಣ್ಣದ ಮನುಷ್ಯರು, ಹಳದಿ ಬಣ್ಣದ ಕಾಲುಗಳುಳ್ಳ ಆಕಾಶ ನೀಲಿಯ ಕುದುರೆಗಳು ಅವುಗಳಿಗೆ ಕಡುಕೆಂಪು

ಬಣ್ಣದ ಬಾಲಗಳು ಇತ್ಯಾದಿಗಳಿಂದ ಆಕೃತಿಗಳು ಒತ್ತರಿಸಿ ತುಂಬಿದಂತಿದ್ದು ಗೊಂದಲಮಯವಾಗಿದೆ ಎಂದು ವಿವರಿಸುವ ಕ್ಯಾಂಪ್‌ಬಲ್ 'ಕುದುರೆಗಳ ಮೇಲೆ, ಬೆನ್ನು ಹತ್ತಿರುವ ಸ್ಥಳೀಯ ಸೈನಿಕರೊಂದಿಗೆ ಬ್ರಿಟಿಷರು ಹೋರಾಡುತ್ತಿದ್ದಾರಲ್ಲದೆ ವಿಜಯೀ ಆನೆಗಳ ಕಾಲ ತುಳಿತಕ್ಕೂ ಒಳಗಾಗಿದ್ದಾರೆ. ಒಟ್ಟು ಚಿತ್ರಬಂಧದಲ್ಲಿ ಸ್ಥಳೀಯ ಜನರನ್ನು (ಸೇವಕರನ್ನು) ಕಲಾವಿದ ರಚಿಸಿದ್ದಾನೆ. ಇವರುಗಳು ಯುದ್ಧದಲ್ಲಿ ಭಾಗಿಗಳಲ್ಲ ಎಂದು ತೋರಿಸಲು ಗುಂಪಿನಿಂದ ಹೊರಗೆ ಒಂದು ಕೈಯಲ್ಲಿ ಟೀ ಪಾನೀಯದ ಪಾತ್ರೆಯನ್ನು ಇನ್ನೊಂದು ಕೈಯಲ್ಲಿ ಮಾದಕ ಪಾನೀಯದ ಬಾಟಲಿಯನ್ನೂ ಹಿಡಿದಿರುವಂತೆ ಚಿತ್ರಿಸಲಾಗಿದೆ' ಎಂದು ಹೇಳುತ್ತಾನೆ. ಈ ಚಿತ್ರಗಳು ಈಗ ಅಲ್ಲಿ ಇಲ್ಲ. ಇಲ್ಲಿಯ ಚಿತ್ರಗಳನ್ನು ಟಿಪ್ಪುವಿನ ಒಡನಾಡಿಯಾಗಿದ್ದ ವೃದ್ಧ ಸೇವಕನೊಬ್ಬ ಸ್ವತ: ವಿವರಿಸಿದನೆಂದೂ, ಚಿತ್ರಣದಲ್ಲಿ ಉಳಿದ ಆಕೃತಿಗಳಿಗಿಂತ ಮೂರು ಪಟ್ಟು ವಿಸ್ತಾರವಾಗಿದ್ದ; ಚಿನ್ನದ ಬಣ್ಣದ ಕಾಲುಗಳು, ಬೆಳ್ಳಿಯ ದಂತಗಳು ಹಾಗೂ ಕೆಂಬಣ್ಣದ ಆನೆಯ ಮೇಲೆ ಹೌಡಾದಲ್ಲಿ ಕುಳಿತಿದ್ದ ಟಿಪ್ಪುವಿನ ನೈಜ ಆಕೃತಿಯ ಬಗ್ಗೆ ಗಮನ ಸೆಳೆದಿದ್ದಲ್ಲದೆ, ಇಡೀ ಯುದ್ಧದ ದೃಶ್ಯವನ್ನು ಉತ್ಸಾಹದಿಂದ ವಿವರಿಸಿದನೆಂದೂ ತಿಳಿಸಿದ್ದಾನೆ.

ಮುಂದೆ ರಾಷ್ಟ್ರಪ್ರಮುಖನಾದ ಡಾಲ್‌ಹೌಸಿ ಶ್ರೀರಂಗಪಟ್ಟಣಕ್ಕೆ ಬಂದು ದರಿಯಾದೌಲತ್ ಅರಮನೆಯಲ್ಲಿ ತಂಗಿದ್ದಾಗ ೨.೧೧.೧೮೫೫ರಲ್ಲಿ ಕೆಲವು ಸೂಚನೆಗಳನ್ನು ಸ್ಥಳೀಯ ಅಧಿಕಾರಿಗಳಿಗೆ ನೀಡುತ್ತಾನೆ. ಹೈದರ್ ಮತ್ತು ಟಿಪ್ಪುಗಳ ಬಗ್ಗೆ ಗೌರವಯುತವಾದ ಮಾತುಗಳನ್ನು ಹೇಳುತ್ತಾ ಕರ್ನಲ್‌ವೆಲ್ಲಸ್ಲಿ ಇಲ್ಲಿ ತಂಗಿದ್ದು, ತನ್ನ ಅಂತ್ಯ ಕಾಲದಲ್ಲಿ ಟಿಪ್ಪು ಇವುಗಳನ್ನು ನಾಶಪಡಿಸಲು ಯತ್ನಿಸಿದ್ದು ನಂತರ ವೆಲ್ಲಸ್ಲಿ ಅವುಗಳ ಸಂರಕ್ಷಣೆ ಮಾಡಿದ ಬಗ್ಗೆ ಹೇಳುತ್ತಾನೆ. ಕರ್ನಲ್‌ಬೇಲಿಯ ನೇತೃತ್ವದಲ್ಲಿ ಬ್ರಿಟಿಷರು ಸೋತ ಸಂದರ್ಭದ ಚಿತ್ರಗಳು ಇಲ್ಲಿದ್ದು, ಅವು ಹಾಳಾಗಿ ಮಸಕಾಗುತ್ತಿದೆಯೆಂದೂ ಆ ಮಹಾಪುರುಷ (ಟಿಪ್ಪು)ನ ನೆನಪಿಗಾಗಿ ಉಳಿದ ಈ ಚಿತ್ರಗಳನ್ನು ಹಾಗೂ ಬ್ರಿಟಿಷರಿಗೆ ಇದರೊಂದಿಗೆ ಇರುವ ಐತಿಹಾಸಿಕ ಸಂಬಂಧವನ್ನು ಹೆಮ್ಮೆಯಿಂದ ಉಳಿಸಿಕೊಳ್ಳಬೇಕೆಂದೂ ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತಾನಲ್ಲದೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗೆ ಖರ್ಚುವೆಚ್ಚಗಳ ಬಗ್ಗೆ ನಿರ್ದೇಶನ ನೀಡುತ್ತಾನೆ.

ತಮ್ಮದೇ ಸೋಲಿನ ಚಿತ್ರ ಇಲ್ಲಿ ಇರುವುದಾದರೂ ಐತಿಹಾಸದ ಮಹತ್ವದಿಂದ ಅಲ್ಲದೆ ತಾವೂ ಅದರಲ್ಲಿ ಭಾಗಿಗಳಾದರಿಂದ ಇಲ್ಲಿಯ ಚಿತ್ರಗಳನ್ನು ಉಳಿಸಲು ಆತ ತೆಗೆದುಕೊಂಡ ನಿರ್ಧಾರ ಅತ್ಯಂತ ಸ್ತುತ್ಯಾರ್ಹವಾದುದು.

ಟಿಪ್ಪುವಿನ ಸಮಕಾಲೀನನಾಗಿದ್ದ ಕಿರ್ಮಾನಿ ಬರೆದ ಟಿಪ್ಪುವಿನ ಇತಿಹಾಸವನ್ನು ೧೮೬೪ರಲ್ಲಿ ಅನುವಾದಿಸಿ ಮುದ್ರಿಸಿದ ಕರ್ನಲ್ ಡಬ್ಲ್ಯು ಮಿಲ್ಸ್ ಅವರು ದರಿಯಾದೌಲತ್ ಒಂದು ಗ್ರಾಮೀಣ ಮನೆಯಂತಿದ್ದು ಟಿಪ್ಪು ಅದನ್ನು ಬಳಸುತ್ತಿದ್ದನಾದರೂ ರಾತ್ರಿ ತಂಗದೆ ಊರೊಳಗಿನ ಕೋಟೆಗೆ ಬರುತ್ತಿದ್ದನೆಂದೂ ತಿಳಿಸುತ್ತಾನಲ್ಲದೆ ಇಲ್ಲಿಯ ಚಿತ್ರಗಳ ಬಗ್ಗೆಯೂ ವಿವರಣೆ ನೀಡುತ್ತಾನೆ. 'ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿ ಉತ್ತಮ ಚಿತ್ರಣಗಳಿದ್ದು ಒಂದು ಬದಿಯಲ್ಲಿ ಹೈದರ್ ಮತ್ತು ಟಿಪ್ಪು ೧೭೮೦ರಲ್ಲಿ ಕರ್ನಲ್ ಬೇಲಿಯನ್ನು ಗೆದ್ದ ಚಿತ್ರಣಗಳಿವೆ, ಇನ್ನೊಂದು ಬದಿಯಲ್ಲಿ ಉನ್ನತ ದರ್ಜೆಯ ಮಹಮದ್ದೀಯ ಗಣ್ಯರ ಭಾವಚಿತ್ರಗಳಿವೆ. ಇಡೀ ಮನೆಯನ್ನು ಕೃತಕ ಚಿನ್ನದ ರೇಕುಗಳಿಂದ ಅಲಂಕರಿಸಲಾಗಿದ್ದು ಆಕರ್ಶಕವಾಗಿವೆ' ಎಂದು ತಿಳಿಸುತ್ತಾನೆ. ಇದೇ ವೇಳೆಯಲ್ಲಿ ಪರ್ಶಿಯಾ ಹಾಗೂ ಭಾರತಗಳಲ್ಲಿ ವ್ಯಾಪಕವಾಗಿ ಸಂಚರಿಸಿದ ರೀಸ್ ಎಂಬಾತ ಇಲ್ಲಿಯ ಚಿತ್ರಕಲೆಯ ಬಗ್ಗೆ ಹೇಳುತ್ತಾ 'ಗೋಡೆಯ ಪ್ರತೀ ಅಂಗುಲದಲ್ಲಿಯೂ ಮೇಲಿನಿಂದ ಕೆಳಗಿನವರೆಗೂ ಮೊದಲಿನಿಂದ ಕೊನೆಯವರೆಗೂ ಅಲಂಕಾರಗಳಿಂದ ತುಂಬಿದ್ದು ಇಸ್ಫಾನನ ಅರಮನೆಯನ್ನು ನೆನಪಿಗೆ ತರುವಂತೆ ಇದೆ' ಎಂದು ಹೇಳುತ್ತಾನೆ. ೧೮೭೨ರಲ್ಲಿ ತನ್ನ ಪೂರ್ವದೇಶಗಳ ಅನುಭವ ಬರೆದ ಎಲ್.ಬಿ.ಬೌರಿಂಗ್ ಸಹ ಬ್ರಿಟಿಷ್ – ಟಿಪ್ಪು ನಡುವಣ ಯುದ್ಧದ ಚಿತ್ರಣಗಳ ಬಗ್ಗೆ ಅವು ಗಿಡಿದು ತುಂಬಿದ ರೀತಿಯ

ಬಗ್ಗೆ (ಗ್ರೊಟೆಸ್ಕ್), ಬೇಲಿಯ ಅಸಹಾಯಕತೆ, ಟಿಪ್ಪು ಹೂವನ್ನು ಆಘ್ರಾಣಿಸುತ್ತಾ, ಸಂತೋಷದಿಂದ ಇರುವ ರೀತಿ, ಸುತ್ತ ಬಂದೂಕಧಾರಿಗಳು ಯುದ್ಧ ನಿರತರಾಗಿರುವುದು, ರುಂಡ, ಕೈಕಾಲುಗಳು ಕತ್ತರಿಸಿ ರಾಶಿಯಾಗಿ ಬಿದ್ದಿರುವುದು ಇತ್ಯಾದಿಗಳನ್ನು ಹೇಳುತ್ತಾ ಟಿಪ್ಪುವಿನ ನೆರವಿಗೆ ಬಂದ ಫ್ರೆಂಚ್ ಸೈನಿಕರಿಗೆ ಮೀಸೆಯನ್ನು ಚಿತ್ರಿಸಿದ್ದರೆ, ಬ್ರಿಟಿಷ್ ಸೈನಿಕರ ಮುಖಗಳನ್ನು ನುಣುಪಾಗಿ ಚಿತ್ರಿಸಿದೆ ಎಂಬ ಸ್ವಾರಸ್ಯಕರ ಸಂಗತಿಯನ್ನು ತಿಳಿಸುತ್ತಾನೆ. ಅಲ್ಲದೆ ರಾಷ್ಟ್ರ ಪ್ರಮುಖರಾದ ವೆಲ್ಲಸ್ಲಿ, ಡಾಲ್ ಹೌಸಿ ಅವರು ಅರಮನೆ ಹಾಗೂ ಚಿತ್ರಗಳನ್ನು ಸಂರಕ್ಷಿಸಲು ನೀಡಿದ ಆದೇಶ, ಆದ ವೆಚ್ಚಗಳನ್ನು ತಿಳಿಸಿ ಇಷ್ಟಾದರೂ ಈ ತೋಟದ ಮನೆಯ ವಾತಾವರಣ ಅನಾರೋಗ್ಯಕರವಾಗಿದೆ ಎಂದು ವಿಷಾದಿಸುತ್ತಾನೆ.

ರಾಜಧಾನಿ ಮೈಸೂರಿಗೆ ವರ್ಗವಾದ ಮೇಲೆ ಒಡೆಯರುಗಳು ಸಹ ದರಿಯಾದೌಲತ್‌ನ ಚಿತ್ರಗಳ ಬಗ್ಗೆ ಆಸ್ಥೆವಹಿಸಿದ್ದರು. ಈಗ ಇಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರದೆಂದು ಹೇಳಲಾಗುವ ಭಾವಚಿತ್ರ ಪ್ರಾಯಶಃ ಅವರ ಕಾಲದಲ್ಲಿ ಜೀರ್ಣೋದ್ಧಾರವಾಗಿರಬಹುದಾದ ಸಂದರ್ಭದಲ್ಲಿ ಸೇರಿಸಿರಬಹುದು, ಇಲ್ಲವೆ ೧೮೮೩ರಲ್ಲಿ ಚಾಮರಾಜ ಒಡೆಯರ್ ಅವರು ಈ ಅರಮನೆಯನ್ನು ಕಾಪಾಡಲು ಆದೇಶಿಸಿದ ಸಂದರ್ಭದಲ್ಲಿ ಚಿತ್ರಗಳ ಮರು ರೇಖಣೆಯಾಗಿದ್ದಿರಬಹುದು.

ಶ್ರೀರಂಗಪಟ್ಟಣದ ಪತನಾನಂತರ ನೂರು ವರ್ಷಗಳಾದ ಮೇಲೆ ಅದೊಂದು ಪ್ರೇಕ್ಷಣೀಯ ಸ್ಥಳವಾಗಿ ರೂಪಗೊಂಡು ವಿದೇಶೀ ಪ್ರವಾಸಿಗರನ್ನು ಆಕರ್ಷಿಸತೊಡಗಿದಾಗ ಇಲ್ಲಿಯ ಪುರಾತನ ಅವಶೇಷಗಳ ಬಗ್ಗೆ ಮಾರ್ಗಸೂಚಿಗಳು ಪ್ರಕಟಗೊಂಡವು. ಈ ಪ್ರದೇಶದಲ್ಲಿ ೧೯೦೭ರಲ್ಲಿ ಸಂಚರಿಸಿ ರೆ.ಇ.ಡಬ್ಲ್ಯು.ಥಾಂಪ್‌ಸನ್ ಅವರು ೧೯೨೩ರಲ್ಲಿ 'ಶ್ರೀರಂಗಪಟ್ಟಣದ ಅಂತಿಮ ಕ್ಷಣಗಳು' ಎಂಬ ಮಾರ್ಗದರ್ಶಿಯನ್ನು ರಚಿಸಿದ್ದು ಅದರಲ್ಲಿ ಅರಮನೆಯ ಭಿತ್ತಿಚಿತ್ರಗಳ ಸಂರಕ್ಷಣೆಯ ಬಗ್ಗೆ ಈ ಹಿಂದೆ ನಡೆದ ವಿಷಯಗಳನ್ನು ಸಂಗ್ರಹಿಸಿ ಹೇಳಿದ್ದಾರೆ. ಆದರೆ ೧೯೩೧ರಲ್ಲಿ ಸಿ.ಇ.ಪಾರ್ಸನ್ ಅವರು ಈ ಪ್ರದೇಶದಲ್ಲಿ ಸಾಕಷ್ಟು ಸಂಚರಿಸಿದ್ದ, ಈ ಬಗ್ಗೆ ಬರೆದಿದ್ದ ಗ್ರಂಥಗಳನ್ನು ಅಭ್ಯಸಿಸಿ 'ಶ್ರೀರಂಗಪಟಮ್' ಎಂಬ ಪುಸ್ತಕ ಬರೆದಿದ್ದು, ಇದೂ ಸಹ ಮಾರ್ಗದರ್ಶಿ ಗ್ರಂಥವಾದರೂ, ಸಹ ಅನೇಕ ಐತಿಹಾಸಿಕ ಮಾಹಿತಿಗಳೊಂದಿಗೆ ವಿವರವಾಗಿ ಪರಿಚಯ ಮಾಡಿಕೊಡಲಾಗಿದೆ. ದರಿಯಾದೌಲತ್‌ನ ಚಿತ್ರಗಳ ಹಿನ್ನೆಲೆಯಲ್ಲಿ ನಡೆದ ಪೊಲ್ಲೈಯೂರು ಯುದ್ಧದ ಐತಿಹಾಸಿಕ ವಿವರಣೆಯನ್ನು ನೀಡಿ ಚಿತ್ರಗಳೊಂದಿಗೆ ಹೋಲಿಕೆ ಮಾಡುತ್ತಾನೆ. ಅಲ್ಲದೆ ಪೂರ್ವದಿಕ್ಕಿನ ಗೋಡೆಯಲ್ಲಿ ಟಿಪ್ಪುವಿನ ಸಮಕಾಲೀನರ ಭಾವಚಿತ್ರಗಳು ಇರುವ ಬಗ್ಗೆ ಹೇಳುತ್ತಾ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರದ ಬಗ್ಗೆಯೂ ಹೇಳುತ್ತಾನೆ. ಮೊದಲಿಗೆ ಈ ಚಿತ್ರ ಇರುವಲ್ಲಿ ದಿವಾನ್ ಪೂರ್ಣಯ್ಯ ಅವರ ಚಿತ್ರ ಇದ್ದಿರಬಹುದೆಂದೂ, ಮುಂದೆ ಅವರ ವಂಶಜನಾದ ಪಿ.ಎನ್.ಕೃಷ್ಣಮೂರ್ತಿ ಅವರು ದಿವಾನರಾದಾಗ, ಅಲ್ಲಿ ಮುಮ್ಮಡಿಯವರ ಚಿತ್ರ ಬರೆಸಿದಾಗಿ ಹೇಳಿಕೆಗಳು ಇರುವುದಾಗಿಯೂ ಪಾರ್ಸನ್ ತಿಳಿಸುತ್ತಾನೆ.

ರಾಜ್ಯ ಪುರಾತತ್ವ ಇಲಾಖೆಯ ವರದಿ (ಎಂ.ಎ.ಆರ್)ಯ ೧೯೩೫ರ ಸಂಪುಟದಲ್ಲಿ ದರಿಯಾದೌಲತ್‌ನಲ್ಲಿ ರಚಿಸಿರುವ ಚಿತ್ರಗಳ ಬಗ್ಗೆ ವಿವರಗಳಿವೆ. ಪಶ್ಚಿಮ ಭಾಗದ ವಿಶಾಲವಾದ ಭಿತ್ತಿಯಲ್ಲಿ ಇರುವ ಬಾಗಿಲ ಅಕ್ಕಪಕ್ಕ ಹಾಗೂ ಮೇಲುಗಡೆ ನಾಲ್ಕು ವಿಶಾಲವಾದ ಅಂಕಣಗಳಲ್ಲಿ ಹೈದರಲಿ–ಟಿಪ್ಪುರವರು ಬ್ರಿಟಿಷರೊಂದಿಗೆ ಹೋರಾಡಿದ ಯುದ್ಧಗಳ ದೃಶ್ಯಗಳಿವೆ. ಮುಖ್ಯವಾಗಿ ಗುರುತಿಸಿರುವುದು ಎರಡನೇ ಮೈಸೂರು ಯುದ್ಧದ ಮೊದಲ ಹಂತದ್ದು (೧೭೮೦–೧೭೮೧) ಹೈದರಲಿ ಅಂಬಾರಿಯಲ್ಲಿ ಕುಳಿತು ಸವಾರಿ ಮಾಡುತ್ತಿದ್ದಾನೆ ಹಿಂದೆ ಆನೆಯ ಮುಂದೆ ಕುದುರೆಯ ಪಡೆಯಿದೆ. ಕುದುರೆ ಸವಾರರು ಶಿರಸ್ತ್ರಾಣ, ಉದ್ದನೆಯ ಕೋಟು, ಷರಾಯಿ ಮತ್ತು ಮೆಟ್ಟುಗಳನ್ನು ಧರಿಸಿದ್ದಾರೆ. ಈ ದೃಶ್ಯದಲ್ಲಿ ಹಿಂದೆ ಕುದುರೆಯ ಮೇಲೆ ಕುಳಿತ ಟಿಪ್ಪು ಹಾಗೂ ಮೀರ್‌ಸಾದಕ್‌ರನ್ನು, ಧ್ವಜ ಹಿಡಿದು ಸೈನ್ಯವನ್ನು

ಮುನ್ನಡೆಸುತ್ತಿರುವ ಫ್ರೆಂಚ್ ಸೈನ್ಯದ ಮುಖಂಡ ಲಾಲಿಯನ್ನು ಚಿತ್ರಿಸಿದೆ. ಪ್ರಾಯಶಃ ಇದು ಯುದ್ಧಕ್ಕೆ ಹೊರಟ ದೃಶ್ಯವಾಗಿರಬಹುದು.

ಮುಂದಿನ ವಿಶಾಲವಾದ ಅಂಕಣದಲ್ಲಿ ೧೭೮೦ರ ಸೆಪ್ಟೆಂಬರ್ ೧೦ರಂದು ನಡೆದ ಪ್ರಖ್ಯಾತ ಪೊಲ್ಲೈಯೂರು ಯುದ್ಧದ ದೃಶ್ಯ ಗಜಾರೋಹಿಗಳಾಗಿ ಹೈದರ್ ಮತ್ತು ಟಿಪ್ಪು ತಮ್ಮ ಪಡೆಗಳನ್ನು ನಿರ್ದೇಶಿಸುತ್ತಿರುವಂತೆಯೂ ಇಡೀ ಮೈಸೂರಿನ ಸೈನ್ಯವನ್ನು ಬ್ರಿಟಿಷರು ಮುತ್ತಿರುವಂತೆಯೂ, ಫ್ರೆಂಚ್ ದಳದವರು ಕೆಂಪು ಟೋಪಿ, ಸಮವಸ್ತ್ರ ಧರಿಸಿರುವಂತೆಯೂ ಬ್ರಿಟಿಷರು ಕಂದು ಕೋಟು ಧರಿಸಿರುವಂತೆಯೂ ಚಿತ್ರಿಸಿದೆ. ಇಬ್ಬರೂ ವಿದೇಶಿಯರಾದರೂ ಅವರ ಉಡುಪಿನ ವಿನ್ಯಾಸಗಳಲ್ಲಿ ಅಂದಿನ ಸಮಕಾಲೀನತೆಯನ್ನು ತಂದು ಪರಸ್ಪರ ಭಿನ್ನರಾಗಿ ರೂಪಿಸಿದೆ. ಚಿತ್ರಬಂಧದ ಮಧ್ಯದಲ್ಲಿ ಸಿಡಿಮದ್ದಿನ ಗಾಡಿಯೊಂದು (ಬ್ರಿಟಿಷರಿಗೆ ಸೇರಿದ) ಬೆಂಕಿ ಬಿದ್ದು ಸ್ಫೋಟಿಸುತ್ತಿದೆ ಬಳಿಯಲ್ಲಿಯೇ ಮೇನೆಯೊಂದರಲ್ಲಿ ಕುಳಿತ ಬ್ರಿಟಿಷ ಸೈನ್ಯಾಧಿಕಾರಿ ಬೇಲಿ ಬಾಯ ಮೇಲೆ ಬೆರಳಿಟ್ಟು ಅಚ್ಚರಿಯಿಂದ ನೋಡುತ್ತಿದ್ದಾನೆ. ಸಮಕಾಲೀನ ಇತಿಹಾಸದಲ್ಲಿ ಈ ಘಟನೆ ದಾಖಲಿಸಿಲ್ಲವಾದರೂ ಈ ಬಗೆಯ ಕಾರಣಗಳಿಂದಾಗಿ ಈ ಯುದ್ಧ ಸಂದರ್ಭದಲ್ಲಿ ಬ್ರಿಟಿಷರಿಗೆ ಸೋಲಾಗಿದ್ದು ಸೆರೆಸಿಕ್ಕ ಬೇಲಿ ಶ್ರೀರಂಗಪಟ್ಟಣದಲ್ಲಿ ಬಂಧಿಯಾಗಿದ್ದಂತೆ ತಿಳಿದುಬರುತ್ತದೆ. ಮೇಲುಭಾಗದ ಇನ್ನೊಂದು ಚಿತ್ರ ಬಂಧದಲ್ಲಿ ಸೈನ್ಯಾಧಿಕಾರಿಯೊಬ್ಬನ ಕೆಳಭಾಗದಲ್ಲಿ ಹಸು ಹಾಗೂ ಹಂದಿಯ ಪುಟ್ಟದಾದ ಚಿತ್ರವನ್ನು ರಚಿಸಿದ್ದು; ಅದು ಹೈದರಾಬಾದಿನ ನಿಜಾಮನಿಗೆ ಸಂಬಂಧಿಸಿದ್ದೆಂದೂ, ಆತ ಬ್ರಿಟಿಷರ ಕಡೆಗೆ ಸೇರಿದ ಕಾರಣ ಈ ರೀತಿ ಅವಹೇಳನಕಾರಿಯಾಗಿ ಚಿತ್ರಿಸಲಾಯಿತೆಂದೂ ಬಹಳಷ್ಟು ಲೇಖಕರು ಅಭಿಪ್ರಾಯಪಡುತ್ತಾರೆ. ಮೈಸೂರು ಯುದ್ಧದ ಆರಂಭದಲ್ಲಿಯೇ ಹೈದರ್, ಮರಾಠ ಹಾಗೂ ನಿಜಾಮರೊಂದಿಗೆ ಸೇರಿ ಒಕ್ಕೂಟವೊಂದನ್ನು ರಚಿಸಿಕೊಂಡಿದ್ದು ಮುಂದೆ ೧೭೮೮ರ ವೇಳೆಯಲ್ಲಿ ನಿಜಾಮ ಬ್ರಿಟಿಷರ ಕಡೆ ಸೇರಿದ್ದರಿಂದ ಈ ಚಿತ್ರ ರಚನೆಗೆ ಕಾರಣವಾಯಿತೆಂದು ಹೇಳಿಕೆಗಳಿವೆ.

ದರಿಯಾದೌಲತ್‌ನ ಪೂರ್ವದಿಕ್ಕಿನ ಭಿತ್ತಿಯಲ್ಲಿ ರಾಜರ, ನವಾಬರ ಹಾಗೂ ಪಾಳೇಗಾರರ ಚಿತ್ರಗಳನ್ನು ಬಿಡಿಸಲಾಗಿದೆ. ಚಿತ್ತೂರಿನ ರಾಣಿ, ಮೊಹಮ್ಮದ್ ಅಲಿ, ಬಾಲಾಜಿ ಮತ್ತು ಅವನ ರಾಣಿ, ತಂಜಾವೂರಿನ ರಾಜ, ಕೊಡಗಿನ ವೀರರಾಜ, ಔದ್ ಮತ್ತು ಸಿಂದ್ ಸಾಮಂತರು, ಚುಡಾಘ್ ಮತ್ತು ಆರ್ಕಾಟ್ ನವಾಬರು, ಕಡಪ ನವಾಬ, ಪೇಶ್ವೆಯ ೨ನೇ ಬಾಲಾಜಿ, ಚಿತ್ರದುರ್ಗದ ಮದಕರಿನಾಯಕ, ಕಿತ್ತೂರಿನ ಚೆನ್ನಮ್ಮ ಇತ್ಯಾದಿಗಳನ್ನು ಗುರುತಿಸಲಾಗಿದೆ. ಹಿಂದೆ ನೋಡಿದಂತೆ ಮುಮ್ಮಡಿಯವರ ಚಿತ್ರವೂ ಇಲ್ಲಿದೆ. ಇದರಿಂದಾಗಿ ಒಟ್ಟು ಎಲ್ಲ ಚಿತ್ರಬಂಧಗಳೂ ಒಂದೇ ಕಾಲದಲ್ಲಿ ರಚಿತವಾದಂತೆ ಕಂಡುಬರುವುದಿಲ್ಲವೆಂದು ಹೇಳಬಹುದು.

ಟಿಪ್ಪು ಹಾಗೂ ನಂತರದ ಡಾಲ್‌ಹೌಸಿಯ ಕಾಲದಿಂದಲೇ ಆಗಾಗ್ಗೆ ದರಿಯಾದೌಲತ್ ಅರಮನೆ ಹಾಗೂ ಚಿತ್ರಗಳ ದುರಸ್ಥಿ ಹಾಗೂ ನವೀಕರಣವಾಗುತ್ತಿದ್ದ ಬಗ್ಗೆ ದಾಖಲೆಗಳಿವೆ. ಮುಂದೆಯೂ ೧೯೫೫ರಿಂದ ೧೯೬೮ರವರೆಗೆ ಕೇಂದ್ರ ಪುರಾತತ್ವ ಇಲಾಖೆಯವರು ಚಿತ್ರ ಹಾಗೂ ಅರಮನೆಯ ದುರಸ್ಥೀಕರಣ ಮಾಡಿದ್ದು ಹಳೆಯ ಪರದೆಗಳನ್ನು ಹೊದಿಸಿದ್ದು, ಚಿತ್ರಗಳನ್ನು ತಿದ್ದಿರುವುದು ಇತ್ಯಾದಿ ಕುರಿತು ವರದಿಗಳಲ್ಲಿ ದಾಖಲಿಸಿದ್ದಾರೆ. ಇಷ್ಟೆಲ್ಲ ತಿದ್ದುಪಾಡುಗಳಿಂದಾಗಿ ಇಡೀ ಚಿತ್ರಬಂಧ ತನ್ನ ಮೂಲಸೆಲೆಯನ್ನು ಕಳೆದುಕೊಂಡಿದ್ದರೆ ಆಶ್ಚರ್ಯವಿಲ್ಲ. ಆದರೆ ಈ ಯಾವುದೇ ಹಿನ್ನೆಲೆಯ ಅರಿವಿಲ್ಲದೆ ಇಂದು ಈ ಚಿತ್ರಗಳನ್ನು ಕಂಡಿದ್ದೇ ಆದರೆ, ಇನ್ನೂರು ವರ್ಷಗಳ ಹಿಂದೆಯೇ ಈ ರೀತಿ ಇತ್ತೆಂಬ ಭಾವನೆ ಬರುವುದು ಸಹಜ.

ಶಿವರಾಮ ಕಾರಂತರು ಈ ಚಿತ್ರಗಳ ಬಗ್ಗೆ ಹೇಳುತ್ತಾ 'ಈ ಚಿತ್ರಗಳನ್ನು ಬರೆಯುವ ಕಾಲಕ್ಕೆ ಹಳೆಯ ಕಾಲದ ಮಣ್ಣಿನ ಪುಡಿಗಳನ್ನು ಬಳಸದೆಯೆ ವಿದೇಶೀಯ ಬಣ್ಣದ ಪುಡಿಗಳನ್ನು ತಮಗೆ ಪರಿಚಿತವಾದ ಫ್ರೆಂಚ್‌ರಿಂದ

ತರಿಸಿಕೊಂಡರೊ ಎಂಬ ಅನುಮಾನ ಬರುತ್ತದೆ. ವರ್ಣಲೇಪನದಲ್ಲಿ ಯೂರೋಪಿನ ಛಾಯಾಕರಣ ಪದ್ಧತಿಯ ಪ್ರಭಾವವೂ ಕಾಣಿಸುತ್ತದೆ. ಅನೇಕ ಬಣ್ಣಗಳು ಹೊರಗಿನಿಂದ ಬಂದವುಗಳಂತೆ ಕಾಣಿಸುತ್ತವೆ. ಬಲು ಎಚ್ಚರಿಕೆಯಿಂದ ಬಳಸಬೇಕಾದ ಮಡಿವಾಳ ನೀಲಿ (ಪರ್ಶಿಯನ್ ಬ್ಲು) ಯಂಥ ಬಣ್ಣವನ್ನು ವಿವೇಚನೆಯಿಲ್ಲದೆ ಇಲ್ಲಿ ಬಳಸಿದ್ದು ಕಂಡುಬರುತ್ತದೆ' ಎಂಬ ಅಭಿಪ್ರಾಯವನ್ನು ತಾಳಿದ್ದರಲ್ಲದೆ ದೃಗ್ದರ್ಶನ (ಪರ್ಸ್‌ಪೆಕ್ಟಿವ್)ದ ಬಗ್ಗೆಯೂ 'ಪರಿದೂರ ತೋರಿಸುವ ಪ್ರಯತ್ನವನ್ನು ಇಲ್ಲಿ ಮಾಡಿಯೇ ಇಲ್ಲ. ಸಮೀಪದ ಮತ್ತು ದೂರದ ಆಕೃತಿಗಳ ಗಾತ್ರದಲ್ಲಿ ವ್ಯತ್ಯಾಸ ಕಾಣಿಸದು. ಅನೇಕ ಕಡೆ ಕುದುರೆ ಮತ್ತು ಸವಾರರೊಳಗಣ, ಆನೆ ಮತ್ತು ಮಾವುತರೊಳಗಣ ಗಾತ್ರ ವ್ಯತ್ಯಾಸವೂ ಉಚಿತವಾಗಿಲ್ಲ' ಎಂದು ಹೇಳುತ್ತಾರೆ.

ಒಟ್ಟಿನಲ್ಲಿ ಇಡೀ ಕರ್ನಾಟಕದಲ್ಲಿ ಒಂದೇ ಎಡೆಯಲ್ಲಿ ಇಷ್ಟು ವಿಸ್ತಾರವಾದ ಪ್ರದೇಶದಲ್ಲಿ (ಪಶ್ಚಿಮದ ಒಂದು ಭಿತ್ತಿಯೇ ಸಾವಿರ ಚದುರಡಿಗಿಂತ ವಿಸ್ತಾರವಾಗಿದೆ) ಚಿತ್ರ ರಚನೆ ಆಗಿರುವುದು ಈ ಅರಮನೆಯಲ್ಲಿಯೇ. ಅದರಲ್ಲಿಯೂ ಯುದ್ಧವೊಂದರ, ಸಮಕಾಲೀನ ಚಿತ್ರಣ ದೊರೆಯುವುದರಿಂದ ದೇಶೀಯ ಕಲೆಯ ಅಧ್ಯಯನದ ದೃಷ್ಟಿಯಿಂದ ಮಹತ್ತರವಾದುದು. ವಿವಿಧ ಅರಸು ಮನೆತನಗಳು, ಸೈನ್ಯದ ವಿವಿಧ ಹುದ್ದೆಗಳು ಅವರ ಸ್ಥಾನಮಾನ, ಉಡುಗೆ, ರಕ್ಷಣಾ ವ್ಯವಸ್ಥೆ; ಕಾದಾಟದಲ್ಲಿಯ ಚಲನಶೀಲತೆ ಇತ್ಯಾದಿ ಚಿತ್ರದಲ್ಲಿ ಅಂತರ್ಗತವಾದ ವಸ್ತುವಿನಿಂದಾಗಿ ಐತಿಹಾಸಿಕ ದಾಖಲೆಯಾಗಿ ಮಹತ್ವದೆನ್ನಿಸಿದೆ. ಕಲೆಯ ದೃಷ್ಟಿಯಿಂದಲೂ ಅರೆ ಸಂಪ್ರದಾಯ, ಅರೆ ಜನಪದ ಎನ್ನಬಹುದಾದ ರಚನೆಯಿದ್ದು ವಿಷಯವೇ ಯುದ್ಧದ್ದಾದ್ದರಿಂದ ಅನಿವಾರ್ಯವಾಗಿ ಆಕಾರಗಳನ್ನು ಗಿಡಿದು ತುಂಬಿದಂತಿವೆ.

ದರಿಯಾದೌಲತ್‌ನ ಭಿತ್ತಿ ಚಿತ್ರಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ವೀಣಾ ಶೇಖರ್ ಅವರು ಇಲ್ಲಿ ಮೊದಲು ಇದ್ದಂತಹ ಎಂದರೆ ಆಂಗ್ಲ ವ್ಯಕ್ತಿಯೊಬ್ಬ ಮಹಿಳೆಯೊಬ್ಬಳ ವಿರುದ್ಧ ಖಡ್ಗ ಹಿರಿಯುವ ದೃಶ್ಯ; ಸ್ಥಳೀಯ ಸೇವಕರು ಒಂದು ಕೈಯಲ್ಲಿ ಚಹಾದಾನಿಯನ್ನು ಇನ್ನೊಂದು ಕೈಯಲ್ಲಿ ಬ್ರ್ಯಾಂಡಿಯ ಸೀಸೆಯನ್ನು ಒಯ್ಯುತ್ತಿದ್ದ ಚಿತ್ರಗಳು ಈಗ ಉಳಿದಿಲ್ಲವೆಂದು ಹೇಳುತ್ತಾ "ಬೇರೆ ಬೇರೆ ಕಲಾವಿದರು ಈ ಚಿತ್ರಗಳ ರಚನೆಗೆ ಕೈಯಾಡಿಸಿದ್ದು, ಮೊದಲು ಟಿಪ್ಪುವಿನ ಆಶ್ರಯದಲ್ಲಿ ಸ್ಥಳೀಯ ಚಿತ್ರಕಾರರು ಇವುಗಳನ್ನು ರೇಖಿಸಿದರು. ಮುಂದೆ ಈತನೇ ಅವುಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಸಿದ. ಆಗ ಅವನಲ್ಲಿ ಇದ್ದ ಫ್ರೆಂಚ್ ಕಲಾವಿದರು ಈ ಕೆಲಸ ಮಾಡಿರಬೇಕು. ಬ್ರಿಟಿಷರು ಶ್ರೀರಂಗಪಟ್ಟಣವನ್ನು ಗೆದ್ದಾಗ ಅವರು ಅವುಗಳಲ್ಲಿ ಹಲವು ಅಂಶಗಳನ್ನು ಮಾರ್ಜಿಸಿದಂತಿದ್ದು ಅದನ್ನು ಆಂಗ್ಲ ಕಲಾವಿದರೇ ಮಾಡಿರಬಹುದು. ಅವುಗಳಲ್ಲಿಯ ಕೆಲವು ಚಿತ್ರಗಳು ಬಣ್ಣಗೆಡುತ್ತ ಸಾಗಲು ಅವುಗಳ ರಕ್ಷಣಾರ್ಥವಾಗಿ ಕೇಂದ್ರ ಪುರಾತತ್ವ ಇಲಾಖೆ ಅವುಗಳನ್ನು ಮತ್ತೆ ತಿದ್ದಿಸಿವೆ. ಇದರಿಂದಾಗಿ ಈ ವರ್ಣಚಿತ್ರಗಳು ಶ್ರೀರಂಗಪಟ್ಟಣ ಕಲಾವಿದರ ಕೌಶಲ್ಯದ ಮೂಲ ಮೌಲ್ಯಕ್ಕೆ ಎರವಾಗಿ ಪುರಾತನತೆಯ ಮೌಲ್ಯಗಳನ್ನು ಕಳಕೊಂಡವು. ಇದರಿಂದಾಗಿ ಅವುಗಳಲ್ಲಿ ಸೂಕ್ತ ಪ್ರಮಾಣ ಬದ್ಧತೆ ಮತ್ತು ಸಮ್ಯಕ್ ದರ್ಶನ ದೊರೆಯದಂತೆ ಆಯಿತು" ಎಂದು ಅಭಿಪ್ರಾಯಪಡುತ್ತಾರೆ.

ಉಳಿದಂತೆ ಜಿಲ್ಲೆಯ ಚಿತ್ರಕಲೆಯ ಬಗ್ಗೆ ಶ್ರೀರಂಗಪಟ್ಟಣದಲ್ಲಿದ್ದ ಪಾದ್ರಿ ಅಬೆ ದುಬಾಯಿ ಹಲವಾರು ಕಲೆ–ಕಲಾವಿದರ ಬಗ್ಗೆ ತಿಳಿಸುತ್ತಾ ಅವು ನಿಮ್ನ ವರ್ಗದವರ ವೃತ್ತಿಯಾಗಿದೆ ಎಂದು ಹೇಳುತ್ತಾ ಚಿತ್ರಕಲೆಯು ಮೋಚಿ ಜನಾಂಗದವರ ಕಸುಬಾಗಿದೆಯೆಂದು ಹೇಳುತ್ತಾನೆ. ನಾಪಿತ ಜನಾಂಗದವರಿಗೆ ದೊರೆಯುವ ಅಲ್ಪ ಪ್ರೋತ್ಸಾಹದಿಂದಾಗಿ ಸುಶಿರವಾದ್ಯಗಳು (ಗಾಳಿ ವಾದ್ಯಗಳು) ಹೆಚ್ಚು ಪ್ರಗತಿಯನ್ನು ಕಂಡಿದೆ. ಆದರೆ ಚಿತ್ರಕಲೆಯಲ್ಲಿ ಬಣ್ಣದ ಮುದ್ದೆಗಳ ವಿನಾ ಇನ್ನೇನೂ ಕಾಣಲಾರೆವು. ವಿವಿಧ ಬಣ್ಣಗಳಲ್ಲಿ ದೃಷ್ಟಿಗೆ ತಟ್ಟುವಂತಹ ನಮೂನೆಗಳನ್ನು, ಆಕಾರಗಳನ್ನು ರಚಿಸುವುದರಿಂದಲೇ ಕಲಾವಿದ ತೃಪ್ತನಾಗುತ್ತಾನೆ. ನಮ್ಮ (ದೇಶದ) ಉತ್ಕೃಷ್ಟವಾದ ಬಣ್ಣ ತುಂಬಿದ ಕೊರೆಯಚ್ಚಿನ

ಚಿತ್ರಗಳು, ಸುಂದರವಾದ ಚಿಕಣಿ ಚಿತ್ರಗಳು, ಭೂ ದೃಶ್ಯಗಳು (ಇಲ್ಲಿಯ ಕಲಾವಿದರ ದೃಷ್ಟಿಯಲ್ಲಿ) ಏನೂ ಬೆಲೆಯಿಲ್ಲದವು' ಎಂದು ಹೇಳುತ್ತಾನೆ. ಆದರೆ ಈತ ಹೇಳುವಂತೆ ಮೋಚಿಗಳು ಚಿತ್ರ ರಚಿಸುವಂತೆ ತಿಳಿದುಬರುವುದಿಲ್ಲ. ಈತನ ವೇಳೆಗಾಗಲೇ ಶ್ರೀರಂಗಪಟ್ಟಣದಲ್ಲಿ ಚಿತ್ರಕಲೆಯನ್ನೇ ಕುಲಕಸಬಾಗಿಸಿಕೊಂಡಿರುವ 'ರಾಜು' ಜನಾಂಗದವರು ಬಂದು ನೆಲೆಸಿದ್ದರು. ವಿಜಯನಗರ ಕಲೆಯ ಮುಂದುವರಿದ ರೂಪವಾದ ಪ್ರಸಿದ್ಧ ಮೈಸೂರು ಸಾಂಪ್ರದಾಯಿಕ ಶೈಲಿಯ ಬಿಡಿ ಚಿತ್ರಗಳ ರಚನೆ 'ರಾಜು' ಜನಾಂಗದವರಿಂದ ಆಗಿದ್ದು ಮೈಸೂರು ಅರಮನೆಯಲ್ಲಿ ಹಲವಾರು ಪ್ರಸಿದ್ಧ ಕಲಾವಿದರಿದ್ದರಲ್ಲದೆ ಇವರು ರಚಿಸಿದ ಸಾವಿರಾರು ಚಿತ್ರಗಳು ಇಂದಿಗೂ ನೋಡಸಿಗುತ್ತವೆ. (ಟಿಪ್ಪುವಿನ ಮರಣಾನಂತರ ಇವರು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಹೋಗಿ ನೆಲೆಸಿದರು)

ಹದಿನೆಂಟನೆಯ ಶತಮಾನದ ಅಂತ್ಯದ ವೇಳೆಗೆ ಯೂರೋಪ್ ದೇಶದಿಂದ ಹಲವಾರು ಕಲಾವಿದರು ಭಾರತಕ್ಕೆ ಬಂದು ಇಲ್ಲಿಯ ಭೂದೃಶ್ಯಗಳ ಚಿತ್ರಣ ಹಾಗೂ ಅವುಗಳ ಗ್ರಾಫಿಕ್ ಮುದ್ರಣ ಕಾರ್ಯಗಳನ್ನು ಕೈಗೊಂಡಿದ್ದು ಅದರಲ್ಲಿ ಹಲವಾರು ಕಲಾವಿದರು ಟಿಪ್ಪುವಿನ ಸಾಮ್ರಾಜ್ಯದಲ್ಲಿಯೂ ಸಂಚರಿಸಿ ಅನೇಕ ಕಲಾಕೃತಿಗಳನ್ನು ರಚಿಸಿದರು. ಇದರಲ್ಲಿ ರಾಬರ್ಟ್ ಹೋಮ್ ೧೭೯೦ರಲ್ಲಿ ಕಾರನ್‌ವಾಲೀಸ್‌ನೊಂದಿಗೆ ಬಂದಿದ್ದು ಹತ್ತೊಂಬತ್ತನೆಯ ಶತಮಾನದ ಆದಿಯಲ್ಲೂ ಈ ಪ್ರದೇಶದಲ್ಲೇ ಸಂಚರಿಸುತ್ತಿದ್ದು ಮೈಸೂರು–ಶ್ರೀರಂಗಪಟ್ಟಣ–ಬೆಂಗಳೂರುಗಳಲ್ಲಿಯ ದೇವಾಲಯ, ಕೋಟೆ, ಬೆಟ್ಟ–ಗುಡ್ಡಗಳು ಇತ್ಯಾದಿಗಳ ಚಿತ್ರ ರಚಿಸಿ 'ಸೆಲೆಕ್ಟ್ ವ್ಯೂ ಆಫ್ ಮೈಸೂರ್' ಎಂಬ ಹೆಸರಿನಲ್ಲಿ ೧೭೯೪ರಲ್ಲಿ ಪುಸ್ತಕ ಪ್ರಕಟಿಸಿದನು. ಲೆಫ್ಟಿನೆಂಟ್ ಆರ್.ಎಚ್.ಕೋಲ್ ಬ್ರೂಕ್ ೧೭೯೩ರಲ್ಲಿ 'ಮೈಸೂರು ರಾಜರ ಅರಮನೆಯ ಹನ್ನೆರಡು ದೃಶ್ಯಗಳು' ಎಂಬ ಚಿತ್ರ ಸಂಪುಟವನ್ನು, ಕ್ಯಾಪ್ಟನ್ ಎ.ಆಲನ್ ಅವರು ೧೭೯೪ರಲ್ಲಿ 'ಮೈಸೂರು ಸೀಮೆಯ ದೃಶ್ಯಗಳು' ಹಾಗೂ ಲೆಫ್ಟಿನೆಂಟ್ ಜೇಮ್ಸ್ ಹಂಟರ್ ೧೮೦೪ರಲ್ಲಿ 'ಮೈಸೂರು ದೇಶದ ಪ್ರಕೃತಿ ದೃಶ್ಯಗಳು' ಚಿತ್ರ ಸಂಪುಟಗಳನ್ನು ಪ್ರಕಟಿಸಿದರು. ಗ್ರಾಫಿಕ್ ಮಾಧ್ಯಮದಲ್ಲಿರುವ ಈ ಚಿತ್ರಸಂಪುಟಗಳಲ್ಲಿ, ಶ್ರೀರಂಗಪಟ್ಟಣ ದೃಶ್ಯಗಳಲ್ಲದೆ ಟಿಪ್ಪುವಿನ ಚಿತ್ರಗಳೂ ಇವೆ. ಮೂಲತ; ಏಕ ವರ್ಣ (ಕಪ್ಪು ಬಿಳುಪು) ವಾಗಿದ್ದು ನಂತರ ಅವುಗಳಿಗೆ ಬಣ್ಣ ತುಂಬಿರುವುದೂ ಉಂಟು. ಇವರಲ್ಲದೆ ಭಾರತದಾದ್ಯಂತ ಸಂಚರಿಸಿದ ಕ್ಯಾಪ್ಟನ್ ಗೋಲ್ಡ್ ಟಿಪ್ಪುವಿನ ಕಾಲದ ಶ್ರೀರಂಗಪಟ್ಟಣದ ದೃಶ್ಯಗಳು ಹಾಗೂ ಚಪರಾಸಿ, ಸಿಪಾಯಿ, ಹಾವಾಡಿಗ, ದೊಂಬರಾಟದವ ಇತ್ಯಾದಿ ಜನಸಾಮಾನ್ಯರ ಚಿತ್ರಗಳನ್ನು ರಚಿಸಿದ್ದು ೧೭೯೯ರಲ್ಲಿ ಪ್ರಕಟವಾದ ತನ್ನ 'ಓರಿಯಂಟರ್ ಡ್ರಾಯಿಂಗ್ಸ್' ಚಿತ್ರ ಸಂಪುಟದಲ್ಲಿ ಸೇರಿಸಿದ್ದಾನೆ. ಪೂರ್ವ ದೇಶಗಳಲ್ಲಿ ೧೭೮೬–೯೪ರಲ್ಲಿ ಸಂಚರಿಸಿದ ಖ್ಯಾತ ಕಲಾವಿದರಾದ ಡೇನಿಯಲ್ ಸಹೋದರರೂ ಟಿಪ್ಪುವಿನ ರಾಜ್ಯದಲ್ಲಿಯ ಕೆಲವು ದೃಶ್ಯಗಳನ್ನು ರಚಿಸಿದ್ದಾರೆ. ಹೆಚ್ಚಿನ ಕಲಾವಿದರು ಕೋಟೆ–ಕೊತ್ತಳಗಳನ್ನು ರಚಿಸಿದ್ದಾರಲ್ಲದೆ ಇವರು ಕಲಾವಿದರಾಗಿದ್ದೂ ಸೈನ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಆ ಕಾರಣ ಆಡಳಿತಕ್ಕೆ ಸೂಕ್ತವಾಗುವಂತೆ ಕೋಟೆ–ಕೊತ್ತಳಗಳ (ವಿಶೇಷವಾಗಿ ಗಿರಿದುರ್ಗಗಳ) ಚಿತ್ರಣ ಮಾಡಿರಬಹುದು. ಇದೇ ಕಲಾವಿದರು ಹೈದರ್–ಟಿಪ್ಪುವಿನ ಕಾಲದಲ್ಲೇ ರಾಜ್ಯದ ಹಾಗೂ ಪ್ರಮುಖ ಊರುಗಳ ನಕ್ಷೆ (ಮ್ಯಾಪ್)ಗಳನ್ನು ವಿವರವಾಗಿ ರಚಿಸಿದ್ದಾರೆ. ಇವಲ್ಲದೆ ಹೈದರ್ ಟಿಪ್ಪುವೂ ಸೇರಿದಂತೆ ರಾಜರು, ರಾಜ ಪ್ರಮುಖರು ದಿವಾನರು ಇತ್ಯಾದಿಯವರ ತೈಲ ಚಿತ್ರ, ರೇಖಾಚಿತ್ರಗಳನ್ನು ರಚಿಸಿದ್ದು ಹಲವಾರು ಕೃತಿಗಳನ್ನು ದರಿಯಾದೌಲತ್‌ನಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಇವುಗಳು ನೈಜರೂಪದಲ್ಲಿ ಅಂದಿನ ವಿಕ್ಟೋರಿಯನ್ ಶೈಲಿ ಎಂದು ಕರೆಯಬಹುದಾದ ಶೈಲಿಯಲ್ಲಿದ್ದು, ಇವೇ ವ್ಯಕ್ತಿಗಳ ಕೆಲವು ಸಾಂಪ್ರದಾಯಿಕ ಚಿತ್ರಗಳಿಗಿಂತ ತೀರ ಭಿನ್ನವಾಗಿವೆ. ಈ ಬಗೆಯ ಶೈಲಿಯೊಂದು ಅಂದೇ ಕರ್ನಾಟಕಕ್ಕೆ ಬಂದಿತ್ತಾದರೂ ಪ್ರಾಯಶಃ ಸೂಕ್ತ ಅಭ್ಯಾಸದ ಕೊರತೆಯಿಂದಾಗಿ ಬಳಕೆಗೆ ಬಾರದೇ ಹೋಗಿರಬಹುದು. ಅಲ್ಲದೆ ಮುಂದಿನ ಮೈಸೂರು ಅರಸರು ಸಂಪ್ರದಾಯ ಚಿತ್ರಗಳಿಗೇ ಪ್ರೋತ್ಸಾಹ ನೀಡಿದರು. ಈ ಬಗೆಯ ಸಂಪ್ರದಾಯ ಶೈಲಿಯ ಭಿತ್ತಿ ಹಾಗೂ ಬಿಡಿ ಚಿತ್ರಗಳ ರಚನೆ ಮುಂದಿನ ಕಾಲದಲ್ಲಿ ಕಾಣಬಹುದು.

ಮಳವಳ್ಳಿಯ ಬೆಳಕವಾಡಿ ಬಳಿಯಿರುವ ಬೊಪ್ಪೆಗೌಡನಪುರದ ಮಂಟೆಸ್ವಾಮಿ ಮಠ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದು ಗದ್ದುಗೆಯಿರುವ ಸ್ಥಳದ ಬದಿಯಲ್ಲಿ ಮಂಟಪವಿದ್ದು, ಚಿತ್ರಮಂಟಪವೆಂದು ಕರೆಯುವ ಇದರಲ್ಲಿ ೧೯ನೇ ಶತಮಾನದ ಆದಿಯಲ್ಲಿ ರಚಿಸಿದ ಶಿವಪುರಾಣ ಹಾಗೂ ರಾಮಾಯಣವನ್ನು ಆಧರಿಸಿದ ಭಿತ್ತಿಚಿತ್ರಗಳಿದ್ದವು. ಚಿತ್ರಗಳು ಹಾಳಾಗಿ ನಶಿಸಿದ್ದವೆಂದು ೧೯೪೫ರ ವೇಳೆಯಲ್ಲಿ ಅವುಗಳ ಮೇಲೆ ಸುಣ್ಣ ಹೊಡಿಸಲಾಯಿತೆಂದು ತಿಳಿದುಬರುತ್ತದೆ. ಆದರೆ ಮಠದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರು ಸಾಲಾಗಿ ನಿಂತಿರುವ ಹಲವು ವೀರಶೈವ ಮತ್ತು ಧಾರ್ಮಿಕ ಪುರುಷರನ್ನು ಒಳಗೊಂಡಿರುವ ಸಾಂಪ್ರದಾಯಿಕ ಬಿಡಿ ಚಿತ್ರಗಳಲ್ಲದೆ ಇನ್ನೂ ಹಲವಾರು ದೇವ ದೇವಿಯರ ಸಾಂಪ್ರದಾಯಿಕ ಬಿಡಿ ಚಿತ್ರಗಳಿವೆ.

ಇತ್ತೀಚಿನದಾದರೂ ಮೈಸೂರು ಸಾಂಪ್ರದಾಯಿಕ ಶೈಲಿಯ ಚಿತ್ರಗಳನ್ನು ಮೇಲುಕೋಟೆಯ ಯತಿರಾಜ ಮಠದ ಭಿತ್ತಿಗಳಲ್ಲಿ ಕಾಣಬಹುದು. ಈ ವರ್ಣಚಿತ್ರಗಳಲ್ಲಿ ನಾಲ್ಕು ದಿವ್ಯ ದೇಶದ ದೇವರುಗಳು, ಮದರಾಸು ತಿರುವಳ್ಳಿಕೇಣಿಯ ಪಾರ್ಥಸಾರಥಿ, ಶ್ರೀರಾಮಪಟ್ಟಾಭಿಷೇಕ, ಆಚಾರ್ಯರುಗಳು, ವಟಪತ್ರಶಾಯಿಕೃಷ್ಣ, ರಾಮಾನುಜ, ಸಂಪತ್ಕುಮಾರ ಮುಂತಾದ ವರ್ಣಚಿತ್ರಗಳನ್ನು ೧೯೧೪ರಲ್ಲಿ ಆಗಿನ ಮಠಾಧಿಪತಿಗಳಾಗಿದ್ದ ಶ್ರೀ ದಾಮೋದರು ಕುಟ್ಟಿ ತಂಬಿ ಅಳಶಿಂಗಜೀಯರ್ ಸ್ವಾಮಿಗಳು ಬಹು ದ್ರವ್ಯ ವ್ಯಯದಿಂದ ಬರೆಯಿಸಿದರೆಂದು ತಿಳಿದುಬರುತ್ತದೆ. ಮೇಲಿನ ಚಿತ್ರಗಳಲ್ಲದೆ ಆಂಡಾಳ್, ಹಯಗ್ರೀವ, ಲಕ್ಷ್ಮಿ, ವರಾಹಸಹಿತ ಲಕ್ಷ್ಮಿ, ನರಸಿಂಹ ಗರುಡಾರೂಢ ವಿಷ್ಣು, ಸಾಲಿಗ್ರಾಮಮಾಲೆ ಧರಿಸಿದ ನಾರಾಯಣ, ವೈರಮುಡಿ ಸೇವೆಯಲ್ಲಿ ಚೆಲುವ ನಾರಾಯಣ, ಶ್ರೀನಿವಾಸ, ರಂಗನಾಥ ಇತ್ಯಾದಿ ದೇವರುಗಳೂ ಜಯ–ವಿಜಯ ಹಾಗೂ ಭಕ್ತಜನರು ನಮಿಸುತ್ತಿರುವುದು, ತ್ರಿಪುಂಡ್ರ ಸಮೇತ ಶಂಖಚಕ್ರ ಚಿತ್ರಗಳನ್ನು ರಚಿಸಲಾಗಿದೆ. ಚಿತ್ರಗಳನ್ನು ಕೆಂಪು, ನೀಲಿ, ಹಳದಿ, ಹಸಿರು ಹಾಗೂ ಕಪ್ಪು ವರ್ಣಗಳಲ್ಲಿ ಘಾಢವಾಗಿ ಚಿತ್ರಿಸಿದೆ. ಆಭರಣಗಳಿಗೆ ಚಿನ್ನದ ರೇಕುಗಳನ್ನು ಬಳಸಿದೆಯಲ್ಲದೆ, ಚಿನ್ನದ ಬಣ್ಣದ ಕಾಗದವನ್ನು ವಿವಿಧ ಆಕಾರಗಳಲ್ಲಿ ಕತ್ತರಿಸಿ ಚಿತ್ರಗಳ ಮೇಲೆ ಅಂಟಿಸಿ ಅವುಗಳ ಮೇಲೆ ರೇಖಾಚಿತ್ರಗಳನ್ನು ಮಾಡಿದೆ. ಕೆಲವೆಡೆ ನೀರು ಬಿದ್ದು ಚಿತ್ರಗಳು ಹಾಳಾಗಿವೆ. ೧೯೮೮ರ ಸುಮಾರಿನಲ್ಲಿ ಖ್ಯಾತ ಅರಮನೆ ಕಲಾವಿದ ಸುಬ್ರಹ್ಮಣ್ಯ ರಾಜು ಅವರ ನೇತೃತ್ವದಲ್ಲಿ ಕೆಲವು ಚಿತ್ರಗಳನ್ನು ತಿದ್ದಿಸಲು ಪ್ರಯತ್ನಿಸಲಾಯಿತು. ಇಲ್ಲಿಯ ಚಿತ್ರಗಳನ್ನು ಕರ್ನಾಟಕದ ಸಾಂಪ್ರದಾಯಿಕ ಭಿತ್ತಿಚಿತ್ರಗಳಲ್ಲಿ ಅಂತಿಮ ರಚನೆಯೆಂದು ಹೇಳಬಹುದಲ್ಲದೆ ವೈಷ್ಣವ ಪರವಾದ ಹೆಚ್ಚಿನ ಚಿತ್ರಗಳನ್ನು ಇಲ್ಲಷ್ಟೇ ಕಾಣಬಹುದಾಗಿದೆ.

ಇವಲ್ಲದೆ ಮೇಲುಕೋಟೆಯ ಮುಖ್ಯ ಬೀದಿಯಲ್ಲಿರುವ ಮಠದಲ್ಲಿಯೂ ಭಕ್ತರು, ಜಯವಿಜಯರು ಇತ್ಯಾದಿ ಭಿತ್ತಿಚಿತ್ರಗಳಿದ್ದು, ಅವುಗಳ ಬಣ್ಣ ಮಾಸಲಾಗಿದೆ. ಊರಿನಲ್ಲಿ ಅನೇಕರು ಬಿಡಿ ಸಾಂಪ್ರಾದಾಯಿಕ ಚಿತ್ರಗಳನ್ನು ಹೊಂದಿದ್ದು ಸಾಮಾನ್ಯವಾಗಿ ಇವು ದೇವರುಗಳ ಕಲ್ಯಾಣೋತ್ಸವ, ರಾಧಾಕೃಷ್ಣ, ಸರಸ್ವತಿ ಮುಂತಾದ ಧಾರ್ಮಿಕ ವಸ್ತುವಿಗೆ ಸಂಬಂಧಪಟ್ಟಂತಹವು. ಒಟ್ಟು ಐವತ್ತಕ್ಕೂ ಹೆಚ್ಚು ವಿವಿಧ ಅಳತೆಯ ಚಿತ್ರಗಳಿದ್ದು ಚಿತ್ರಕಲೆಯ ದೃಷ್ಟಿಯಿಂದ ಮಹತ್ವದೆನಿಸಿವೆ. ಈ ಊರಿನವರೇ ಆದ ಜವ್ವಾಜಿ ಕಳವರ್ (ಮುದುಕರು) ಎಂಬ ಕಲಾವಿದರೊಬ್ಬರು ೬೦–೭೦ ವರ್ಷಗಳ ಹಿಂದೆ ರಚಿಸಿದರೆಂದು ಹೇಳಲಾಗುವ ಹಲವಾರು ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ಇವುಗಳಲ್ಲಿ ಗುರುತಿಸಲಾಗುತ್ತದೆ.

ಮೇಲುಕೋಟೆಯ ಭಿತ್ತಿಚಿತ್ರಗಳ ಕಾಲದ್ದೆಂದು ಹೇಳಬಹುದಾದ ಕೆಲವು ಭಿತ್ತಿಚಿತ್ರಗಳನ್ನು ನಾಗಮಂಗಲದ ಸೌಮ್ಯಕೇಶವ ದೇವಾಲಯದಲ್ಲಿಯೂ ಕಾಣಬಹುದು. ಜಯ–ವಿಜಯ, ಕೆಲವು ವೈಷ್ಣವ ಭಕ್ತರು ಮುಂತಾದ ಚಿತ್ರಗಳನ್ನು ಗುರುತಿಸಬಹುದಾಗಿದ್ದು ಇಂದು ಅವು ಮಾಸಿಹೋಗಿವೆ. ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿಯ ದೇವಾಲಯವೊಂದರಲ್ಲಿ ಟಿಪ್ಪು ಹುಲಿಯೊಂದಿಗೆ ಹೋರಾಡುತ್ತಿರುವ ಭಿತ್ತಿಚಿತ್ರವಿದ್ದುದರ ಬಗ್ಗೆ ತಿಳಿದುಬರುತ್ತದೆ.

ಜನಪದ ಶೈಲಿಯದಾದರೂ ವಸ್ತುವಿನಿಂದಾಗಿ ಮುಖ್ಯವೆನಿಸಿದ್ದ ಭಿತ್ತಿಚಿತ್ರವೊಂದು ಬೆಳ್ಳೂರುಕ್ರಾಸ್ ಬಳಿಯ ಯಲ್ಲಾದಹಳ್ಳಿಯ ಲಕ್ಷ್ಮಿಯ ದೇವಾಲಯದಲ್ಲಿ ಇತ್ತೀಚಿನವರೆಗೆ ಕಾಣಬಹುದಿತ್ತು. ಗ್ರಾಮದೇವತೆಯ ಚಿಕ್ಕ ಅಳತೆಯ ದೇವಾಲಯದಲ್ಲಿ ಗರ್ಭಗುಡಿಯ ಮುಂದಿನ ಅಂಕಣದ ಮೂರು ಬದಿಯ ಗೋಡೆಗಳ ಮೇಲೆ ಚಿತ್ರಗಳಿದ್ದು ಅವುಗಳನ್ನು ಉಪ್ಪಾರರ ರಾಮಯ್ಯ ಪೂಜಾರಿ ಅವರ ಗೆಳೆಯ ಚಿತ್ರಗಾರ ಪುಟ್ಟಯ್ಯ ಎಂಬಾತ ೧೯೦೭ರ ವೇಳೆಯಲ್ಲಿ ರಚಿಸಿದ್ದಾಗಿ ತಿಳಿದುಬರುತ್ತದೆ. ಚಿತ್ರಣಗಳಲ್ಲಿ ಸ್ವರ್ಗದ ದೃಶ್ಯದಲ್ಲಿ ವೈಕುಂಠ, ದೇವರುಗಳು, ಶೇಷಾಶಾಯಿ ವಿಷ್ಣು, ಕಾಮಧೇನು, ಬ್ರಾಹ್ಮಣರು ಇತ್ಯಾದಿಯನ್ನು ನರಕದ ದೃಶ್ಯದಲ್ಲಿ ದೇಹಕ್ಕೆ ಕಂಬಿಹಾಕಿ ಇರಿಯುತ್ತಿರುವುದು, ಅಸ್ಥಿಪಂಜರಗಳು, ಪುಸ್ತಕದಲ್ಲಿ ಲೆಕ್ಕ ಬರೆಯುತ್ತಿರುವ ಚಿತ್ರಗುಪ್ತ ಇತ್ಯಾದಿಗಳೂ ದೊಂಬರಾಟ ದೃಶ್ಯದಲ್ಲಿ ವಿವಿಧ ಬಗೆಯ ಕಸರತ್ತು; ಆನೆ, ಜಿಂಕೆ, ಹಂದಿ ಮುಂತಾದ ಪ್ರಾಣಿಗಳಿಂದ ಕೂಡಿದ ಕಾಡಿನ ದೃಶ್ಯ: ಜಾತ್ರೆಯಲ್ಲಿ ಮಿಠಾಯಿ ಮಾರಾಟ, ಗೋಪಾಲಕೃಷ್ಣ, ಗೋಪಿಕೆಯರು, ವಸ್ತ್ರಾಪಹರಣ, ಕಾಳಿಂಗ ಮರ್ಧನ, ನಂದಿ, ಶಿವ, ಲಕ್ಷ್ಮಿ, ಸೀತೆ, ಗರುಡ, ಹನುಮಂತ, ಮುಂತಾದ ದೇವತೆಗಳನ್ನು ಚಿತ್ರಿಸಲಾಗಿದ್ದವು. ಐತಿಹಾಸಿಕವಾಗಿ ಕೃಷ್ಣರಾಜ ಒಡೆಯರು, ಕುದುರೆಯೇರಿದ ಒಬ್ಬ ವೀರ, ಹೈದರ್ ಮತ್ತು ಟಿಪ್ಪುಗಳ ಚಿತ್ರಗಳನ್ನು ಕಾಣಬಹುದಿತ್ತು. ಸಮಕಾಲೀನ ಜೀವನಚಿತ್ರಣದಲ್ಲಿ ಮಲ್ಲಯುದ್ಧ, ವಿದೇಶಿ ಸೈನಿಕರು, ವ್ಯಕ್ತಿಯೊಬ್ಬನನ್ನು ಕಟ್ಟಿಹಾಕಿ ವಿಚಾರಣೆ ನಡೆಸುತ್ತಿರುವುದು; ಪಂಚಾಯಿತಿ ಕಟ್ಟೆಯಲ್ಲಿ ಗಣ್ಯರು ಸಭೆ ಸೇರಿರುವುದು (ಇವರ ಕೆಳಗೆ ಇವರ ಹೆಸರು ಬರೆದಿದ್ದು ಇಂದಿಗೂ ಅವರ ವಂಶಜರು ಊರಲ್ಲಿ ವಾಸವಿದ್ದಾರೆ) ಮುಂತಾದುವಲ್ಲದೆ ಸ್ವತಃ ಕಲಾವಿದ ಪುಟ್ಟಣ್ಣ ಆತನ ಮಗನೊಂದಿಗೆ ಇರುವಂತೆಯೂ ಚಿತ್ರಗಳನ್ನು ಬಿಡಿಸಲಾಗಿತ್ತು. ನೀಲಿ, ಹಸಿರು ಬಣ್ಣಗಳೇ ಪ್ರಧಾನವಾಗಿ ಬಿಳಿಯ ಗೋಡೆಯ ಮೇಲೆ, ಯಾವುದೇ ತಾಳಮಾನ ಅಥವಾ ಪ್ರಮಾಣಗಳಿಗೆ ಆಕಾರಗಳು ಹೊಂದದಂತೆ ಜನಪದ ಶೈಲಿಯಲ್ಲಿ ರೇಖಾಪ್ರಧಾನವಾಗಿ ಚಿತ್ರಿಸಿದ ಈ ಬಗೆಯ ಚಿತ್ರಣಗಳು ಇಡೀ ರಾಜ್ಯದಲ್ಲಿಯೇ ಅಪರೂಪವಾದ ರಚನೆಯೆನ್ನಬಹುದಿತ್ತು. ಇತ್ತೀಚೆಗೆ ಇವು ಮಾಸಿ ಕಳೆಗುಂದಿದ್ದರಿಂದ ಅವುಗಳಿಗೆ ಸುಣ್ಣ ಹೊಡೆಸಿರುವುದಾಗಿ ತಿಳಿದುಬರುತ್ತದೆ.

ದಕ್ಷಿಣ ಭಾರತದ ಉಳಿದ ಕಡೆಗಳಂತೆ ಮಂಡ್ಯ ಜಿಲ್ಲೆಯಲ್ಲಿಯ ಹಳ್ಳಿಗಳಲ್ಲಿ ಹೊಸ ಮನೆಗೆ ಸುಣ್ಣ–ಬಣ್ಣ ಹೊಡೆಸಿದ ನಂತರ ಗೋಡೆಗಳಲ್ಲಿ ಚಿತ್ರ ಬರೆಯಿಸುವ ಪದ್ಧತಿ ಕಳೆದ ಐವತ್ತು ವರ್ಷಗಳ ಹಿಂದೆಯೂ ಇದ್ದ ಬಗ್ಗೆ ತಿಳಿದುಬರುತ್ತದೆ. ಅಮೆರಿಕದ ಅರ್ಥಶಾಸ್ತ್ರಜ್ಞೆ ಟಿ.ಸ್ಕಾರ್ಲೆಟ್ ಎಪ್‌ಸ್ಕೀನ್ ಅವರು ೧೯೫೪ರ ಸುಮಾರಿನಲ್ಲಿ ಮಂಡ್ಯ ಶಹರದ ಬಳಿಯ ಎರಡು ಹಳ್ಳಿಗಳ ಬಗ್ಗೆ ವಿಶೇಷ ಅಧ್ಯಯನ (ಪಿಎಚ್.ಡಿ.) ಮಾಡುತ್ತಿದ್ದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ ಕಟ್ಟಿಸಿದ ಮನೆಯೊಂದರ ಭಿತ್ತಿಯಲ್ಲಿ ಮಹಾಭಾರತದ ಚಿತ್ರಗಳನ್ನು ಬಣ್ಣದಲ್ಲಿ ಬರೆಯಲಾಗಿತ್ತೆಂದು ತಿಳಿಸುವರಲ್ಲದೆ ಶಿವ–ಪಾರ್ವತಿಯರ ಚಿತ್ರವೊಂದನ್ನು ನೀಡುತ್ತಾರೆ.

ಸಂಪ್ರದಾಯ ಚಿತ್ರಗಳಿಗೆ ಪ್ರೋತ್ಸಾಹ ನೀಡಿದ ಮೈಸೂರು ಅರಸರೇ, ೧೯ನೇ ಶತಮಾನದ ಅಂತ್ಯದಿಂದಲೇ ಅಂದಿಗೆ ಆಧುನಿಕ ಎನ್ನಬಹುದಾದ ನೈಜಶೈಲಿಯ ಯೂರೋಪಿಯನ್ ಪ್ರೇರಿತ ಚಿತ್ರಕಲೆಗೂ ಪ್ರೋತ್ಸಾಹ ನೀಡಿದರು. ಕೇರಳದ ಕಲಾವಿದ ರಾಜರವಿವರ್ಮ ಮೈಸೂರು ಅರಮನೆಗಾಗಿ ಕೆಲವು ಚಿತ್ರಗಳನ್ನು ರಚಿಸಿಕೊಟ್ಟಿದ್ದ. ಹಾಗೊಮ್ಮೆ ಮೈಸೂರಿಗೆ ಬಂದಾಗ ತನ್ನ ಸೋದರ ಸಂಬಂಧಿ ಕಲಾವಿದ ರಾಜ ರಾಜವರ್ಮನೊಂದಿಗೆ ಶ್ರೀರಂಗಪಟ್ಟಣಕ್ಕೂ ಬಂದಿದ್ದು ಇಲ್ಲಿಯ ಪ್ರಕೃತಿ ದೃಶ್ಯಗಳನ್ನು ಚಿತ್ರಿಸಿದ್ದರು. ಮಂಡ್ಯ ಜಿಲ್ಲೆ ೧೯೩೯ರವರೆಗೂ ಮೈಸೂರು ಜಿಲ್ಲೆಯೊಳಗೆ ಅಂತರ್ಗತವಾಗಿದ್ದರಿಂದ, ಜಿಲ್ಲೆಯ ಹಲವಾರು ಕಲಾವಿದರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಿಯುವಂತಾಯಿತು. ಇವರುಗಳಲ್ಲಿ ಮುಖ್ಯವಾಗಿ ಶ್ರೀನಿವಾಸ ರಂಗಸ್ವಾಮಿ ಐಯಂಗಾರ್ (ಎಸ್.ಆರ್.ಐಯಂಗಾರ್ ೧೮೯೮–೧೯೮೫) ಅವರು ಶ್ರೀರಂಗಪಟ್ಟಣದಲ್ಲಿ ಜನಿಸಿದ್ದು ಚಿತ್ರಕಲೆಯಲ್ಲಿ ಆಸಕ್ತರಾಗಿ ಮೈಸೂರಿನ ಚಾಮರಾಜೇಂದ್ರ

ತಾಂತ್ರಿಕ ಶಾಲೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ನಡೆಸಿದರು. ಇವರ ಅಣ್ಣ ಕೃಷ್ಣಯ್ಯಂಗಾರ್ ಅವರೂ ಮಂಡ್ಯ ಜಿಲ್ಲೆಯವರಾಗಿದ್ದು ಚಿತ್ರಕಲಾ ಶಿಕ್ಷಕ ತರಬೇತಿ ಪಡೆದು ಮೈಸೂರಿನ ಬನುಮಯ್ಯ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ಎಸ್.ಆರ್.ಐಯಂಗಾರ್ ಅವರಿಗೆ ಮೂಲ ಪ್ರೇರಕರು, ಪ್ರಥಮ ಶಿಕ್ಷಕರೂ ಆಗಿದ್ದರಲ್ಲದೆ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಎಸ್.ಆರ್.ಐಯಂಗಾರ್ ಅವರು ಹಳೆಯ ಮೈಸೂರು ಪ್ರದೇಶದಿಂದ ಪ್ರಥಮರೆಂಬಂತೆ ೧೯೨೪ರಲ್ಲಿಯೇ ಮುಂಬಯಿಯ ಜೆ.ಜೆ.ಕಲಾ ಶಾಲೆಗೆ ಸೇರಿದರು. (ಆ ವೇಳೆಗೆ ಸ್ನಾತಕ ಪದವಿಯ ಅಂತಿಮ ವರ್ಷದಲ್ಲಿದ್ದರು) ಅರಮನೆಯಿಂದ ವಿದ್ಯಾರ್ಥಿ ವೇತನ ದೊರೆಯಿತು. ಚಿತ್ರಕಲಾ ಅಭ್ಯಾಸ ಪೂರ್ಣಗೊಂಡು ಹಿಂತಿರುಗಿ ಬಂದ ಮೇಲೆ ಮೈಸೂರು ಅರಮನೆಗೆ ಸಂಬಂಧಿಸಿದಂತೆ ರಾಜರ, ರಾಜ ಪರಿವಾರದವರ ಅರವತ್ತಕ್ಕೂ ಹೆಚ್ಚು ಭಾವಚಿತ್ರಗಳನ್ನು ರಚಿಸಿಕೊಟ್ಟರು. ಅರಮನೆ ಕಲ್ಯಾಣ ಮಂಟಪದ ಪ್ರಸಿದ್ಧವಾದ ದಸರಾ ಮೆರವಣಿಗೆ ಚಿತ್ರಮಾಲಿಕೆಯಲ್ಲಿ ಕೆಲವನ್ನು ರಚಿಸಿಕೊಟ್ಟರು. ಐಯಂಗಾರ್ ಅವರಿಗೆ ಸಾಕಷ್ಟು ಪ್ರಶಸ್ತಿಗಳು, ಗೌರವಗಳು ಸಂದಾಯವಾಗಿದ್ದವು. ಮೈಸೂರು ದಸರಾ ಪ್ರದರ್ಶನದಲ್ಲಿ ೧೯೩೦ ರಿಂದ ೭೦ ರವರೆಗಿನ ಅವಧಿಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಬಾರಿ ಇವರ ಕಲಾಕೃತಿಗಳಿಗೆ ಸುವರ್ಣ, ರಜತ, ಪ್ರಥಮ, ದ್ವಿತೀಯ ಇತ್ಯಾದಿ ಹಲವಾರು ಪ್ರಕಾರಗಳಲ್ಲಿ ಬಹುಮಾನಗಳು ಸಂದಾಯವಾಗಿದ್ದವು. ರಾಜ್ಯ ಲಲಿತಕಲಾ ಅಕಾಡಮಿಯಿಂದ ೧೯೬೬–೭೧ರ ಅವಧಿಯಲ್ಲಿ ಇವರ ಭಾವಚಿತ್ರ ಕೃತಿಗಳಿಗೆ ನಿರಂತರವಾಗಿ ಬಹುಮಾನ ದೊರೆಯಿತು. ಇವಲ್ಲದೆ ಮುಂಬಯಿ, ಕೊಲ್ಕತ್ತ ಪ್ರದರ್ಶನಗಳಲ್ಲೂ ಹಲವಾರು ಬಹುಮಾನಗಳು ದೊರೆತಿವೆ. ಖ್ಯಾತ ಚಿತ್ರಕಲಾ ಪರಿಷತ್ ಸೇರಿದಂತೆ ಚಿತ್ರಕಲಾ ಮಹಾಪರಿಷತ್ತು, ಕೆನ್ ಕಲಾ ಶಾಲೆ, ರಾಜಾಜಿನಗರ ನಾಡ ಹಬ್ಬ ಸಮಿತಿ, ರಾಜ್ಯ ಲಲಿತಕಲಾ ಅಕಾಡಮಿ ಇವೇ ಮುಂತಾದ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಐಯಂಗಾರರು ಭಾವಚಿತ್ರ ರಚನೆಯಲ್ಲಿ ಸಿದ್ಧಹಸ್ತರಿದ್ದು ಈ ಪ್ರಕಾರದಲ್ಲಿ ನೂರಾರು ಚಿತ್ರಗಳನ್ನು ರಚಿಸಿದ್ದರು. ವ್ಯಕ್ತಿಯ ಆಯ್ಕೆ, ನಿಲವು, ಬಣ್ಣಗಾರಿಕೆಯಲ್ಲಿ ಅವರದೇ ಶೈಲಿಯನ್ನು ಕಾಣಬಹುದು.

ಜಿಲ್ಲೆಯಿಂದ ಮುಂಬಯಿಯ ಜೆ.ಜೆ.ಕಲಾಶಾಲೆಯಲ್ಲಿ ಕಲಿತು ಬಂದ ಇನ್ನೊಬ್ಬ ಕಲಾವಿದರೆಂದರೆ ಮೇಲುಕೋಟೆಯ ರಾಮಾಶಾಸ್ತ್ರಿ ಅವರು. ೧೯೧೧ರಲ್ಲಿ ಜನಿಸಿದ ಶಾಸ್ತ್ರಿಗಳು ಮೊದಲಿಗೆ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಅಭ್ಯಸಿಸಿದರು. ನಂತರ ೧೯೪೦ರಲ್ಲಿ ಮುಂಬಯಿಗೆ ಹೋಗಿ ಅಲ್ಲಿಯ ಜೆ.ಜೆ.ಕಲಾ ಶಾಲೆಯಲ್ಲಿ ಕಲಿತು ಬಂದರು. ಮುಂಬಯಿಯಲ್ಲಿರುವಾಗಲೇ ಕೆಲವು ಪಾರಿತೋಷಕಗಳನ್ನು ಪಡೆದಿದ್ದರು. ಅಲ್ಲಿ ಕ್ಲೇಮಾಡೆಲ್ ಇರಿಸಿಕೊಂಡು ರಚಿಸಿದ ರೇಖಾಚಿತ್ರಗಳು ಹಾಗೂ ಹಲವಾರು ಭಾವಚಿತ್ರಗಳು ಇಂದು ನೋಡಸಿಗುತ್ತವೆ. ಮರಳಿ ಬಂದ ಮೇಲೆ ನಾಟಕ ಪರದೆಗಳನ್ನೂ ರಚಿಸಿದ್ದುಂಟು. ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದ ಶಾಸ್ತ್ರಿಗಳು ಪುರಸಭೆಯ ಅಧ್ಯಕ್ಷರಾಗಿ ಮೂರು ಬಾರಿ ಆಯ್ಕೆಯಾಗಿ ಅನೇಕ ಜನಹಿತ ಕಾರ್ಯದತ್ತ ಹೊರಟಿದ್ದು ಕೃತಿರಚನೆಗೆ ಎರವಾಯಿತು. ಶಾಸ್ತ್ರಿಗಳು ೧೯೯೭ರಲ್ಲಿ ನಿಧನರಾದರು. ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದ ವೇಳೆಯಲ್ಲಿ ಊರ ಪ್ರಮುಖರಿಂದ ಸನ್ಮಾನವೊಂದನ್ನು ಏರ್ಪಡಿಸಲಾಗಿತ್ತು. ಮೇಲುಕೋಟೆಯ ಎಂ. ಎ. ಕೃಷ್ಣಸ್ವಾಮಿ ಅವರು ಬೆಂಗಳೂರಿನ ಪಿಂಗಾಣಿ ಕಾರ್ಖಾನೆಯಲ್ಲಿ ಕಲಾವಿದರಾಗಿದ್ದಲ್ಲದೆ ಅನೇಕ ಭೂದೃಶ್ಯಗಳನ್ನು ರಚಿಸಿದ್ದಾರೆ.

ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದ ಅ.ನ.ಸುಬ್ಬರಾಯರು(೧೮೯೧–೧೯೮೧) ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಅನೇಕ ಪ್ರಥಮಗಳನ್ನು ಸ್ಥಾಪಿಸಿದವರು. ನಾಗಮಂಗಲದಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾಗ ಚಿತ್ರ ಶಿಲ್ಪಕಲೆಯ ಪರಿಸರದಿಂದ ಪ್ರಭಾವಿತರಾಗಿ ಮುಂದೆ ಮೈಸೂರಿನಲ್ಲಿ ಖಾಸಗಿಯಾಗಿ ಚಿತ್ರಕಲಾ ಶಿಕ್ಷಣ ಪಡೆದು, ಕೆಲ ಕಾಲ ಚಿಕ್ಕಮಗಳೂರಿನಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದು ನಂತರ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಹಾಗೂ ಮದ್ರಾಸ್ ಕಲಾಶಾಲೆಯಲ್ಲಿ ಕಲಾಶಿಕ್ಷಣ ಪಡೆದಿದ್ದರು. ಈ ಮಧ್ಯೆ ಬೆಂಗಳೂರಿನ ಸ್ತ್ರೀ ಸಮಾಜವೊಂದರಲ್ಲಿ

ಕಲಾಶಿಕ್ಷಕರಾಗಿ ನೇಮಕವಾಗಿದ್ದು ರಚನಾತ್ಮಕ ಕಲೆಯೊಂದಿಗೆ ಕರಕುಶಲ ಕಲೆಯನ್ನು ಸೇರ್ಪಡೆ ಮಾಡಿದಲ್ಲಿ ಜೀವನೋಪಾಯ ಮಾರ್ಗವೂ ಸಾಧ್ಯ ಎಂದು ವಿಶ್ವೇಶ್ವರಯ್ಯನವರು ನೀಡಿದ ಸೂಚನೆಯ ಪ್ರಕಾರ ೧೯೧೯ರಲ್ಲಿ ಬೆಂಗಳೂರಿನಲ್ಲಿ ಪ್ರಪ್ರಥಮವಾಗಿ ಕಲಾಶಾಲೆಯೊಂದನ್ನು ತೆರೆದರು. ಮೊದಲಿಗೆ ಮದ್ರಾಸ್ ಕಲಾಶಾಲೆಗೆ ನಂತರ ಚಾಮರಾಜೇಂದ್ರ ಕಲಾಶಾಲೆಗೆ ಇಲ್ಲಿಂದ ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಳ್ಳಬಹುದಿತ್ತು. ಇಂದಿಗೂ ಉಳಿದು ಬಂದಿರುವ 'ಕಲಾ ಮಂದಿರ' ಕಲಾಶಾಲೆಯಲ್ಲಿ ಚಿತ್ರಕಲಾ ಡಿಪ್ಲೊಮಾ ಹಾಗೂ ಕಲಾಶಿಕ್ಷಕ ಪದವಿ ಅಭ್ಯಸಿಸಲು ಅವಕಾಶವಿದ್ದು ಅ.ನ.ಸುಬ್ಬರಾಯರ ಮಗ, ಕಲಾವಿದ, ನಾಟಕಕಾರ ಎ.ಎಸ್.ಮೂರ್ತಿ ಅವರ ನೇತೃತ್ವದಲ್ಲಿ ಮುನ್ನಡೆಯುತ್ತಿದೆ.

ಅ.ನ.ಸುಬ್ಬರಾಯರ ಇನ್ನೆರಡು ಸಾಧನೆಗಳೆಂದರೆ ಸರಕಾರದ ನೆರವಿಲ್ಲದೆ ಅಖಿಲ ಭಾರತ ಮಟ್ಟದ ಕಲಾಪ್ರದರ್ಶನಗಳನ್ನು ೧೯೨೧, ೨೭ ಹಾಗೂ ೨೯ರಲ್ಲಿ ಸಂಘಟಿಸಿದ್ದು ಇದಕ್ಕೆ ಭಾರತಾದ್ಯಂತದಿಂದ ಕೃತಿಗಳು ಬರುತ್ತಿದ್ದುದಲ್ಲದೆ ದಿವಾನರಾದಿಯಾಗಿ, ಅನೇಕರು ಪಾಲ್ಗೊಂಡು ಅನೇಕ ಕಲಾಕೃತಿಗಳು ಮಾರಾಟವಾಗುತ್ತಿದ್ದು ವಿಮರ್ಶಕರಿಂದ ಮೆಚ್ಚುಗೆಯನ್ನು ಪಡೆಯಿತು. ಮುಂದೆ ೧೯೩೦ರಲ್ಲಿ 'ಕಲಾ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದ್ದು ಕೆಲವು ವರ್ಷಗಳ ಕಾಲ ನಡೆಸಿದರು. ಶಾಲೆಯಲ್ಲಿ ಚಿತ್ರಕಲೆಯೊಂದಿಗೆ ಶಿಲ್ಪ, ಸಂಗೀತ, ನೃತ್ಯ, ನಾಟಕ ಕಲೆಗಳಿಗೂ ಅವಕಾಶವಿದ್ದು, 'ಕಲಾ' ಪತ್ರಿಕೆಯು ಈ ಎಲ್ಲ ವಿಷಯಗಳನ್ನೂ ಒಳಗೊಂಡಿತ್ತು. ಕಲಾವಿದರಾಗಿ ಅ.ನ.ಸು ಅವರ ಕೃತಿಗಳು ಇಂದು ಹೆಚ್ಚಿಗೆ ಉಳಿದಿಲ್ಲವಾದರೂ ಅವರ ಪತ್ರಿಕೆಯಲ್ಲಿಯ ನೂರಾರು ಚಿತ್ರಗಳಲ್ಲಿ ಅವರಿಂದ ರಚಿತವಾದವೂ ಸೇರ್ಪಡೆಯಾಗಿವೆ. ಕಲಾ ವಿದ್ಯಾರ್ಥಿಗಳಿಗಾಗಿಯೆ ಪುಷ್ಪ ರಚನೆ, ಮಕ್ಕಳ ತಿದ್ದುವಿಕೆ ಹಾಗೂ ದೃಗ್ದರ್ಶನ ಎಂಬ ಪುಸ್ತಕಗಳನ್ನು ರಚಿಸಿದ್ದಾರೆ. 'ಕಲಾ' ಪತ್ರಿಕೆಯಲ್ಲಿಯೂ ಚಿತ್ರಕಲೆ ಕುರಿತ ಹಲವಾರು ಲೇಖನಗಳಿವೆ. ಅ.ನ.ಸು ಅವರಿಗೆ ಮೈಸೂರು ದಸರಾ ಪ್ರದರ್ಶನದಲ್ಲಿ ರಜತ ಪದಕ, (೧೯೧೬), ರಾಜ್ಯ ಲಲಿತ ಕಲಾ ಅಕಾಡಮಿ ಪ್ರಶಸ್ತಿ (೧೯೬೮) ದೊರೆತಿತ್ತಲ್ಲದೆ, ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್‌ನ ಅಧ್ಯಕ್ಷರಾಗಿದ್ದರು (೧೯೭೩).

ಮೂಲತಃ ಇದೇ ಜಿಲ್ಲೆಯವರಾದ ಮಂಡಯಂ ತೊಣ್ಣೂರು ವೆಂಕಟಾಚಾರ್ಯರು (ಎಂ.ಟಿ.ವಿ.ಆಚಾರ್ಯ ೧೯೨೦–೯೦) ಮೈಸೂರು ಚಾಮರಾಜೇಂದ್ರ ತಾಂತ್ರಿಕ ಶಾಲೆಯಿಂದ ಚಿತ್ರಕಲಾಭ್ಯಾಸ ಮಾಡಿದ್ದು ಚೆನ್ನೈನ ಚಂದಮಾಮ ಪತ್ರಿಕೆಯಲ್ಲಿ ಸಾಂದರ್ಭಿಕ ಹಾಗೂ ಮುಖಪುಟ ರಚನೆಯ ಕಾರ್ಯಕೈಗೊಂಡರು. ಕೆಲಕಾಲ ಆ ಪತ್ರಿಕೆಯ ಕನ್ನಡ ಆವೃತ್ತಿಯ ಸಂಪಾದಕರೂ ಆಗಿದ್ದರು. ಪತ್ರಿಕೆಯ ಮುಖಪುಟದ ಪೌರಾಣಿಕ ಚಿತ್ರ ರಚನೆಯಿಂದಾಗಿ ಸಾಕಷ್ಟು ಜನಪ್ರಿಯರಾಗಿದ್ದವರು. ವಸ್ತುವಿನ ಆಯ್ಕೆ, ಆಕಾರಗಳ ರಚನೆ, ನೆರಳುಬೆಳಕು ಹಾಗೂ ಬಣ್ಣಗಾರಿಕೆಯಲ್ಲಿ ನೈಜಶೈಲಿಯಲ್ಲಿ ರಚಿತವಾಗಿರುವ ಈ ಚಿತ್ರಗಳು ಆಚಾರ್ಯರಿಗೆ ಹೆಸರು ಗಳಿಸಿಕೊಟ್ಟವು. ಅಂತೆಯೆ ಹಣ್ಣು ಮಾರುವವ, ಹಳ್ಳಿಯ ಉಪಾಧ್ಯಾಯ, ಮಕ್ಕಳ ಆಟ ಇತ್ಯಾದಿ ಸಾಮಾಜಿಕ ವಿಷಯಗಳನ್ನು ಕುರಿತು ಹಲವಾರು ಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೆ ಮೇಲುಕೋಟೆಯ ಚೆಲುವ ನಾರಾಯಣ ಹಾಗೂ ಊರಿನ ಪ್ರಕೃತಿ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಬೆಂಗಳೂರಿನಲ್ಲಿ ಕಲಾಭವನವೊಂದನ್ನು ತೆರೆದು ಆಸಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ ಕುರಿತ ಶಿಕ್ಷಣ ನೀಡುತ್ತಿದ್ದರಲ್ಲದೆ ಅಂಚೆಯ ಮೂಲಕ ಚಿತ್ರಕಲೆ ಕಲಿಸುವ ಹೊಸ ಬಗೆಯ ಶಿಕ್ಷಣ ಕ್ರಮವೊಂದನ್ನು ಆರಂಭಿಸಿದ್ದು ಅವರ ನಿಧನಾ ನಂತರವೂ ಮುಂದುವರಿಯುತ್ತಿದೆ. ಸೋವಿಯತ್ ದೇಶಗಳಲ್ಲಿ ಪ್ರವಾಸ ಮಾಡಿದ್ದ ಆಚಾರ್ಯರಿಗೆ ಅಕಾಡಮಿಯ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿಗಳು ಗೌರವಗಳು ದೊರೆತಿದ್ದವು. 'ಕಲೆ ಮತ್ತು ನಾನು' ಎಂಬ ಆತ್ಮ ಚರಿತ್ರೆಯ ಗ್ರಂಥವೊಂದನ್ನು ಆಚಾರ್ಯರು ಪ್ರಕಟಿಸಿದ್ದಾರೆ.

ಖ್ಯಾತ ಕಲಾವಿದ ಗಂಜೀಫ ರಘುಪತಿಭಟ್ ಅವರು ನಾಗಮಂಗಲದವರು. ಶಿಲ್ಪಕಲೆಗೆ ಪ್ರಸಿದ್ಧವಾಗಿದ್ದ ನಾಗಮಂಗಲದಲ್ಲಿ ಗಂಜೀಫ ಚಿತ್ರಗಳೂ ತಯಾರಾಗುತ್ತಿದ್ದು ಅವುಗಳ ಅಪೂರ್ವ ಸಂಗ್ರಹ ಹೊಂದಿದ ರಘುಪತಿಭಟ್ ಹಾಗೂ ಅವರ ಸಹೋದರರು ಅವುಗಳ ರಚನೆಯನ್ನೇ ಮಾರ್ಗವಾಗಿ ಕಂಡುಕೊಂಡರು. (ಗಂಜೀಫ ಎಂಬುದು ತೆಳ್ಳನೆಯ, ವೃತ್ತಾಕಾರದ ರಟ್ಟಿನ ಬಿಲ್ಲೆಯ ಮೇಲೆ ಒಂದು ಬದಿಗೆ ಚಿತ್ರ ರಚಿಸಿದ್ದು, ಅವುಗಳ ಒಂದು ನಿಶ್ಚಿತ ಗುಂಪಿನ ಕಟ್ಟುಗಳನ್ನು ರೂಪಿಸಿ– ಇಂದಿನ ಇಸ್ಪೇಟ್– ಆಟದಂತೆ ಆಡುವ ಆಟ ಸಾಮಾನ್ಯವಾಗಿ ದಶಾವತಾರ ಹಾಗೂ ಇನ್ನಿತರ ದೇವಾನುದೇವತೆಗಳ ಚಿತ್ರಗಳಿದ್ದು ಈ ಆಟಕ್ಕೆ ಮೈಸೂರು ಅರಸರು ವಿಶೇಷವಾಗಿ ಪ್ರೋತ್ಸಾಹ ನೀಡಿದರು. ಇಂದಿಗೂ ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಸಾವಂತ ವಾಡಿಯಲ್ಲಿ ಗಂಜೀಫ ಚಿತ್ರಗಳು ರಚನೆಯಾಗುತ್ತಿದ್ದು ಪ್ರಾಯಶ ಮರಾಠಿ ಅಧಿಕಾರಿಗಳಿಂದ ಮೈಸೂರು ಅರಮನೆಯಲ್ಲಿ ಬಳಕೆಗೆ ಬಂದಿರಬಹುದು. ಮುಮ್ಮಡಿ ಕೃಷ್ಣರಾಜಒಡೆಯರ್ ಕಾಲದಲ್ಲಿಯೇ ಈ ಆಟ ಆಡುವ ಬಗೆಯನ್ನು ಕುರಿತು ಮರಾಠಿ ಭಾಷೆಯಲ್ಲಿ ಕಲ್ಲಚ್ಚಿನ ಪುಸ್ತಕವೊಂದು ಪ್ರಕಟವಾಗಿರುವಂತೆ ತಿಳಿದುಬರುತ್ತದೆ.) ರಘುಪತಿಭಟ್ ಅವರು ಮೊದಲಿಗೆ ಹಳೆ ಚಿತ್ರಗಳನ್ನು ಅನುಕರಿಸುತ್ತಿದ್ದು ನಂತರ ತಮ್ಮದೇ ಆದ ಆಕಾರಗಳನ್ನು ಚಿತ್ರಿಸತೊಡಗಿದ್ದು ಹಳೆಯ ಕಲೆಗೆ ಪುನರುಜ್ಜೀವ ನೀಡಿದಂತಾಗಿ ದೇಶ–ವಿದೇಶಗಳಲ್ಲಿ ಈ ಕಲೆ ಮತ್ತೆ ಪ್ರಸಿದ್ಧಿಗೆ ಬರುವಂತಾಯಿತು. ರಟ್ಟುಗಳ ವಿನ್ಯಾಸ ತಳಹದಿಯ ವಸ್ತುವಿನ ತಯಾರಿಕೆ ಹಾಗೂ ಬಣ್ಣಗಳು ಇತ್ಯಾದಿಗಳಲ್ಲಿ ಹಳೆಯ ಕ್ರಮವನ್ನು ಅನುಸರಿಸುವ ಭಟ್ಟರು ಮೂಲದ ದೇವತೆಗಳಲ್ಲದೆ ಇನ್ನಿತರ ಹಲವಾರು ವಸ್ತುಗಳನ್ನು ಸಾಮಾಜಿಕ ಚಿತ್ರಣಗಳನ್ನು ಬಿಡಿ ಬಿಡಿಯಾಗಿ ಇಲ್ಲವೆ ಕಥಾ ಮಾಲಿಕೆಯಂತೆ ಚಿತ್ರಿಸುವುದುಂಟು. ಇದರಿಂದಾಗಿ ಕೇವಲ ಆಟದ ವಸ್ತುವಾಗಿದ್ದ ಗಂಜೀಫ ಚಿತ್ರಗಳು ಕಲಾಕೃತಿಯಾಗಿಸುವಲ್ಲಿ ರಘುಪತಿ ಭಟ್ಟರ ಶ್ರಮ ಪ್ರಶಂಸನೀಯ. ಬಿಲ್ಲೆಗಳ ಮೇಲೆ ಅಲ್ಲದೆ ಬಿಡಿ ಹಾಳೆಯಲ್ಲಿ, ತಾಳೆಗರಿ ಓಲೆ ಮೇಲೆ ಸಹ ಚಿತ್ರ ರಚನೆ ಮಾಡಿರುವ ಭಟ್ಟರು ಹಲವಾರು ನಿಯತಕಾಲಿಕೆಗಳಿಗೆ ಪುಸ್ತಕಗಳ ಮುಖಪುಟಗಳಿಗೆ ಕೃತಿ ರಚನೆಯನ್ನೂ ಮಾಡಿದ್ದಾರೆ. ಲಂಡನ್ನಿನ ಪ್ರಸಿದ್ಧ 'ಆರ್ಟ್ ಇನ್ ಆಕ್ಷನ್' ಕಲಾ ಉತ್ಸವವೂ ಸೇರಿದಂತೆ ಪಾಶ್ಚಾತ್ಯ ದೇಶಗಳಿಗೆ ಹತ್ತಕ್ಕೂ ಹೆಚ್ಚು ಬಾರಿ ಹೋಗಿ ಬಂದಿರುವ ಭಟ್ಟರು ವಿದೇಶದಲ್ಲಿ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಎಂದೆನಿಸಿದ್ದಾರೆ. ಕಮಲಾದೇವಿ ಚಟ್ಟೋಪಾಧ್ಯಾಯ ಹೆಸರಿನಲ್ಲಿರುವ ಕರಕುಶಲ ಕಲೆಗೆ ನೀಡುವ ಪ್ರಶಸ್ತಿ (೧೯೮೯) ಜೆ.ಸಿ.ರಾಜ್ಯ ಪ್ರಶಸ್ತಿ (೧೯೯೬), ಕರ ಕುಶಲ ಅಭಿವೃದ್ಧಿ ನಿಗಮದ ರಾಷ್ಟ್ರೀಯ ಪ್ರಶಸ್ತಿ (೧೯೯೩) ಇತ್ಯಾದಿ ಪ್ರಶಸ್ತಿಗಳನ್ನು ಪಡೆದಿರುವುದಲ್ಲದೆ ೧೯೯೨–೯೪ ರ ಅವಧಿಯಲ್ಲಿ ರಾಜ್ಯ ಲಲಿತಕಲಾ ಅಕಾಡಮಿಯ ಸದಸ್ಯರೂ ಆಗಿದ್ದು ಅಕಾಡಮಿಯ ಮುನ್ನಡೆಗಾಗಿ ಶ್ರಮಿಸಿದ್ದಾರೆ. ದೇಶವಿದೇಶಗಳ ಹಲವಾರು ಕಲಾ ಸಂಗ್ರಹಾಲಯಗಳಲ್ಲಿ ಇವರ ಕೃತಿಗಳ ಸಂಗ್ರಹವಿರುವುದಲ್ಲದೆ ಶ್ರೀಯುತರು ಸ್ವತಃ ತಮ್ಮ ಹಿರಿಯರಿಂದ ಬಂದ ಹಾಗೂ ದೇಶದಾದ್ಯಂತ ಸಂಗ್ರಹಿಸಿದ ಲಕ್ಷಾಂತರ ರೂಪಾಯಿ ಬೆಲೆಬಾಳುವ ೪೦೦ಕ್ಕೂ ಹೆಚ್ಚು ಗಂಜೀಫ ಎಲೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದಾರೆ. ರಾಜ್ಯ ಪುರಾತತ್ವ ಇಲಾಖೆಯ ನೆರವಿನಿಂದ ಶ್ರೀರಂಗಪಟ್ಟಣದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಜನ್ಮ ಮಂಟಪವನ್ನು ೧೯೯೦ರಲ್ಲಿ ಕಲಾ ಗ್ಯಾಲರಿಯಾಗಿ ಪರಿವರ್ತಿಸಿ ಗಂಜೀಫ ಹಾಗೂ ಇನ್ನಿತರ ವಸ್ತುಗಳನ್ನು ವ್ಯವಸ್ಥಿತವಾಗಿ ಪ್ರದರ್ಶಿಸಿದ್ದರು. ಆದರೆ ಸೂಕ್ತವಾದ ರಕ್ಷಣೆಯ ಅಭಾವ ಹಾಗೂ ವೆಚ್ಚವನ್ನು ಭರಿಸಲಾರದೆ ಕಲಾ ಸಂಗ್ರಹಾಲಯವನ್ನು ಮೈಸೂರಿಗೆ ವರ್ಗಾಯಿಸಲಾಯಿತು. ರಘುಪತಿ ಭಟ್ಟರು ಶ್ರೀರಂಗಪಟ್ಟಣದಲ್ಲಿ ವಾಸವಿದ್ದಾಗ ಸ್ಥಳೀಯ ಹಲವಾರು ಕಲಾಸಕ್ತರಿಗೆ ಗಂಜೀಫ ಕಲೆಯನ್ನು ಕಲಿಸಿ ಪ್ರೋತ್ಸಾಹಿಸಿದ್ದು ಕಲೆಯ ಉಳಿವಿಗೆ ಸಹಾಯಕವಾಗುವಂತಾಯಿತು.

ಜಿಲ್ಲೆಯಲ್ಲಿಯ ಕೆಲವು ಕಲಾವಿದರ ಬಗ್ಗೆ ರಾಜ್ಯ ಲಲಿತ ಕಲಾ ಅಕಾಡೆಮಿಯ ಪರಿಚಯಾವಳಿಯಲ್ಲಿ ಪ್ರಸ್ತಾಪವಿದೆ. ಅಗರಂ ಕೃಷ್ಣಮೂರ್ತಿ ಅವರು ೧೯೨೦ರಲ್ಲಿ ಕನ್ನಂಬಾಡಿಯಲ್ಲಿ ಜನಿಸಿದ್ದು, ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ

ಶಾಲೆಯಲ್ಲಿ ಚಿತ್ರಕಲೆ ಕಲಿತು, ನಂತರ ಬೆಂಗಳೂರಿನಲ್ಲಿ ವಾಣಿಜ್ಯ ಕಲಾ ಸಂಸ್ಥೆಯೊಂದನ್ನು ಆರಂಭಿಸಿದರು. ಹಲವಾರು ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಹಲವಾರು ಬಾರಿ ಬಹುಮಾನ ಗಳಿಸಿದ್ದಾರೆ. ಮೈಸೂರು ಪ್ರದೇಶ ಚಿತ್ರಕಲಾ ಪ್ರದರ್ಶನದಲ್ಲಿ ವೆಂಕಟಪ್ಪನವರ ಹೆಸರಿನಲ್ಲಿದ್ದ ಪ್ರಶಸ್ತಿಯಲ್ಲದೆ, ಇತರ ಪ್ರದರ್ಶನಗಳಲ್ಲಿ 'ಚಿತ್ರಕಲಾ ಪ್ರವೀಣ', 'ಕಲ್ಪನಾ ಚತುರ', 'ಚಿತ್ರಕಲಾ ರತ್ನ' ಇತ್ಯಾದಿ ಬಿರುದುಗಳು ಸನ್ಮಾನಗಳು ಸಂದಿದ್ದವು. ಕೆಲವು ಪತ್ರಿಕೆಗಳಿಗೆ ವ್ಯಂಗ್ಯಚಿತ್ರಗಳನ್ನು ರಚಿಸಿದ್ದಲ್ಲದೆ ರಾಮಾಯಣ, ಭಾರತಗಳ ಚಿತ್ರಗಳನ್ನು ಸಂಗೀತಗಾರರ ಭಾವಚಿತ್ರಗಳನ್ನು ರಚಿಸಿ ಮೆಚ್ಚುಗೆ ಗಳಿಸಿದ್ದರು. ನಾಗಮಂಗಲದಲ್ಲಿ ೧೯೧೨ರಲ್ಲಿ ಜನಿಸಿದ ಎನ್.ಎಸ್.ಎಸ್.ಐಯಂಗಾರ್ ಅವರು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಿಂದ ಕಲಾ ಶಿಕ್ಷಣ ಪಡೆದು ನಂತರ ದಸರಾ ಪ್ರದರ್ಶನಗಳಲ್ಲಿ ಬಹುಮಾನಗಳನ್ನು ಗಳಿಸಿದ್ದರು. ಐಯಂಗಾರ್ಯರು ಪೌರಾಣಿಕ ಚಿತ್ರ ರಚನೆಗಾಗಿ 'ಚಿತ್ರಕಲಾರತ್ನ', 'ಚಿತ್ರಕಲಾ ಶಿರೋಮಣಿ' ಇತ್ಯಾದಿ ಬಿರುದಾಂಕಿತರಾಗಿದ್ದರು. ಇವರು ರಚಿಸಿದ ದೊಡ್ಡ ಅಳತೆಯ ಶ್ರೀನಿವಾಸ ಕಲ್ಯಾಣ ಸಂಯೋಜನಾ ಚಿತ್ರ ಬಹುವಾಗಿ ಮನ್ನಣೆ ಪಡೆದಿದೆ. ಇವರು ಚಿತ್ರಕಲಾ ಮಹಾ ಪರಿಷತ್ತಿನ ಸಕ್ರಿಯ ಸದಸ್ಯರಾಗಿ ಕಲಾಸೇವೆ ಸಲ್ಲಿಸಿದ್ದರು.

ಎಸ್.ಎಸ್.ಪ್ರದೀಪ್‌ಕುಮಾರ್ ಮದ್ದೂರಿನ ನಿಡಗಟ್ಟದಲ್ಲಿ ಜನಿಸಿ ಬೆಂಗಳೂರು, ಬರೋಡಗಳಲ್ಲಿ ಕಲಾಭ್ಯಾಸ ಮಾಡಿ ಪ್ರಸ್ತುತ ಮೈಸೂರಿನ ಕಾವಾದಲ್ಲಿ ಕಲಾ ಅಧ್ಯಾಪಕರಾಗಿದ್ದಾರೆ. ಹದಿನೈದಕ್ಕೂ ಹೆಚ್ಚು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಹತ್ತು ಕಲಾ ಶಿಬಿರಗಳಲ್ಲಿ ಸಕ್ರಿಯ ಪಾತ್ರವಹಿಸಿದ ಇವರಿಗೆ ಶಿಲ್ಪ ಕಲಾ ಅಕಾಡಮಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಬಂದಿದೆ. ಮೇಲುಕೋಟೆ ಬಳಿಯ ಮಾಣಪನಹಳ್ಳಿಯಲ್ಲಿ ೧೯೦೫ರಲ್ಲಿ ಜನಿಸಿದ ಎಂ.ನರಸಿಂಹಮೂರ್ತಿ ಅವರು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾ ಶಾಲೆಯಲ್ಲಿ ಚಿತ್ರ ಕಲಾಭ್ಯಾಸ ಮಾಡಿದ್ದು ಭಾವಚಿತ್ರ ರಚನೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಮೈಸೂರು ಅರಮನೆಗಾಗಿ ಹಲವಾರು ಭಾವಚಿತ್ರಗಳನ್ನು ರಚಿಸಿಕೊಟ್ಟಿದ್ದರು. ಮೈಸೂರು ಸಾಂಪ್ರದಾಯಿಕ ಚಿತ್ರಗಳಲ್ಲೂ ನರಸಿಂಹಮೂರ್ತಿ ಅವರಿಗೆ ಪರಿಶ್ರಮವಿದ್ದು ಈ ಪ್ರಕಾರದ ಕೃತಿಗಳಿಗೆ ದಸರಾ ಪ್ರದರ್ಶನಗಳಲ್ಲಿ ಸತತವಾಗಿ ಬಹುಮಾನಗಳು ದೊರೆತಿವೆ. ಶ್ರೀಯುತರಿಗೆ ೧೯೭೩ರಲ್ಲಿ ಕಲಾನಿಕೇತನದವರಿಂದ ಸನ್ಮಾನ ಮಾಡಲಾಯಿತು. ವೃತ್ತಿಯಿಂದ ವೈದ್ಯರಾದ, ಆದರೆ ಚಿತ್ರಕಲೆಯನ್ನು ಸ್ವಂತ ಆಸಕ್ತಿಯಿಂದ ಕಲಿತ ಎಂ.ಬಿ.ಪಶುಪತಿ ಅವರು ೧೯೩೮ರಲ್ಲಿ ಮಂಡ್ಯದಲ್ಲಿ ಜನಿಸಿದ್ದು ಮೂವತ್ತಕ್ಕೂ ಹೆಚ್ಚು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರಲ್ಲದೆ ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ. ಕಲೆಯ ಬಗ್ಗೆ 'ಜಲ ಮತ್ತು ತೈಲವರ್ಣ ವಿನ್ಯಾಸ' ಎಂಬ ಪುಸ್ತಕ ರಚಿಸಿದ್ದಾರೆ.

**ಕಲಾಶಾಲೆ:** ಮಂಡ್ಯ ಜಿಲ್ಲೆಯಲ್ಲಿ ಇತ್ತೀಚಿನವರೆಗೆ ಯಾವುದೇ ಚಿತ್ರಕಲಾ ಶಾಲೆಗಳು ಇರಲಿಲ್ಲ. ೧೯೯೪ರಲ್ಲಿ ಜೈಭಾರತ್ ಚಿತ್ರಕಲಾ ಮಹಾವಿದ್ಯಾಲಯ ಅಳಹರ್‌ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಈಚೆಗೆ ವಿಶಾಲವಾದ ಕಟ್ಟಡಕ್ಕೆ ಕಲಾಶಾಲೆ ಬದಲಿಸಿಕೊಂಡಿತು. ಪ್ರಸ್ತುತ ಕಲಾ ಉಪಾಧ್ಯಾಯರ ತರಬೇತಿ (ಡಿ.ಎಂ.ಸಿ) ಹಾಗೂ ಕಲಾ ಡಿಪ್ಲೊಮಾ ಪದವಿಗಳನ್ನು ನೀಡಲಾಗುತ್ತಿದೆ. ಶಾಲೆಯಲ್ಲಿ ಜಲ–ತೈಲ ವರ್ಣಚಿತ್ರಗಳಲ್ಲದೆ ಲಿನೊ ಹಾಗೂ ವುಡ್‌ಗಳಲ್ಲಿ ಗ್ರಾಫಿಕ್ (ಮುದ್ರಣ) ಪ್ರತಿಗಳನ್ನು ತೆಗೆಯಲು ಅವಕಾಶವಿದೆ. ಹೊರಗಿನ ಕಲಾವಿದರಿಂದ ಪ್ರಾತ್ಯಕ್ಷಿಕೆ, ಉಪನ್ಯಾಸ ಕಲಾಕಾರ್ಯಾಗಾರ ಇತ್ಯಾದಿಗಳನ್ನು ಆಗಾಗ್ಗೆ ಏರ್ಪಡಿಸಲಾಗುತ್ತದೆ. ಇವಲ್ಲದೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಪ್ರಾಂಶುಪಾಲರಲ್ಲದೆ ಇನ್ನೂ ಮೂವರು ಕಲಾ ಶಿಕ್ಷಕರು ಶಾಲೆಯಲ್ಲಿದ್ದಾರೆ. ಕಲಾವಿದ ಉ. ರಾ. ನಾಗೇಶ್, ಕೆಲಕಾಲ ಈ ಶಾಲೆಯ ಪ್ರಾಧ್ಯಾಪಕರಾಗಿದ್ದರು. ಜನರಲ್ಲಿ ಕಲಾಸಕ್ತಿ ಬೆಳೆಸಬೇಕೆಂಬ ದಿಸೆಯಲ್ಲಿ, ಮಂಡ್ಯದಲ್ಲಿ ನಾಗೇಶ್ ಹಾಗೂ ಇನ್ನಿತರ ಮೂವರು ಕಲಾವಿದರು ೨೪ ಗಂಟೆಗಳು

ಸತತವಾಗಿ ಚಿತ್ರ ರಚಿಸುವ ವಿನೂತನ ಕಾರ್ಯವೊಂದನ್ನು ನಡೆಸಿದರು. ರಾಜ್ಯ ಲಲಿತ ಕಲಾ ಅಕಾಡಮಿ ಮಂಡ್ಯದ ಜೈಭಾರತ್ ಕಲಾಶಾಲೆಯ ಸಹಯೋಗದೊಂದಿಗೆ ಮಾರ್ಚಿ ೨೦೦೦ದಲ್ಲಿ ರಾಜ್ಯಮಟ್ಟದ ಕಲಾ ಶಿಬಿರವೊಂದನ್ನು ಏರ್ಪಡಿಸಿತ್ತು. ಮದ್ದೂರಿನ ಶಿವಕುಮಾರ್ ಅವರು ಮೈಸೂರಿನ ಕಲಾನಿಕೇತನ ಕಲಾಶಾಲೆಯಿಂದ ಚಿತ್ರಕಲಾಭ್ಯಾಸ ಮಾಡಿದ್ದು ನಿಸರ್ಗ ಚಿತ್ರಣದಲ್ಲಿ ಸಾಧನೆ ಮಾಡಿದ್ದಾರೆ. ೨೦೦೦ದ ಮಾರ್ಚಿಯಲ್ಲಿ ಇನ್ನಿಬ್ಬರು ಸಹಪಾಠಿಗಳೊಂದಿಗೆ ಶಿವಕುಮಾರ್ ಅವರು ಮೈಸೂರಿನಲ್ಲಿ ಕಲಾಪ್ರದರ್ಶನ ಏರ್ಪಡಿಸಿದ್ದರು.

ಶ್ರೀರಂಗಪಟ್ಟಣ ಹಾಗೂ ಮೇಲುಕೋಟೆಗಳು ರಮಣೀಯ ನಿಸರ್ಗಧಾಮಗಳಾಗಿದ್ದು ರಾಜ್ಯ ಲಲಿತಕಲಾ ಅಕಾಡಮಿಯು ಶ್ರೀರಂಗಪಟ್ಟಣದಲ್ಲಿ ೧೯೮೪ ಹಾಗೂ ೯೪ರಲ್ಲಿ ಅಖಿಲ ಭಾರತ ಮಟ್ಟದ ಚಿತ್ರಕಲಾ ಶಿಬಿರ ಏರ್ಪಡಿಸಿತ್ತು. ಜಿಲ್ಲೆಯ ಕೀಲಾರ ಗ್ರಾಮದಲ್ಲಿ ಮೇ ೨೦೦೨ರಲ್ಲಿ ಎತ್ತಿನಬಂಡಿಗಳ ಮೇಲೆ ಚಿತ್ರ ರಚಿಸುವ ವಿನೂತನ ಕಾರ್ಯಕ್ರಮವನ್ನು ಅಕಾಡಮಿ ಸಂಯೋಜಿಸಿದ್ದು ರಾಜ್ಯದ ಹಲವಾರು ಖ್ಯಾತ ಕಲಾವಿದರು ಪಾಲ್ಗೊಂಡಿದ್ದರು. ಅಂತೆಯೇ ಮೇಲುಕೋಟೆಯ ಪ್ರಕೃತಿ ದೃಶ್ಯಗಳನ್ನು ಪಿ.ಆರ್.ತಿಪ್ಪೇಸ್ವಾಮಿ, ಎಂ.ಎಸ್.ಚಂದ್ರಶೇಖರ್, ಎಸ್.ಆರ್.ಐಯಂಗಾರ್, ಎಸ್.ಆರ್.ಸ್ವಾಮಿ, ಎಸ್.ಎನ್.ಸ್ವಾಮಿ, ಎಂ.ಟಿ.ವಿ.ಆಚಾರ್ಯ, ಯು.ಎಸ್.ವೆಂಕಟರಾಮ್ ಮುಂತಾದ ಅನೇಕ ಹಿರಿಯ ಕಲಾವಿದರು ಚಿತ್ರಿಸಿದ್ದಾರೆ.

## ವಾಸ್ತುಶಿಲ್ಪ ಮತ್ತು ಶಿಲ್ಪ

ಮಂಡ್ಯ ಜಿಲ್ಲೆಯನ್ನು ತಮ್ಮ ಆಡಳಿತ ವಿಭಾಗಕ್ಕೆ ಒಳಪಡಿಸಿಕೊಂಡಿದ್ದ ಅರಸುಮನೆತನಗಳು ಜಿಲೆಯಲ್ಲಿ ಶಿಲ್ಪ, ವಾಸ್ತುಶಿಲ್ಪ ನಿರ್ಮಾಣಗಳಿಗೆ ತಕ್ಕಷ್ಟು ಪ್ರೋತ್ಸಾಹ ನೀಡಿವೆ. ಆಯಾ ಕಾಲದ ಶಾಸನಗಳಲ್ಲಿ ದೇವಾಲಯ, ಕೆರೆ, ಮಂಟಪ ಇತ್ಯಾದಿ ವಾಸ್ತುಗಳಿಗೆ ನೀಡಿದ ದಾನಗಳ ಬಗ್ಗೆ ಉಲ್ಲೇಖಗಳಿದ್ದು ಅವುಗಳಲ್ಲಿ ಹಲವಾರು ವಾಸ್ತುಗಳು ಇಂದಿಗೆ ಉಳಿದಿಲ್ಲ. ಆದರೂ ಶಾಸನಗಳಲ್ಲಿ ಉಕ್ತವಾಗಿರುವ ವಾಸ್ತುಶಿಲ್ಪಗಳ ಪಟ್ಟಿಯೊಂದನ್ನು ಮಾಡಬಹುದಾಗಿದೆ. (ಜಿಲ್ಲೆಯಲ್ಲಿಯ ವಾಸ್ತುಶಿಲ್ಪಗಳ ಬಗ್ಗೆ 'ಪ್ರೇಕ್ಷಣೀಯ ಸ್ಥಳಗಳು' ಅಧ್ಯಾಯದಲ್ಲಿ ವಿವರವಾಗಿದೆ) ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ಅವಶೇಷಗಳಲ್ಲಿ ಶಿಲ್ಪಗಳು ದೊರೆತಂತೆ ಕಂಡುಬರುವುದಿಲ್ಲ. ಶ್ರೀರಂಗಪಟ್ಟಣ, ಬೆಳಕವಾಡಿ, ಮುತ್ತತ್ತಿ, ಪಾಂಡವಪುರ ಇತ್ಯಾದಿ ಕಡೆಗಳಲ್ಲಿ ಉತ್ಖನನಗಳು ನಡೆದಿದ್ದು ಕೆಲವೆಡೆಗಳಲ್ಲಿ, ಬಣ್ಣದಿಂದ ಗೆರೆಗಳನ್ನು ಹಾಕಿರುವ ಮಣ್ಣಿನ ಮಡಕೆಯ ಚೂರುಗಳು ದೊರೆತಿವೆ. ತಿರುಮಕೂಡ್ಲು ನರಸೀಪುರದಲ್ಲಿ ಇವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ.

ದಕ್ಷಿಣ ಭಾರತದ ಆರಂಭದ ರಾಜಮನೆತನಗಳಲ್ಲಿ ಪ್ರಮುಖವಾದ ಗಂಗ, ಚೋಳರ ಆಧಿಪತ್ಯಕ್ಕೆ ಜಿಲ್ಲೆಯೂ ಒಳಗಾಗಿದ್ದು ಆ ಕಾಲದಿಂದಲೇ ಇಲ್ಲಿ ಹಲವಾರು ವಾಸ್ತು, ಶಿಲ್ಪಗಳ, ಶಿಲ್ಪಿಶ್ರೇಣಿಗಳ ಹೆಸರುಗಳೂ ದೊರೆಯುತ್ತದೆ. ಜಿಲ್ಲೆಯಲ್ಲಿ ತೇದಿ ಇರುವ ಪ್ರಥಮ ಶಾಸನವೆಂದರೆ ಮಂಡ್ಯ ತಾಲೂಕಿನ ಹಲ್ಲೇಗೆರೆಯ ಕ್ರಿ.ಶ.೭೧೩ರ ಗಂಗ ಶಿವಮಾರನ ತಾಮ್ರಶಾಸನ (ಮಂ–೩೫). ಇದರಲ್ಲಿ ಕಿಳನಿ ನದಿಗೆ ಸೇತುವೆ ಕಟ್ಟಿದ್ದ ಉಲ್ಲೇಖವಿದೆಯಲ್ಲದೆ ಶಾಸನವನ್ನು ರಚಿಸಿದಾತನನ್ನು 'ವಿಶ್ವಕರ್ಮ ಸಮಾನೇನ ವಿಶ್ವಕರ್ಮಾಚಾರ್ಯೇಣೆದಂ ಶಾಸನಂ ಲಿಖಿತಂ' ಎಂದು ವರ್ಣಿಸುತ್ತದೆ. ಅಂದಿನ ವಿಶ್ವಕರ್ಮಿಗಳು ಕೇವಲ ವಾಸ್ತುವಲ್ಲದೆ ಶಿಲ್ಪ ರಚನೆಯಲ್ಲೂ ತೊಡಗಿದ್ದ ಸೂಚನೆಗಳು ಇಲ್ಲಿ ದೊರೆಯುತ್ತವೆ. ನಾಗಮಂಗಲ ತಾಲೂಕಿನ ದೇವರಹಳ್ಳಿಯ ಗಂಗ ಶ್ರೀಪುರುಷನ ಕಾಲದ ೭೭೬ರ ತಾಮ್ರಶಾಸನದಲ್ಲಿ ಕುಂದಚ್ಚಿ ಎಂಬಾಕೆ ಶ್ರೀಪುರದ ಉತ್ತರಭಾಗದಲ್ಲಿ ಲೋಕತಿಲಕ ಎಂಬ ಜೈನ ಬಸದಿಯನ್ನು ಕಟ್ಟಿಸಿದ್ದು ಅರಸನು ಕೆಲವು

ದಾನಗಳನ್ನು ನೀಡಿದ ಬಗ್ಗೆ ವಿವರಗಳಿವೆ. ಕ್ರಿ.ಶ.೭೯೬ರ ಗಂಜಾಂ ಶಾಸನದಲ್ಲಿ ಗಂಗರ ೨ನೇ ಶಿವಮಾರನ ಮಗ ಎರೆಯಪ್ಪ ಅರ್ಪೊಳೆ ಗ್ರಾಮದ ಪೊನ್ನಾದಿಗೆ ತಿಪ್ಪರೂರು ಗ್ರಾಮವನ್ನು ಬ್ರಹ್ಮಾದೇಯವಾಗಿ ನೀಡಿದ ಉಲ್ಲೇಖವಿದ್ದು ಅಲ್ಲಿ ಚಿಕ್ಕ ಪ್ರಮಾಣದಲ್ಲಿಯಾದರೂ ದೇವಾಲಯವೊಂದು ಇದ್ದಿರಬಹುದಾದ ಸಂಭವವಿದೆ.

ದೇವಾಲಯ ರಚನೆಯೊಂದರ ಇನ್ನೊಂದು ಉಲ್ಲೇಖ ದೊರೆಯುವುದು ಮದ್ದೂರು ತಾಲೂಕಿನ ತೈಲೂರಿನ ನೊಳಂಬ ಮಹೇಂದ್ರನ ಶಾಸನದಲ್ಲಿ. ಗಾವುಂಡಸ್ವಾಮಿ ಎಂಬಾತ ನಿರ್ಮಿಸಿದ ಶಿವಾಲಯಕ್ಕೆ ಎರಡನೇ ರಾಚಮಲ್ಲ ದಾನ ನೀಡಿದ (ಮ-೫೭)ಎಂಬ ಮಾಹಿತಿಯನ್ನು ಇದು ದಾಖಲಿಸಿದೆ. ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯಲ್ಲಿ ಇಂದು 'ಬಸ್ತಿಗದ್ದೆ' ಎಂದು ಕರೆಯುವ ಪ್ರದೇಶದಲ್ಲಿರುವ ಒಂಬತ್ತನೇ ಶತಮಾನದ ಗಂಗ ಎರೆಯಪ್ಪರಸನ ಕಾಲದ ಶಾಸನದಲ್ಲಿ ಚಾಗಿ ಪೆರ್ಮಾನಡಿ ಎಂಬಾತ 'ಕಲ್ಲಬಸತಿ' ಯೊಂದನ್ನು ಮಾಡಿಸಿದ ಉಲ್ಲೇಖವಿದೆ. (ಪಾಂ.ಪು.೧೬) ಇದೇ ಅರಸ ಹೊನ್ನೇನಹಳ್ಳಿಯಲ್ಲಿ 'ಬಾಳ್ಗಳ್ಚು' ಕೊಟ್ಟ ಉಲ್ಲೇಖ ಅಲ್ಲಿಯ ಶಿವಾಲಯದಲ್ಲಿದ್ದು (ಕೃ.ಪೆ.೨೦) ಅದು ೯ನೇಯ ಶತಮಾನದ ರಚನೆಯೆಂದು ಹೇಳಬಹುದು. ಗೌತಮ ಕ್ಷೇತ್ರದ ತೆಲೆನೆರೆಯೆಂಬಲ್ಲಿ ಕಾವೇರಿಗೆ ಕಟ್ಟು ಕಟ್ಟುವುದಕ್ಕೆ (ಅಣೆಕಟ್ಟು) ಕ್ರಿ.ಶ.೯೦೪ರಲ್ಲಿ ಗಂಗ ೨ನೇ ರಾಚಮಲ್ಲ ದಾನ ನೀಡಿದ್ದ (ಶ್ರೀ.ಪ.೮೫). ಕೂಳಗೆರೆಯ ೯೧೬ರ ಗಂಗ ಶಾಸನವೊಂದು ಕನಕಗಿರಿಯಲ್ಲಿಯ ಬಸತಿ (ಇಂದಿನ ಪಾರ್ಶ್ವನಾಥ ಬಸದಿ) ಯೊಂದನ್ನು ಕುರಿತು ಹೇಳಿದೆ (ಮ.೧೦೦). ರಾಷ್ಟ್ರಕೂಟ ಮೂರನೇ ಕೃಷ್ಣ ನೇರವಾಗಿ ಭಾಗವಹಿಸಿ, ಚೋಳರೊಂದಿಗೆ, ಕಾದಾಡಿದ ವಿವರಗಳಿರುವ ಕ್ರಿ.ಶ.೯೫೦ರ ಪ್ರಸಿದ್ಧವಾದ ಆತಕೂರಿನ ಶಾಸನದಲ್ಲಿ ಅಲ್ಲಿಯ ಚಲ್ಲೇಶ್ವರ ದೇವಾಲಯದ ಬಗ್ಗೆ ಉಲ್ಲೇಖವಿದ್ದು ಇಂದು ಜೀರ್ಣೋದ್ಧಾರಗೊಂಡಿರುವ ದೇವಾಲಯ ಇದೇ ಆಗಿರಬಹುದು. ಈಗ ಕನ್ನಂಬಾಡಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಕಣ್ಣೇಶ್ವರ ದೇವಾಲಯದಲ್ಲಿ ರಾಷ್ಟ್ರಕೂಟರ ಕಾಲದ (ಎಂದರೆ ೧೦ನೇ ಶತಮಾನದ), ಶಾಸನವೊಂದು ಇದೆಯೆಂಬ ಆಧಾರದ ಮೇಲೆ ಈ ದೇವಾಲಯವೂ ಮೂಲತ: ರಾಷ್ಟ್ರಕೂಟರದೆಂಬ (ಅವರ ಮಾಂಡಲಿಕರಾಗಿದ್ದ ಗಂಗರದೆಂಬ) ಅಭಿಪ್ರಾಯವೂ ಇದೆ. ಈ ಹಿನ್ನೀರಿನಲ್ಲಿ ಮುಳುಗಡೆಯಾದ ವಾಸ್ತುಗಳಿಂದ ಸಂಗ್ರಹಿಸಿದ ಕೆಲವು ಶಿಲ್ಪಗಳನ್ನು ಅಣೆಕಟ್ಟೆಯ ಬಳಿಯ 'ನಾರ್ಥ್ ಬ್ಯಾಂಕ್' ನಲ್ಲಿ ಇರಿಸಿದ್ದು ಅವುಗಳಲ್ಲಿ ಕೆಲವು ಶಿಲ್ಪಗಳು ಹತ್ತನೆಯ ಶತಮಾನದ ಲಕ್ಷಣಗಳಿಂದ ಕೂಡಿವೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕಾಡುಕೊತ್ತನಹಳ್ಳಿಯಲ್ಲಿ ರಾಷ್ಟ್ರಕೂಟ ಕರ್ಕನನ್ನು ಹೆಸರಿಸುವ ೯೮೬ರ ಶಾಸನವೊಂದು ಅಲ್ಲಿಯ ಈಶ್ವರ ದೇವಾಲಯದ ಬಳಿಯಿದೆ (ಮ.೧೧೬). ಗಂಗ ರಾಜನೊಬ್ಬ ನೆಲಮನೆಯ ರಾಮದೇವಾಲಯಕ್ಕೆ ಅಕ್ಕಿಯನ್ನು ದಾನ ಮಾಡಿದ ಬಗ್ಗೆ ೯-೧೦ ನೇ ಶತಮಾನದ ಶಾಸನವೊಂದು ತಿಳಿಸುತ್ತದೆ. (ಶ್ರೀ.ಪ.೯೪). ಗುತ್ತಲುವಿನ ಅರ್ಕೇಶ್ವರ ದೇವಾಲಯದಲ್ಲಿಯ ೧೦-೧೧ನೇ ಶತಮಾನದ ದಾನದ ಉಲ್ಲೇಖವಿದ್ದು ಈ ದೇವಾಲಯ ಅದಕ್ಕೂ ಪ್ರಾಚೀನವೆಂದು ಹೇಳಬಹುದು (ಮಂ.೬೨).

ಜಿಲ್ಲೆಯು ಕೆಲಕಾಲ ಚೋಳರ ಆಶ್ರಯದಲ್ಲಿದ್ದು ಒಂದನೇ ರಾಜೇಂದ್ರನು ಹಲವಾರು ದೇವಾಲಯಗಳಿಗೆ ದಾನ ನೀಡಿದ ಉಲ್ಲೇಖಗಳಿದ್ದು ಈ ದೇವಾಲಯಗಳು ಅದಕ್ಕೂ ಮುಂಚಿನ ರಚನೆಯಾಗಿವೆ. ಬಲಮುರಿಯ ಆಗಸ್ತ್ಯೇಶ್ವರ ದೇವಾಲಯಕ್ಕೆ ೧೦೧೨ರಲ್ಲಿ (ಶ್ರೀ.ಪ.೭೮), ಹಳೇಬೂದನೂರಿನ ರಾಜೇಂದ್ರ ಚೋಳ ದೇವಾಲಯಕ್ಕೆ ೧೦೨೪ರಲ್ಲಿ (ಮಂ೫೩) ಕೆಲವು ದಾನಗಳನ್ನು ನೀಡಲಾಯಿತು. ಮಾರೇಹಳ್ಳಿಯ ನರಸಿಂಹಸ್ವಾಮಿ ದೇವಾಲಯ ಇಂದಿಗೂ ಪ್ರಸಿದ್ಧವಿದ್ದು ೧೦೧೪ರಲ್ಲಿ ಊರನ್ನು ರಾಜಾಶ್ರಯ ವಿಣ್ಣಗರವೆಂದು ಕರೆದಿದ್ದು ಕೆಲವು ದಾನಗಳನ್ನು ನೀಡಲಾಗಿದೆ. (ಮ.ವ.೬೦) ಇದೇ ಅವಧಿಯಲ್ಲಿ ಇಲ್ಲಿ ಇನ್ನೂ ಹಲವಾರು ಶಾಸನಗಳಿದ್ದು ಮುಂದೆ ೧೭ನೇ ಶತದವರೆವಿಗೂ ವಿಸ್ತರಣಾ ಕಾರ್ಯ

ನಡೆದಿದ್ದು ಸುಮಾರು ೨೬ ಶಾಸನಗಳಲ್ಲಿ ವಿವಿಧ ದಾನ ಕಾರ್ಯಗಳನ್ನು ಉಲ್ಲೇಖಿಸಲಾಗಿದೆ. ರಾಜರಾಜಚೋಳ ಕ್ರಿ.ಶ.೯೮೫ರಲ್ಲಿ ಪಟ್ಟವೇರಿದ್ದು ಅಂದಿನ ದಂಡಯಾತ್ರೆಯಲ್ಲಿ ಈ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು ಪ್ರಸ್ತುತ ಮಾರೇಹಳ್ಳಿಯ ದೇವಾಲಯವೂ ಅಂದಿನ ರಚನೆಯೆಂದು ಅಭಿಪ್ರಾಯವಿದೆ. (ಸಕ್ಕರೆಯ ಸೀಮೆ-೪೮) ೧ನೇ ಕುಲೋತ್ತುಂಗ ಚೋಳ ಕ್ರಿ.ಶ. ೧೧೦೨ರಲ್ಲಿ ಬೊಮ್ಮೂರು ಅಗ್ರಹಾರದಲ್ಲಿ ಅದಕ್ಕೂ ಇನ್ನೂರು ವರ್ಷ ಹಿಂದೆ ಕಟ್ಟಿಸಿದ ಕೆರೆಯೊಂದನ್ನು ದುರಸ್ತಿ ಮಾಡಿಸಿದುದಲ್ಲದೆ (ಕ್ರಿ.ಪ.೬೭) ಈತನೇ ಕನ್ನಂಬಾಡಿಯಲ್ಲಿ ೧೧೧೪ರಲ್ಲಿ ಎರಡು ದೇವಾಲಯಗಳನ್ನು (ದೇಗುಲವೆರಡುಮಂ) ಮಾಡಿಸಿದ. (ಪಾಂ ಪು – ೪೪), ಎಂಬ ಅಭಿಪ್ರಾಯವಿದೆ.

ತೇದಿಯುಳ್ಳ ಹೊಯ್ಸಳ ಶಾಸನಗಳು ಹನ್ನೊಂದನೆಯ ಶತಮಾನದ ಮಧ್ಯಭಾಗದಿಂದ ಕಾಣಿಸಿಕೊಂಡಿದ್ದು ಹೊಯ್ಸಳ ವಿನಯಾದಿತ್ಯ ೧೦೪೮ರಲ್ಲಿ ಈಗಾಗಲೇ ಅಲ್ಲಿದ್ದ ತೊಣಚಿಯ ಅಂಕಕಾರ ದೇವರಿಗೆ ದಾನಗಳನ್ನು ನೀಡಿದ (ಕೃ.ಪೆ.೫೦). ವಿಷ್ಣುವರ್ಧನನ್ನು ಉಲ್ಲೇಖಿಸುವ ಹಲವಾರು ಶಾಸನಗಳಿದ್ದು ಕಿಕ್ಕೇರಿಯ ೧೧೯೫ರ ಶಾಸನ ಆತ ಅಲ್ಲಿಯ ಮೂಲಸ್ಥಾನ ಬ್ರಹ್ಮೇಶ್ವರ ದೇವರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. (ಕೃ.ಪೆ.೩೭) ಹೊಸಹೊಳಲುವಿನ (ಪಾರ್ಶ್ವನಾಥ) ತ್ರಿಕೂಟ ಜಿನಾಲಯ ೧೧೧೮ರಲ್ಲಿ ಪೊಯ್ಸಳದೇವನಿಂದ ರಚಿತವಾಯಿತು. ಮದ್ದೂರಿನ ಕೊಪ್ಪದ ಜೈನ ಬಸತಿಗೆ ಹೊಯ್ಸಳದೇವ ದಾನ ನೀಡಿದ. ಲಾಲನಕೆರೆಯ ಮೂಲಸ್ಥಾನ ಮಲ್ಲಿಕಾರ್ಜುನ ದೇವಾಲಯವನ್ನು ೧೧೩೮ರಲ್ಲಿ ಆತ ದುರಸ್ಥಿ ಮಾಡಿಸಿದ (ನಾ.ಮಂ.೬೧-೬೨). ಸುಕದರೆಯಲ್ಲಿ ಈತನ ಕಾಲದಲ್ಲಿ (೧೨ನೇ ಶತಮಾನ) ಚಿಕ್ಕಸೆಟ್ಟಿ ಎಂಬಾತ ಬಸದಿಯೊಂದನ್ನು ನಿರ್ಮಿಸಿದ. (ನಾ.ಮಂ.೧೪) ಹಿರಿಕಳಲೆಯ ಸ್ವಯಂಭೂ ಅಂಕಕಾರ ದೇವರಿಗೆ ವಿಷ್ಣುವರ್ಧನ ೧೨ನೇ ಶತಮಾನದಲ್ಲಿ ದಾನ ನೀಡಿದ. (ಕೃ.ಪೆ.೭೩-೭೬) 'ಬಸ್ತಿ' ಎಂಬ ಊರಿನಲ್ಲಿ ವಿಷ್ಣುವರ್ಧನನ ಮಂತ್ರಿ ಪುಣಿಸಮಯ್ಯ ಹೊಯ್ಸಳ ಜಿನಾಲಯ (ಇಂದಿನ ಜಿನ್ನೆ ದೇವರು) ವನ್ನು ೧೨ನೇ ಶತಮಾನದಲ್ಲಿ ನಿರ್ಮಿಸಿದ. (ಕೃ.ಪೆ.೧೦೬-೭) ಶಾಂತಲೆಯ ನಂತರ ವಿಷ್ಣುವರ್ಧನನ ಪಟ್ಟದ ರಾಣಿಯಾದ ಬಮ್ಮಲಾದೇವಿ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ೧೧೩೪ರಲ್ಲಿ ಜೀರ್ಣೋದ್ಧಾರ ಮಾಡಿಸಿದಳು. (ನಾ.ಮಂ.೭) ತೊಣಚಿಯ (ಇಂದಿನ) ಕರಿದೇವರಿಗೆ ವಿಷ್ಣುವರ್ಧನ ೧೨ನೇ ಶತಮಾನದಲ್ಲಿ ದಾನ ನೀಡಿದ್ದನೆಂದು ಬಳಿಯ ಭದ್ರನಕೊಪ್ಪಲ ಶಾಸನ ತಿಳಿಸುತ್ತದೆ (ಕೃ.ಪೆ.೫೬). ಇದೇ ವೇಳೆಯಲ್ಲಿ ಅಬಲವಾಡಿಯಲ್ಲಿ ಹೆಗ್ಗಡೆ, ಮಲ್ಲಿನಾಥ ಜೈನ ಬಸದಿಯನ್ನು ಕಟ್ಟಿಸಿದ (ಮ-೨೯) ಹೊಯ್ಸಳ ನರಸಿಂಹನ ಕಾಲದಲ್ಲಿ ೧೨ನೇ ಶತಮಾನದ ಮೊದಲಲ್ಲಿ ಕೆಲವು ದೇವಾಲಯಗಳ ರಚನೆಗಳಾದವು. ಗೋವಿಂದನಹಳ್ಳಿಯ ೧೧೧೭ರ ಹೊಯ್ಸಳೇಶ್ವರ ದೇವಾಲಯ; ಸುಕದರೆ ಬಳಿ ಪುರದಕಟ್ಟೆ (ಬೇಚಿರಾಕ್) ನಲ್ಲಿ ಚಿಕ್ಕಸೆಟ್ಟಿಯಿಂದ ೧೧೪೯ರಲ್ಲಿ ಬಸತಿ; ಭೋಗಾದಿಯಲ್ಲಿ ೧೧೪೪ರಲ್ಲಿ ಮಾದಿರಾಜ ಬಸತಿ; ಯಲ್ಲಾದ ಹಳ್ಳಿಯಲ್ಲಿ ೧೧೪೫ರಲ್ಲಿ ದೇವರಾಜನಿಂದ ತ್ರಿಕೂಟ ಬಸತಿಗಳನ್ನು ಉದಾಹರಿಸಬಹುದು. ಅಲ್ಲದೆ ಈ ಮೊದಲೇ ರಚಿತವಾಗಿದ್ದ ದೊಡ್ಡ ಅರಸಿನಕೆರೆಯ 'ನಿಸದಿ' (?) ವಲತ್ಸಂದ್ರದ ಚೊಕ್ಕ ಜಿನಾಲಯಗಳಲ್ಲದೆ ಕಂಬದಹಳ್ಳಿ, ಮಾರೇಹಳ್ಳಿಯ ಬಸ್ತಿ ಮತ್ತು ದೇವಾಲಯಗಳಿಗೆ ದಾನ ನೀಡಲಾಯಿತು. ಹೊಯ್ಸಳ ಎರಡನೇ ವೀರಬಲ್ಲಾಳನ ಆಳ್ವಿಕೆಯಲ್ಲಿ ೧೧೭೭ರಲ್ಲಿ ದೊಡ್ಡ ಜಟಕದ ಹೆಮ್ಮೇಶ್ವರ; ೧೧೯೯ರಲ್ಲಿ ಬೆಳ್ಳೂರಿನ ಮಂಡಲಸ್ವಾಮಿ (ಈಗಿನ ಗೌರವೇಶ್ವರ) ಅಂತರವಳ್ಳಿಯಲ್ಲಿ ಚಂದ್ರಮೌಳೇಶ್ವರ (ಈಗ ಸೋಮೇಶ್ವರ) ಚನ್ನಪ್ಪನದೊಡ್ಡಿಯಲ್ಲಿ ಉತ್ತಮ ಚೋಳನಿಂದ ಒಂದು ದೇವಾಲಯ (ಈಗಿನ ಹೊಂಬಾಲಮ್ಮ) ರಚಿತವಾಯಿತಲ್ಲದೆ ಆ ಮೊದಲೇ ರಚಿತವಾಗಿದ್ದ ಲಾಲನಕೆರೆಯ ಮಧುಕೇಶ್ವರ ದೇವಾಲಯಕ್ಕೆ ೧೧೬೫ರಲ್ಲಿ; ಹಳೇಬೀಡಿನ (ಪಾಂ.ಪು ತಾಲೂಕು) ಕುಂಭೇಶ್ವರ ದೇವಾಲಯಗಳಿಗೆ ದಾನ ನೀಡಲಾಯಿತು. ಅಳೀಸಂದ್ರದ ಬಳಿಯ ಚಾಕೇನಹಳ್ಳಿಯ ಬಸತಿ ೧೧ನೇ ಶತಮಾನದ ಆರಂಭದಲ್ಲಿ ರಚಿತವಾದಂತಿದ್ದು ೧೦೪೮, ೧೧೦೩, ೧೧೮೨ರಲ್ಲಿ ಅದರ ಜೀರ್ಣೋದ್ಧಾರ ಮಾಡಲಾಯಿತೆಂದು ತಿಳಿಸುವ

ಶಾಸನವೊಂದು (ನಾ.ಮಂ.೭೨) ೧೧೮೩ರಲ್ಲಿ ಮತ್ತೆ ದಾನ ನೀಡಿದ ಬಗ್ಗೆ ವಿವರವನ್ನು ನೀಡುತ್ತದೆ. ಸುಮಾರು ೧೩೦ ವರ್ಷಕ್ಕೂ ಹಿಂದಿನ ಕಾರ್ಯವನ್ನು ಐತಿಹಾಸಿಕವಾಗಿ ನೆನಪಿರಿಸಿಕೊಂಡು ಉಲ್ಲೇಖಿಸುವ ಈ ಶಾಸನ ಅತ್ಯಂತ ಕುತೂಹಲಕಾರಿಯಾಗಿದೆ.

ಇದಲ್ಲದೆ ೧೨೩೩ರಲ್ಲಿ ಎರಡನೇ ನರಸಿಂಹ ಬೆಳ್ಳೂರಿನಲ್ಲಿ ಸಿಂದೇಶ್ವರ, ಲಕ್ಷ್ಮೀನಾರಾಯಣ ಮತ್ತು ಗೋಪಾಲ ದೇವಾಲಯಗಳನ್ನು ನಿರ್ಮಿಸಿದ. ವೀರ ಸೋಮೇಶ್ವರ ೧೨೪೪ರಲ್ಲಿ ಹೊನ್ನೇನಹಳ್ಳಿಯಲ್ಲಿ ಸೂರ್ಯವಿಗ್ರಹ ಪ್ರತಿಷ್ಠಾಪಿಸಿದ. ಹೊಸಕೋಟೆ (ಪಾಂ.ಪು.ತಾ) ಯ ನಿಷ್ಕಾಮೇಶ್ವರ ದೇವರಿಗೆ ೧೨೯೧ರಲ್ಲಿ ವೀರನರಸಿಂಹ ದಾನ ನೀಡಿದ. ಕಾಚೇನಹಳ್ಳಿಯ ಮಲ್ಲೇಶ್ವರ ದೇವಾಲಯಕ್ಕೆ ೧೨-೧೩ನೇ ಶತಮಾನದಲ್ಲಿ ದಾನ ನೀಡಲಾಯಿತು. ವರಾಹನಾಥ ಕಲ್ಲಹಳ್ಳಿಯ ದೇವಾಲಯದ ನಿರ್ಮಾಣದ ಕಾಲ ತಿಳಿಯದಿದ್ದರೂ ೩ನೇ ಬಲ್ಲಾಳ ೧೩೩೪ರಲ್ಲಿ ಊರನ್ನು ಅಗ್ರಹಾರ ಮಾಡಿ ದಾನ ನೀಡಿದ ಉಲ್ಲೇಖವಿದೆ. ಬಲಮುರಿಯ ದೇವಾಲಯವೊಂದಕ್ಕೆ ಒಂದನೇ ರಾಜೇಂದ್ರಚೋಳ ದಾನ ನೀಡಿದ ಉಲ್ಲೇಖವಿದ್ದರೂ ಅಲ್ಲಿಯ ಅಗಸ್ತ್ಯೇಶ್ವರ ದೇವಾಲಯ ೧೪೦೩ರ ರಚನೆ. ಜಿಲ್ಲೆಯಲ್ಲಿ ೧೫ನೇ ಶತಮಾನದಲ್ಲಿಯೂ ಜೈನಧರ್ಮ ಸುಸ್ಥಿತಿಯಲ್ಲಿದ್ದು ಬಸ್ತಿಪುರದ (ಶ್ರೀ.ಪ.ತಾ) ಬಸ್ತಿಯೊಂದು ೧೪೨೨ರಲ್ಲಿ ರಚಿತವಾಯಿತು.

ವಿಜಯನಗರ ಕಾಲದಲ್ಲಿ ಹೊಸದಾಗಿ ದೇವಾಲಯಗಳ ನಿರ್ಮಾಣಕ್ಕಿಂತ ಹಳೆಯದರ ಜೀರ್ಣೋದ್ಧಾರ ಇಲ್ಲವೆ ವಿಸ್ತರಿಸುವಿಕೆಯನ್ನು ಕಾಣಬಹುದು. ಹರವು, ಬಿಂಡಿಗನವಿಲೆ, ನಾಗಮಂಗಲ, ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ ಮುಂತಾದ ಕಡೆಗಳಲ್ಲಿ ವಿಜಯನಗರ ವಾಸ್ತುಗಳನ್ನು ಗುರುತಿಸಬಹುದು. ಹುಸ್ಕೂರಿನಲ್ಲಿ ವೀರ ಪ್ರತಾಪದೇವರಾಯ ೧೪೪೦ರಲ್ಲಿ 'ಬಸವರಾಜ ದೇವರನು ಮೂರ್ತಿಗೊಳಿಸಿ' ದ ಬಗ್ಗೆ ಉಲ್ಲೇಖವಿದೆ (ಮ.ವ.೩೨).

ಬಿಡಿ ಶಿಲ್ಪಗಳಲ್ಲಿ ವೀರ ಹಾಗೂ ಮಾಸ್ತಿ ಕಲ್ಲುಗಳಿಗೆ ಪ್ರತ್ಯೇಕ ಸ್ಥಾನವಿದೆ. ಇವುಗಳಲ್ಲಿ ಕೇವಲ ಲಿಪಿಯಿರುವ ವೀರಗಲ್ಲುಗಳ ಪಾಠಗಳನ್ನು ಶಾಸನ ಸಂಪುಟಗಳಲ್ಲಿ ಪ್ರಕಟಿಸಿವೆ. ಇಲ್ಲಿ ಲಿಪಿಯೊಂದಿಗೆ ಶಿಲ್ಪಗಳೂ ಇರಬಹುದು. ಆದರೆ ಕೇವಲ ಶಿಲ್ಪಗಳಷ್ಟೇ ಇರುವ ವೀರಗಲ್ಲುಗಳೂ ಅಸಂಖ್ಯಾತವಾಗಿದ್ದು ಇವುಗಳನ್ನು ಇನ್ನೂ ಗುರುತಿಸಬೇಕಾಗಿದೆ. ಮಂಡ್ಯ ಜಿಲ್ಲೆಯಲ್ಲಿಯ ಲಿಪಿ ಇರುವ ವೀರಗಲ್ಲುಗಳನ್ನು ಉಲ್ಲೇಖಿಸಬಹುದು. ನೊಳಂಬ ರಾಜ ೮ನೇ ಶತಮಾನದಲ್ಲಿ ಆಳುತ್ತಿದ್ದಾಗ ವಡಿ ಚೋಳನ ನೆನಪಿಗಾಗಿ ಹಾಕಿಸಿದ ವೀರಗಲ್ಲು ಹೆಬ್ಬಾಳುವಿನಲ್ಲಿದ್ದು ಇದನ್ನು ಜಿಲ್ಲೆಯ ಪ್ರಾಚೀನ ವೀರಗಲ್ಲೆಂದು ಹೇಳಲಾಗುತ್ತದೆ. (ಮ.೩೬) ಕಾರಬಯಲುವಿನಲ್ಲಿ ರಾಷ್ಟ್ರಕೂಟ ಗಂಗರ ಯುದ್ಧದ ವೇಳೆಯ ೯ನೇ ಶತಮಾನದ ವೀರಗಲ್ಲು, ಚಿನಕುರುಳಿಯ ೯೦೬ರ ಸತ್ಯವಾಕ್ಯ ಪೆರ್ಮಾನಡಿಯ ಕಾಲದ ತುರುಗೋಳ್ ಕಲ್ಲು ಪ್ರಾಚೀನವಾದುವು. ೯೫೦ರ ಆತಕೂರಿನ ಪ್ರಖ್ಯಾತ ವೀರಗಲ್ಲು ಕಾಳಿ ಎಂಬ ನಾಯಿಗೆ ಸಂಬಂಧಿಸಿದ್ದರಾದರೂ ಅದರ ಪಾಠದಲ್ಲಿ ರಾಷ್ಟ್ರಕೂಟ ಗಂಗರ ಸಂಬಂಧವಲ್ಲದೆ ಚೋಳರ ಮೇಲಿನ ವಿಜಯ, ಮಣಲೇರ ಎಂಬಾತ ತೋರಿದ ಶೌರ್ಯ; ಮೂರನೇ ಕೃಷ್ಣನಿಂದಲೇ ನೇರವಾಗಿ ಪಡೆದ 'ಕಾಳಿ' ನಾಯಿಯ ಸಾಹಸಗಳು ಹಾಗೂ ಅಂತಿಮವಾಗಿ ಹಂದಿ ಬೇಟೆಯಲ್ಲಿ ಮಡಿದ ಅದರ ನೆನಪಿನ ವಿವರಗಳಿದ್ದು ಕಲ್ಲಿನ ಮೇಲ್ಭಾಗದಲ್ಲಿ ಹಂದಿಯೊಂದಿಗೆ ಹೋರಾಡುತ್ತಿರುವ ನಾಯಿಯ ಶಿಲ್ಪವಿದ್ದು ಹತ್ತನೆಯ ಶತಮಾನದ ಉದಾಹರಣೆಯಾಗಿದೆ. (ಪ್ರಸ್ತುತ ಈ ವೀರಗಲ್ಲು ಬೆಂಗಳೂರು ಮ್ಯೂಸಿಯಂನಲ್ಲಿದೆ). ಈ ಶಿಲ್ಪವನ್ನೇ ಹೋಲುವ ವೀರಗಲ್ಲೊಂದು ಕೆಸ್ತೂರು ಸಮೀಪದ ಅಡಗನಹಳ್ಳಿಯಲ್ಲಿಯೂ ಇದೆ. ಉಳಿದಂತೆ ಧನಗೂರಿನಲ್ಲಿ ೯೬೦ರ ಭೂತುಗನ ಕಾಲದ ವೀರಗಲ್ಲು, ನಾಗಮಂಗಲದ ೯೬೩ರ ೨ನೇ ಮಾರಸಿಂಹನ ಕಾಲದ ತುರುಗೋಳ್ ಕಲ್ಲು, ಬಿಂಡಿಗನವಿಲೆಯ ೯೭೫ರ ನಿಸದಿ ಕಲ್ಲು, ಕೊತ್ತತ್ತಿಯ ೯೭೭ರ ಗಂಗ-ಪಲ್ಲವ

(ನೊಳಂಬ) ರ ಹಾಗೂ ೯೭೯ರ ಕಂಬದಹಳ್ಳಿಯ ಪೆಣ್ಬುಯಲ್‌ಗೆ ಸಂಬಂಧಿಸಿದ ವೀರಗಲ್ಲು, ಆಲೇನಹಳ್ಳಿಯ ಗಂಗ ನೀತಿವಾಕ್ಯವನ್ನು ಹೆಸರಿಸುವ ಬಮ್ಮಯನ ಮತ್ತು ಇಂಗುಲಗುಪ್ಪೆಯ ವೀರಗಲ್ಲು ಇತ್ಯಾದಿಗಳು ೯–೧೦ನೇ ಶತಮಾನದ ಕಾಲದವು. ಬೇವಿನಕುಪ್ಪೆಯ ೯ನೇ ಶತಮಾನದ ವೀರಗಲ್ಲು 'ಪೃಥವೀಗಂಗನ ಸೂಳೆ ಬೀರಕ್ಕನ ಮಗ ಎರೆಕಳಿಂಗ ತಲೆಗಳಿಯಿಸಿ ಸತ್ತ' ನೆಂಬ ಕುತೂಹಲಕರ ಸಂಗತಿಯನ್ನು ತಿಳಿಸುತ್ತದೆ. ಕ್ಯಾತಗಟ್ಟ ಮತ್ತು ಒಳಗೆರೆಹಳ್ಳಿ (೮–೯ನೇ ಶತಮಾನ) ಚಿನಕುರುಳಿ (ಚೋಳರಾಜರಾಜ ೧೦೧೧), ಬಸ್ತಿಹಳ್ಳಿ, ಮಾವಿನಕೆರೆ, ಮಡಿಕೆ ಹೊಸೂರುಗಳ ವೀರಗಲ್ಲುಗಳು, ಕೋಡಿಹಳ್ಳಿಯ ನಿಸದಿ ಕಲ್ಲು ೧೦ನೇ ಶತಮಾನದವು. ಸುಂಕ ತೊಂಡನೂರು, ಕಲ್ಕುಣಿ, ಹೊನ್ನೇನಹಳ್ಳಿ, ಮಂಚಿಬೀಡು, ಹಳೇಬೂದನೂರಿನ ವೀರಗಲ್ಲುಗಳು ೧೦–೧೧ನೇ ಶತಮಾನದವು. ಹೋರಾಡಿ ವೀರ ಪದವಿಗೇರುವಂತೆಯೇ ಇನ್ನಿತರ ಕಾರಣಗಳಿಗಾಗಿ ಆತ್ಮಾರ್ಪಣೆ ಮಾಡಿಕೊಂಡ ಅನೇಕ ಬಗೆಯ ಸ್ಮಾರಕಗಳಿವೆ. ಅವುಗಳಲ್ಲಿ ಅಗ್ರಹಾರ ಬಾಚಹಳ್ಳಿಯಲ್ಲಿ 'ಗರುಡ' ರಿಗಾಗಿ ಹಾಕಿಸಿದ ಕಂಬಗಳು ಅತ್ಯಪೂರ್ವವಾದವು. ಅರಸನೊಬ್ಬ ಸತ್ತಾಗ ತಾವೂ ವಿಶಿಷ್ಟ ರೀತಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವ ಪದ್ಧತಿಯಿದ್ದು ಇಂತಹ ವೀರರಿಗೆ ಲೆಂಕವಾಳಿ, ವೇಳೆವಾಳಿ, ಗರುಡರು ಎಂದು ಕರೆಯಲಾಗಿದೆ. ಪ್ರಸ್ತುತ ಅಗ್ರಹಾರ ಬಾಚಹಳ್ಳಿಯಲ್ಲಿ ಹೊಯ್ಸಳರ ವಿವಿಧ ಅರಸರುಗಳಿಗೆ ಒಂದೇ ಪೀಳಿಗೆಯ ಏಳು ತಲೆಮಾರುಗಳು ಸುಮಾರು ೨೦೦ ವರ್ಷಗಳಷ್ಟು ಕಾಲ 'ಗರುಡ'ರಾಗಿದ್ದು (೧೧೦೦ ರಿಂದ ೧೨೯೧ರವರೆಗೆ) ಇವರೊಂದಿಗೆ ಲಂಕ್ಕೂ ಹೆಚ್ಚು ಲೆಂಕ ಲೆಂಕತಿಯರು ಆತ್ಮಾರ್ಪಣೆ ಮಾಡಿಕೊಂಡರು ಎಂಬುದನ್ನು ಉಲ್ಲೇಖಿಸುವ ಶಿಲಾಸ್ಥಂಭಗಳಿವೆ. ಸುಮಾರು ೧೫ ಅಡಿ ಎತ್ತರವಿರುವ ಮೂರು ಬೇರೆ ಬೇರೆ ಕಂಬಗಳಲ್ಲಿ ಮೇಲೆ ಐರಾವತ ಹಾಗೂ ಅದನ್ನು ಏರಿರುವ ವೀರರ ಶಿಲ್ಪಗಳನ್ನು ಬಿಡಿಸಲಾಗಿದೆ. ಕಂಬಗಳ ಔನ್ನತ್ಯ ಹಾಗೂ ಶಿಲ್ಪಗಳು, ಹಾಗೂ ಶಾಸನದ ಪಾಠಗಳಿಂದಾಗಿ ಈ ವೀರಗಲ್ಲುಗಳು ಹೆಚ್ಚು ಮಹತ್ವಪೂರ್ಣವಾಗಿವೆ. ಇದಲ್ಲದೆ ೧೧೭೯ರ ಮಹಾಸಾಮಂತ ಬಬ್ಬೆಯ ನಾಯ್ಕನಿಗೆ ಹಾಕಿಸಿರುವ ಹಾಗೂ ಅದರ ಬಳಿಯ ಅದೇ ಕಾಲದ ಇನ್ನೂ ಹಲವಾರು ವೀರಗಲ್ಲುಗಳೂ ಸಹ ಶಿಲ್ಪಕಲೆಯ ದೃಷ್ಟಿಯಿಂದ ಸುಂದರವಾದ ಕೆತ್ತನೆಗಳು.

ಮುಂದಿನ ಶತಮಾನಗಳಲ್ಲಿ ವಿವಿಧ ಕಾರಣಗಳಿಂದಾಗಿ ವೀರತನಕ್ಕೆ ಏರಿದ ಹಲವಾರು ಪ್ರಸಂಗಗಳನ್ನು ಕಾಣಬಹುದು. ತುಂಗೋಳ್‌ನಲ್ಲಿ ಮಡಿದ ವೀರರ ಸ್ಮಾರಕಗಳನ್ನು ಮೆಳ್ಳಹಳ್ಳಿ (೧೧೧೪), ಹೊನ್ನೇನಹಳ್ಳಿ (೧೧೮೦) ಕಡ್ಲವಾಗಿಲು (೧೧೯೨) ಮಡುವಿನ ಕೋಡಿ (೧೨೦೦) ಗಳಲ್ಲೂ ಕಲಿತನಕ್ಕೆ ವೀರಗಲ್ಲುಗಳನ್ನು ಬೇತಮಂಗಲ (೧೧–೧೨ನೇ ಶತಮಾನ), ಹೊಸಹೊಳಲು ಮತ್ತು ಕೃಷ್ಣರಾಜಪೇಟೆ (೧೨ನೇ ಶತಮಾನ); ಬಂಡೂರು ೧೨೧೪, ತಿಬ್ಬನಹಳ್ಳಿ (೧೩೧೪); ಬಾನಳ್ಳಿ (೧೩೭೯), ಸುಂಕಾ ತೊಂಡನೂರು (೫ ಕಲ್ಲುಗಳು) ೧೨–೧೩ನೇ ಶತಮಾನ ಹಾಗಲಹಳ್ಳಿಗಳಲ್ಲೂ; ಊರಳಿವಿಗಾಗಿ ಮಾರಗಾನಹಳ್ಳಿ (೧೨೧೮), ಕಿರಗನೂರು (೧೨೮೫), ಮಡುವಿನಕೋಡಿ (೧೩೪೬), ಅರುವನಹಳ್ಳಿ (೧೩೮೦): ಪ್ರಾಣಿಗಳೊಂದಿಗೆ ಕಾದಿದ್ದಕ್ಕಾಗಿ ಬೆಲ್ಲೂರು (೧೨೬೪), ಸಲಗರೆ (೧೧೪೨); ರಕ್ತಕೊಡಿಗೆ (೧೭೬೩), ದಿವ್ಯಕ್ಕಾಗಿ ಗರುಡನಹಳ್ಳಿ (೧೨೭೫) ಗುತ್ತಲು (೧೬೫೪ ತಾಮ್ರ ಶಾಸನ) ಹಾಗೂ ૩ ಮಂದಿ ಮಾಸ್ತಿಯರಾಗಿದ್ದಕ್ಕಾಗಿ ಪುರ (ಹಾಡ್ಲೆಯ ಪುರ–೧೪೧೭) ದಲ್ಲಿ ಕಲ್ಲುಗಳನ್ನು ನಿಲ್ಲಿಸಲಾಗಿದ್ದು ಇವುಗಳಲ್ಲಿ ಶಿಲ್ಪಸಹಿತ ಇರುವ ಕಲ್ಲುಗಳಲ್ಲಿ ಆಯಾ ಕಾಲದ ರಚನೆಯ ವೈಶಿಷ್ಟ್ಯಗಳನ್ನು ಕಾಣಬಹುದು. ಆತಕೂರಿನಲ್ಲಿ ದಿಬ್ಬದ ಮೇಲಿರುವ ದೊಡ್ಡ ಆಕಾರದ ವೀರಗಲ್ಲುಗಳಲ್ಲಿ ವಿಜಯನಗರ ಕಾಲದ ಶಿಲ್ಪಕಲೆಯನ್ನು ಗುರುತಿಸಬಹುದಾಗಿದೆ.

ಕೆಲವೊಂದು ಪಂಗಡದವರು ತಮ್ಮ ಹಿರಿಯರಿಗಾಗಿ ಇಲ್ಲದೆ ತೀರಿಕೊಂಡವರಿಗಾಗಿ ವೀರಗಲ್ಲುಗಳನ್ನು ಹೋಲುವಂತಹ ಕಲ್ಲುಗಳನ್ನು ಹಾಕಿಸಿ ಪುಟ್ಟದಾದ ಗುಡಿಯಂತಹ ರಚನೆಯನ್ನು ಮಾಡಿ ಆಚರಣೆಗಳನ್ನು ಮಾಡುವುದುಂಟು. 'ವೀರಗಾರರ' ಗುಡಿಗಳೆಂದು ಕರೆಯುವ ಈ ಬಗೆಯ ಸಾಮೂಹಿಕ ರಚನೆಗಳನ್ನು ಜಿಲ್ಲೆಯ

ಪುರ, ಮಾರಗಾನಹಳ್ಳಿ, ದೇವರಾಯಪಟ್ಟಣ, ಸುಂಕಾ ತೊಂಡನೂರು ಇತ್ಯಾದಿ ಎಡೆಗಳಲ್ಲಿ ಕಾಣಬಹುದು. (ಸು.ಮಂ.೯೨) ಮದ್ದೂರಿನ ನೀಲಕಂಠನಹಳ್ಳಿಯಲ್ಲಿ ಇತ್ತೀಚೆಗೆ ಪತ್ತೆಯಾದ ೧೫೦ಕ್ಕೂ ಹೆಚ್ಚಿನ ಅಪೂರ್ವಶಿಲ್ಪ ಕಲಾಕೃತಿಗಳಲ್ಲಿಯೂ ದೇವತೆಗಳ ಶಿಲ್ಪಗಳಲ್ಲದೆ ವೀರ ಮಾಸ್ತಿಯರನ್ನು ಹೋಲುವ ಶಿಲ್ಪಗಳೂ ಇವೆ. ಜಿಲ್ಲೆಯ ದೇವಾಲಯಗಳಲ್ಲಿಯ ಇಲ್ಲವೆ ಬಿಡಿಯಾಗಿ ದೊರೆತಿರುವ ಹಲವಾರು ಬಿಡಿ ಶಿಲ್ಪಗಳಲ್ಲಿ ಕೆಲವನ್ನು ಉದಾಹರಿಸಬಹುದು. ಬೌದ್ಧ ಧರ್ಮದ ಕುರುಹು ಇರುವಂತಹ ಶಾಸನಗಳಾಗಲೀ, ಶಿಲ್ಪಗಳಾಗಲೀ, ಜಿಲ್ಲೆಯಲ್ಲಿ ದೊರೆತಿಲ್ಲವಾದರೂ ದಶಾವತಾರಗಳಲ್ಲಿ ಬುದ್ಧನನ್ನು ಸೇರಿಸಿರುವುದುಂಟು. ಕನ್ನಂಬಾಡಿಯ ದಶಾವತಾರ ಶಿಲ್ಪದಲ್ಲಿ ಈ ರೀತಿಯ ಬುದ್ಧನ ಶಿಲ್ಪವನ್ನು ಗುರುತಿಸಬಹುದು. ಇದೂ ಸೇರಿದಂತೆ ಕನ್ನಂಬಾಡಿ ಬಳಿಯ ನಾರ್ಥ್ ಬ್ಯಾಂಕ್ ಎಂಬ ಸ್ಥಳದಲ್ಲಿ ಹಿನ್ನೀರಿನಲ್ಲಿ ಮುಳುಗಡೆಯಾದ ಪ್ರದೇಶದಲ್ಲಿದ್ದ ದೇವಾಲಯಗಳ ಬಿಡಿ ಶಿಲ್ಪಗಳನ್ನು ಪ್ರದರ್ಶಿಸಿದೆ. ಗಂಗ–ಹೊಯ್ಸಳರಲ್ಲದೆ ವಿಜಯನಗರದ ಅರಸರೂ, ಜೈನಧರ್ಮಕ್ಕೆ ಪ್ರೋತ್ಸಾಹಿಸಿದ್ದು ಜಿಲ್ಲೆಯ ಅರೆ ತಿಪ್ಪೂರು, ಕಂಬದಹಳ್ಳಿ, ಹೊಸಹೊಳಲು, ಬಸ್ತಿಹಳ್ಳಿ, ಬೆಳ್ಳೂರುಗಳಲ್ಲಿ ಜಿನಾಲಯಗಳನ್ನು ಕಾಣಬಹುದು. ಕ್ಯಾತನಹಳ್ಳಿಯ ೨೨೯ರ ಶಾಸನವೊಂದು 'ಕಲ್ಲಬಸತಿ' ಯನ್ನು ಉಲ್ಲೇಖಿಸುತ್ತದೆ. ತಿಪ್ಪೂರು ಹಾಗೂ ಅರೆ ತಿಪ್ಪೂರು ಜೈನ ಶಿಲ್ಪಗಳ ಬೀಡೆನ್ನಬಹುದು. ಬಳಿಯ ಕನಕಗಿರಿ, ಸವಣಪ್ಪನ ಬೆಟ್ಟದ ಜೈನ ಶಿಲ್ಪಗಳು ಶಿಲ್ಪಕಲೆಯ ದೃಷ್ಟಿಯಿಂದ ಉಲ್ಲೇಖರ್ಹವಾದುವು. ಗಂಗರ ಕಾಲದ ಹತ್ತು ಅಡಿ ಎತ್ತರದ ಗೊಮ್ಮಟನ ವಿಗ್ರಹ, ಶ್ರವಣ ಬೆಳಗೊಳದ ಪ್ರಸಿದ್ಧ ಗೊಮ್ಮಟನ ವಿಗ್ರಹಕ್ಕಿಂತ ಪ್ರಾಚೀನವಾದುದೆನ್ನಲಾಗಿದೆ. (ತೈಲೂರು–೨೩) ಕಂಬದಹಳ್ಳಿಯ ೫೦ ಅಡಿ ಎತ್ತರದ ಬ್ರಹ್ಮದೇವರ ಕಂಬವಲ್ಲದೆ, ಅನೇಕ ಬಿಡಿಶಿಲ್ಪಗಳು ಜೈನ ಶಿಲ್ಪಕಲೆಯ ಉತ್ತಮ ಕೊಡಿಗೆಗಳೆನ್ನಬಹುದು. ಬೆಳಗೊಳದ ಬಸ್ತಿ ದಿಬ್ಬ ಮತ್ತು ಬಸ್ತಿಹಳ್ಳಿಯಲ್ಲಿಯೂ ಉನ್ನತಾಕಾರದ ಜೈನ ಪ್ರತಿಮೆಗಳಿದ್ದು ಅವು ಹೊಯ್ಸಳರ ಕಾಲದವು. ಬೆಳ್ಳೂರಿನ ವಿಮಲನಾಥ ಬಸದಿ ೧೨ನೇ ಶತಮಾನದ ರಚನೆ.

ಉಳಿದಂತೆ ಶ್ರೀರಂಗಪಟ್ಟಣದ ರಂಗನಾಥ ದೇವಾಲಯ ಇದ್ದುದರ ಬಗ್ಗೆ ೮೯೪ರ ಶಾಸನವೊಂದು ಉಲ್ಲೇಖಿಸಿದ್ದು ಇಂದಿನ ದೇವಾಲಯದ ರಚನೆ ನಂತರದ ಕಾಲದ್ದಾಗಿರಬಹುದಾದರೂ ಮೂಲ ವಿಗ್ರಹ ಹಳೆಯದೆಂಬ ಅಭಿಪ್ರಾಯವಿದೆ. ಹೊಳಲು ಗ್ರಾಮದ ಹೊಳಲಮ್ಮ ದೇವಾಲಯ ಗಂಗರ ರಚನೆ, ಚೋಳರ ಕಾಯಕಲ್ಪದ್ದಾಗಿದ್ದು ಇಲ್ಲಿನ ಒರಟು ಕಲ್ಲಿನ ಸಪ್ತ ಮಾತೃಕೆಯರು ಪ್ರಾಚೀನದವುಗಳಾಗಿವೆ. (ತೈಲೂರು–ಮುತ್ತಿನಕೆರೆ ೨೯೬) ಹೊಸಹೊಳಲು, ಬಸರಾಳು, ಕಿಕ್ಕೇರಿ, ಗೋವಿಂದನಹಳ್ಳಿ, ಅಘಲಯ, ಹೊಸಬೂದನೂರು ಇತ್ಯಾದಿ ದೊಡ್ಡ ಪ್ರಮಾಣದ ದೇವಾಲಯಗಳಲ್ಲದೆ ಸಿಂದಘಟ್ಟ, ಮಾದಾಪುರ, ಹರಿಹರಪುರ, ತೊಣಚಿ ಇತ್ಯಾದಿ ಹಲವಾರು ಕಡೆಗಳಲ್ಲಿ ಹೊಯ್ಸಳರ ರಚನೆಗಳನ್ನು ಕಾಣಬಹುದು. ಕಿಕ್ಕೇರಿಯ ಮದನಿಕಾ ವಿಗ್ರಹಗಳು ಆಕರ್ಷಕವಾಗಿವೆ. ಹೊಯ್ಸಳ ದೇವಾಲಯಗಳ ಹೊರಭಿತ್ತಿಯಲ್ಲಿ ನೂರಾರು ಶಿಲ್ಪಗಳು ಆ ಕಾಲದ ಸಾಂಸ್ಕೃತಿಕ ರೂಪಾಲಂಕಾರಗಳನ್ನು ಪ್ರತಿನಿಧಿಸುತ್ತವೆ. (ಹೊಯ್ಸಳ ವಾಸ್ತುಶಿಲ್ಪ, ಸೊಂ.ಶ್ರೀಕಂಠಶಾಸ್ತ್ರಿ) ಮದ್ದೂರಿನ ವರದರಾಜ ಆಥವ ಅಲ್ಲಾಳನಾಥ ವಿಗ್ರಹವು ಇಡಿಯಾಗಿ ಎಲ್ಲ ಬದಿಗಳಲ್ಲೂ ಶಿಲ್ಪ ಚಾತುರ್ಯವನ್ನೂ ತೋರಿಸುವಂತೆ ಕಡೆಯಲಾಗಿದ್ದು ಅನೇಕರಿಂದ ಪ್ರಶಂಸೆಗೆ ಒಳಗಾಗಿದೆ. ಮೇಲುಕೋಟೆಯ ಬೃಹದಾಕಾರದ ಗಣಪ ಹೊಯ್ಸಳರ ರಚನೆಯನ್ನು ಹೋಲುತ್ತದೆ. ಇದೇ ರೀತಿ ಕಲ್ಲಹಳ್ಳಿಯ ವರಾಹನಾಥ ತನ್ನ ಔನ್ನತ್ಯದಿಂದಾಗಿ ಪ್ರಸಿದ್ಧಿ ಪಡೆದಿದ್ದಾನೆ. ಜಿಲ್ಲೆಯ ಒಂದು ಭಾಗವನ್ನು ನರಸಿಂಹ ಕ್ಷೇತ್ರವೆಂದೇ ಕರೆಯಬಹುದಾದಷ್ಟು ನರಸಿಂಹನ ವಿಗ್ರಹಗಳು (ದೇವಾಲಯಗಳು) ಇಲ್ಲಿರುವುದು ಕುತೂಹಲಕರ. ಮದ್ದೂರು, ಮಾರೇಹಳ್ಳಿ, ಮೇಲುಕೋಟೆ, ತೊಣ್ಣೂರು, ನಾಗಮಂಗಲ, ದಡಗ, ಹೊಸಹೊಳಲು, ಶ್ರೀರಂಗಪಟ್ಟಣ, ಗರುಡನಹಳ್ಳಿ, ಇತ್ಯಾದಿ ಹಲವಾರು ಕ್ಷೇತ್ರಗಳನ್ನು ಉದಾಹರಿಸಬಹುದು. ಯೋಗ ಅಥವಾ ಶಾಂತ ರೂಪದ ನರಸಿಂಹನ ವಿಗ್ರಹಗಳು ಆಯಾಕಾಲದ ರಚನೆಗಳನ್ನು ಪ್ರತಿನಿಧಿಸುತ್ತವೆ.

ಇದರಂತೆ ರಾವಣೇಶ್ವರನಿಗೇ ಪ್ರತ್ಯೇಕವಾದ ಚಿಕ್ಕ ದೇವಾಲಯಗಳು ಗ್ರಾಮೀಣ ಪ್ರದೇಶದಲ್ಲಿರುವುದು ಜಿಲ್ಲೆಯ ವಿಶೇಷವೆಂದು ಹೇಳಬಹುದು. ಮುತ್ತತ್ತಿ, ಕಲ್ಕುಣಿ, ಸರಗೂರು ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಕೆಲವೆಡೆ ಒಂದೇ ಪ್ರದೇಶದಲ್ಲಿ ನಾಲ್ಕಾರು ಗುಡಿಗಳು ಇರುವುದುಂಟು.

ಜಿಲ್ಲೆಯಲ್ಲಿ ಸ್ಥಳೀಯವಾಗಿ ದೊರೆತ ಬಿಡಿಶಿಲ್ಪಗಳನ್ನು, ವೀರಗಲ್ಲುಗಳನ್ನು ಅಲ್ಲಲ್ಲಿಯೇ ಸುವ್ಯವಸ್ಥಿತವಾಗಿ ಹೊಂದಿಸಿಟ್ಟು ಬಯಲು ಸಂಗ್ರಹಾಲಯದಂತೆ ಇರಿಸಿರುವುದುಂಟು. ಶ್ರೀರಂಗಪಟ್ಟಣದಲ್ಲಿ ಪುರಾತತ್ವ ಶೋಧನೆಯ ಇಲಾಖೆಯವರ ಸಂಗ್ರಹಾಲಯವಿದೆ. ಉಳಿದಂತೆ ಕಿರಗಾವಲು, ಹೊಸಬೂದನೂರು, ನಾರ್ಥ್ ಬ್ಯಾಂಕ್ (ಕನ್ನಂಬಾಡಿ ಬಳಿ), ಕಂಬದಹಳ್ಳಿ, ಕೆರಗೋಡು, ಸಿಂದಘಟ್ಟ, ವೈದ್ಯನಾಥಪುರ, ಇತ್ಯಾದಿ ಸ್ಥಳಗಳನ್ನು ಹೆಸರಿಸಬಹುದು.

ಬಿಡಿ ಶಿಲ್ಪಗಳಲ್ಲಿ ಇನ್ನೊಂದು ಪ್ರಕಾರದ್ದೆಂದರೆ ಭಕ್ತರ ಶಿಲ್ಪಗಳು, ಮೈಸೂರು ಅರಸರು ತಮ್ಮ ಹಾಗೂ ತಮ್ಮ ಪತ್ನಿಯರ ಭಾವಶಿಲ್ಪಗಳನ್ನು ತಾವು ಅಭಿವೃದ್ಧಿಪಡಿಸಿದ, ನಡೆದುಕೊಂಡ ದೇವಾಲಯಗಳಲ್ಲಿ ಇರಿಸುತ್ತಿದ್ದರು. ಚಿಕ್ಕದೇವರಾಜರು, ಕಂಠೀರವ ನರಸರಾಜ ಒಡೆಯರು ಇತ್ಯಾದಿ ರಾಜರ ಮೂರ್ತಿಗಳಲ್ಲದೆ ನೆಲದ ಮೇಲೆ ಕೆತ್ತಿರುವ ನೂರಾರು ಭಕ್ತರ ಶಿಲ್ಪಗಳನ್ನು ಮೇಲುಕೋಟೆ, ಶ್ರೀರಂಗಪಟ್ಟಣ, ನಾಗಮಂಗಲ ಇತ್ಯಾದಿ ಎಡೆಗಳಲ್ಲಿ ಕಾಣಬಹುದು. ದಸರಾ ವೇಳೆಯಲ್ಲಿ ಗೊಂಬೆಗಳನ್ನು ಅಲಂಕರಿಸಿ ಇರಿಸುವ ಪದ್ಧತಿ ಮೈಸೂರು ಅರಮನೆಯಲ್ಲಿ ಇಂದಿಗೂ ಉಳಿದು ಬಂದಿದ್ದು ರಾಜಧಾನಿ ಮೊದಲಿಗೆ ಶ್ರೀರಂಗಪಟ್ಟಣದಲ್ಲಿದ್ದಾಗಲೇ ಆರಂಭಗೊಂಡಿರಬಹುದು. ಟಿಪ್ಪು ಸಹ ಕೆಲವು ಆಟಿಕೆಗಳನ್ನು ಹೊಂದಿದ್ದು ಇಂದು ಲಂಡನ್‌ನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿರುವ ಸುಮಾರು ನಾಲ್ಕು ಅಡಿ ಉದ್ದದ ಹುಲಿಯೊಂದು ಬ್ರಿಟಿಷ್ ಸೈನಿಕನನ್ನು ಹಿಡಿದಿರುವಂತಿರುವ ಆಟಿಕೆ ಪ್ರಾಯಶಃ ಶ್ರೀರಂಗಪಟ್ಟಣದಲ್ಲಿಯೇ ರೂಪಿತವಾಗಿರಬಹುದು. ಕೀಲಿಕೊಟ್ಟರೆ ಚಲಿಸುವ ಹಾಗೂ ಕೂಗುವ ರೀತಿಯಲ್ಲಿ ಅಳವಡಿಸಿರುವ ಗೊಂಬೆ ಇಂದಿಗೂ ಸುಸ್ಥಿತಿಯಲ್ಲಿರುವಂತೆ ತಿಳಿದುಬರುತ್ತದೆ. (ಡಿ.ಎಚ್.೧೫-೨-೯೭) ಇದಲ್ಲದೆ ಖಡ್ಗ ಇತ್ಯಾದಿ ಹಲವಾರು ವಸ್ತುಗಳು ಶ್ರೀರಂಗಪಟ್ಟಣದ ಅಳಿವಿನೊಂದಿಗೆ ಕಲ್ಕತ್ತ ಹಾಗೂ ಬ್ರಿಟಿಷ್ ಮ್ಯೂಸಿಯಂಗಳಿಗೆ ಸ್ಥಳಾಂತರಗೊಂಡಿತು.

ಇಂತಹ ಶಿಲ್ಪ ಪರಂಪರೆಯ ಹಿಂದೆ ಜಿಲ್ಲೆಯಲ್ಲಿ ಶಿಲ್ಪಿಗಳ ದೊಡ್ಡ ಪಟ್ಟಿಯೇ ದೊರೆಯುತ್ತದೆಯಲ್ಲದೆ ಇಂದಿಗೂ ಕ್ರಿಯಾಶೀಲರಾಗಿರುವ ಶಿಲ್ಪಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮಂಡ್ಯ ತಾಲೂಕಿನ ೭೧೩ರ ಹಲ್ಲೇಗೆರೆ ತಾಮ್ರ ಶಾಸನ 'ವಿಶ್ವಕರ್ಮ ಸಮಾನೇನ ವಿಶ್ವಕರ್ಮಾಚಾರ್ಯ' ಎಂಬಾತನನ್ನು ಹೆಸರಿಸುತ್ತದೆ ಎಂದರೆ ಈತನ ಹೆಸರೇ ವಿಶ್ವಕರ್ಮಾಚಾರ್ಯ ಎಂದಿದ್ದು ಆತ (ಪೌರಾಣಿಕ ಶಿಲ್ಪಿ) ವಿಶ್ವಕರ್ಮನಿಗೆ ಸಮಾನನೆಂದು ಹೇಳಿದಂತಾಗುತ್ತದೆ. ಆದರೆ ನಾಗಮಂಗಲ ತಾಲೂಕಿನ ದೇವರಹಳ್ಳಿಯ ೭೭೬ರ ಶಾಸನ ರಚಿಸಿದಾತನನ್ನು 'ಸರ್ವಕಲಾಧಾರಾಭೂತ ಚಿತ್ರಕಲಾಭಿಜ್ಞಾನ ವಿಶ್ವಕರ್ಮಾ ಚಾರ್ಯೇಣೇದಂ ಶಾಸನಂ ಲಿಖಿತಂ' ಎಂದಷ್ಟೇ ಕರೆದಿದ್ದು ಮೇಲಿನ ಇಬ್ಬರೂ ಒಬ್ಬರೇ ಅಥವ ಬೇರೆ ಬೇರೆಯವರೇ ಎಂದು ಹೇಳಲಾಗದು. ವಿಶ್ವಕರ್ಮಾಚಾರ್ಯ ಎಂಬ ಹೆಸರಿನಲ್ಲಿ ೮ ರಿಂದ ೧೧ನೇ ಶತಮಾನದವರೆಗೆ ಹಳೆಯ ಮೈಸೂರು ಪ್ರದೇಶದಲ್ಲಿ ಮಂಡ್ಯ ಜಿಲ್ಲೆಯೂ ಸೇರಿದಂತೆ ೧೨ ಕ್ಕೂ ಹೆಚ್ಚು ಶಾಸನಗಳು ದೊರೆಯುತ್ತವೆ ಎಂದು ಕೆ. ಎಸ್. ಕುಮಾರಸ್ವಾಮಿ ತಿಳಿಸುತ್ತಾರೆ. (ಪ್ರಾ.ಕ.ಶಿಲ್ಪಾಚಾರ್ಯರು, ಪು.೧೩)

ನಾಗಮಂಗಲ ತಾಲೂಕಿನ ಪುರದಕಟ್ಟೆಯ ಕರೆದೇವರನ್ನು ಹೆಸರಿಸುವ ೧೦೬೧ರ ಶಾಸನ 'ರೂವಾರಿ ಬಮೋಜನ ಮಗಂ ಪುರದಾಚಾರಿ ಕಂಡರಿಸಿದ' ಎಂದೂ ಮದ್ದೂರು ವೈದ್ಯನಾಥಪುರದ ೧೧ನೇ ಶತಮಾನದ ರಾಜೇಂದ್ರ

ಚೋಳನ ಪ್ರಶಸ್ತಿ ಒಳಗೊಂಡ ಶಾಸನ ಅಲ್ಲಿಯ ಸೂರ್ಯನಾರಾಯಣ ದೇವಾಲಯದ ಶಿಲ್ಪಿ ಬಯಿರೋಜ ಎಂಬಾತನನ್ನೂ, ಅರಕೆರೆಯ ೧೧೦೮ರ ಉದಯಾದಿತ್ಯ ಪಲ್ಲವ ರಾಯನ ಶಾಸನ ಕಲ್ಕುಟಿ ಲಕ್ಕೋಜ, ಎಂಬಾತನನ್ನೂ ಉಲ್ಲೇಖಿಸುತ್ತದೆ.

ಕೃಷ್ಣರಾಜಪೇಟೆ ತಾಲೂಕಿನ ಮಾಳಗುಂದದ ೧೧೧೭ರ ಶಾಸನವೊಂದು ಇಡೀ ಒಂದು ಕುಲವೇ (ವಂಶವೇ) ಶಿಲ್ಪಿಗಳ ಶ್ರೇಣಿ (ಕೊತ್ತಳಿ) ಯಂತೆ ಇತ್ತು ಎಂಬ ಕುತೂಹಲಕರವಾದ ಸಂಗತಿಯನ್ನು ತಿಳಿಸುತ್ತದೆ. 'ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತರಪ್ಪ ಶ್ರೀ ಮನು, ಮಯ, ವಿಶ್ವಕರ್ಮ ತೋಟಕಾಚಾರ್ಯರಪ್ಪ, ಹಸ್ತ ಕುಶಲತೆಯೊಳು, ಹೇಮಕರ್ಮ, ಲೋಹಕರ್ಮ, ಶಿಲಾಕರ್ಮ, ರತ್ನಕರ್ಮ, ಕಾಷ್ಠಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾಲಕ್ಷಣ, ಸಮಸ್ತ ಹಸ್ತ ಕುಶಲತೆಯುಳ್ಳ ವಿಶ್ವಕರ್ಮ ನಿರ್ಮಿತ ಮಪ್ಪ ಗವರಾಚಾರ್ಯ ಆತನ ಪುತ್ರ ಕುಲೋದ್ಭವನಪ್ಪ ಹೊಯ್ಸಳಾಚಾರ್ಯ ಆತನ ಪುತ್ರಂ ಬಹುಕುಳಾನ್ವಯ ಗೋತ್ರ.... ತ್ರನಪ್ಪ ಸೂರ್ಯಾಚಾರ್ಯನ್ ಅವರ ಪರಿಯಮ್ಮ ಕಾಳಬೋಜ, ಮಾಣಿಕಾಚಾರಿ ಮತ್ತು ಸೂರೋಜನಂ ಕಿರಿಯಯ್ಯಗಳು ಜಯಗೊಂಡಾಚಾರಿ ಸಿರುಗುನ್ದದ ಮರಿಯಾನೆಗಳು ಕೇತೋಜ ಮಹಾಚಾರಿ ನಖರಾಚಾರಿ ಮಳ್ಳೋಜ ಅನ್ನು ಕುಲಾನ್ವಯ ಕೊತ್ತಳಿ ಸಹಿತ ಮಾಡಿಸಿದ ಧರ್ಮ....... ' (ಇ.ಸಿ.೬, ಕೃ.ಪೆ.೬೬) ಎಂದು ಹೇಳುವ ಈ ಶಾಸನದಲ್ಲಿ ಹೊಯ್ಸಳಾಚಾರಿ ಎಂಬಾತನ ದೊಡ್ಡ ಕುಟುಂಬದ ವಿವರವಿದೆ. ಶಿಲ್ಪಕಲೆಯ ಎಲ್ಲ ವಿಧಾನಗಳಲ್ಲೂ ಪರಿಣತಿ ಪಡೆದ ತಂದೆ, ಮಗ, ಅಣ್ಣ ತಮ್ಮಂದಿರಾದಿಯಾಗಿ ಅನೇಕ ಆಚಾರಿಗಳನ್ನು ಹೆಸರಿಸುತ್ತದೆ. ಇವರುಗಳು ಒಂದು ಅವಿಭಕ್ತ ಕುಟುಂಬದ ಒಂದು ಶ್ರೇಣಿ ಎಂಬಂತ್ತಿದ್ದರು. ಇಂಥ ಕುಲಾನ್ವಯ ಕೊತ್ತಳಿಗಳು (ಸಂಘಗಳು) ಸಕಲ ಕಲಾ ಪಾರಂಗತಿಯನ್ನು ಪಡೆದಿದ್ದು ತಮ್ಮ ಮಕ್ಕಳಿಗೆ ಅವುಗಳನ್ನು ಹೇಳಿಕೊಡುತ್ತಿದ್ದವು ಎಂದು ಕುಮಾರಸ್ವಾಮಿಯವರು ಅಭಿಪ್ರಾಯಪಡುತ್ತಾರೆ.(ಪ್ರಾ.ಕ.ಶಿಲ್ಪಾಚಾರ್ಯರು, ಪು.೧೨೩) ಇಂದು ನ್ಯೂಯಾರ್ಕ್‌ನ ಮೆಟ್ರೊಪಾಲಿಟನ್ ವಸ್ತು ಸಂಗ್ರಾಹಾಲಯದಲ್ಲಿರುವ ದಾಸೋಜ ನಿರ್ಮಿತ ಕೇಶವ ಮೂರ್ತಿಯು ಕಿಕ್ಕೇರಿಯ (ಇಂದು ಜೀರ್ಣವಾಗಿರುವ) ವಿಷ್ಣುವಿನ ದೇವಾಲಯಕ್ಕೆ ಸೇರಿದ್ದೆಂಬ ಕೆಲವು ವಿದ್ವಾಂಸರ ಅಭಿಪ್ರಾಯವನ್ನು ಉಲ್ಲೇಖಿಸುವ ಕುಮಾರಸ್ವಾಮಿ ಅವರು ೧೦೬೮ ರಿಂದ ೧೧೫೨ರವರೆಗೆ 'ದಾಸೋಜ' ನಿರ್ಮಿತ ದೇವಾಲಯ ಶಿಲ್ಪಗಳ ಬಗ್ಗೆ ಹೇಳುತ್ತಾ 'ದಾಸೋಜ' ಎಂಬುದು ಒಂದು ಕಾರ್ಯಾಗಾರವಾಗಿತ್ತು. ಎಂದರೆ 'ದಾಸೋಜನು ತನ್ನದೇ ಆದ ಒಂದು ಶಿಲ್ಪ ಕಾರ್ಯಾಗಾರವನ್ನು ಹೊಂದಿದ್ದನು. ಈ ಕಾರ್ಯಾಗಾರವು ಇವನ ಹೆಸರಿನಲ್ಲಿಯೇ ವ್ಯವಹರಿಸುತ್ತಿತ್ತು' ಎಂದು ಹೇಳುತ್ತಾರೆ. (ಅದೇ ಪುಟ ೩೧) ಇದೇ ಸುಮಾರಿನಲ್ಲಿ ರಚಿತವಾದ ತೊಣ್ಣೂರಿನ ದೇವಾಲಯಗಳು ಹೊಯ್ಸಳರ ಕಾಲದಲ್ಲೇ ಆದರೂ ಚೋಳರ ಶೈಲಿಯಲ್ಲಿರುವುದಲ್ಲದೆ ಶಿಲ್ಪಿಗಳನ್ನೂ ಅಲ್ಲಿಂದಲೇ ಕರೆದು ತಂದುದಕ್ಕೆ ಶಾಸನಾಧಾರಗಳಿವೆ. (ಸಿರಿಯೊಡಲು, ಎಂ.ಎಸ್.ಕೃಷ್ಣಮೂರ್ತಿ ಪು.೩೬)

ಕಂಬದಹಳ್ಳಿಯ ಶಾಂತಿನಾಥ ಬಸದಿಯನ್ನು ೧೧೩೦ರಲ್ಲಿ ಗಂಗರಾಜನ ಮಗ ಬೊಪ್ಪನು ಮಾಡಿಸಿದ್ದು, ರೂವಾರಿ ದ್ರೋಹಘರಟ್ಟಾಬಾರಿ ಕನ್ನೆವಸದಿಯಂ ಮಾಡಿದ ಎಂಬ ಶಾಸನವಿದೆ. (ನಾ.ಮಂ....) 'ಕನ್ನೆವಸದಿ' ಎಂದರೆ ಮೊದಲನೆಯ ಬಸದಿ ಎಂಬ ಅರ್ಥವಿದ್ದು ಇದೇ ಬೊಪ್ಪ ೧೧೩೩ರಲ್ಲಿ ಹಳೆಯಬೀಡಿನಲ್ಲಿ ಬಸದಿಯನ್ನು ಮಾಡಿದ ನಂತರ ಆದಿನಾಥ ಬಸ್ತಿಯನ್ನು ಇದೇ ಶಿಲ್ಪಿ ಮಾಡಿದ್ದಿರಬಹುದೆಂದು ಅಭಿಪ್ರಾಯವಿದೆ. (ಸೊ.ಶ್ರೀಶಾಸ್ತ್ರಿ ಹೊ.ವಾ.ಶಿಲ್ಪ.೧೧೧-೨) ಆದರೆ 'ದ್ರೋಹಘರಟ್ಟ' ಎಂಬುದು ಗಂಗರಾಜನ ಬಿರುದಾಗಿದ್ದು ಇದು ಶಿಲ್ಪಿಯ ನಿಜನಾಮವಲ್ಲ. ಇದು ಅವನ ಬಿರುದು ಎಂದು ತಿಳಿಯಬಹುದೆಂದೂ, ಅರಸನು ತನ್ನ ಬಿರುದನ್ನೇ ಶಿಲ್ಪಿಗೂ ನೀಡಿ ಗೌರವಿಸಿದ್ದಾನೆಂದೂ ಅಭಿಪ್ರಾಯವಿದೆ. (ಕೆ.ಎಸ್.ಕುಮಾರಸ್ವಾಮಿ ಪು.೪೧) ಇದು ಜಿಲ್ಲೆಯ ಶಿಲ್ಪಿಯೊಬ್ಬನಿಗೆ ದೊರೆತ ದೊಡ್ಡ ಮನ್ನಣೆ ಎಂದೇ ಭಾವಿಸಬಹುದು. ಮುಂದಿನ ಹೊಯ್ಸಳರ ಕಾಲದ ಶಿಲ್ಪಿಗಳಲ್ಲಿ 'ರೂವಾರಿ ಕಲ್ಕುಟಿಕ ಕೇತೋಜ' (ಮುದಿಗೆರೆ ೧೧೪೯), ಕಂಚಿಗೋಜನ

ಮಗ ಬಳಗೋಜ (ಹುಲ್ಲೆಗಾಲ ೧೧೭೭); 'ರಾಮೋಜನ ಜನನೋಜ' (ಸಿಂದಘಟ್ಟ ೧೭೯೦), 'ನಂಜಿಯ ಕೇತೋಜ' (ಹೊನ್ನೇನಹಳ್ಳಿ ೧೧೮೦); 'ಶಿಲ್ಪಿ ಪುರದಾಚಾರಿಯ ಮಗ ಮಂಡಳಿಕಾಚಾರಿ' (ಕಡ್ಲವಾಗಿಲು–೧೧೯೨); ಹೊಯ್ಸಳಾಚಾರಿಯ ತಮ್ಮ ವೈಚೋಜ' (ಬೆಳಗೊಳ ೧೨ನೇ ಶತಮಾನ); ಹಾಗೂ ಕಾವೋಜ (ಹಿರಿಕಳಲೆ ೧೨ನೇ ಶತಮಾನ); ಅಕ್ಕಸಾಲೆ ನಾಗಾಚಾರಿ (ನಾಗರಘಟ್ಟ–೧೨ನೇ ಶತಮಾನ) ದುಡೋಜ (ಮಂಡ್ಯ–ಕಸಬ–೧೨೧೯); ಬಲ್ಲೋಜ (ಬಲ್ಲೇಗೌಡ)–ಕೂತೋಜ (ಅಗ್ರಾಹಾರಬಾಚಹಳ್ಳಿ ೧೨೨೪) ಮುಂತಾದವರನ್ನು ಉಲ್ಲೇಖಿಸಬಹುದು.

ಹೊಯ್ಸಳರ ಕಾಲದ ಪ್ರಸಿದ್ಧನಾದ ಶಿಲ್ಪಿ ಮಲ್ಲಿತಮ್ಮ ಮಂಡ್ಯ ಜಿಲ್ಲೆಯಲ್ಲಿಯೂ ಕೃತಿರಚನೆ ಮಾಡಿರುವುದು ಉಲ್ಲೇಖಾರ್ಹ. ಹಳೆಯ ಮೈಸೂರು ಪ್ರದೇಶದಲ್ಲಿ ೧೧೯೬ರಿಂದ ೧೨೬೮ರ ವರೆಗಿನ ಅವಧಿಯಲ್ಲಿ ಈತನ ಸಹಿ ಇರುವ ಅನೇಕ ಶಿಲ್ಪಗಳು, ಈತನ ಬಿರುದು ಬಾವಲಿಗಳೊಂದಿಗೆ ದೊರೆಯುತ್ತವೆಯಲ್ಲದೆ, ಈತನದೇ ಆದ ಕಾರ್ಯಾಗಾರವೊಂದು ಇದ್ದಿರಬೇಕೆಂಬ ಅಭಿಪ್ರಾಯವಿದೆ. ಕೆ.ಆರ್.ಪೇಟೆಯ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯದ ಎರಡು ದ್ವಾರಪಾಲಕ ವಿಗ್ರಹದ ಕೆಳಗೆ ಈತನ ಸಹಿಯಿದೆ. ಲಿಪಿಯ ವಿನ್ಯಾಸದಿಂದಾಗಿ ಅದು ೧೩ನೇಯ ಶತಮಾನದ್ದೆಂದು ಹೇಳಲಾಗುತ್ತದೆಯಾದರೂ ಬಳಿಯಲ್ಲಿಯೇ ಇರುವ ಹೊಯ್ಸಳ ಸೋಮೇಶ್ವರನ ೧೨೩೬ರ ಶಾಸನ ದಾನ ಶಾಸನದಾಗಿದ್ದು ಈ ವೇಳೆಗಾಗಲೇ ದೇವಾಲಯದ ರಚನೆಯಾಗಿತ್ತಲ್ಲದೆ ಅದರೊಂದಿಗೇ ದ್ವಾರಪಾಲಕರೂ ರೂಪಿಸಲಾಗಿತ್ತೆಂದು ಹೇಳಬಹುದು. ಇದನ್ನು ಒಪ್ಪಿದಲ್ಲಿ ಇಲ್ಲಿಯ ಶಿಲ್ಪಗಳು ಮಲ್ಲಿತಮ್ಮನ ಆರಂಭಕಾಲದ ಶಿಲ್ಪಗಳೆಂದು ಹೇಳಬಹುದು.

ಮುಂದಿನ ಶತಮಾನಗಳಲ್ಲಿ ಇನ್ನಷ್ಟು ಸಂಖ್ಯೆಯ ಶಿಲ್ಪಿಗಳು ದೊರೆಯುತ್ತಾರೆ. 'ಅಕ್ಕಸಾಲೆ ಬಂದಿಯೋಜನ ಮಗ ಮಾಮರಿಯಂಚಿತಮ್ಮ' (ಹಂಪಾಪುರ ೧೨೪೨) ಹೊನ್ನಾಚಾರ್ಯನ ಪುತ್ರ ಹರೋಜ (ಹೊನ್ನೇನಹಳ್ಳಿ ೧೨೪೪) ಅಕ್ಕಸಾಲೆ ಮಲ್ಲೋಜನ ಮಗ ಸೋಮಯ್ಯ, ರಾಮಯ್ಯ (ರಾಯ ಸೆಟ್ಟಿಪುರ–೧೨೫೧) ಅಕ್ಕಸಾಲೆ ಕಾಳಜಿ (ಮಾರೇಹಳ್ಳಿ ೧೨೫೯) ಆಚಾರಿ ಮಸಣೋಜ (ಹೊಸಬೂದನೂರು ೧೨೭೬), 'ರೂವಾರಿ ಮಾಚೋಜ ಕಲುಕಣಿನಾಡ ಆಚಾರ್ಯ ಕಲಿಯುಗ ವಿಶ್ವಕರ್ಮ' (ಕಲಸಗೆರೆ–೧೨ನೇ ಶತಮಾನ) ಅಕ್ಕಸಾಲಿಗ ಬಿಟ್ಟಿಯಾಚಾರಿ (ಕಾಚೇನಹಳ್ಳಿ–೧೨–೧೩ನೇ ಶತಮಾನ) ಒಜಾಯಿತ ಲಖೋಜ, ಅಕ್ಕಸಾಲೆ ಸಬೆಯೋಜ, ಮಂಚಿ, ಹಿರಿಯ ಕಾಮೋಜ ಒಳಗಾದ ಪಾಂಚಾಳರು (ಭೈರಾಪುರ–೧೩೧೨) ಕಂಮಾರ ರಾಮೋಜ(ಮೇಲುಕೋಟೆ ೧೩೬೯) ಬೆಳತೂರ ಮಾಲಿಯೋಜ (ಅರುವನಹಳ್ಳಿ ೧೩೮೦), ಬಾನಳ್ಳಿ ಮಲ್ಲಿಗರೋಜ (ಬಾನಳ್ಳಿ ೧೩೭೯) ದಾಯೋಜನ ಮಗ ದಾಯೋಜ (೧೩ನೇ ಶತಮಾನ ಕಡ್ಲವಾಗಿಲು), ಪಟ್ಟಣೋಜನ ಮಗ ಚಿಕ್ಕಬಾಚೆಯ (ಕನ್ನಂಬಾಡಿ ೧೩–೧೪ನೇ ಶತಮಾನ), ಏಕೋಜನ ಮಗ ಸಿದ್ಧೋಜ (ಚುಂಚನಹಳ್ಳಿ ೧೩–೧೪ನೇ ಶತಮಾನ) ದೇವೋಜ, ಬೊಮೋಜ (ದಾಸನದೊಡ್ಡಿ ೧೪೬೩) ಇನ್ನೂ ಹಲವಾರು ಜನರ ಹೆಸರಿದ್ದು ಅಳಿಸಿಹೋಗಿದೆ) ಮಂಟಪವೊಂದನ್ನು ಮಾಡಿದ ಓಜುಕಾವಣ (ಶ್ರೀರಂಗಪಟ್ಟಣ ೧೫ನೇ ಶತಮಾನ) ವೀರಾಚಾರಿ (ನಾಗಮಂಗಲ–೧೫೧೧), ಮಾಯಿವೊಜನ ಮಗ ಕೇತಣ (ಬಸವನಪುರ ೧೫೧೩), ಹೊಲ್ಲಿಗಂಡನ ಮಗ ಹೊಲ್ಲಿದ ಹೊಲ್ಲಿಗ (ಕೆರಗೋಡು ೧೫೨೦) ಇತ್ಯಾದಿ ಹೆಸರಿಸಬಹುದು.

ವಿಜಯನಗರ ಕಾಲದಲ್ಲಿ ೧೩೮೬ ರಿಂದ ೧೬೪೫ರವರೆಗೆ ವೀರಣಾರ್ಯ ಎಂಬಾತ ಹಾಗೂ ಆತನ ವಂಶಜರು ಅನೇಕ ತಾಮ್ರ ಶಾಸನಗಳನ್ನು ಉತ್ಕೀರ್ಣಿಸಿದ್ದು ಜಿಲ್ಲೆಯಲ್ಲಿಯೂ ಈ ವಂಶಜರ ಹಲವಾರು ಶಾಸನಗಳು ದೊರೆಯುತ್ತವೆ. ಈ ವಂಶದ ಮೂಲ ಪುರುಷನೆಂದು ಭಾವಿಸಲಾದ ಮುದ್ದಣಾರ್ಯನ ಮಗ ವೀರಣ ೧೪೪೭ರಲ್ಲಿ (ಶ್ರೀರಂಗಪಟ್ಟಣ) ಈತನ ಮಗ ಮಲ್ಲಣ ೧೪೭೩ (ಸುಜ್ಜಲೂರು), ೧೫೧೨ (ದೊಡ್ಡ ಜಟಕ) ೧೫೧೬(ಮಂಡ್ಯ) ರಲ್ಲಿಯೂ ಈ ಮಲ್ಲಣಾರ್ಯನ ಮಗ ವೀರಣಾಚಾರ್ಯ ೧೫೩೨(ಬ್ಯಾಲದಕೆರೆ) ಹಾಗೂ ೧೫೩೩ (ಹುರಗೆಲವಾಡಿ) ರಲ್ಲೂ ಹಾಗೂ

ಈ ವೀರಣನ ಮಗ ವೀರಣಾಚಾರ್ಯ ೧೫೪೫ ರಲ್ಲೂ (ಹೊನ್ನೇನಹಳ್ಳಿ) ರೂಪಿಸಿದ ಶಾಸನಗಳು ದೊರೆಯುತ್ತವೆ. ಕುಮಾರಸ್ವಾಮಿಯವರು ಇನ್ನಷ್ಟು ಶಾಸನಗಳನ್ನು ಇರಿಸಿಕೊಂಡು ಈ ಎಲ್ಲರ ವಂಶವೃಕ್ಷವೊಂದನ್ನು ನಿರೂಪಿಸಿದ್ದು (ಪು.೬೦) ಮಂಡ್ಯ ಜಿಲ್ಲೆಯ ಶಾಸನಗಳಿಂದ ಈ ವಂಶಾವಳಿಯನ್ನು ಪರಿಷ್ಕರಿಸಬಹುದಾದ ಸಾಧ್ಯತೆಗಳಿವೆ.

ಹೆಸರಿಸಬಹುದಾದ ಇನ್ನಿತರ ಶಿಲ್ಪಿಗಳೆಂದರೆ ಬಿನುಕೋಜಿನ ಮಗ ಕಲ್ಲುಕುಟಿಗ ದೇವರಸ, (ಮಾರೇಹಳ್ಳಿ ೧೫ನೇ ಶತಮಾನ) ಪಂಡಿತೋಜ (ಹಾಗಲಹಳ್ಳಿ ೧೭೦೦) ಬೀರೋಜ (ಬಿಂಡಿಗನವಿಲೆ ೧೭ನೇ ಶತಮಾನ) ಕಂಮಗಾರ ಕುಲದ ಚಿಕ್ಕಣ್ಣಯ್ಯ, ಜಕ್ಕನ್ನಯ್ಯರ ವಂಶಸ್ಥರಾದ ಚಿನ್ನಯ್ಯ, ವೆಂಕಟಪತಯ್ಯ, ತಿಮ್ಮಪ್ಪಯ್ಯ, (ನಾಗಮಂಗಲ ೧೮೪೫) ಮುಂತಾದವರು.

ಮೈಸೂರು ಅರಸರ ಕಾಲದಲ್ಲಿ, ಶ್ರೀರಂಗಪಟ್ಟಣದ ಕಾಳಮ್ಮ ದೇವಾಲಯಕ್ಕೆ ೧೮೫೨ರಲ್ಲಿ ಲಿಂಗಾಚಾರಿಯ ಮಗ ರಂಗಾಚಾರಿ ಹಾಗೂ ಕೃಷ್ಣಾಮಾಚಾರಿಯ ಮಗ ವೆಂಕಟರಮಣಾಚಾರಿ ತಾಂಡವೇಶ್ವರ ಹಾಗೂ ಶಿವಕಾಮಿನಿ ವಿಗ್ರಹಗಳನ್ನು ಮಾಡಿಕೊಟ್ಟರು. ಕನ್ನಂಬಾಡಿಯ ಮಹಾಲಕ್ಷ್ಮಿ ದೇವಾಲಯಕ್ಕೆ ೧೮೫೯ರಲ್ಲಿ ಹೊಸ ಬೊಂಬೆ ರಥವನ್ನು ಮಾಡಿಸಲಾಯಿತು. ದೇವರಹಳ್ಳಿಯ ತಪಸೀಯರಾಯ ದೇವಾಲಯದ ಮರದ ಬಾಗಿಲನ್ನು ೧೯ನೇ ಶತಮಾನದಲ್ಲಿ ಅಕ್ಕಸಾಲೆ ಚಿಕ್ಕಾಚಾರಿ ಮಾಡಿದ. ಹೊಸಹೊಳಲಿನ ಲಕ್ಷ್ಮಿನಾರಾಯಣ ದೇವಾಲಯ ೧೩ನೇ ಶತಮಾನದ್ದಾದರೂ ಇಂದಿನ ಮೂಲ ವಿಗ್ರಹವನ್ನು ೧೯೫೩ರಲ್ಲಿ ರಚಿಸಿದಂತೆ ಉಲ್ಲೇಖವಿದೆ. ಮೇಲುಕೋಟೆಯ ನರಸಿಂಹ ದೇವಾಲಯದಲ್ಲಿರುವ ನಗಾರಿಯನ್ನು ೧೭೮೬ರಲ್ಲಿ ಜಫರ್ ಅಥರ್ ಅಲಿಬಖ್ಷ್ ಎಂಬಾತ ತಯಾರಿಸಿದ.

ಜಿಲ್ಲೆಯ ಶಿಲ್ಪ, ವಾಸ್ತುಶಿಲ್ಪಗಳು ಆಯಾ ಕಾಲದಲ್ಲಿ ಬೇರೆಡೆಯಲ್ಲಿ ರಚಿತವಾದ ಕೃತಿಗಳಿಗಿಂತ ಭಿನ್ನವಾಗಿಲ್ಲವಾದರೂ ರಚನೆಯ ಬಗ್ಗೆ ನಿಶ್ಚಿತವಾಗಿ ತಿಳಿದು ಬರದೇ ಇರುವಾಗ ಅವುಗಳ ರೂಪದಿಂದ ಕಾಲನಿರ್ಧಾರ ಮಾಡಲು ಸಾಧ್ಯವಾಗುತ್ತದೆ. ಉದಾಹರಣೆಗೆ ಮೇಲುಕೋಟೆಯ ನಯನಾಕ್ಷೇತ್ರದಲ್ಲಿ ಬಂಡೆಯನ್ನು ಕೊರೆದು ರೂಪಿಸಿರುವ ಎರಡು ಅಪೂರ್ಣ ಗುಹಾಲಯಗಳಿವೆ. ಈ ಬಗೆಯಲ್ಲಿ ಗುಹಾಲಯ ನಿರ್ಮಿಸುವ ಪದ್ಧತಿ ಬಾದಾಮಿ ಚಾಳುಕ್ಯ ಹಾಗೂ ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಇವೂ ಸಹ ೬-೯ನೇ ಶತಮಾನದ ರಚನೆಗಳಿರಬಹುದೆಂದು ಭಾವಿಸಲಾಗಿದೆ. (ತೈಲೂರು/ ಮುತ್ತಿನ ಕೆರೆ.೨೯೮) ವಾಸ್ತುಶಿಲ್ಪದ ದೃಷ್ಟಿಯಿಂದಲೂ ಮಂಡ್ಯ ಜಿಲ್ಲೆಯಲ್ಲಿ ಅತ್ಯಂತ ಪ್ರಾಚೀನ ಗುಡಿ ಎಂದು ಗುರುತಿಸಬಹುದಾದು, ಮಂಡ್ಯ ತಾಲೂಕು ಹೊಳಲು ಗ್ರಾಮದಲ್ಲಿ ಕೆರೆ ಕೆಳಗಿನ ಗದ್ದೆಯ ಹಸಿರು ಬಯಲಿನಲ್ಲಿರುವ ಶಿಥಿಲವಾದ ಹೊಳಲಮ್ಮ ಗ್ರಾಮದೇವತೆಯ ಗುಡಿ. 'ಇತಿಹಾಸದಲ್ಲಿ ಸ್ಪಷ್ಟವಾಗಿ ದಾಖಲೆಗಳು ಸಿಗದಿದ್ದರೂ ದೇವಾಲಯ ನಿರ್ಮಾಣದ ನಿಯಮಗಳುಳ್ಳ ಕುಬ್ಜವಾದ ಗುಡಿ ಗಂಗರಸರ ಪ್ರಾರಂಭದ ರಚನೆಯೊಂದಿಗೆ ಚೋಳರ ಕಾಯಕಲ್ಪ ನಡೆದಿದೆ' ಎಂದು ಅಭಿಪ್ರಾಯಪಡುವ ತೈಲೂರು ವೆಂಕಟಕೃಷ್ಣ ಅವರು 'ಈ ಗುಡಿಯಲ್ಲಿರುವ ಒರಟು ಕಲ್ಲಿನ ಅಸ್ಪಷ್ಟ ಸಪ್ತಮಾತೃಕೆಯರು ಹಾಗೂ ಗದೆ ಅಥವ ಸೋರೆಕಾಯಿ ಆಕಾರದ ಒಂದು ವಿಶಿಷ್ಟ ಕಲ್ಲಿನ ಆಕೃತಿ ಗಮನ ಸೆಳೆಯುತ್ತವೆ' ಎಂದು ಹೇಳುತ್ತಾರೆ. (ಅದೇ ಪು ೨೯೮) ಗಂಗರ ಕಾಲದ ಇದೇ ಬಗೆಯ ಕುಬ್ಜ ಸರಳ ದೇವಾಲಯಗಳು ಆಲೇನಹಳ್ಳಿ, ಹಲ್ಲೇಗರೆ, ಕೆರೆಗೋಡು, ಬೇಲೂರು, ಕಾಲ್ಕುಣಿ, ಚಿಕ್ಕವಾಗಿಲು ಮುಂತಾದ ಕಡೆಗಳಲ್ಲೂ ಕಂಡುಬರುತ್ತವೆ. ಕೆಲೆವೆಡೆ ಗಂಗರ ಕಾಲದ ಇಟ್ಟಿಗೆಯ ಕಟ್ಟೋಣಗಳನ್ನು ಗುರುತಿಸಲಾಗಿದೆ.

ಚೋಳರ ವಾಸ್ತುಶಿಲ್ಪಗಳು ತಕ್ಕಷ್ಟು ವಿಶಾಲವಾದ ರಚನೆಗಳಾಗಿದ್ದು ಹಲವಾರು ಹಿಂಚಾಚು-ಮುಂಚಾಚುಗಳಿಂದ ಕೂಡಿದ ಅಧಿಷ್ಠಾನ ಅದರ ಮೇಲೆ ಸರಳವಾದ ಯಾವುದೇ ಶಿಲ್ಪಗಳಿಲ್ಲದ ಭಿತ್ತಿ, ಮೇಲೆ ಕಪೋತ ನಾಲ್ಕು ಬದಿಗಳಿಂದ ಮೇಲೇರುತ್ತಾ ಕಿರಿದಾಗುತ್ತ, ಪಿರಿಮಿಡ್‌ಗಳಂತೆ ಅಂತ್ಯದಲ್ಲಿ ಒಂದಾಗಿ ಸೇರುವ ದ್ರಾವಿಡ ಶೈಲಿಯ ಗೋಪುರ

ಅವುಗಳಲ್ಲಿಯೂ ಹಲವಾರು ಪಟ್ಟಿಕೆಗಳು ಗೂಡುಗಳಂತಹ ರಚನೆಗಳೂ ತುದಿಯಲ್ಲಿ ಅಮಲಕ ಅಥವಾ ಕಲಶಗಳು ಕಂಡುಬರುತ್ತವೆ. ಕೆಲವೊಮ್ಮೆ ಅದೇ ಕಾಲದ ಇಲ್ಲವೆ ನಂತರ ಕಾಲದ ಹೊರಪ್ರಾಕರಗಳು, ಸುತ್ತಾಲಯಗಳು, ಸುತ್ತುವರಿದ ಬಯಲು ಅದಕ್ಕೂ ಹೊರಗೆ ಕೋಟೆ ಗೋಡೆಯಂತೆ ಎತ್ತರವಾದ ಗೋಡೆಗಳು ಇಲ್ಲಿಯ ವೈಶಿಷ್ಟವಾಗಿದ್ದು ಈ ಬಗೆಯ ರಚನೆಗಳನ್ನು ಮಾರೆಹಳ್ಳಿ, ತೊಣ್ಣೂರುಗಳಲ್ಲಿ ಕಾಣಬಹುದು.

ಹೊಯ್ಸಳರ ರಚನೆಯಂತೂ ತನ್ನದೇ ಆದ ಸೌಂದರ್ಯವನ್ನು ಉಳ್ಳಂತಹದು. ಹೊಸಹೊಳಲು, ಗೋವಿಂದನಹಳ್ಳಿ, ಬಸರಾಳು, ಅಘಲಯ, ನಾಗಮಂಗಲ, ಕಿಕ್ಕೇರಿ ಇತ್ಯಾದಿ ಎಡೆಗಳಲ್ಲಿ ಹೊಯ್ಸಳರ ದೊಡ್ಡ ಹಾಗೂ ಚಿಕ್ಕ ಪ್ರಮಾಣದ ದೇವಾಲಯಗಳನ್ನು ಕಾಣಬಹುದು. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ಒಳಗೆ ಕಂಬದ ಮೇಲಿನ ಹತ್ತಕ್ಕೂ ಹೆಚ್ಚು ಮದನಿಕಾವಿಗ್ರಹಗಳು ಬೇಲೂರಿನದಂತೆ ನೃತ್ಯ–ವಾದ್ಯ–ಸಂಗೀತಗಾರ್ತಿಯರ ಸುಂದರ ಶಿಲ್ಪಗಳಾಗಿವೆ.

ವಿಜಯನಗರ ಕಾಲದಲ್ಲಿ ಎತ್ತರವಾದ ರಾಯಗೋಪುರಗಳು, ಮಂಟಪ, ಕಲ್ಯಾಣಿಗಳು ಹೆಚ್ಚಾಗಿ ರಚಿತವಾಗಿದ್ದು ಬೃಹದಾಕಾರದ ಹಲವಾರು ಉಬ್ಬು ಶಿಲ್ಪಗಳಿಂದ ಕೂಡಿದ ಕಂಬಗಳನ್ನು ಕಾಣಬಹುದು. ಮೇಲುಕೋಟೆಯಲ್ಲಿರುವ ಹಲವಾರು ದೇವಾಲಯಗಳ, ಮಂಟಪಗಳ ಕಂಬಗಳ ಮೇಲಿನ ಕೆತ್ತನೆ ವೈವಿಧ್ಯಮಯವಾಗಿದ್ದು ಅವುಗಳಲ್ಲಿಯ ಪೌರಾಣಿಕ ಸಾಮಾಜಿಕ ಅಂಶಗಳು ಅಧ್ಯಯನ ಯೋಗ್ಯವಾಗಿದೆ. ಚಲುವನಾರಾಯಣ ದೇವಾಲಯದ ಅಮ್ಮನವರ ಸನ್ನಿಧಿಯ ಮುಂದಿನ ಮೂವ್ವತ್ತಕ್ಕೂ ಹೆಚ್ಚು ಕಂಬಗಳಲ್ಲಿ ದೇವತೆಗಳು, ಕಿರಾತಾರ್ಜುನೀಯದಂತಹ ಕಥೆಗಳನ್ನು ಅತ್ಯಾಕರ್ಶಕವಾಗಿ ಕಡೆಯಲಾಗಿದೆ. ಚಿಕಣಿ ಚಿತ್ರಗಳಂತೆ ಚಿಕ್ಕ ಚಿಕ್ಕ ಶಿಲ್ಪಗಳು ಚಲನಶೀಲತೆಯಿಂದ ಕೂಡಿದ್ದು ಶಿಲ್ಪಕಲೆಯ ದೃಷ್ಟಿಯಿಂದ ಉಲ್ಲೇಖಾರ್ಹವಾಗಿದೆ. ಇವಲ್ಲದೆ ಸುತ್ತಾಲಯದ ಒಳಹೊರಗಿನ ನೂರಾರು ಗಾರೆಯ ಶಿಲ್ಪಗಳು ಮುಂದಿನ ಮೈಸೂರು ಅರಸರ ಕಾಲದವಾಗಿದ್ದರೂ ಶೈಲಿಯಲ್ಲಿ ವಿನ್ಯಾಸಗಳಲ್ಲಿ ಬೇರೆಯದೇ ಆಗಿವೆ. ದೊಡ್ಡ ಪ್ರಮಾಣದ ಗಾರೆಯ ಶಿಲ್ಪಗಳು ಗೂಡಿನಂತಹ ರಚನೆಯ ಒಳಗಿದ್ದು ಅವುಗಳಲ್ಲಿಯ ನಿಲವು, ವಸ್ತ್ರಾಭರಣ, ಮುಖಭಾವ, ಸುತ್ತಲಿನ ಅಲಂಕರಣ ಇತ್ಯಾದಿಗಳಿಂದ ಗಮನಾರ್ಹವಾಗಿವೆ.

**ಮುಸ್ಲಿಂ ಮತ್ತು ಕ್ರೈಸ್ತಮತೀಯ ವಾಸ್ತು ಶಿಲ್ಪಗಳು:** ಜಿಲ್ಲೆಯಲ್ಲಿ ಮುಸ್ಲಿಂ ಹಾಗೂ ಕ್ರೈಸ್ತಮತೀಯ ವಾಸ್ತು ಶಿಲ್ಪಗಳನ್ನೂ ಕಾಣಬಹುದು. ಕೃಷ್ಣರಾಜಪೇಟೆಯ ಸಿಂದಗಟ್ಟದಲ್ಲಿ ೧೫೩೭ರಲ್ಲಿಯೇ ರಂಗೈ ನಾಯಕ, ಬಾಬು ಸೆಟ್ಟಿ ಅವರುಗಳು ಕಟ್ಟಿಸಿದ ಕಲ್ಲಮಸೀತಿಗೆ ದಾನ ನೀಡಿರುವ ಶಾಸನವಿದ್ದು ಇಂದಿಗೂ ಮಸೀದಿ ಸುಸ್ಥಿತಿಯಲ್ಲಿದೆ. ಅಲ್ಲಲ್ಲಿ ಕಮಲ ಹಾಗೂ ಆನೆಗಳ ಶಿಲ್ಪಗಳಿದ್ದು, ಶಾಸನದಲ್ಲಿ 'ಕಲ್ಲ ಮಸೀತಿಯ ದೇವಸ್ಥಾನ' ಎಂಬ ಹೆಸರಿಗೆ ಉದಾಹರಣೆಯಾಗಿದೆ. ಹೈದರ್–ಟಿಪ್ಪುಗಳ ಕಾಲದಲ್ಲಿ ಶ್ರೀರಂಗಪಟ್ಟಣ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಸೀದಿ, ದರ್ಗ ಇತ್ಯಾದಿ ಮುಸ್ಲಿಂ ವಾಸ್ತುಗಳ ರಚನೆಗಳಾದವು. ಶ್ರೀರಂಗಪಟ್ಟಣದಲ್ಲಿರುವ ಜಾಮಿಯ ಮಸೀದಿ ಮಿನಾರುಗಳಿಂದ ಕೂಡಿ ಬೃಹದಾಕಾರದ ರಚನೆಯಾಗಿದೆ. ಹೈದರ್ ಹಾಗೂ ಟಿಪ್ಪುಗಳ ಸಮಾಧಿಯೂ (ಗುಂಬಜ್) ಪುಟ್ಟದಾದರೂ ಕರಿಯ ಹೊಳಪು ಶಿಲೆಯಲ್ಲಿ ನಿರ್ಮಿಸಿದ ಸುಂದರವಾದ ರಚನೆ, ಇದಲ್ಲದೆ ಶಿವಸಮುದ್ರ, ತೊಣ್ಣೂರು, ನಿಡಘಟ್ಟ, ನಾಗಮಂಗಲಗಳಲ್ಲಿಯೂ ಮುಸ್ಲಿಂ ವಾಸ್ತುಗಳನ್ನು ಕಾಣಬಹುದು. ಅರಮನೆಗಳ ಪೈಕಿ ಶ್ರೀರಂಗಪಟ್ಟಣದ ದರಿಯಾದೌಲತ್ ಇಂದು ಸುಸ್ಥಿತಿಯಲ್ಲಿದ್ದು ಅದರಲ್ಲಿಯ ಚಿತ್ರಕಲೆಯಿಂದಾಗಿ ಹೆಸರವಾಸಿಯಾಗಿದೆ. ಎತ್ತರವಾದ ಬಾಗಿಲಗಳು ಮರದ ಕಂಬಗಳು ಅವುಗಳ ಮೇಲಿನ ಹೂ ಬಳ್ಳಿಗಳ ವಿನ್ಯಾಸ ಇತ್ಯಾದಿಯಿಂದಾಗಿ ಮುಸ್ಲಿಂ ವಾಸ್ತುವಿಗೆ ಉತ್ತಮ ಮಾದರಿಯಾಗಿದೆ.

ಕ್ರಿಶ್ಚಿಯನ್ ಸಮುದಾಯ ಮೈಸೂರು ಅರಸರ ಕಾಲದಿಂದಲೇ ಇಲ್ಲಿ ಕಂಡುಬರುತ್ತವೆ. ಅಂದಿನ ರಾಜ್ಯದ ಪ್ರದೇಶದಲ್ಲಿ ೧೭೮೭ರಲ್ಲಿ ಮೈಸೂರು ಯುದ್ಧದಲ್ಲಿ ೨೦ ಕ್ರೈಸ್ತ ದೇವಾಲಯಗಳು ನಾಶವಾದುವೆಂದೂ ತಿಳಿದುಬರುತ್ತದೆ.

೧೬೯೦ರ ವೇಳೆಗೆ ಜಿಲ್ಲೆಯಲ್ಲಿ ಏಳು ಚರ್ಚುಗಳು ಉಳಿದಿದ್ದವು. ಎರಡನೇ ಕೃಷ್ಣರಾಜ ಒಡೆಯರ ಕಾಲದಲ್ಲಿ ಲಿಯನಾರ್ಡೋ ಎಂಬಾತ ಕನ್ನಡ ಕಲಿತು ಹಲವು ಪುಸ್ತಕಗಳನ್ನು ಬರೆದಿದ್ದು ೧೬೭೬ರಲ್ಲಿ ಶ್ರೀರಂಗಪಟ್ಟಣದ ನಿರ್ಮಲ ಮಾತೆಯ ದೇವಾಲಯದಲ್ಲಿ ಮರಣ ಹೊಂದಿದ್ದ. ಟಿಪ್ಪು ಬ್ರಿಟಿಷರ ವಿರುದ್ಧವಿದ್ದುದರಿಂದ ಕಿರಂಗೂರಿನ ಚರ್ಚ್ ಅಲ್ಲದೆ ಹಲವಾರು ಚರ್ಚ್‌ಗಳನ್ನು ನಾಶಗೊಳಿಸಿದ್ದನಾದರೂ ಫ್ರೆಂಚ್ ಮೂಲದ ಕ್ರೈಸ್ತರು ತಮ್ಮ ಆಲಯಗಳನ್ನು ರಚಿಸಿಕೊಂಡಿದ್ದರು. ಪಾದ್ರಿ ಅಬ್ಬೆದುಬಾಯಿ ೧೭೯೨ರಲ್ಲಿ ಭಾರತಕ್ಕೆ ಬಂದು ಶ್ರೀರಂಗಪಟ್ಟಣದಲ್ಲಿ ನೆಲಸಿ ಚರ್ಚೊಂದನ್ನು ಕಟ್ಟಿದ್ದು ಇಂದಿಗೂ ಸುಸ್ಥಿತಿಯಲ್ಲಿ ಉಳಿದುಬಂದಿದೆ. ಇದಲ್ಲದೆ ಮಂಡ್ಯ, ಮದ್ದೂರು, ಮಳವಳ್ಳಿ, ಪಾಲಳ್ಳಿ, ಪಾಂಡವಪುರ, ಚಿಕ್ಕರಸಿನಕೆರೆ, ಶಿವಸಮುದ್ರ ಇತ್ಯಾದಿ ಕಡೆಗಳಲ್ಲೂ ಕ್ಯಾಥೋಲಿಕ್ ಪಂಗಡದ ಚರ್ಚ್ ವಾಸ್ತುವನ್ನು ಕಾಣಬಹುದು. ವಿಶಾಲವಾದ ಪ್ರಾರ್ಥನಾಗೃಹ ಏಸು ಕ್ರೈಸ್ತ ಮೇರಿ ಮುಂತಾದ ಬಿಡಿ ಶಿಲ್ಪಗಳು, ಕ್ರೈಸ್ತನ ಜೀವಿತಾವಧಿಯ ಕಥೆಗಳನ್ನೊಳಗೊಂಡ ಫಲಕಗಳು (ಸ್ಟೇಷನ್ಸ್) ಇತ್ಯಾದಿಗಳಿಂದಲೂ ಶಿಲುಬೆಯಿಂದ ಕೂಡಿದ ಹೊರ ನೋಟದ ವಿನ್ಯಾಸದಿಂದಲೂ, ತನ್ನದೇ ಆದ ವಾಸ್ತು ಶಿಲ್ಪವನ್ನು ಹೊಂದಿದೆ. ಪ್ರಾಟೆಸ್ಟೆಂಟ್ ಪಂಥದವರೂ ಮಂಡ್ಯದಲ್ಲಿ ೧೯೩೭ರಿಂದಲೇ ತಮ್ಮದೇ ಆದ ಪ್ರಾರ್ಥನಾ ಗೃಹವನ್ನು ಹೊಂದಿದ್ದಾರೆ. ಮದ್ದೂರಿನ ಬಳಿಯ ಶಿವಪುರದ 'ಸತ್ಯಾಗ್ರಹ ಸೌಧ' ಇತ್ತೀಚಿನ ರಚನೆಯಾದರೂ ವೃತ್ತಾಕಾರವಾದ, ಚೂಪಾದ ಗೋಪುರವುಳ್ಳ ಕಟ್ಟಡ, ವಾಸ್ತುವಿನ ದೃಷ್ಟಿಯಿಂದ ವಿನೂತನವಾದುದು.

**ಶಿಲ್ಪ ಕಲಾವಿದರು:** ಇತ್ತೀಚಿನವರೆಗೂ ಜಿಲ್ಲೆಯಲ್ಲಿ ಶಿಲ್ಪಿಗಳು ಅಧಿಕ ಸಂಖ್ಯೆಯಲ್ಲಿದ್ದು ಕಲಾಕೃತಿ ರಚನೆಗಳು ನಡೆಯುತ್ತಿದ್ದವು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ವೆಂಕಟಾಚಾರ್ಯರು, ಶ್ರೀಕಂಠಾಚಾರ್ಯರು, ವೆಂಕಾಚಾರ್ಯ, ಚಿಕ್ಕಾಚಾರ್ಯ ಮುಂತಾದ ಅನೇಕ ಶಿಲ್ಪಿಗಳು ನಾಗಮಂಗಲ ಪರಿಸರದಲ್ಲಿ ಇದ್ದರು. ವೆಂಕಟಾಚಾರ್ಯರು ಹಲವಾರು ಸಹಾಯಕರನ್ನು ಇರಿಸಿಕೊಂಡು ಶಿಲ್ಪಕಲೆಯ ಕಾರ್ಯಾಗಾರ (ಕಂಪನಿ) ವೊಂದನ್ನು ನಡೆಸುತ್ತಿದ್ದು ದೊಡ್ಡ ಅಳತೆಯ ಲೋಹದ ವಿಗ್ರಹಗಳನ್ನು ರೂಪಿಸಿಕೊಡುತ್ತಿದ್ದರು. ಇವರ ತಂದೆಯವರು ರಚಿಸಿದ ಕಂಚಿನ ಕೃತಿಯೊಂದು ೧೮೮೦ರಲ್ಲಿ ಲಂಡನ್‌ನಲ್ಲಿ ಜರುಗಿದ ವಿಶ್ವ ವಸ್ತುಪ್ರದರ್ಶನದಲ್ಲಿ ಬಹುಮಾನಗಳಿಸಿತ್ತು. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯ ಶಂಕುಸ್ಥಾಪನೆಯ ವೇಳೆಯಲ್ಲಿ (೧೯೦೧) ವಾಸ್ತುಪೂಜೆಗೆ ಬೇಕಾದ ಕರಂಡಕವನ್ನು ವೆಂಕಟಾಚಾರ್ಯರು ರೂಪಿಸಿಕೊಟ್ಟಿದ್ದು ಅದಕ್ಕಾಗಿ ಪ್ರಿನ್ಸ್ ಆಫ್ ವೇಲ್ಸ್ ಅವರಿದ ಸನ್ಮಾನ ಪಡೆದರು. ನಂತರವೂ ಶಾಲೆಗೆ ಬೇಕಾದ ನೆರವು ನೀಡಿದರು. ನಾಗಮಂಗಲದ ಪ್ರಖ್ಯಾತ ಶಿಲ್ಪಿಗಳೆನಿಸಿದ್ದ ಯಜಮಾನ ಕಸ್ತೂರಾಚಾರ್ಯರು ಮತ್ತು ಧರ್ಮಾಧಿಕಾರಿ ನೀಲಕಂಠಾಚಾರ್ಯರು ಲಂಡನ್ನಿನಲ್ಲಿ ೧೮೮೯ರಲ್ಲಿ ನಡೆದ 'ಕಲೋನಿಯಲ್ ಅಂಡ್ ಇಂಡಿಯನ್ ಪ್ರದರ್ಶನ' ದಲ್ಲಿ ಬಹುಮಾನವನ್ನು ಗಳಿಸಿದ್ದರು.

ಇವರ ಮಕ್ಕಳಲ್ಲಿ ಒಬ್ಬರಾದ ಚಿನ್ನಾಚಾರ್ಯರು (೧೮೯೩-೧೯೭೭) ನಾಗಮಂಗಲದಲ್ಲಿ ಜನಿಸಿದ್ದು ಪೂರ್ವಿಕರಿಂದ ಶಿಲ್ಪಕಲೆಯನ್ನು ಕಲಿತು ಆರಂಭದ ದಿನಗಳಲ್ಲಿ ಮುಂಬಯಿ, ಸಿಕೆಂದರಾಬಾದ್, ಹೈದರಾಬಾದ್‌ಗಳಲ್ಲಿ ಸಂಚರಿಸಿ ಅಲ್ಲಿ ಕೆಲಕಾಲ ತಂಗಿದ್ದು ಕೃತಿ ರಚನೆ ಮಾಡಿಕೊಟ್ಟರು. ಹೈದರಾಬಾದಿನಲ್ಲಿ ಏಳನೇ ಎಡ್ವರ್ಡ್ ಅವರಿಗಾಗಿ ಶಿಲ್ಪವೊಂದನ್ನು ಹಾಗೂ ಸಾಲಾರ್ ಜಂಗ್ ಅವರ ಭಾವಶಿಲ್ಪ, ಮುತ್ಯಾಲ ರಾಮಣ ಎಂಬುವವರ ಭಾವಶಿಲ್ಪಗಳನ್ನು ರಚಿಸಿಕೊಟ್ಟರು. ನಂತರ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಲೋಹ ವಿಭಾಗದ ಬೋಧಕರಾಗಿ ಬಂದರು. ಅಣ್ಣಾಮಲೈಗೆ ನಟರಾಜ, ಗೋವಿಂದರಾಜ ವಿಗ್ರಹ ರೂಪಿಸಿ ಕೊಟ್ಟದ್ದಕ್ಕೆ ಮದ್ರಾಸ್ ಗವರ್ನರ್‌ರಿಂದ 'ವಿಶ್ವಕರ್ಮ ಶಿಲ್ಪ ಕಲಾ ನಿಧಿ' ಎಂಬ ಬಿರುದು ಸನ್ಮಾನಗಳನ್ನೂ ಪಡೆದರು. ಬೇಲೂರು ದೇವಾಲಯಕ್ಕೆ ನೀಡಿದ ನಾಲ್ವಡಿ ಕೃಷ್ಣಾರಾಜರ ಆಳೆತ್ತರದ ಲೋಹಪ್ರತಿಮೆ, ಭರತಪುರ ಅರಮನೆಗೆ ನೀಡಿದ ಶ್ರೀ ಚಾಮುಂಡಾಂಬಿಕೆ,

ಕೂಡಲಿ ಶೃಂಗೇರಿ ಮಠಕ್ಕೆ ಬೆಳ್ಳಿಯ ಪಲ್ಲಕ್ಕಿಗಳಲ್ಲದೆ ನಾಟ್ಯ ಸರಸ್ವತಿ, ಸರಸ್ವತಿ, ಅಂಬೆಗಾಲ ಕೃಷ್ಣ, ನಟರಾಜ, ಶ್ರೀನಿವಾಸ, ತಾಂಡವೇಶ್ವರ ಇತ್ಯಾದಿ ಹಲವಾರು ಶಿಲ್ಪಗಳನ್ನು ಉದಾಹರಿಸಬಹುದು. ಕೆಲಕಾಲ ಬೆಂಗಳೂರಿನ ಡಿಸೈನ್ ಸೆಂಟರ್‌ನಲ್ಲಿಯೂ ಇದ್ದ ಚಿನ್ನಾಚಾರ್ಯರು ಮೈಸೂರಿನ ದಸರಾ ಪ್ರದರ್ಶನಗಳಲ್ಲಿ ಬಹುಮಾನಗಳಿಸಿರುವರಲ್ಲದೆ ೧೯೬೯ ರಲ್ಲಿ ರಾಜ್ಯ ಪ್ರಶಸ್ತಿ ಪಡೆದಿದ್ದರು. ಇವರ ಸಹೋದರರಾದ ಶಾಮಾಚಾರ್, ಸೂರ್ಯ ನಾರಾಯಣಚಾರ್, ವಿಶ್ವರೂಪಾಚಾರ್ ಅವರುಗಳೂ ಶಿಲ್ಪಿಗಳಾಗಿದ್ದು ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟ್ಯೂಟ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ.

ಜಿಲ್ಲೆಯ ಇನ್ನೊಬ್ಬ ಖ್ಯಾತ ಕಲಾವಿದರೆಂದರೆ ನಾಗಮಂಗಲ ಪುಟ್ಟಚಾರ್ಯ ಶ್ರೀನಿವಾಸಾಚಾರ್ಯರು (೧೯೧೩–೯೨) ತಂದೆ ಪುಟ್ಟಾಚಾರ್ಯ ತಾತ ನೀಲಕಂಠಚಾರ್ಯ ಮತ್ತು ವೆಂಕಟಾಚಾರ್ಯರೆಲ್ಲದೆ ದೊಡ್ಡಪ್ಪ ಚಿಕ್ಕಪ್ಪರೆಲ್ಲರೂ ಶಿಲ್ಪಿಗಳಾಗಿದ್ದು ಅನೇಕ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಊರಿಗೇ ಹಿರಿಯರಾಗಿದ್ದ ಶ್ರೀಕಂಠಾಚಾರ್ಯರ ಮಾರ್ಗದರ್ಶನದಲ್ಲಿ ಶಿಲ್ಪಕಲೆ ಕಲಿತು ಸ್ಥಳೀಯರಿಗೆ ನವಗ್ರಹಶಿಲ್ಪ, ದೇವತಾಮೂರ್ತಿಗಳು, ಪ್ರಭಾವಳಿ, ನಂದಿಕಂಬ, ಧ್ವಜಸ್ಥಂಭ, ಬಾಗಿಲುವಾಡ ಇತ್ಯಾದಿಗಳನ್ನು ರೂಪಿಸಿಕೊಟ್ಟರು. ಮೈಸೂರು ಅರಮನೆಗೆ ಭುವನೇಶ್ವರಿ ದೇವಿಯ ಉತ್ಸವಮೂರ್ತಿ, ಅರಮನೆ ಸಿಂಹಾಸನದ ಮೆಟ್ಟಿಲುಗಳ ಬದಿಯ ಕೈಪಿಡಿಯಲ್ಲಿ ಎರಡು ಚಾಮರಧಾರಿಣಿಯರು, ಪರಕಾಲ ಮಠಕ್ಕೆ ಬೆಳ್ಳಿಯ ಹಯಗ್ರೀವ ಮೂರ್ತಿ, ಧರ್ಮಸ್ಥಳಕ್ಕೆ ಸರಸ್ವತಿ, ಬದರಿಯ ದೇವಾಲಯಕ್ಕೆ ದ್ವಾರಪಾಲಕರು, ಭರತಪುರ ಮಹಾರಾಜರಿಗೆ ದೊಡ್ಡ ಗಾತ್ರದ ಚಿನ್ನದ ಅಂಬೆಗಾಲು ಕೃಷ್ಣ ಇತ್ಯಾದಿಗಳನ್ನು ತಯಾರಿಸಿ ಕೊಟ್ಟರು. ಕೆಲಕಾಲ ಬೆಂಗಳೂರಿನ ಡಿಸೈನ್ ಸೆಂಟರ್‌ನಲ್ಲಿ ನೇಮಕವಾಗಿದ್ದು, ಆವರೆವಿಗೂ ಅಲ್ಲಿನ ಚೋಳ ಶೈಲಿಯಿಂದ ಹೊರತಾಗಿ, ಯಾರೂ ಪ್ರಯೋಗಿಸದೆ ಇದ್ದಂತಹ ಹೊಯ್ಸಳ ಶೈಲಿಯ ಶಿಲ್ಪಗಳನ್ನು ಸವಾಲೆಂಬಂತೆ ಸ್ವೀಕರಿಸಿ ಅನೇಕ ಶಿಲ್ಪಗಳನ್ನು ರಚಿಸಿದರು. ಈ ಶೈಲಿಯ ನಾಟ್ಯ ಸರಸ್ವತಿ ಡಿಸೈನ್ ಸೆಂಟರಿನಲ್ಲಿದೆ. ಚನ್ನಕೇಶವ ಶಿಲ್ಪಕ್ಕೆ ೧೯೬೮ರಲ್ಲಿ ರಾಷ್ಟ್ರ ಪ್ರಶಸ್ತಿ ದೊರೆತಿದ್ದು ಕೃತಿ ದೆಹಲಿಯ ರಾಷ್ಟ್ರೀಯ ಪ್ರದರ್ಶನಾಲಯದಲ್ಲಿದೆ. ಕರ್ನಾಟಕದ ಶಿಲ್ಪಕಲೆಗೆ ಆಚಾರ್ಯರ ಮತ್ತೊಂದು ಕಾಣಿಕೆಯೆಂದರೆ ಎರಡು ವಿಭಿನ್ನ ಲೋಹಗಳನ್ನು ಶಿಲ್ಪಗಳಲ್ಲಿ ಬೆಸೆಯುವಿಕೆ. ಉದಾಹರಣೆಗೆ ಅರ್ಧನಾರೀಶ್ವರ ವಿಗ್ರಹದಲ್ಲಿ ಈಶ್ವರನ ಭಾಗವನ್ನು ಕಂಚಿನಿಂದಲೂ, ಪಾರ್ವತಿಯ ಭಾಗವನ್ನು ತಾಮ್ರದಿಂದಲೂ ರೂಪಿಸಿ ಒಂದಾಗಿ ಹದ್ದಿಸುವಿಕೆ ಎರಡೂ ಲೋಹಗಳು ಕರಗುವ ತಾಪಮಾನ ಬೇರೆಬೇರೆಯಾಗಿದ್ದು ಈ ಬಗೆಯ ಶಿಲ್ಪ ರಚನೆ ತೀರಾ ಕಷ್ಟಸಾಧ್ಯ. ಈ ಬಗೆಯ ಅರ್ಧನಾರೀಶ್ವರ ಶಿಲ್ಪಕ್ಕೆ ೧೯೭೩ರಲ್ಲಿ ಸ್ವಾತಂತ್ರ್ಯ ರಜತೋತ್ಸವದ ಅಂಗವಾಗಿ ದೆಹಲಿಯಲ್ಲಿ ಏರ್ಪಡಿಸಿದ್ದ ಪ್ರದರ್ಶನದಲ್ಲಿ ಪ್ರಧಾನಿಯವರ ರಾಷ್ಟ್ರಪ್ರಶಸ್ತಿ ಬಂದಿತು. ಇದೇ ಬಗೆಯ ಇನ್ನೊಂದು ಕೃತಿಯೆಂದರೆ ಹರಿಹರ. ಇವಲ್ಲದೆ ಆಚಾರ್ಯರು ರಚಿಸಿರುವ ಕೃತಿಗಳೆಂದರೆ ಚೋಳರಾಣಿ, ಮದನಿಕೆ, ಕಪಟ ಭೈರವಿ, ತ್ವಷ್ಟ ಬ್ರಹ್ಮ ಇತ್ಯಾದಿಗಳು. ಕೇಂದ್ರ ಪ್ರಶಸ್ತಿಗಳಲ್ಲದೆ ಆಚಾರ್ಯರಿಗೆ ಯುವಬರಹಗಾರರ ಕಲಾವಿದರ ಗಿಲ್ಡ್ (೧೯೮೨) ಶಿಲ್ಪಕಲಾ ಪ್ರತಿಷ್ಠಾನ (೧೯೮೯) ರಾಜ್ಯ ಲಲಿತ ಕಲಾ ಅಕಾಡಮಿ (೧೯೯೧) ಗಳೂ ಸನ್ಮಾನಿಸಿ ಗೌರವಿಸಿದ್ದವು. ಇವರ ಮಕ್ಕಳಾದ ಗೋವಿಂದರಾಜ, ನಟರಾಜ, ನಾಗೇಶ್ವರ ಶಿಲ್ಪಕಾರ್ಯ ಮಾಡುತ್ತಿದ್ದಾರೆ.

ನಾಗಮಂಗಲದಲ್ಲಿ ಸಾಂಪ್ರದಾಯಿಕ ಶಿಲ್ಪಿ ಮನೆತನದಲ್ಲಿ ಜನಿಸಿದ ಎನ್.ಜಿ.ನೀಲಕಂಠಾಚಾರ್ಯರು (೧೯೨೪) ತಂದೆ ಗಣೇಶಚಾರ್, ದೊಡ್ಡಪ್ಪ ಶ್ರೀಕಂಠಾಚಾರ್ ಅವರಿಂದ ಶಿಲ್ಪರಚನೆಯನ್ನು ಅಭ್ಯಸಿಸಿ ನಂತರ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಿತು ಮತ್ತೆ ನಾಗಮಂಗಲದಲ್ಲಿ ತಮ್ಮದೇ ಆದ ಶಿಲ್ಪ ಕಾರ್ಯಾಗಾರವೊಂದನ್ನು ಸಾಕಷ್ಟು ವರ್ಷಗಳು ನಡೆಸುತ್ತಿದ್ದು ಇಂದು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಲೋಹದ ತಗಡಿನ ಮೇಲೆ ನಕಾಸೆ ತೆಗೆಯುವ ಹಾಗೂ ಅತ್ಯಂತ ಸೂಕ್ಷ್ಮವಾದ ಕೆತ್ತನೆ ಕೆಲಸಗಳಿಗೆ ಹೆಸರುವಾಸಿಯಾದ ಶ್ರೀಯುತರು ಮೈಸೂರು

ಅರಮನೆಯಲ್ಲದೆ, ಗುಬ್ಬಿ, ಕಳಸ ಇತ್ಯಾದಿಗಳ ಗುರುಮನೆಗಳಿಗೂ ಶಿಲ್ಪ ಕಲಾಕೃತಿಗಳನ್ನೂ ರಚಿಸಿಕೊಟ್ಟಿದ್ದಾರೆ. ಇವರ ಶಿವಶಂಕರ ಲೀಲಾ ನೃತ್ಯ ಶಿಲ್ಪವು ಅಪಾರ ಮೆಚ್ಚುಗೆ ಗಳಿಸಿದೆ. ಖ್ಯಾತ ಕಲಾ ವಿಮರ್ಶಕಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ನಟರಾಜ, ಪಾರ್ವತಿ, ಮದನಿಕೆ ಮೊದಲಾದ ವಿಗ್ರಹಗಳನ್ನು ರಚಿಸಿಕೊಟ್ಟಿದ್ದಾರೆ. ೧೯೫೬ರಲ್ಲಿ ನಾಗಮಂಗಲದಲ್ಲಿ 'ಹಿತ್ತಾಳೆ ಕೇಂದ್ರ'ವೊಂದು ಆರಂಭವಾದಾಗ ಅದರ ಮೇಲ್ವಿಚಾರಕರಾಗಿ ಮೇಣದ ಕೆಲಸ, ಡ್ರಾಯಿಂಗ್, ಕಲ್ಲು, ಕಂಚು ಹಿತ್ತಾಳೆಯ ಶಿಲ್ಪಗಳು, ತಗಡಿನ ಮೇಲೆ ನಕಾಸೆ ತೆಗೆಯುವಿಕೆ ಇವೇ ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರು. ಮುಂದೆ ಈ ಕೇಂದ್ರ ಕೈಗಾರಿಕಾ ಶಾಲೆಯಾಗಿ ಪರಿವರ್ತಿತವಾಗಿದ್ದು ನೀಲಕಂಠಾಚಾರ್ಯರು ತಮ್ಮ ಸ್ವಂತ ಕಾರ್ಯಾಗಾರಕ್ಕೆ ಮರಳಿದರು. ಇವರ ಸಹೋದರರು ಹಾಗೂ ಇತರ ಶಿಲ್ಪಿಗಳೂ ಸೇರಿ ೧೯೫೬ರಲ್ಲಿ 'ಶಿಲ್ಪಕಲಾ ಸಹೋದರರ ಸಂಘ' ಎಂಬ ಸಂಸ್ಥೆ ಸ್ಥಾಪಿಸಿ ಶಿಲ್ಪ ಕಲಾಭಿವೃದ್ಧಿಗೆ ಶ್ರಮಿಸುತ್ತಾ ಬಂದರು. ಆಚಾರ್ಯರಿಗೆ ಈವರೆಗೆ ಹಲವಾರು ಗೌರವಗಳು ಪ್ರಶಸ್ತಿಗಳೂ ಸಂದಿವೆ. ೧೯೫೬ರಲ್ಲಿ 'ಮದನಿಕೆ' ಗೆ, ೬೧ರಲ್ಲಿ 'ಬುದ್ಧ' ನಿಗೆ, ೬೫ರಲ್ಲಿ 'ಕೃಷ್ಣ' ವಿಗ್ರಹಕ್ಕೆ, ೬೬ರಲ್ಲಿ ನೃತ್ಯ ಸರಸ್ವತಿಗೆ ಮೈಸೂರು ದಸರಾ ಪ್ರದರ್ಶನದಲ್ಲಿ ಬಹುಮಾನಗಳು ಬಂದಿವೆ. ೭೪ರಲ್ಲಿ 'ಚನ್ನಕೇಶವ' ಶಿಲ್ಪಕ್ಕೆ ರಾಜ್ಯ ಪ್ರಶಸ್ತಿ, ೭೮ರಲ್ಲಿ 'ವೇಣುಗೋಪಾಲ'ಕ್ಕೆ ನೀಲಂಸಂಜೀವರೆಡ್ಡಿ ಅವರಿಂದ ರಾಷ್ಟ್ರ ಪ್ರಶಸ್ತಿ, ೯೪ರಲ್ಲಿ ರಾಜ್ಯ ಕರಕುಶಲ ನಿಗಮದಿಂದ ಸನ್ಮಾನ, ೯೬ರಲ್ಲಿ ಪ್ರಖ್ಯಾತ ಜಕಣಾಚಾರ್ಯ ಪ್ರಶಸ್ತಿಗಳಲ್ಲದೆ ಅಖಿಲ ಭಾರತ ಕರಕುಶಲ ಕೈಗಾರಿಕಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಪ್ರಸ್ತುತ ಶಿಲ್ಪಕಲಾ ಅಕಾಡಮಿಯ ಅಧ್ಯಕ್ಷರಾಗಿದ್ದಾರೆ. ನೀಲಕಂಠಾಚಾರ್ಯರ ಇನ್ನಿತರ ಕೃತಿಗಳೆಂದರೆ ಬೆಂಗಳೂರಿನ ರಾಮಮಂದಿರವೊಂದಕ್ಕೆ ಪಂಚಲೋಹದ ರಾಮ–ಸೀತೆ–ಲಕ್ಷ್ಮಣ–ಆಂಜನೇಯ ವಿಗ್ರಹ, ಧರ್ಮಸ್ಥಳದ ಮಂಜುನಾಥ ದೇವರಿಗೆ ಸ್ವರ್ಣದ ತಗಡಿನ ಪ್ರಭಾವಳಿ, ಮೈಸೂರಿನ ಸಿದ್ಧಲಿಂಗ ಸ್ವಾಮಿಗಳಿಗೆ ಮೂರು ಅಡಿ ಎತ್ತರದ ಸುಬ್ರಹ್ಮಣ್ಯ, ಅಂಬಾಭವಾನಿ, ಗಣಪತಿ ವಿಗ್ರಹ, ಆಂಧ್ರದ ಮದನಪಲ್ಲಿಯ ಆರ್ಟ್ ಪ್ರಾಡೆಕ್ಟ್ ಆಫ್ ಇಂಡಿಯಾ ಸಂಸ್ಥೆಗೆ ಲಕ್ಷ್ಮಿ, ಪಾರ್ವತಿ, ಕನ್ನಿಕಾಪರಮೇಶ್ವರಿಗಳಲ್ಲದೆ ದೊಡ್ಡ ಅಳತೆಯ ಲಕ್ಷ್ಮಿ, ನಟರಾಜ, ಚನ್ನಕೇಶವ, ಬುದ್ಧ, ಶಿವಶಂಕರ, ಬೇಲೂರಿನ ನಾಟ್ಯ ವಿಗ್ರಹಗಳು ಇತ್ಯಾದಿಗಳು. ಮುಂಬಯಿ, ಕೊಲ್ಕತ್ತ, ನೀಲಗಿರಿ, ಪಾಟ್ನ, ಚೆನ್ನೈ ಮುಂತಾದ ಕಡೆಗಳಲ್ಲಿಯ ಕಲಾ ರಸಿಕರ ಸಂಗ್ರಹಗಳಲ್ಲಿದೆ. ಇವರ 'ಶಿವ ಶಂಕರಿ ಲೀಲಾ ನೃತ್ಯ' ಸಹ ದೊಡ್ಡ ಆಕಾರದ ಕೃತಿಯಾಗಿದ್ದು ಅದರಲ್ಲಿಯ ಶಿವ–ಶಿವೆಯರ ನೃತ್ಯ ಭಂಗಿ, ಸಪೂರಾದ ಆಕಾರ, ಪ್ರಭಾವಳಿ, ಸಂಯೋಜನೆ, ಭಾವಪೂರ್ಣಿಕೆ ಇತ್ಯಾದಿಗಳೆಲ್ಲವೂ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದು ಬೆಂಗಳೂರಿನಲ್ಲಿ ಶಿಲ್ಪಕಲಾ ಕಾರ್ಯಾಗಾರ ಇರಿಸಿಕೊಂಡಿರುವ ನೀಲಕಂಠಾಚಾರ್ಯರ ಮಕ್ಕಳೂ ಸಹ ಭರವಸೆಯ ಶಿಲ್ಪಿಗಳಾಗಿದ್ದಾರೆ.

ನಾಗಮಂಗಲದ ಶಿಲ್ಪಾಚಾರ್ (೧೯೧೯–೯೧) ಅವರು ಉತ್ತಮ ಶಿಲ್ಪಿಗಳಾಗಿದ್ದು ಮೈಸೂರು ದಸರಾ ಪ್ರದರ್ಶನದಲ್ಲಿ ಹತ್ತು ವರ್ಷಗಳ ಕಾಲ ನಿರಂತರವಾಗಿ ಚಿನ್ನದ ಪದಕ ಪ್ರಶಸ್ತಿ ಪಡೆದಿದ್ದಾರೆ. ಪಾಂಡವಪುರದ ಸೂರ್ಯಾಚಾರ್, ಅವರ ಮಗ ತಿಮ್ಮಾಚಾರ್ ಹಾಗೂ ಅವರ ಮಗ ಚಿನ್ನಾಚಾರ್ ಅವರುಗಳು ಕಂಚಿನ ವಿಗ್ರಹಗಳ ರಚನೆಕಾರರು. ಇವರಲ್ಲದೆ ನಾಗಮಂಗಲದ ಗೋವಿಂದರಾಜು, ಚಿಕ್ಕ ಹಾಗೂ ದೊಡ್ಡ ವರದಾಚಾರ್‌ಗಳು, ಪಾಪಾಚಾರ್, ಚಿಕ್ಕಣ್ಣಚಾರ್, ಮಾಯಾಚಾರ್, ಕಾಳಾಚಾರ್, ಮೃತ್ಯುಂಜಯಾಚಾರ್, ಆದಿತ್ಯಾಚಾರ್, ವೆಂಕಟಾಚಾರ್, ವೆಂಕಟಪತಾಚಾರ್, ಮುನಿಸ್ವಾಮಾಚಾರ್, ಲಕ್ಷ್ಮಿನಾರಾಯಣಚಾರ್, ಜ್ಞಾನೇಂದ್ರಚಾರ್, ಮುಂತಾದವರು ಜಿಲ್ಲೆಯಲ್ಲಿ ಹೆಸರು ಪಡೆದ ಶಿಲ್ಪಿಗಳಾಗಿದ್ದಾರೆ. ನಾಗಮಂಗಲದ ಕಡವಳಿಯವರಾದ ಕೆ.ಎಚ್.ರಾಜಶೇಖರಾಚಾರ್ (೧೯೨೨) ಸಾಂಪ್ರದಾಯಿಕವಾಗಿ ಶಿಲ್ಪಕಲೆ ಕಲಿತು ತುಮಕೂರಿನಲ್ಲಿ 'ಸುಪನರ್ಸು ಶಿಲ್ಪ ಮತ್ತು ಕಲಾಶಾಲೆ' ನಡೆಸುತ್ತಿದ್ದಾರೆ. ಬೆಸಗರಹಳ್ಳಿಯಲ್ಲಿ ಆರ್.ಡಿ.ಈಶ್ವರಾಚಾರ್ಯರ ಕಾರ್ಯದರ್ಶಿತ್ವದಲ್ಲಿ 'ವಿಶ್ವಕರ್ಮ ಕುಶಲ ಕಲಾ ಸಂಘ' ರೂಪಿತಗೊಂಡಿತ್ತು. ನೆಲ್ಲಿಗೆರೆಯ ಯಕ್ಷಗಾನ ಸೂತ್ರದ ಗೊಂಬೆಯ ಕಲಾವಿದರಾದ ತಿಮ್ಮಪ್ಪಾಚಾರ್ಯರು ಶಿಲ್ಪರಚನೆ

ಸಹ ಮಾಡುತ್ತಾರೆ. ನಾಗಮಂಗಲದ ನಾ.ಭ.ಚಂದ್ರಶೇಖರಾಚಾರ್ಯರು (೧೯೧೦) ಶಿಲ್ಪಕಲೆ, ಶಿಲ್ಪಸಿದ್ಧಾಂತಗಳು, ವಿಶ್ವಕರ್ಮ ಜನಾಂಗ ಹಿರಿಮೆ, ವೈದಿಕ ತತ್ವಗಳು ಇತ್ಯಾದಿ ಕುರಿತು ಅನೇಕ ಲೇಖನಗಳನ್ನು ಗ್ರಂಥಗಳನ್ನು ರಚಿಸಿದ್ದಾರೆ. ಇಡೀ ಜನಾಂಗ ಒಂದುಗೂಡಲು, ಶಿಲಾಶಾಸ್ತ್ರದ ಮಹತ್ವ ಹೆಚ್ಚಾಗಲು ಹಲವಾರು ಸಂಘಟನೆಗಳನ್ನು ಮಾಡಿದ್ದಾರಲ್ಲದೆ 'ವಿಶ್ವಕರ್ಮ' ಎಂಬ ಪತ್ರಿಕೆಯನ್ನು ಆರಂಭಿಸಿದ್ದರು.

ಹಿತ್ತಾಳೆ ಶಿಲ್ಪಗಳ ಅಭಿವೃದ್ಧಿಗಾಗಿ ಕೇಂದ್ರವೊಂದನ್ನು ೧೯೫೮ರಲ್ಲಿ ನಾಗಮಂಗಲದಲ್ಲಿ ಆರಂಭಿಸಲಾಗಿದ್ದು ನಂತರ ಅದು ಕೈಗಾರಿಕಾ ಕುಶಲ ಕಲಾ ತರಬೇತಿ ಸಂಸ್ಥೆ ಎಂದು ಮರು ನಾಮಕರಣಗೊಂಡಿತು. ಇಂದಿಗೂ ನಡೆಯುತ್ತಿರುವ ಸಂಸ್ಥೆಯಲ್ಲಿ ಎರಡು ವರ್ಷದ ಮರಗೆಲಸ ಮತ್ತು ಕಮ್ಮಾರಿಕೆ ಹಾಗೂ ಒಂದು ವರ್ಷದ ಹತ್ತಿ ನೇಯ್ಗೆ, ಉಣ್ಣೆ ನೇಯ್ಗೆಗಳನ್ನು ಹಾಗೂ ಲೋಹೇತರ ವಸ್ತುಗಳಲ್ಲಿ ಎರಡು ಸರ್ಟಿಫಿಕೇಟ್ ಕೋರ್ಸ್ ನೀಡಲಾಗುತ್ತಿದೆ. ಪ್ರತೀ ವರ್ಷ ಸುಮಾರು ೧೫ ರಿಂದ ೨೦ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, ಐದಾರು ವಿದ್ಯಾರ್ಥಿಗಳಿಗೆ ಮಾಸಿಕ ೩೦೦ ರೂ.ಗಳ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆಯಲ್ಲದೆ ಐದಾರು ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಕಚ್ಚಾ ವಸ್ತುವಿಗಾಗಿ ಸರ್ಕಾರದಿಂದ ವಾರ್ಷಿಕ ೧೫-೨೦ ಸಾವಿರ ರೂ.ಗಳ ಅನುದಾನವಿದೆ. ಅಭ್ಯರ್ಥಿಗಳು ತಯಾರಿಸಿದ ಕೃತಿಗಳನ್ನು ಮಾರಾಟ ಮಾಡುವ ವ್ಯವಸ್ಥೆಯಿದೆ. ಪ್ರಸ್ತುತ ಕೆ.ಎಸ್.ವೆಂಕಟಾಚಾರ್ ಅವರು ಸಂಸ್ಥೆಯ ಮುಖ್ಯಸ್ಥರಾಗಿದ್ದಾರೆ. (ಮೊದಲಿಗೆ ಸೂಪರಿಂಟೆಂಡೆಂಟ್ ಎಂಬ ಅಭಿನಾಮವಿದ್ದು ಈಗ ಕೈಗಾರಿಕ ಉತ್ತೇಜನಾಧಿಕಾರಿ ಎಂದು ಬದಲಾಗಿದೆ) ಇವರಲ್ಲದೆ ಇನ್ನೂ ಐದು ಮಂದಿ ಬೋಧಕ ವರ್ಗದವರೂ ಅವರಿಗೆ ಒಬ್ಬೊಬ್ಬ ಸಹಾಯಕರೂ ಇದ್ದಾರೆ. ಜಿಲ್ಲೆಯಾದ್ಯಂತ ಶಿಲ್ಪ ಕಾರ್ಯಮಾಡುತ್ತಿರುವವರು ಬಯಸಿದಲ್ಲಿ ಈ ಸಂಸ್ಥೆಯಿಂದ ಸಲಹೆ ಪಡೆಯಲು ಅವಕಾಶವಿದೆ. ಸಂಸ್ಥೆಗೆ ಇನ್ನಷ್ಟು ಪ್ರೋತ್ಸಾಹದ ಅವಶ್ಯಕತೆಯಿದ್ದು ಕೃತಿಗಳ ತಯಾರಿಕೆ ಹಾಗೂ ವಿತರಣೆಗಳ ಅಭಿವೃದ್ಧಿಗೆ ಯೋಜನೆಗಳಿವೆ.

## ಸಂಗೀತ ಮತ್ತು ನೃತ್ಯ

ಮಂಡ್ಯ ಜಿಲ್ಲೆ ಸಂಗೀತ ನೃತ್ಯ ಕ್ಷೇತ್ರಕ್ಕೂ ಪ್ರತಿಭಾವಂತರನ್ನು ಕಾಣಿಕೆಯಾಗಿ ನೀಡಿದೆ. ಜಿಲ್ಲೆಯ ಹಲವಾರು ಶಾಸನಗಳಲ್ಲಿ ದೇವಾಲಯದ ಅಂಗಭೋಗ - ರಂಗಭೋಗಗಳ ಬಗ್ಗೆ ಉಲ್ಲೇಖವಿದ್ದು ಆಯಾ ಸಂದರ್ಭಗಳಲ್ಲಿ ಸಂಗೀತ ನೃತ್ಯ ಕಾರ್ಯಕ್ರಮವೂ ಪ್ರಧಾನವಾಗಿರುತ್ತಿದ್ದವು. ಹೊಯ್ಸಳ ವಿನಯಾದಿತ್ಯನನ್ನು ಕುರಿತ ಶಾಸನವೊಂದರಿಂದ ಆತ ಮದುವೆಯಾಗುತ್ತಿದ್ದ ಮೂವರು ರಾಣಿಯರೂ ಸಂಗೀತ, ನೃತ್ಯ ವಿಶಾರದೆಯರಾಗಿದ್ದರೆಂಬ ಸಂಗತಿ ತಿಳಿದುಬರುತ್ತದೆ. ಅಂತೆಯೆ ಹೊಯ್ಸಳರ ಶಿಲ್ಪಕಲೆಯಿಂದ ಪ್ರಸಿದ್ಧವಿರುವ ಹೊಸಹೊಳಲು, ಬಸರಾಳು ದೇವಾಲಯಗಳಲ್ಲಿ ಸಂಗೀತ, ನೃತ್ಯ, ವಾದನಗಳಲ್ಲಿ ತೊಡಗಿರುವ ನೂರಾರು ಶಿಲ್ಪಕೃತಿಗಳನ್ನು ಕಾಣಬಹುದು. ಕಿಕ್ಕೇರಿಯ ದೇವಾಲಯದ ಮದನಿಕಾ ವಿಗ್ರಹಗಳು ಬೇಲೂರಿನ ಮದನಿಕೆಯರಷ್ಟೇ ಸೌಂದರ್ಯವುಳ್ಳದ್ದಾಗಿದ್ದು ಅವುಗಳ ನೃತ್ಯಭಂಗಿ, ವಾದ್ಯಗಳು ಹಾಗೂ ಅವುಗಳನ್ನು ನುಡಿಸುತ್ತಿರುವ ರೀತಿ ಅಭ್ಯಾಸಯೋಗ್ಯವಾಗಿವೆ. ನಂತರದ ಕಾಲದ ನಾಗಮಂಗಲ, ಮೇಲುಕೋಟೆ. ಶ್ರೀರಂಗಪಟ್ಟಣ, ಮದ್ದೂರು(ವೈದ್ಯನಾಥಪುರ)ಮುಂತಾದ ಅನೇಕ ದೇವಾಲಯಗಳಲ್ಲಿ ಹೊರಭಿತ್ತಿ ಹಾಗೂ ಕಂಬಗಳ ಮೇಲೆ ನೃತ್ಯ- ವಾದ್ಯ ನಿರತರಾದ ಸ್ತ್ರೀ ಪುರುಷರ ಶಿಲ್ಪಗಳಿದ್ದು ಇವು ಜಿಲ್ಲೆಯ ಸಂಗೀತ ಪರಂಪರೆ ಬೆಳೆದು ಬಂದಿರುವ ಬಗೆಯನ್ನು ತಿಳಿಸುತ್ತದೆ.

ತಮ್ಮ ಸಂಚಾರದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದಿದ್ದ ಕನಕದಾಸರು ಶ್ರೀರಂಗನಾಥನನ್ನು ಕುರಿತು 'ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೆ ಜಗದೇಕ ವಿಖ್ಯಾತ ಪಶ್ಚಿಮ ರಂಗನಾಥ' ಎಂದು ಕೀರ್ತನೆ ರಚಿಸಿದ್ದು ಪ್ರಸಿದ್ಧವಿದೆ. ವಿಜಯನಗರ

ಅಳಿದ ಮೇಲೆ ಅದರ ಒಂದು ಭಾಗವಾದ ಶ್ರೀರಂಗಪಟ್ಟಣದಲ್ಲಿ ಸಂಸ್ಥಾನ ಮುಂದುವರಿದಾಗ ಅಲ್ಲಿಯಂತೆಯೇ ಇಲ್ಲಿಯೂ ದಸರಾ ಮಹೋತ್ಸವ ನಡೆಯುವಂತಾಗಿದ್ದು, ಆ ಸಂದರ್ಭದಲ್ಲಿ ಸಂಗೀತ ನೃತ್ಯಗಳಿಗೂ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿತ್ತೆಂದು ತಿಳಿದುಬರುತ್ತದೆ. ನಂತರ ಈ ಪ್ರದೇಶವು ಮೈಸೂರು ಅರಸರಿಗೆ ಸೇರಿದ ಮೇಲೆ ಹಿಂದಿನ ಸಂಪ್ರದಾಯ ಮುಂದುವರಿಯಿತೆಂಬುದನ್ನು ಇತಿಹಾಸ ಗ್ರಂಥಗಳಿಂದ ತಿಳಿಯಬಹುದು. ವಿಜಯನಗರದ ಪ್ರತಿನಿಧಿ ತಿರುಮಲರಾಯರ ನಂತರ ರಾಜ ಒಡೆಯರು (೧೫೭೮–೧೬೧೭) ಹಾಗೂ ೬ನೇ ಚಾಮರಾಜಒಡೆಯರು (೧೬೧೭–೧೬೩೭) ಸಂಗೀತಪ್ರಿಯರಾಗಿದ್ದರ ಜೊತೆಗೆ ಸ್ವಯಂ ಕಲಾವಿದರಾಗಿದ್ದರು. ಚಾಮರಾಜರು ವೈಣಿಕರಾಗಿದ್ದು ಅವರ ಆಸ್ಥಾನದಲ್ಲಿ ನಾಟ್ಯ ವೀಣಾದಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕಂಠೀರವ ನರಸರಾಜರು (೧೧೧೬೩೮–೫೯) ಕಲಾ ಪೋಷಕರಾಗಿದ್ದು, ವೀಣಾನಾದ ಸರಸ, ವಿದ್ಯಾ ವಿಶಾರದ, ಸಂಗೀತ ಸಾಹಿತ್ಯ ಶಾಸ್ತ್ರ ವಿಶಾರದ ಎಂದೆಲ್ಲ ಹೊಗಳಿಸಿ ಕೊಂಡಿದ್ದರು. ಇವರ ಆಸ್ಥಾನದಲ್ಲಿ ವೀಣೆ ವಿಠಲ ನರಸಯ್ಯರಲ್ಲದೆ 'ನಾಟ್ಯಶಾಸ್ತ್ರ ಪ್ರವೀಣರೂ ಸಂಗೀತ ರೀತಿ ಕೋವಿದೆಯರೂ' ಇದ್ದರು. ನಂತರ ಆಳಿದ ಚಿಕ್ಕದೇವರಾಜಒಡೆಯರು (೧೬೭೩–೧೭೦೪) ಕಲಾಪೋಷಕರೂ, ವೈಣಿಕ ವಿದ್ವಾಂಸರೂ ಆಗಿದ್ದರು. ಗಾಯಕರು, ವೈಣಿಕರು, ನಟರು ಆಸ್ಥಾನವನ್ನು ಅಲಂಕರಿಸಿದ್ದರು. ಗಾನ, ವಾದ್ಯ, ನಾಟ್ಯ ಮತ್ತು ಅಭಿನಯಗಳು ದರ್ಬಾರಿನ ಕಾರ್ಯಕ್ರಮದಲ್ಲಿ ಮುಖ್ಯವಾಗಿದ್ದವು. 'ಪಾಡುವ ಗಾಯಕರ್', 'ಸಂಗೀತ ಸಾರಜ್ಞರ್' ಗಳಿದ್ದರು. ಈ ಕಾಲದಲ್ಲಿ ರಚಿತವಾದ ಚಿಕ್ಕದೇವರಾಜ ಸಪ್ತಪದಿಯು ಶುದ್ಧವಾಗಿ ಹಾಡಿ ನುಡಿಸಲೆಂದೇ ರಚಿಸಲ್ಪಟ್ಟ ಒಂದು ಹಾಡುಗಬ್ಬ ಎಂದೂ ಇನ್ನೊಂದು ಗ್ರಂಥವಾದ ಗೀತ ಗೋಪಾಲವು ಭಾರತದ ಸಂಗೀತಕ್ಕೂ ಸಾಹಿತ್ಯಕ್ಕೂ ೧೭ ನೇ ಶತಮಾನದಲ್ಲಿ ಕನ್ನಡ ನಾಡು ನೀಡಿದ ವಿಶಿಷ್ಟ ಕಾಣಿಕೆ ಎಂದು ವಿಮರ್ಶಕರು ವಿಮರ್ಶಿಸಿದ್ದಾರೆ. ಮುಂದಿನ ಇಮ್ಮಡಿ ಕೃಷ್ಣರಾಜರ(೧೭೩೪–೬೬) ಆಸ್ಥಾನ ವಿದ್ವಾಂಸ ಕತಾಚೂರಿ ನಂಜರಾಜಯ್ಯನು, ಜಯದೇವಕವಿಯ ' ಗೀತಗೋವಿಂದ' ವನ್ನು ಅನುಸರಿಸಿ ಸಂಗೀತ ಗಂಗಾಧರ ಎಂಬ ಗ್ರಂಥ ರಚಿಸಿದ್ದು ಅದರಲ್ಲಿ ೨೪ ಅಷ್ಟಪದಿಗಳು ಮತ್ತು ೭೨ ಶ್ಲೋಕಗಳಿವೆ. ಹೈದರಲಿಖಾನನ ಆಸ್ಥಾನದಲ್ಲಿ ಪ್ರಮುಖ ಆಸ್ಥಾನ ವಿದ್ವಾಂಸನಾಗಿದ್ದ ಆದಿ ಅಪ್ಪಯ್ಯ ರಚಿಸಿದ ಭೈರವಿ ರಾಗದ 'ವೀರ ಬೋಣಿ' ವರ್ಣವು ಅದ್ವಿತೀಯವಾದುದೆಂದೂ, ಆದರೆ ರಾಜಕೀಯ ಪರಿಸ್ಥಿತಿಯಿಂದಾಗಿ ಅಪ್ಪಯ್ಯನವರು ತಂಜಾವೂರಿನ ಶರಭೋಜಿ ಆಸ್ಥಾನಕ್ಕೆ ಹೋಗಿ ನೆಲೆ ನಿಂತರೆಂದೂ ನಂತರ ಇವರ ವಂಶಸ್ಥರಾದ ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ವೀಣಾ ವೆಂಕಟಸುಬ್ಬಯ್ಯ ಅವರುಗಳು ಮರಳಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಕ್ಕೆ ಬಂದರೆಂದೂ ತಿಳಿದುಬರುತ್ತದೆ. ಹೈದರ್ ಹಾಗೂ ಟಿಪ್ಪುವಿನ ಆಸ್ತಾನದಲ್ಲೂ ಮನೆರಂಜನೆಗಾಗಿ ಸಂಗೀತ, ನೃತ್ಯ, ನಾಟಕಗಳು ನಡೆಯುತ್ತಿದ್ದ ಬಗ್ಗೆ ವಿವರಗಳಿವೆ (Michaud, History of Mysore, 1800, P. 79-80).

ಮುಮ್ಮಡಿಯವರು ರಾಜಧಾನಿಯನ್ನು ಮೈಸೂರಿಗೆ ಬದಲಿಸಿದ ನಂತರ ಜಿಲ್ಲೆಯ ಕೆಲವು ಕಲಾವಿದರೂ ಮೈಸೂರಿನಲ್ಲಿ ನೆಲೆ ನಿಂತರು. ಶ್ರೀರಂಗಪಟ್ಟಣದ ಮಾಧ್ವ ಪಂಗಡದ ಕರಿಗಿರಿರಾಯರು (೧೮೫೩–೧೯೨೭) ಅಂತಹವರಲ್ಲಿ ಒಬ್ಬರಾಗಿದ್ದು ಮುಮ್ಮಡಿ ಹಾಗೂ ಚಾಮರಾಜೇಂದ್ರರ ಆಸ್ಥಾನ ವಿದ್ವಾಂಸರಾಗಿದ್ದು 'ಸಂಗೀತ ವಿದ್ಯಾ ಕಂಠೀರವ'. ಎಂಬ ಬಿರುದು ಪಡೆದಿದ್ದಲ್ಲದೆ ಗದ್ವಾಲ್–ಕಾಶಿ ಮುಂತಾದ ಕಡೆಗಳಿಂದಲೂ ಸನ್ಮಾನಿತರಾಗಿದ್ದರು. ಅಲ್ಲದೆ ' ಸಂಗೀತ ಸುಬೋಧಿನಿ', 'ಗಾನ ವಿದ್ಯಾ ರಹಸ್ಯ ಪ್ರಕಾಶಿನಿ' ಎಂಬ ಎರಡು ಗ್ರಂಥಗಳನ್ನು ಬರೆದು ಅರಮನೆಯ ನೆರವಿನಿಂದ ಪ್ರಕಾಶಿಸಿದರು. ೧೯೦೦ರ ವೇಳೆಗೆ ಗ್ರಾಮಾಫೋನ್ ಬಂದಾಗ ತಮ್ಮ ಹಾಗೂ ಇತರರ ಸಂಗೀತವನ್ನು ಧ್ವನಿ ಮುದ್ರಿಸಿ ಬಳಸಿದರು. ಕೃಷ್ಣರಾಜಪೇಟೆ ತಾಲೂಕಿನ ನಾಟನಹಳ್ಳಿಯ ಎನ್.ಚನ್ನಕೇಶವಯ್ಯ (೧೮೯೫–೧೯೬೮) ರವರು ಸಂಗೀತ ಸಣ್ಣಪ್ಪನ ಮಗನಾಗಿ ಜನಿಸಿ ಮೊದಲಿಗೆ ತಂದೆಯಿಂದ ನಂತರ ಮೈಸೂರು ವಾಸುದೇವಾಚಾರ್ಯರಲ್ಲಿ ಶಿಕ್ಷಣ ಪಡೆದು ೧೯೪೪ ರಲ್ಲಿ ಆಸ್ಥಾನ ಕಲಾವಿದರಾಗಿ ನೇಮಕರಾದರು. ಮುಂದೆ ರಾಜ್ಯ ಸಂಗೀತ ನೃತ್ಯ ಅಕಾಡೆಮಿ

ಹಾಗೂ ಕೇಂದ್ರ ಲಲಿತ ಕಲಾ ಅಕಾಡಮಿಗಳಿಂದ ಪುರಸ್ಕೃತರಾದರು. 'ಗಾನ ಕಲಾ ಸಿಂಧು', 'ಸಂಗೀತ ವಿದ್ಯಾವಾರಿದಿ', 'ಸಂಗೀತ ರತ್ನ', ಇತ್ಯಾದಿ ಬಿರುದುಗಳನ್ನು ಪಡೆದಿದ್ದರು. ಹರಿದಾಸ ಕೀರ್ತನ ಸುಧಾಸಾಗರವನ್ನು ಮೂರು ಸಂಪುಟಗಳಲ್ಲೂ ಹಾಗೂ ಪಲ್ಲವಿಗಳನ್ನು ಕುರಿತು ಗ್ರಂಥವೊಂದನ್ನು ಅನೇಕ ಲೇಖನಗಳನ್ನೂ ರಚಿಸಿದ್ದಾರೆ. ೧೯೬೩ ರಲ್ಲಿ ಮೈಸೂರಿನಲ್ಲಿ ಸೇರಿದ್ದ ಸಂಗೀತ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಜಿಲ್ಲೆಯ ಸಂಗೀತ ವಿದ್ವಾಂಸರಲ್ಲಿ ಕೃಷ್ಣರಾಜಪೇಟೆಯ ಸಾಸಲು ಗ್ರಾಮದ ಎಸ್.ಎಸ್.ಮರಿಯಪ್ಪರವರೇ(೧೯೧೪-೮೬)ಕೊನೆಯ ಆಸ್ಥಾನ ವಿದ್ವಾಂಸರೆಂದೆನಿಸುತ್ತದೆ. ಮೊದಲಿಗೆ ನಾಚ್‌ರಾಮರಾಯರಿಂದ ಭರತನಾಟ್ಯವನ್ನು ನಂತರ ಮೇಲುಕೋಟೆ ನರಸಿಂಹಯ್ಯರವರಿಂದ ಸಂಗೀತ ಶಿಕ್ಷಣ ಪಡೆದಿದ್ದು ೧೯೪೬ ರಲ್ಲಿ ಆಸ್ಥಾನ ವಿದ್ವಾಂಸರಾದರು. ಗಾನರತ್ನ, ಗಾನಸುಧಾಕರ, ಗಾನರತ್ನಾಕರ ಇತ್ಯಾದಿ ಬಿರುದುಗಳನ್ನು ಗಳಿಸಿದ್ದರು. ಸರಸ್ವತಿ ಗಾನಕಲಾ ಮಂದಿರ ಎಂಬ ಸಂಗೀತ ಸಂಸ್ಥೆಯನ್ನು ಸ್ಥಾಪಿಸಿದ್ದರು. ಬ್ರಹ್ಮಪುರಿ ಎಂಬ ಅಂಕಿತದಲ್ಲಿ ಸ್ವರ ಜತಿಗಳು, ಕೃತಿಗಳು ಪದ ಮತ್ತು ತಿಲ್ಲಾನಗಳನ್ನು ರಚಿಸಿದ್ದಾರೆ. ಸಂಗೀತ ಕಲಾಭಿವರ್ಧಿನಿ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ಅರಮನೆ ಸಂಪ್ರದಾಯದಂತೆ ನರ್ತಕಿಯರ ಪರಂಪರೆಯೊಂದಿದ್ದು ಅದರಲ್ಲಿ ಶ್ರೀರಂಗಪಟ್ಟಣದ ಪುಟ್ಟದೇವಮ್ಮ ಅವರನ್ನು ಹೆಸರಿಸಬಹುದು. ಕಳೆದ ಶತಮಾನದ ಆರಂಭದಲ್ಲಿದ್ದ ಇವರ ಹಿಂದಿನ ಮೂರು ತಲೆಮಾರಿನವರು ನರ್ತಕಿಯರಾಗಿದ್ದರು. ಇವರು ಮಗಳು ಪುಟ್ಟದೇವಮ್ಮ ಸಹ ಅರಮನೆಯ ನರ್ತಕಿಯಾಗಿದ್ದರು.

ಮಳವಳ್ಳಿ ತಾಲೂಕಿನ ಬೆಳಕವಾಡಿ ಸಹ ಒಂದು ಸಾಂಸ್ಕೃತಿಕ ಕೇಂದ್ರವೆಂದೆನಿಸಿದ್ದು ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ (೧೮೮೮-೧೯೩೬) ಅವರು ಮೊದಲಿಗೆ ಸಂಗೀತ ತಜ್ಞರಾಗಿದ್ದ ತಂದೆ ಶ್ರೀನಿವಾಸರಂಗಾಚಾರ್ಯರಲ್ಲಿ ವೈಣಿಕರಾಗಿದ್ದ ಚಿಕ್ಕಪ್ಪ ಹಾಗೂ ಮೈಸೂರಿನಲ್ಲಿ ಹೆಚ್ಚಿನ ಸಂಗೀತಾಭ್ಯಾಸ ಮಾಡಿ ಆಸ್ಥಾನ ವಿದ್ವಾಂಸ ಪದವಿಯನ್ನು ಪಡೆದರು. ಆ ವೇಳೆಗೆ ಉತ್ತರ ಭಾರತದ ಗದ್ವಾಲ್, ವಾರಂಗಲ್‌ಗಳಲ್ಲಿ ಕಚೇರಿ ಮಾಡಿ ಹೆಸರು ಪಡೆದಿದ್ದರು. ಕೆಲವು ವರ್ಣ ಹಾಗೂ ಕೃತಿಗಳನ್ನು ರಚಿಸಿದ್ದ ಅಯ್ಯಂಗಾರರಿಗೆ ಅರಮನೆಯಲ್ಲದೆ ಸಾರ್ವಜನಿಕ ಸನ್ಮಾನ ಸಭೆಗಳು ನಡೆದು ಅನೇಕ ಪಾರಿತೋಷಕಗಳು ಬಹುಮಾನವಾಗಿ ಬಂದಿದ್ದವು. ಊರಿನಲ್ಲಿ ಒಂದು ನಾಟಕ ಕಂಪನಿಯನ್ನೂ ನಡೆಸುತ್ತಿದ್ದರು.ಇವರು ಮಕ್ಕಳಲ್ಲಿ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್(೧೯೧೦)ತಂದೆಯವರಲ್ಲಿ ನಂತರ ಮದ್ರಾಸ್‌ನಲ್ಲಿ ಹೆಚ್ಚಿನ ಸಂಗೀತಾಭ್ಯಾಸ ಮಾಡಿ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದು ಆಕಾಶವಾಣಿಯಿಂದ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗಾನ ಕಲಾಪರಿಷತ್ತಿನ ಅಧ್ಯಕ್ಷರಾಗಿದ್ದು, ಗಾನಕಲಾಭೂಷಣ ಬಿರುದು ಪಡೆದಿದ್ದಾರೆ. ಮುತ್ತಯ್ಯ ಭಾಗವತರ್. ಟೈಗರ್ ವರದಾಚಾರ್ ಮುಂತಾದವರ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ಇನ್ನೊಬ್ಬ ಸಹೋದರ ಬೆಳಕವಾಡಿ ವರದರಾಜ ಅಯ್ಯಂಗಾರ್ (೧೯೧೨) ಹರಿಕೇಶ ನಲ್ಲೂರು, ಮುತ್ತಯ್ಯ ಭಾಗವತರಲ್ಲಿ ಅಭ್ಯಸಿಸಿ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಅನೇಕ ಕಚೇರಿಗಳನ್ನು ನೀಡಿದ್ದಾರೆ. ಇವರ ಕಿರಿಯ ಸೋದರ ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್(೧೯೨೩) ಅಣ್ಣನಿಂದ ಸಂಗೀತ ಕಲಿತು ಪಾಂಡವಪುರವೂ ಸೇರಿದಂತೆ ಹಲವಾರು ಶಾಲೆಗಳಲ್ಲಿ ಸಂಗೀತದ ಉಪಾಧ್ಯಾಯರಾಗಿದ್ದು ರಾಜ್ಯದಲ್ಲಿಯಲ್ಲದೆ ಮುಂಬಯಿ, ಸೇಲಂ, ಅಹಮದಾಬಾದ್, ಹೈದರಾಬಾದ್‌ಗಳಲ್ಲಿಯೂ ಕಾರ್ಯಕ್ರಮ ನೀಡಿ ಖ್ಯಾತರಾಗಿದ್ದಾರೆ. (ಸಾಮಾನ್ಯವಾಗಿ ಈ ಮೂವರನ್ನು ಬೆಳಕವಾಡಿ ಸಹೋದರರು ಎಂದೇ ಗುರುತಿಸಲಾಗುತ್ತದೆ).

ಜಿಲ್ಲೆಯ ಮೇಲುಕೋಟೆ ಇನ್ನೊಂದು ವಿದ್ವತ್ ಕೇಂದ್ರವಾಗಿದ್ದು ಅಲ್ಲಿಯ ನರಸಿಂಹಯ್ಯ. ವಿ. ಶ್ರೀನಿವಾಸ ಅಯ್ಯಂಗಾರ್, ವೆಂಕಟಾಚಾರ್ಯ ಮುಂತಾದವರನ್ನು ಉದಾಹರಿಸಬಹುದು. ಇಲ್ಲಿಯ ಇನ್ನೊಬ್ಬ ಸಂಗೀತ ವಿದ್ವಾಂಸರಾಗಿದ್ದ ಮಂತ್ರಿ ಸಂಪತ್ಕುಮಾರಾಚಾರ್ಯರ ಮಗ ಶೆಲ್ಪಪ್ಪಿಳ್ಳೆ ಅಯ್ಯಂಗಾರರು ಮೊದಲಿಗೆ ತಂದೆಯಿಂದ ನಂತರ ಮೈಸೂರು ತಂಜಾವೂರುಗಳಲ್ಲಿ ಸಂಗೀತಾಭ್ಯಾಸ ಮಾಡಿ ಆಕಾಶವಾಣಿಯೂ ಸೇರಿದಂತೆ ಹಲವಾರು ಕಡೆಗಳಲ್ಲಿ ಸಂಗೀತ ಕಚೇರಿ ನೀಡಿದ್ದಾರೆ.ನಿಲಯದ ಕಲಾವಿದರಾಗಿ ನಿವೃತ್ತರಾದ ಇವರಿಗೆ 'ಸಂಗೀತ ಭೂಷಣ' ಬಿರುದಲ್ಲದೆ ಇನ್ನಿತರ ಹಲವಾರು

ಸನ್ಮಾನಗಳು ಬಂದಿವೆ. ಮೇಲುಕೋಟೆಯಲ್ಲಿ ನಡೆಯುವ ಹಲವಾರು ಸಾಂಪ್ರದಾಯಿಕ ಆಚರಣೆಗಳಲ್ಲಿ ದಿವ್ಯ ಪ್ರಬಂಧಗಳ ಗಾಯನವೂ ಒಂದು. ಕ್ರಿ.ಶ. ೯ನೇ ಶತಮಾನದ ನಾಥಮುನಿ ಮುಂತಾದವರಿಂದ ಸಂಗ್ರಹಿತವಾದ 'ದಿವ್ಯ ಪ್ರಬಂಧ'ದಲ್ಲಿರುವ ಸಂಸ್ಕೃತ ಉಕ್ತಿಗಳನ್ನು (ಶ್ಲೋಕ, ಭಕ್ತಿ ಪ್ರಧಾನವಾದ ಸೂಕ್ತಿಗಳು) ರಾಗ ತಾಳ ಬದ್ಧವಾಗಿ ಹಾಡುವುದು ಆಚರಣೆಯ ಒಂದು ಅಂಗವಾಗಿದ್ದು ಇಂದು ಅರಯರ್ ಮನೆತನದವರು ಈ ಕಾರ್ಯವನ್ನು ನೆರವೇರಿಸುತ್ತಾರೆ. ಇಲ್ಲಿರುವವರೇ ಆದ ಎಂ. ಎ. ನರಸಿಂಹಾಚಾರ್ ಅವರಿಗೆ ೧೯೯೯ರಲ್ಲಿ 'ಸಂಗೀತ ವಿದ್ವಾನ್' ಪುರಸ್ಕಾರ ನೀಡಲಾಗಿದೆ.

ಜಿಲ್ಲೆಯ ಮಹಿಳಾ ಕಲಾವಿದರಲ್ಲಿ ಮಳವಳ್ಳಿ ಸುಂದರಮ್ಮ ಪ್ರಸಿದ್ಧರಾದವರು. ಇವರ ತಂದೆ ಪಿಟೀಲು ವಿದ್ವಾಂಸರಾಗಿದ್ದ ಕೃಷ್ಣಪ್ಪನವರ ಪೂರ್ವಜರು ಮಳವಳ್ಳಿಯವರಾಗಿದ್ದು, ಸುಂದರಮ್ಮ ಅವರು ಪಾರಂಪರ್ಯವಾಗಿ ಸಂಗೀತಾಭ್ಯಾಸ ಮಾಡಿ ೧೮ನೇ ವಯಸ್ಸಿನಿಂದಲೇ ಮಹಾರಾಜರ ಸನ್ಮುಖದಲ್ಲಿ ನಂತರ ಸಾರ್ವಜನಿಕವಾಗಿ ಸಂಗೀತ ಕಚೇರಿಗಳನ್ನು ನೀಡಿ ಪ್ರಸಿದ್ಧರಾಗಿದ್ದವರು ನಾಟಕ ಹಾಗೂ ಸಿನಿಮಾ ಕ್ಷೇತ್ರಗಳಲ್ಲೂ ಅಭಿನಯದೊಂದಿಗೆ ಸಂಗೀತವನ್ನೂ ಜೊತೆಯಾಗಿರಿಸಿಕೊಂಡಿದ್ದರು. ೧೯೨೪ರಲ್ಲೇ ಮದ್ರಾಸ್‌ನ ಓಡಿಯಾನ್ ಕಂಪನಿ ಇವರ ಸಂಗೀತದ ಧ್ವನಿಮುದ್ರಿಕೆಗಳನ್ನು ಹೊರತಂದಿತು. ಇವರಿಗೆ ೧೯೬೨ರಲ್ಲಿ ರಾಜ್ಯ ಸರ್ಕಾರದಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ತಿರುಮಲೆ ಸೋದರಿಯರೆಂದು ಪ್ರಸಿದ್ಧರಾದ ಶಚಿದೇವಿ (೧೯೪೦) ಮತ್ತು ಶಾರದ (೧೯೪೩) ಅವರುಗಳು ಮಳವಳ್ಳಿಯವರಾಗಿದ್ದು, ಸಂಗೀತ ಪದವಿ ಪಡೆದಿದ್ದು, ಬೆಳಕವಾಡಿ ವರದರಾಜ ಅಯ್ಯಂಗಾರ್ ಮುಂತಾದವರಲ್ಲಿ ಅಭ್ಯಸಿಸಿ, ಅನೇಕ ಕಡೆಗಳಲ್ಲಿ ಕಚೇರಿಗಳನ್ನು ನೀಡಿದ್ದಾರೆ. ಹಲವು ಪ್ರಶಸ್ತಿ ಗಳಿಸಿದ ಇವರು ನಾಲ್ಕು ಭಾಗಗಳಲ್ಲಿ ಕರ್ನಾಟಕ ಸಂಗೀತ ದರ್ಪಣ, ಶೋಭನ ಶತಕ ಇತ್ಯಾದಿ ಪುಸ್ತಕಗಳನ್ನು ರಚಿಸಿದ್ದು ಅಪೂರ್ವ ವರ್ಣಗಳನ್ನು ಸಂಪಾದಿಸಿದ್ದಾರೆ. ಅಂತೆಯೆ ಬೆಳ್ಳೂರು ಸೋದರಿಯರೆಂದು ಪ್ರಸಿದ್ಧರಾದ ರಾಧ ತಾಂಡವೇಶ್ವರ (೧೯೫೧) ಹಾಗೂ ರಮ ಸದಾಶಿವ (೧೯೫೨) ಅವರುಗಳು ಬೆಳ್ಳೂರಿನಲ್ಲಿ ಹಾಗೂ ಮದ್ರಾಸ್‌ನಲ್ಲಿ ಕಲಾಶಿಕ್ಷಣ ಪಡೆದು ರಾಜ್ಯದ ಹಲವಾರು ಕಡೆಗಳಲ್ಲಿ ಕಚೇರಿಗಳನ್ನು ನೀಡಿದ್ದಾರೆ. ಹತ್ತಕ್ಕೂ ಹೆಚ್ಚು ಧ್ವನಿ ಮುದ್ರಿಕೆಗಳು ಬಂದಿವೆ. 'ಕಲಾ ಸರಸ್ವತಿ' 'ಸಂಗೀತ ರತ್ನ' ಬಿರುದುಗಳು ಬಂದಿವೆ. ಮೇಲುಕೋಟೆಯ ಉಷ, ಮೈಥಿಲಿಯವರೂ ಸಂಗೀತಗಾರ್ತಿಯರಾಗಿದ್ದು ಹಲವಾರು ಕಚೇರಿಗಳನ್ನು ನೀಡಿದ್ದಾರೆ. ಸಂಗೀತ ನೃತ್ಯ ಅಕಾಡಮಿಗೆ ೧೯೯೦ರಲ್ಲಿ 'ನಮ್ಮ ಸಂಗೀತ ಕಲಾವಿದರು' ಪುಸ್ತಕ ರಚಿಸಿಕೊಟ್ಟ ಸರ್ವಮಂಗಳಶಂಕರ್ (೧೯೫೪) ಅವರು ಶ್ರೀರಂಗಪಟ್ಟಣದವರಾಗಿದ್ದು ಹಾಡುಗಾರಿಕೆಯಲ್ಲದೆ ವೀಣೆ ಹಾಗೂ ಮೃದಂಗವಾದನದಲ್ಲಿಯೂ ಪರಿಣಿತರಿದ್ದಾರೆ. ಸಂಗೀತದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ತೃತಿಯ ರ್‍ಯಾಂಕ್ ಗಳಿಸಿದ ಸರ್ವಮಂಗಳ ಅವರು ಕರ್ನಾಟಕ ಗಾನ ಕಲಾ ಪರಿಷತ್, ತ್ಯಾಗರಾಜ ಗಾನ ಸಭೆ, ದೆಹಲಿಯ ಕನ್ನಡ ಸಂಘ, ಶೇಷಾದ್ರಿಪುರದ ರಾಮೋತ್ಸವ, ಜೆ.ಎಸ್.ಎಸ್. ಸಂಗೀತ ಸಭಾಗಳಲ್ಲೂ ಆಂಧ್ರ, ಭಾಲ್ಕಿ, ರಾಯಚೂರು ಭದ್ರಾವತಿಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ದೂರದರ್ಶನ, ಆಕಾಶವಾಣಿಗಳಿಂದಲೂ ಪ್ರಸಾರವಾಗಿವೆ. ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಸಂಗೀತ ಉಪನ್ಯಾಸಕರಾಗಿರುವ ಇವರು ಸಂಗೀತ ನೃತ್ಯ, ಅಕಾಡಮಿಯ ಸದಸ್ಯರೂ ಆಗಿದ್ದರು. 'ಗಾನ ಗಂಗ' ಬಿರುದು ಪಡೆದಿದ್ದಾರೆ.

ಸಾಮಾನ್ಯವಾಗಿ ಹಾಡುಗಾರರು ಒಂದು ಇಲ್ಲವೆ ಹೆಚ್ಚಿನ ವಾದ್ಯಗಳಲ್ಲೂ ಪರಿಣತಿ ಪಡೆದಿರುವುದುಂಟು. ಆದರೂ ವಾದ್ಯಗಾರಿಕೆಯನ್ನೇ ಪ್ರಧಾನವಾಗಿ ಅಭಿವೃದ್ಧಿ ಮಾಡಿಕೊಂಡಿರುವ ಕೆಲವು ಕಲಾವಿದರು ಜಿಲ್ಲೆಯಲ್ಲಿದ್ದಾರೆ. ಜಿಲ್ಲೆಯ ಮಧ್ಯಯುಗದ ಹಲವು ಶಾಸನಗಳಲ್ಲೂ ವಾದ್ಯಗಳ ಹೆಸರು, ಹಾಗೂ ಬಳಕೆಗಳ ಬಗ್ಗೆ ಉಲ್ಲೇಖವಿದೆ. ಆ ಕಾಲದ ಹೊಯ್ಸಳ ದೇವಾಲಯಗಳಲ್ಲಿ ವಿವಿಧ ಬಗೆಯ ವಾದ್ಯಗಳನ್ನು ನುಡಿಸುತ್ತಿರುವ ಸ್ತ್ರೀ –ಪುರುಷರ ಶಿಲ್ಪಗಳಿವೆ. ತಾಳ, ಮೃದಂಗ ಕೊಳಲು ಇತ್ಯಾದಿಗಳು ಹೆಚ್ಚಾಗಿ ಕಂಡು ಬರುತ್ತವೆ. ಮುಂದೆ ಶ್ರೀರಂಗಪಟ್ಟಣದ ಅರಸರ ಕಾಲದಲ್ಲಿ ರಚಿತವಾದ ಗ್ರಂಥಗಳಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿದ್ದ ವೀಣೆ. ತಂಬೂರಿ, ಮದ್ದಳೆ, ಮುಖವೀಣೆ, ಶಂಖ, ಭೇರಿ,

ತಾಳ, ಜಂಬಕ, ಡಿಂಡಿಮ, ಮುರುಜು, ಢಕ್ಕೆ, ತಂಬಟ, ವೀಣಾ, ಕಹಳೆ ಇತ್ಯಾದಿ ಅನೇಕ ವಾದ್ಯಗಳ ಉಲ್ಲೇಖವಿದೆ. ಅಂತೆಯೇ ಕರ್ನಾಟಕ ಸಂಗೀತದಲ್ಲಿ ಇಂದು ಸಹಜವಾಗಿರುವ ಪಿಟೀಲುವಾದ್ಯ ಬಾಲುಸ್ವಾಮಿ ದೀಕ್ಷಿತರಿಂದ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಕಚೇರಿಗೆ ಪ್ರವೇಶವಾಯಿತೆಂದು ಅಭಿಪ್ರಾಯವಿದೆಯಾದರೂ ಅದಕ್ಕೂ ಮೊದಲೇ ಹದಿನೆಂಟನೆಯ ಶತಮಾನದ ಅಂತ್ಯದಲ್ಲಿಯೇ ರಚಿತವಾದ ದರಿಯಾದೌಲತ್‌ನ ಭಿತ್ತಿಚಿತ್ರವೊಂದರಲ್ಲಿ ನಾಟ್ಯವಾಡುತ್ತಿರುವ ಒಬ್ಬರಿಗೆ ಪಕ್ಕವಾದ್ಯದೊಂದಿಗೆ ಪಿಟೀಲನ್ನು (ಇಂದು ನುಡಿಸುವಂತೆಯೇ), ಅದೇ ರೀತಿ ಇರಿಸಿಕೊಂಡು ಒಬ್ಬಾಕೆ ನುಡಿಸುತ್ತಿರುವ ಚಿತ್ರವಿದೆ ಅಲ್ಲದೆ ಅದೇ ಶ್ರೀರಂಗಪಟ್ಟಣದ ೧೮೫೦ರಲ್ಲಿ ತಯಾರಾದ ರಥದಲ್ಲಿಯೂ ಇದೇ ಬಗೆಯ ಶಿಲ್ಪವಿದೆ. ಈ ಕಾರಣಗಳಿಂದಾಗಿ ಬಹಳ ಹಿಂದಿನಿಂದಲೂ ಕರ್ನಾಟಕ ಸಂಗೀತದ ಪಕ್ಕವಾದ್ಯವಾಗಿ ಅದರಲ್ಲೂ ನಾಟ್ಯಕ್ಕೆ ಪೂರಕವಾಗಿ ಪಿಟೀಲು ಈ ಪ್ರದೇಶದಲ್ಲಿ ಬಳಕೆಯಲ್ಲಿತ್ತೆಂದು ಹೇಳಬಹುದು. (ಸಂಗೀತ ಕಲೆಗೆ ಮೈಸೂರು ಒಡೆಯರ ಪ್ರೋತ್ಸಾಹ ಕೊಡುಗೆ ವಿ.ಎಸ್. ಸಂಪತ್ಕುಮಾರಾಚಾರ್ಯ ಮೈಸೂರು ೯೬. ಪು.೮).

ಜಿಲ್ಲೆಯ ಆಧುನಿಕ ವಾದ್ಯಗಾರರಲ್ಲಿ ಕೆ.ಎಸ್.ನಾರಾಯಣ ಅಯ್ಯಂಗಾರ್ ಅವರು (೧೯೦೩–೫೯) ಗೋಟುವಾದ್ಯದಲ್ಲಿ ಪರಿಣಿತರಿದ್ದು ಆಸ್ಥಾನ ಕಲಾವಿದರಾಗಿ 'ಗೋಟವಾದ್ಯಗಾನ ಶಿಖಾಮಣಿ' ಎಂಬ ಬಿರುದು ಪಡೆದು ಭಾರತವಲ್ಲದೆ ಬರ್ಮ ಸಿಲೋನ್‌ಗಳಲ್ಲೂ ಸಂಚರಿಸಿ ಅಂತ್ಯ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿದ್ದವರು. ಇವರ ಹಲವಾರು ಶಿಷ್ಯರಲ್ಲಿ ಮೇಲುಕೋಟೆ ವಿ. ಶ್ರೀನಿವಾಸ ಅಯ್ಯಂಗಾರರೂ ಒಬ್ಬರು. ಮೇಲುಕೋಟೆಯ ನೀಲಮ್ಮ ಕಡಾಂಬಿಯವರು ವೀಣಾ ವಿದ್ವಾಂಸರಾಗಿದ್ದ ವೆಂಕಟಾಚಾರ್ಯರ ಪುತ್ರಿಯಾಗಿ ಜನಿಸಿ ಮೈಸೂರಿನಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಭಾರತಾದ್ಯಂತ ಕಚೇರಿ ನೀಡಿದ್ದಾರೆ. ಇವರ ಸಂಗೀತದಲ್ಲಿ ಹಿಂದೂಸ್ಥಾನಿ ಹಾಗೂ ಕರ್ನಾಟಕ ಸಂಗೀತ ಪದ್ಧತಿಯ ಮಧುರ ಸಮ್ಮಿಳನ ಕಾಣಬಹುದಿತ್ತೆಂದು ವಿದ್ವಾಂಸರ ಅಭಿಪ್ರಾಯ. ೧೯೫೬ರಲ್ಲಿ ಕರ್ನಾಟಕ ರಾಜ್ಯದ ಉದ್ಘಾಟನೆಯ ವೇಳೆಯಲ್ಲಿ ಹಾಡುವ ಅವಕಾಶ ಇವರಿಗೆ ದೊರೆತಿದ್ದಲ್ಲದೆ ೧೯೭೨ರಲ್ಲಿ ರಾಜ್ಯ ಸಂಗೀತ ನಾಟಕ ಪ್ರಶಸ್ತಿಯೂ ದೊರೆತಿತ್ತು. ಮೇಲುಕೋಟೆಯ ವೈರಮುಡಿ ಸಾಂಸ್ಕೃತಿಕ ಕಲಾ ಸಂಘ ೧೯೮೬ರಲ್ಲಿ ಆರಂಭವಾಗಿದ್ದು, ವೈರಮುಡಿ ಸಂದರ್ಭದಲ್ಲಿ ನಾಟ್ಯ. ಸಂಗೀತ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸುತ್ತದೆ. ಮೈಸೂರು ಬೆಂಗಳೂರು ಆಕಾಶವಾಣಿಗಳಲ್ಲಿ ಸೇವೆ ಸಲ್ಲಿಸಿದ ವರಮೇವಾದ್ವಿತೀಯ ಗೋಟುವಾದ್ಯ ವಿದ್ವಾಂಸ ವರಾಹಸ್ವಾಮಿ ಆಯ್ಯಂಗಾರ್ಯರು ಮೇಲುಕೋಟೆ ಮೂಲದವರು.

ಕೊಡಿಯಾಲದ ಎನ್.ಎಲ್. ಚೆಲುವರಾಜ್(೧೯೨೮) ತಬಲಾವಾದಕ ನಿಟ್ಟೂರು ಲಕ್ಷ್ಮಯ್ಯನವರ ಮಗನಾಗಿದ್ದು ಕೊಡಿಯಾಲದ ಬಿ.ವಿ.ವೆಂಕಟರಮಣರವರಿಂದ ಶಿಕ್ಷಣ ಪಡೆದು ದಕ್ಷಿಣ ಭಾರತಾದ್ಯಂತ ಕಚೇರಿ ನಡೆಸಿ ಹೆಸರು ಪಡೆದಿದ್ದಾರೆ. ಬೆಂಗಳೂರು ಆಕಾಶವಾಣಿಯಿಂದಲೂ ಕಚೇರಿ ನೀಡಿದ್ದು ಕಲಾ ಶಾಲೆಯೊಂದನ್ನು ನಡೆಸುತ್ತಿದ್ದಾರೆ. ಮಳವಳ್ಳಿಯ ತಿರುಮಲೆ ಸೋದರಿಯರೂ ವೀಣಾವಾದನ ಪರಿಣಿತರಾಗಿದ್ದಾರೆ.ಬೆಳಕವಾಡಿ ರಾಮಸ್ವಾಮಿ ಅಯ್ಯಂಗಾರರ ಮಗ ಶ್ರೀಧರ ಮೃದಂಗವಾದಕರು. ಮಂಡ್ಯದ ಕುಂದೂರಿನವರಾದ ಕೆ.ಎಲ್.ನಾಗರಾಜ ಶಾಸ್ತ್ರಿ ಅವರು ನಾಟಕದ ಸಂಗೀತಕ್ಕೆ ಸ್ವರ, ಸಾಹಿತ್ಯ ರಚಿಸಿರುವುದಲ್ಲದೆ ಶಾಸ್ತ್ರೀಯವಾಗಿ ಕ್ರಮಬದ್ಧವಾಗಿ ಸಂಗೀತ ಶಿಕ್ಷಣ ಪಡೆದಿದ್ದಾರೆ. ಮೊದಲಿಗೆ ತಾಯಿಯಿಂದ ನಂತರ ಮೃದಂಗ ವಿದ್ವಾನ್ ಸುಬ್ಬಯ್ಯ ಭಾಗವತರಿಂದ ಅಭ್ಯಸಿಸಿದ್ದು ಕೊಳಲು, ಪಿಟೀಲು,ಹಾರ್ಮೋನಿಯಂ ನುಡಿಸುವುದರಲ್ಲಿ ಪರಿಣತರಾಗಿದ್ದಾರೆ. ಇವರು ಮಂಡ್ಯ ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಂಗೀತ ಗೋಷ್ಠಿಯ ಅಧ್ಯಕ್ಷರಾಗಿದ್ದರು. ೧೯೮೮ರಲ್ಲಿ ನಾಟಕ ಅಕಾಡೆಮಿಯಿಂದ ಪುರಸ್ಕೃತರಾಗಿದ್ದಾರೆ. ಮೇಲುಕೋಟೆಯ ನಂಜಪ್ಪ ಪಿಟೀಲಿನಲ್ಲೂ, ವಿದ್ವಾನ್ ನಾಗರಾಜು ಮತ್ತು ಅವರ ಮಕ್ಕಳು ನಾದಸ್ವರದಲ್ಲೂ ಹೆಸರು ಪಡೆದಿದ್ದಾರೆ. ಮಂಡ್ಯದ ನ್ಯಾಯವಾದಿಗಳಾದ ಸುದರ್ಶನ್ ಅವರು ವಿದ್ವಾನ್ ಟಿ.ಎ.ಎಸ್.ಮಣಿ ಅವರಲ್ಲಿ ಮೃದಂಗವಾದನ ಕಲಿತು ಅನೇಕ ಗಣ್ಯ ಕಲಾವಿದರೊಂದಿಗೆ ಮೃದಂಗ ನುಡಿಸಿದ್ದಾರೆ. ಅಮೆರಿಕಾ, ಇಂಗ್ಲೆಂಡ್,

ಕೆನಡಾ, ಸ್ವಿಡ್ಜರ್ ಲ್ಯಾಂಡ್, ಸ್ಕಾಟ್‌ಲ್ಯಾಂಡ್ ಹಾಗೂ ಆಸ್ಟ್ರೇಲಿಯಾಗಳಲ್ಲಿ ತಮ್ಮ ವಾದ್ಯಗಾರಿಕೆಯಿಂದ ಮೆಚ್ಚುಗೆ ಗಳಿಸಿದ್ದಾರೆ. ಸ್ವತ: ಸಾಹಿತಿ, ರಂಗಭೂಮಿ ನಟರೂ ಆಗಿರುವ ಸುದರ್ಶನ್ ಅವರಿಗೆ ಮಂಡ್ಯದ ಶಾಂತಲಾ ನೃತ್ಯಕಲಾ ಮಂದಿರದವರು ೧೯೮೫ ರಲ್ಲಿ ಮೃದಂಗ ವಾದನ ಚತುರ ಎಂದೂ ಅಖಿಲ ಕರ್ನಾಟಕ ಹರಿದಾಸ ತತ್ವ ಜ್ಞಾನ ಪ್ರತಿಷ್ಠಾನದವರು 'ಮೃದಂಗ ಕಲಾ ಭೂಷಣ' ಎಂದೂ ಬಿರುದು ನೀಡಿ ಗೌರವಿಸಿದ್ದಾರೆ. ಮಂಡ್ಯದ ರೇವತಿ ಮೂರ್ತಿ (೧೯೪೯) ಅವರು ಮಂಡ್ಯದ ವಿ.ಶ್ರೀನಿವಾಸ ಅಯ್ಯಂಗಾರ್ ಅವರಲ್ಲಿ ವೀಣಾವಾದನವನ್ನು ಮೊದಲಿಗೆ ಕಲಿತು ನಂತರ ಮೈಸೂರಿನಲ್ಲಿ ಹೆಚ್ಚಿನ ಅಭ್ಯಾಸ ಮಾಡಿ ಮ್ಯೂಜಿಕ್ ಪದವೀಧರೆಯಾಗಿದ್ದಾರೆ. ಬೆಂಗಳೂರಿನ ಗಾನಕಲಾ ಪರಿಷತ್, ಅಕಾಡೆಮಿ ಆಫ್ ಮ್ಯೂಜಿಕ್‌ಗಳಲ್ಲದೆ ದೆಹಲಿ, ಅಹಮದಾಬಾದ್, ಕೆ.ಜಿ.ಎಫ್. ತುಮಕೂರುಗಳಲ್ಲಿ ಹಾಗೂ ಆಕಾಶವಾಣಿಯಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಮೇಲುಕೋಟೆಯ ಎಸ್. ಪುಟ್ಟರಾಜು (೧೯೫೮) ಅವರು ಡೋಲು ವಿದ್ವಾಂಸರಾಗಿದ್ದು ತಂದೆ ಸಿದ್ದವೀರಪ್ಪ ಅವರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಮೈಸೂರಿನಲ್ಲಿ ಪ್ರೌಢ ಶಿಕ್ಷಣ ಪಡೆದರು. ಖಂಜಿರದಲ್ಲಿಯೂ ಪರಿಣತಿಯಿದ್ದು, ತಿರವನಂತಪುರ, ಮುಂಬಯಿ, ತಿರುಚೂರ್, ಹೈದರಾಬಾದ್, ವಿಜಯವಾಡ, ಕಡಪಗಳಲ್ಲಿಯೂ ರಾಜ್ಯದ ಅನೇಕ ಸ್ಥಳಗಳಲ್ಲೂ ಡೋಲು (ಪಕ್ಕವಾದ್ಯವಾಗಿ) ನುಡಿಸಿದ್ದಾರೆ. ವಿದೇಶಗಳಲ್ಲಿಯೂ ಕೆಲವು ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲೂ ಪ್ರಸಾರವಾಗಿರುವುದಲ್ಲದೆ ಧ್ವನಿಸುರುಳಿಯೂ ಬಿಡುಗಡೆಯಾಗಿದೆ. ಬೆಂಗಳೂರು ಗಾಯನ ಸಮಾಜದವರು ಕಿರಿಯರ ವಿಭಾಗದಲ್ಲಿ ಅತ್ಯುತ್ತಮ ಪಕ್ಕವಾದ್ಯಗಾರ ಪ್ರಶಸ್ತಿ ನೀಡಿದ್ದಾರೆ. ಹೇಮಗಿರಿಯ ವಿ.ರಾಜಗೋಪಾಲ್ (೧೯೪೭) ಅವರು ನಾಗಸ್ವರ ವಾದ್ಯದಲ್ಲಿ ಪರಿಣಿತರಿದ್ದು ರಾಜ್ಯದೊಳಗೆ ಹಾಗೂ ಹೊರ ರಾಜ್ಯಗಳಲ್ಲಿ ನುಡಿಸಿದ್ದಾರೆ. ಮಲೆ ಮಹದೇಶ್ವರ ದೇವಾಲಯದಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ದಸರಾದಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಶ್ರೀಶನೇಶ್ವರ ಮಂದಿರದ ಬೆಳ್ಳಿಹಬ್ಬದ ಮಹೋತ್ಸವದಲ್ಲಿ 'ನಾದಸ್ವರ ಚದುರ' ಎಂಬ ಬಿರುದು ದೊರೆತಿದೆ. ಇವರಲ್ಲದೆ ಜಿಲ್ಲೆಯಲ್ಲಿ ಸಂಗೀತ ನಾಟಕಗಳಿಗೆ ಇಂದಿಗೂ ಹೆಚ್ಚಿನ ಪ್ರೋತ್ಸಾಹವಿದ್ದು ಜಿಲ್ಲೆಯಾದ್ಯಂತ ಹಾರ್ಮೋನಿಯಂ ಸಹಿತ ಡ್ರಾಮ ಕಲಿಸುವ ಸುಮಾರು ೬೭ ಮಂದಿ ಮಾಸ್ತರರುಗಳು ಇದ್ದಾರೆ. ಅಲ್ಲದೆ ನಾದಸ್ವರದ ಕ್ಲಾರಿಯೋನೆಟ್ ವಾದಕರು ರ್‍ಯಾಸಿಯೊ ಮತ್ತು ಕೊಳಲು ವಾದಕರು ಪಿಟೀಲು ಹಾಗೂ ತಬಲಾವಾದಕರು ಹೆಚ್ಚಿನ ಸಂಖ್ಯೆಯಲ್ಲಿದ್ದು ಇವರುಗಳ ಪಟ್ಟಿಯನ್ನು 'ಮಂಡ್ಯ ಡೈರೆಕ್ಟರಿ' ಯಲ್ಲಿ ಪ್ರಕಟಿಸಿದೆ. (ಪಾಪು ಕ್ರಿಯೇಷನ್ಸ್, ಗಾಂಧಿನಗರ, ಮಂಡ್ಯ ಪು ೩೩೪–೫) ಇವರಲ್ಲದೆ ವಾದ್ಯ ತಯಾರಕರು ಹಾಗೂ ರಿಪೇರಿ ಕೆಲಸಗಾರರೂ ಇದ್ದಾರೆ. ಜಿಲ್ಲೆಯ ಶಿಲ್ಪಿಗಳ ಕುಟುಂಬದ ವೀಣಾ ರುದ್ರಪ್ಪಾಚಾರ್ ಅವರು ಹಲವಾರು ಬಗೆಯ ವೀಣೆಯ ವಿನ್ಯಾಸ ರಚಿಸಿ ರೂಪಿಸುತ್ತಿದ್ದು ಸುಮಾರು ಎರಡು ಸಾವಿರ ವೀಣೆಗಳನ್ನು ಕಲಾತ್ಮಕವಾಗಿ ರೂಪಿಸಿರುವರೆಂದು ತಿಳಿದುಬರುತ್ತದೆ. ಮೊದಲಿಗೆ ಕಲಾವಿದ ಕೆ.ವೆಂಕಟಪ್ಪನವರ ಹಾಗೂ ಇತರ ವಿದ್ವಾಂಸರ ಶಿಷ್ಯವೃತ್ತಿಯಲ್ಲಿ ವೀಣಾವಾದನ ಕಲಿತಿದ್ದು ಮುಂದೆ ವೆಂಕಟಪ್ಪನವರಿಗೆ ವಿಶೇಷವಾದ ರೀತಿಯ ವೀಣೆಯನ್ನು ರೂಪಿಸಿಕೊಟ್ಟರು. (ಅದು ಈಗ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿದೆ) ರುದ್ರಪ್ಪಾಚಾರ್ ಅವರ ಕಲಾಸೇವೆಗಾಗಿ ಬೆಂಗಳೂರಿನ ಗಾಯನ ಸಮಾಜ ೧೯೮೨ರಲ್ಲಿ ಸನ್ಮಾನಿಸಿ ಗೌರವಿಸಿತು.

ಜಿಲ್ಲೆಯ ಕೆಲವು ಕವಿ ಕಲಾವಿದರೊಂದಿಗೆ ಸಂಗೀತ, ನೃತ್ಯಕಲೆಯ ಸಹ ಸಂಬಂಧವನ್ನು ಗುರುತಿಸಲಾಗಿದೆ. ಸಂಗೀತಗಾರರಾದ ಕೆ.ಎಸ್.ನಾರಾಯಣ ಅಯ್ಯಂಗಾರರು ತೈಲಚಿತ್ರ ರಚನೆಯಲ್ಲೂ ಪರಿಣತರಿದ್ದರು. ಶ್ರೀ.ಎಸ್.ಚನ್ನಕೇಶವಯ್ಯ ಶಾರದಾ ವಿಲಾಸ ಕಾಲೇಜಿನಲ್ಲಿ ಕೆಲಕಾಲ ಚಿತ್ರಕಲಾ ಉಪಾಧ್ಯಾಯರಾಗಿದ್ದರು. ಅಂತೆಯೇ, ಚಿತ್ರ ಕಲಾವಿದ ಸಿ.ಸೀತಾರಾಂ ಅವರು ಪ್ರಸಿದ್ಧ ಮೈಸೂರು ಸಹೋದರರಲ್ಲಿ ಒಬ್ಬರಾಗಿದ್ದು ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದು ಪ್ರಸ್ತುತ ಶ್ರೀರಂಗಪಟ್ಟಣದಲ್ಲಿ ವಾಸವಿದ್ದಾರೆ. ಪ್ರಸಿದ್ಧ ಭಾವಚಿತ್ರ ಕಲಾವಿದ ಶ್ರೀರಂಗಪಟ್ಟಣದ ರಾಮಸ್ವಾಮಿ ಅಯ್ಯಂಗಾರರು ತಮ್ಮಷ್ಟಕ್ಕೆ ಸಂಗೀತಗಾರರಾಗಿದ್ದಲ್ಲದೆ ಮಕ್ಕಳಿಗೆ ಪ್ರಾಥಮಿಕ ಹಂತದ

ಸಂಗೀತ ಶಿಕ್ಷಣ ನೀಡಿದ್ದು ಸ್ವರಸಹಿತ ಗೀತೆಗಳನ್ನು ರಚಿಸಿದ್ದುಂಟು. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕವಿ ಪು.ತಿ.ನರಸಿಂಹಚಾರ್ಯರು ಸಂಪ್ರದಾಯ ಸಂಗೀತ ಹಾಡುಗಾರಿಕೆಗೆ ಒಪ್ಪುವಂತೆ ಕವನಗಳನ್ನು, ಗೀತ ನಾಟಕಗಳನ್ನು ರಚಿಸಿದ್ದಾರೆ. ಕೆ.ಎಸ್.ನರಸಿಂಹಸ್ವಾಮಿಯವರ ಕವಿತೆಗಳನ್ನು ಭಾವಗೀತೆ ಸುಗಮ ಸಂಗೀತಗಾರರು ಅನೇಕ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ಚಿತ್ರಕಲಾ ಶಾಲೆಗಳಲ್ಲಿ ಮೊದಲಿಗೆ ಸಂಗೀತ ನೃತ್ಯಗಳನ್ನೂ ಕಲಿಸಿ ಕೊಡಲಾಗುತ್ತಿತ್ತು. ಅ.ನ.ಸುಬ್ಬರಾಯ ಕಲಾಮಂದಿರದಲ್ಲಿ ಈ ಬಗೆಯ ಶಿಕ್ಷಣ ಇತ್ತೀಚಿನವರೆಗೂ ನಡೆದುಬಂದಿತ್ತು. ಮಂಡ್ಯದ ಗುರುದೇವ ಲಲಿತಕಲಾ ಅಕಾಡಮಿ (ಸಂಗೀತನೃತ್ಯಾಶಾಲೆ) ನಿರ್ದೇಶಕಿ ಚೇತನ ರಾಧಾಕೃಷ್ಣ ಅವರು ಚಿತ್ರಕಲಾವಿದರೂ ಆಗಿದ್ದು ಅವರು ರಚಿಸಿದ ನೃತ್ಯಪಟು ವೆಂಕಟಲಕ್ಷ್ಮಮ್ಮ ಅವರ ಭಾವಚಿತ್ರ ದಸರಾ ಪ್ರದರ್ಶನದಲ್ಲಿ ಬಹುಮಾನ ಗಳಿಸಿದೆಯಲ್ಲದೆ ಸಂಗೀತ ಶಾಲೆಯಲ್ಲಿ ಚಿತ್ರಕಲೆಯನ್ನೂ ಕಲಿಸಿಕೊಡಲಾಗುತ್ತದೆ.

ಸಂಗೀತ ನೃತ್ಯಗಳಿಗೆ ಈಚಿನವರೆಗೂ ಪ್ರತ್ಯೇಕ ಶಾಲೆಗಳು ಇರದೆ ಪ್ರಸಿದ್ಧರಾಗಿದ್ದ ಒಬ್ಬ ಅಥವ ಹಲವಾರು ಸಂಗೀತಗಾರರಲ್ಲಿ ಗುರುಕುಲ ಪದ್ಧತಿಯಲ್ಲಿ ಕಲಿಯುತ್ತಿದುದೇ ಅಧಿಕ. ಸಂಗೀತ ತಜ್ಞರಾಗಿದ್ದ ಕೆ.ಎಸ್.ಚಂದ್ರಶೇಖರಯ್ಯ (ತೇರಕೋಟೆ) ಅವರು ಮಂಡ್ಯವನ್ನು ಕೇಂದ್ರವಾಗಿರಿಸಿಕೊಂಡು ಸಂಗೀತ ಶಿಕ್ಷಕರಾಗಿ ಪ್ರಚಾರಕರಾಗಿ ಪೋಷಕರಾಗಿ ಹಲವಾರು ಬಗೆಯಲ್ಲಿ ಸಂಗೀತ ಪರವಾದ ಕಾರ್ಯ ಕೈಗೊಂಡಿದ್ದಲ್ಲದೆ ಕೆಲಕಾಲ ಸಂಗೀತಕಲೆಗೆ ಮೀಸಲಾದ, ಕಲೆಗೆ ಸಂಬಂಧಿಸಿದ ವಾರ್ತೆಗಳಿಂದ ಕೂಡಿದ 'ಗಾನವಾಹಿನಿ' ಎಂಬ ಪತ್ರಿಕೆ ನಡೆಸುತ್ತಿದ್ದರು.

ಜಿಲ್ಲೆಯಲ್ಲಿರುವ ಸಂಗೀತ ನೃತ್ಯಕಲಾ ಶಾಲೆಗಳಲ್ಲಿ ಮಂಡ್ಯದಲ್ಲಿ ಸುವ್ಯವಸ್ಥಿತವಾಗಿರುವ ಕೆಲವು ಶಾಲೆಗಳನ್ನು ಉದಾಹರಿಸಬಹುದು. ಇಂದಿನ ಶ್ರಿ ತಾಂಡವೇಶ್ವರ ವಿದ್ಯಾಮಂದಿರ ಕಾಲೇಜ್ ಆಫ್ ಮ್ಯೂಸಿಕ್ ೧೯೫೮ರಲ್ಲಿ ಖ್ಯಾತ ಸಂಗೀತ ವಿದ್ವಾಂಸ ತಾಂಡವೇಶ್ವರ ಅವರಿಂದ 'ಶ್ರೀ ತಾಂಡವೇಶ್ವರ ವಿದ್ಯಾ ಸಂಸ್ಥೆ' ಎಂಬ ಹೆಸರಿನಲ್ಲಿ ಆರಂಭವಾಯಿತು. ಸಂಗೀತಗಾರ ತಾಂಡವೇಶ್ವರ (೧೯೩೬-೯೯) ಮಂಡ್ಯದ ಹೊಳಲು ಗ್ರಾಮದಲ್ಲಿ ಜನಿಸಿ, ಔಷದೋಪಚಾರದ ಅಚಾತುರ್ಯದಿಂದಾಗಿ ದೃಷ್ಟಿ ಕಳೆದುಕೊಂಡು, ಮೈಸೂರಿನಲ್ಲಿ ಇತರ ವಿದ್ಯಾಭ್ಯಾಸದೊಂದಿಗೆ ಸಂಗೀತ ಹಾಗೂ ಪಿಟೀಲು ಅಭ್ಯಸಿಸಿದರು. ನಂತರ ಶಿವಪ್ಪ, ಚೌಡಯ್ಯ ಮುಂತಾದ ಹಿರಿಯ ಪ್ರಸಿದ್ಧ ಕಲಾವಿದರಲ್ಲಿ ಹೆಚ್ಚಿನ ತರಬೇತಿ ಪಡೆದು, ೧೯೫೬ರಲ್ಲಿ ನಡೆದ ರಾಜ್ಯದ ಮೊದಲ ವಿಶೇಷ ಸಂಗೀತ ಘಟಿಕೋತ್ಸವದಲ್ಲಿ ಮಹಾರಾಜರಿಂದ 'ಚಿನ್ನದ ಪದಕ' ಪಡೆದರು. ಆ ವೇಳೆಗೆ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ದೊರೆತಿದ್ದ ಸಂಗೀತ ಪ್ರಾಧ್ಯಾಪಕ ಹುದ್ದೆಯನ್ನು ತ್ಯಜಿಸಿ ಮಂಡ್ಯದಲ್ಲಿ ೨೨-೧೦-೧೯೫೮ರಲ್ಲಿ ಸಂಗೀತ ಶಾಲೆಯನ್ನು ಆರಂಭಿಸಿದರು. ಹಾಡುಗಾರಿಕೆಯಲ್ಲದೆ ಪಿಟೀಲು, ವೀಣೆ ಮೃದಂಗಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತಲ್ಲದೆ ಜನಮನದಲ್ಲಿ ಆಸಕ್ತಿ ಹುಟ್ಟಿಸಲು 'ಮಂಡ್ಯ ಗಾಯನ ಸಮಾಜ' ಸ್ಥಾಪಿಸಿ ಮಾಸಿಕ ಸಂಗೀತ ಕಚೇರಿ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಏರ್ಪಡಿಸಿ ಜಿಲ್ಲೆಯಲ್ಲಿ ಸಂಗೀತದ ವಾತಾವರಣ ನಿರ್ಮಿಸಿದರು. ಶ್ರೀಯುತರನ್ನು ಸಂಗೀತ ವಿದ್ವಾನ್ ಪರೀಕ್ಷಕರರಾಗಿ, ಸಂಗೀತ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಸರ್ಕಾರದಿಂದ ನೇಮಕ ಮಾಡಲಾಗಿತ್ತು. ತಾಂಡವೇಶ್ವರ ಅವರು ಮೈಸೂರು ಅರಮನೆಯಲ್ಲಿ, ನಾಡಿನ ಹಲವಾರು ಕಡೆಗಳಲ್ಲಿ ಸಂಗೀತ ಕಚೇರಿಗಳನ್ನು ನಡೆಸಿಕೊಟ್ಟು, ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು. ಮಂಡ್ಯ ಜಿಲ್ಲೆ ಸನ್ಮಾನ ಸಮಿತಿಯವರಿಂದ 'ಸಂಗೀತ ವಿಶಾರದ' ಹಾಗೂ ರಾಜ್ಯಮಟ್ಟದ ಅಂಧ ಕಲಾವಿದರ ಸಂಘದ ವತಿಯಿಂದ 'ಸಂಗೀತ ಕಲಾ ಶಿರೋಮಣಿ' ಬಿರುದುಗಳು ಲಭಿಸಿದ್ದವು. ರಾಜ್ಯ ಸಂಗೀತ ನೃತ್ಯ ಅಕಾಡಮಿಯ ಗೌರವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ೧೯೮೮-೮೯ರಲ್ಲಿ ದೊರೆತಿತ್ತು. ಇವರ ಪತ್ನಿ ಕೆ.ಎಸ್.ನಾಗರತ್ನಮ್ಮ ಅವರೂ ಸಂಗೀತ ವಿದುಷಿಯಾಗಿದ್ದಾರೆ. ಮಗಳು ಎಚ್.ಟಿ.ವಿಜಯಕುಮಾರಿಯವರು ಹಾಡುಗಾರಿಕೆಯಲ್ಲಿ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಸಂಗೀತ ಸಂಸ್ಥೆಯನ್ನು ಅವರ ತಾಯಿ ಹಾಗೂ ಸಹೋದರ ಸತೀಶ್‌ಕುಮಾರ್ ಅವರೊಂದಿಗೆ ನಡೆಸುತ್ತಿದ್ದಾರೆ.

ಎಚ್.ಟಿ.ಸತೀಶ್ ಕುಮಾರ್ (೧೯೬೯) ಅವರು ಹಾಡುಗಾರಿಕೆ, ವೀಣೆ ಹಾಗೂ ತಾಳ ವಾದ್ಯಗಳಲ್ಲಿ ಉನ್ನತ ಶಿಕ್ಷಣ ಪಡೆದಿದ್ದು ಕೊಡಗು, ಧರ್ಮಸ್ಥಳ, ಬೆಂಗಳೂರು, ಮೈಸೂರು ದಸರಾ ಇತ್ಯಾದಿ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸಂಗೀತ ನೃತ್ಯ ಅಕಾಡಮಿಯ ಧ್ವನಿ ಸಂಸ್ಕರಣೆ ಹಾಗೂ ವಾದ್ಯಗಳ ತಾಂತ್ರಿಕತೆ ಮತ್ತು ಬಳಕೆ ಕುರಿತ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. ಇವರುಗಳ ನೇತೃತ್ವದಲ್ಲಿ ಸಂಗೀತ, ವಿದ್ಯಾಮಂದಿರ, ಕಾಲೇಜು ಮುಂದುವರಿಯುತ್ತಿದ್ದು, ಸಂಗೀತ ವಾದ್ಯಗಳಲ್ಲಿ ಜೂನಿಯರ್, ಸೀನಿಯರ್ ಹಾಗೂ ವಿದ್ವತ್ ತರಗತಿಗಳು ನಡೆಯುತ್ತಿವೆ. ಪ್ರಸ್ತುತ ೨೦೦೦–೨೦೦೧ನೇ ಸಾಲಿನಲ್ಲಿ ಎಲ್ಲ ಪ್ರಕಾರಗಳಿಂದ ಒಟ್ಟು ೬೦ ಮಂದಿ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಶಿಷ್ಯರಲ್ಲಿ ವಿಜಯಕುಮಾರ್ ಹಾಗೂ ಭಾರ್ಗವಿ ಅವರುಗಳು ಹೆಸರು ಮಾಡಿದ್ದು ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

ಮಂಡ್ಯದ ಇನ್ನೊಂದು ಕಲಾಶಾಲೆ ನಟರಾಜ ಕಲಾನಿಕೇತನವನ್ನು ಮಣಿಶಂಕರ ಅಯ್ಯರ್ (೧೯೨೭) ಅವರು ನಲವತ್ತು ವರ್ಷಗಳ ಹಿಂದೆ ಆರಂಭಿಸಿದರು. ಅಯ್ಯರ್ ಅವರು ಮೂಲತಃ ಕೇರಳದವರಾಗಿದ್ದು ಮೈಸೂರಿನಲ್ಲಿ ಸಂಗೀತ ನೃತ್ಯ ಅಭ್ಯಸಿಸಿ ಮಡಕೇರಿಯಲ್ಲಿ ಕಲಾಶಾಲೆ ಆರಂಭಿಸಿ ನಂತರ ಮಂಡ್ಯಕ್ಕೆ ಬಂದು ನೆಲೆಸಿದರು. ಅಯ್ಯರ್ ಅವರು ಮೃದಂಗ ಹಾಗೂ ವೀಣೆಯ ಶಿಕ್ಷಣವನ್ನು ಪಡೆದಿದ್ದು ಸಂಗೀತ ಮನೆತನದ ಭಾರತಿಯವರನ್ನು (೧೯೫೩–೯೯) ವಿವಾಹವಾಗಿದ್ದು ಇಬ್ಬರೂ ನಟರಾಜ ಕಲಾಶಾಲೆಯಿಂದ ಅನೇಕ ವಿದ್ಯಾರ್ಥಿಗಳನ್ನು ರೂಪಿಸಿದರು. ೧೯೬೨ರಲ್ಲಿ ಚೀನಾದೊಂದಿಗೆ ಯುದ್ಧವಾದಾಗ ಶಾಲೆಯ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ನಡೆಸಿ ಯುದ್ಧ ಪರಿಹಾರನಿಧಿಗೆ ನಾಲ್ಕು ಸಾವಿರ ರೂ.ಗಳನ್ನು ಸಂಗ್ರಹಿಸಿ ನೀಡಿದರು. ಇವರಿಗೆ ಮೈಸೂರಿನ ಭಾರತೀಯ ನೃತ್ಯ ಕಲಾಪರಿಷತ್ತು 'ನರ್ತನಮಣಿ' ಎಂಬ ಬಿರುದನ್ನು ರಾಜ್ಯ ಸಂಗೀತ ನೃತ್ಯ ಅಕಾಡಮಿಯವರು 'ಕರ್ನಾಟಕ ಕಲಾಶ್ರೀ' ಎಂಬ ಬಿರುದನ್ನೂ ನೀಡಿ ಸನ್ಮಾನಿಸಿವೆ. ೨೦೦೦–೨೦೦೧ನೇ ಸಾಲಿನಲ್ಲಿ ಕಲಾಶಾಲೆಯಲ್ಲಿ ನೃತ್ಯಕ್ಕೆ ೩೫, ಸಂಗೀತ ಹಾಗೂ ವೀಣೆಗೆ ತಲಾ ಹತ್ತು ಮಂದಿ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಇದಲ್ಲದೆ ಮಂಡ್ಯದ ಮಹಿಳಾ ಸಮಾಜದಲ್ಲಿ ನೃತ್ಯ ತರಬೇತಿಯ ಶಾಖೆಯೊಂದಿದ್ದು ಅದರಲ್ಲಿಯೂ ಮಣಿಶಂಕರಯ್ಯರ್ ಅವರು ಆಸಕ್ತರಿಗೆ ಕಲಿಸುತ್ತಿದ್ದಾರೆ. ಪ್ರಸ್ತುತ ೩೦ ವಿದ್ಯಾರ್ಥಿಗಳಿದ್ದು ಈವರೆಗೆ ೨೦೦ ವಿದ್ಯಾರ್ಥಿಗಳು ಅಭ್ಯಸಿಸಿದ್ದಾರೆ. ನಟರಾಜ ಕಲಾಶಾಲೆಯಲ್ಲಿ ಅಭ್ಯಸಿಸಿದ ಎಂ.ವೀಣಾ, ಧನಲಕ್ಷ್ಮೀ ಅವರು ರಾಜ್ಯದಲ್ಲಿಯೂ, ಶ್ವೇತ ಹಾಗೂ ಜಯಶ್ರೀ ಅವರು ಅಮೆರಿಕೆಯಲ್ಲಿಯೂ ಹೆಸರು ಗಳಿಸಿದ್ದಾರೆ. ಡೆನ್ಮಾರ್ಕ್‌ನ ಮಿಸ್.ಡೋನಾ ಎಂಬಾಕೆ ಅಯ್ಯರ್ ಅವರಲ್ಲಿ ನೃತ್ಯಕಲೆ ಅಭ್ಯಸಿಸಿದ್ದಾರೆ.

ಮಣಿಶಂಕರ್ ಅವರ ಮಗ ಎಸ್.ಪ್ರಕಾಶ್ ಮೊದಲಿಗೆ ತಂದೆ ತಾಯಿಯರಿಂದ ನಂತರ ಶ್ರೀಮತಿ ಶ್ರೀಧರ್, ಪದ್ಮಿನಿ ರವಿ ಹಾಗೂ ಕಿರಣ್ ಸುಬ್ರಮಣ್ಯಂ ಮತ್ತು ಸಂಧ್ಯಾಕಿರಣ್ ಅವರಲ್ಲಿ ನೃತ್ಯಕಲಾಭ್ಯಾಸ ಮಾಡಿದ್ದಾರೆ. ಅನೇಕರಿಗೆ 'ನಟುವಾಂಗ' ಕ್ಕೆ ನುಡಿಸಿದ್ದಾರೆ. ಅದಕ್ಕಾಗಿ ಮೈಸೂರಿನ ದಸರಾ ಕಾರ್ಯಕ್ರಮದಲ್ಲಿ ನಟುವಾಂಗ ವಿದ್ವಾನ್ ಎಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ 'ಯುವಕ ಬಿರಾದರಿ' ಪ್ರಶಸ್ತಿ ನೀಡಲಾಗಿದೆ. ಪ್ರಸ್ತುತ ಮಂಡ್ಯ, ಬೆಂಗಳೂರುಗಳಲ್ಲಿ ನೃತ್ಯ ಕೇಂದ್ರಗಳನ್ನು ತೆರೆದು ಅನೇಕ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ.

ಜಿಲ್ಲೆಯ ಇನ್ನೊಂದು ಪ್ರಮುಖ ಸಂಗೀತ, ನೃತ್ಯ ಶಾಲೆಯೆಂದರೆ ಮಂಡ್ಯದ 'ಗುರುದೇವ ಲಲಿತಕಲಾ ಅಕಾಡೆಮಿ' ಈ ಅಕಾಡೆಮಿಯ ನಿರ್ದೇಶಕಿಯಾದ ಚೇತನ ರಾಧಾಕೃಷ್ಣ (೧೯೭೨) ಅವರು ಕಿರಿಯ ವಯಸ್ಸಿನಲ್ಲೇ ಅನೇಕ ಸಾಧನೆ ಮಾಡಿದವರು. ಸಂಗೀತ, ನೃತ್ಯಗಳಲ್ಲಿ ಉನ್ನತ ಪದವಿ ಪಡೆದಿರುವುದಲ್ಲದೆ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಭರತನಾಟ್ಯವಲ್ಲದೆ ನೃತ್ಯಕಲೆಯ ವಿವಿಧ ಪ್ರಾದೇಶಿಕ ಶೈಲಿಗಳಾದ ಒಡೆಸ್ಸಿ, ಮಣಿಪುರಿ, ಮೋಹಿನಿ ಅಟ್ಟಂ, ಇತ್ಯಾದಿಗಳನ್ನು ಆಯಾ ಪ್ರದೇಶದ ಮೂಲಗಳಿಂದಲೇ ಗುರು ಮುಖೇನ ಅಭ್ಯಸಿಸಿದ್ದಾರೆ. ೯೨ರಲ್ಲಿ

ನೃತ್ಯಪಟು ವೆಂಕಟಲಕ್ಷಮ್ಮ ಅವರ ಉಪಸ್ಥಿತಿಯಲ್ಲಿ ರಂಗ ಪ್ರವೇಶ ಮಾಡಿದ ಚೇತನರವರು ಮಂಡ್ಯ ಸೇರಿದಂತೆ ಬೆಂಗಳೂರು, ಮೈಸೂರು, ಕೊಡಗು, ದಕ್ಷಿಣಕನ್ನಡ, ಉಡುಪಿ ಇತ್ಯಾದಿ ಅನೇಕ ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾರೆ. ದೂರದರ್ಶನದಲ್ಲಿ 'ಬಿ' ಗ್ರೇಡ್ ಕಲಾವಿದೆಯಾಗಿದ್ದಾರೆ. ಜಿಲ್ಲಾ ಆಡಳಿತದಿಂದ ೯೮ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಇವರಿಗೆ ಲಯನ್ಸ್ ಕ್ಲಬ್, ರೋಟರಿ ಕ್ಲಬ್‌ಗಳಲ್ಲದೆ ಇತರ ಏಳೆಂಟು ಸ್ಥಳೀಯ ಸಂಸ್ಥೆಗಳು ಪ್ರಶಸ್ತಿ, ಗೌರವ, ಪಾರಿತೋಷಕಗಳನ್ನು ನೀಡಿ ಗೌರವಿಸಿವೆ. ೧೯೯೬ರಿಂದ ಗುರುದೇವ ಲಲಿತಕಲಾ ಅಕಾಡೆಮಿಯ ನಿರ್ದೇಶಕಿಯಾಗಿ, ನೃತ್ಯ ಕಲೆಯಲ್ಲಿ ಸಂಶೋಧನೆ ಮತ್ತು ರಾಷ್ಟ್ರೀಯ ಮಟ್ಟದ ಉತ್ತಮ ನೃತ್ಯಗಾರ್ತಿಯಾಗಬೇಕೆಂಬ ಭವಿಷ್ಯದ ಗುರಿ ಹೊಂದಿರುವ ಚೇತನ ರಾಧಾಕೃಷ್ಣ ಅವರು 'ಬೇಡರ ಕಣ್ಣಪ್ಪ', 'ದಾಸರು ಕಂಡ ಶ್ರೀಕೃಷ್ಣ', 'ಬಂಡಾಸುರ ವಧೆ' ಇತ್ಯಾದಿ ನೃತ್ಯರೂಪಕಗಳನ್ನು ಸಂಯೋಜಿಸಿದ್ದಾರೆ. ಪ್ರತಿವರ್ಷ ನೃತ್ಯಕಲಾ ಅಕಾಡಮಿಯಿಂದ ವಾರ್ಷಿಕೋತ್ಸವ ಏರ್ಪಡಿಸಿ ಜಿಲ್ಲೆಯ ಹಾಗೂ ಹೊರಗಿನ ಸಂಗೀತ ಹಾಗೂ ಇನ್ನಿತರ ಕ್ಷೇತ್ರದ ಪ್ರತಿಭಾವಂತರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಆಗ ಶಾಲಾ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ನಡೆಯುತ್ತವೆ. ನೃತ್ಯ ಅಕಾಡೆಮಿಯ ಶಾಖಾ ಕೇಂದ್ರವೊಂದು ಪುತ್ತೂರಿನಲ್ಲಿ ಸುಪ್ರಭ ಕುಟೀರ ಎಂಬ ಹೆಸರಿನಲ್ಲಿ ಕಳೆದ ವರ್ಷ ಆರಂಭವಾಗಿದೆ. ಸಂಗೀತ, ನೃತ್ಯಗಳ ಜೂನಿಯರ್, ಸೀನಿಯರ್ ಪರೀಕ್ಷೆಗಳಿಗೆ ಅವಕಾಶವಿದ್ದು ಈ ಶೈಕ್ಷಣಿಕ ವರ್ಷದಲ್ಲಿ ಮಂಡ್ಯ ಕೇಂದ್ರದಲ್ಲಿ ೧೦೦ ವಿದ್ಯಾರ್ಥಿಗಳೂ, ಪುತ್ತೂರು ಕೇಂದ್ರದಲ್ಲಿ ನಾಲ್ಕು ಹಾಗೂ ಮದ್ದೂರಿನ ನವೋದಯ ಶಾಲೆಯಲ್ಲಿ ४೦ ವಿದ್ಯಾರ್ಥಿಗಳೂ, ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಇದಲ್ಲದೆ ಮೇಲುಕೋಟೆಯಲ್ಲಿ ಚೇತನರವರ ವಿದ್ಯಾರ್ಥಿಗಳು ನೃತ್ಯ ತರಬೇತಿ ನೀಡುತ್ತಿದ್ದಾರೆ. ಶಾಲೆಯಲ್ಲಿ ಚಿತ್ರಕಲೆ ಕಲಿಯಲೂ ಸಹ ಅವಕಾಶವಿದೆ. ಪ್ರತೀ ವರ್ಷ ಚಿತ್ರಕಲೆಯ ಶಿಬಿರ ನಡೆಯುತ್ತದೆ. ಶಾಲೆಯ ಪರೀಕ್ಷೆಯಲ್ಲಿ ಶೇಕಡ ನೂರರಷ್ಟು ಫಲಿತಾಂಶವಿದೆ. ಇವರ ಶಿಷ್ಯರಲ್ಲಿ ಮೇಘ ಕಕ್ಕಿಲಾಯ, ಎಚ್.ಪಿ.ಶ್ವೇತ, ರಾಧಿಕ ಅಯ್ಯಂಗಾರ್ ಅವರುಗಳು ಈಗಾಗಲೇ ಹೆಸರು ಮಾಡಿದ್ದಾರೆ.

ಮೇಘ ಕಕ್ಕಿಲಾಯ (೧೯೮೮) ಅವರು ಈಗಷ್ಟೇ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿರುವರಾದರೂ ಭರತನಾಟ್ಯ ಕಲೆಯಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಜಿಲ್ಲೆಯ ರೋಟರಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಅವುಗಳಲ್ಲಿ ಪಾರಿತೋಷಕಗಳನ್ನು ಪಡೆದಿದ್ದಾರೆ. ಆಂಧ್ರದ ಮಂತ್ರಾಲಯ, ಬಿಜಾಪುರದ ನವರಸಪುರ ಉತ್ಸವವೂ ಸೇರಿದಂತೆ ಹಾಸನ, ಮೈಸೂರು, ವಿರಾಜಪೇಟೆ, ಸುಳ್ಯ ಇತ್ಯಾದಿ ಕಡೆಗಳಲ್ಲಿ ಯಶಸ್ವಿ ಪ್ರದರ್ಶನ ನೀಡಿದ್ದಾರೆ. ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಕಳೆದ ೨೦೦೧ರಲ್ಲಿ ರಂಗಪ್ರವೇಶ ಮಾಡಿದ ಮೇಘ ಅವರು ನೃತ್ಯ ಕಲೆಯಲ್ಲಿ ಇನ್ನೂ ಹೆಚ್ಚಿನ ಅಭ್ಯಾಸ ಮಾಡುತ್ತಿದ್ದಾರೆ. ಬೆಳಕವಾಡಿಯ ಮಹದೇವಣ್ಣ ಸಿ ಅವರು ಸಂಗೀತ ವಾದ್ಯಗಳಲ್ಲಿ ಸೀನಿಯರ್ ಪದವಿ ಪಡೆದಿದ್ದು ಯು.ಎಸ್.ಕೃಷ್ಣರಾವ್, ಎಚ್.ಆರ್.ಕೇಶವಮೂರ್ತಿ ಇತ್ಯಾದಿ ಅನೇಕ ನೃತ್ಯಾಪಟುಗಳಿಗೆ ಪಕ್ಕ ವಾದ್ಯ ನುಡಿಸಿದ್ದಾರೆ. ಚಲನಚಿತ್ರ ಸುಗಮ ಸಂಗೀತಗಳಿಗೂ ನೆರವು ನೀಡಿದ್ದಾರೆ. ಕೈಗಾರಿಕೆ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನಿತರಾಗಿದ್ದಾರೆ.

**ಗಮಕ ಮತ್ತು ಕೀರ್ತನೆ**

ಗಮಕ ಕಲೆ ಸಹ ಒಂದು ಪ್ರಾಚೀನ ಕಲೆಯಾಗಿದ್ದು ಶಾಸನ ಕಾವ್ಯಗಳಲ್ಲಿ ಈ ಕುರಿತು ಉಲ್ಲೇಖಗಳಿವೆ. ಶ್ರೀರಂಗಪಟ್ಟಣದಿಂದ ಆಳಿದ ಮೈಸೂರು ದೊರೆಗಳ ಆಸ್ಥಾನದಲ್ಲಿ ಹಲವಾರು ಗಮಕಿಗಳಿದ್ದು ಅವರುಗಳಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಕಂಠೀರವ ನರಸರಾಜರ ಆಸ್ಥಾನದಲ್ಲಿ ಮಹಿಳಾ ಗಮಕಿಗಳಿದ್ದು ಒಬ್ಬಾಕೆ ಭಾರತವನ್ನು ೩೨ ರಾಗಗಳಲ್ಲಿ ಓದುತ್ತಿದ್ದಳಂತೆ. ಚಿಕ್ಕದೇವರಾಜ ಒಡೆಯರ್ ಕಾಲದ ಮೇಲುಕೋಟೆಯ ಶಾಸನವೊಂದು ೧೬೮೦ರಲ್ಲಿ

ಶ್ರೀರಂಗಪಟ್ಟಣದ ಅಳಶಿಂಗ ಅಯ್ಯಂಗಾರ್ ಅವರು ಒಡೆಯರ ಮುಂದೆ ಮಹಾಭಾರತ ವಾಚನ ಮಾಡಿದ್ದು, ಯುದಿಷ್ಠಿರ ಪಟ್ಟಾಭಿಷೇಕ ಭಾಗ ಶ್ರವಣ ಮಾಡಿದ ಕಾಲದಲ್ಲಿ ಕೆಲವು ಗ್ರಾಮಗಳನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಅಲ್ಲದೆ ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ತಿರುಮಲಾರ್ಯನಿಗೆ 'ರಾಮಾಯಣಂ ತಿರುಮಲಾರ್ಯ' ಎಂದೇ ಹೆಸರಿತ್ತು. ಸಂಚಿ ಹೊನ್ನಮ್ಮ ಬರೆದ 'ಹದಿಬದೆಯ ಧರ್ಮ' ಮೊದಲಿಗೆ ಆಕೆಯೇ ಆಸ್ಥಾನದಲ್ಲಿ ವಾಚನಮಾಡಿ ಮನ್ನಣೆ ಪಡೆದಿದ್ದಳು.

ಈ ಪರಂಪರೆ ಮುಂದುವರಿದಿರುವುದನ್ನು ಗಮನಿಸಬಹುದು. ಕರ್ನಾಟಕ ಗಮನ ಕಲಾ ಪರಿಷತ್ತಿನ ೧೯೮೮ರ ಎರಡನೇ ಸಮ್ಮೇಳನದ ಅಧ್ಯಕ್ಷರಾದ ಬಿ.ಎಸ್.ಎಸ್.ಕೌಶಿಕ್ ಅವರು ಮಂಡ್ಯದ ಹೇಮಗಿರಿ ಬಳಿಯ ಕುಪ್ಪಳ್ಳಿಯಲ್ಲಿ ಜನಿಸಿದವರು (೧೯೧೬) ಮೈಸೂರಿನಲ್ಲಿ ಹೆಚ್ಚಿನ ಅಭ್ಯಾಸ ಮಾಡಿ ದೀರ್ಘಕಾಲ ಗ್ರಂಥಪಾಲಕರಾಗಿದ್ದು (ಕಾಲೇಜಿನಲ್ಲಿ) ಗಮಕ ಕಲೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿರಿಸಿಕೊಂಡಿದ್ದವರು. ೧೯೫೪ರಲ್ಲೇ ವಾಲ್ಮೀಕಿ ಗಮಕ ಪಾಠಶಾಲೆ ಸ್ಥಾಪಿಸಿ ಅನೇಕ ಕಲಾವಿದರನ್ನು ರೂಪಿಸಿದವರು. ಇವರು ಹಲವಾರು ಗಮಕ ಗೀತ ರೂಪಕಗಳನ್ನು ರಚಿಸಿದ್ದು ರಾಜ್ಯದೊಳಗಲ್ಲದೆ ನೆರೆಯ ರಾಜ್ಯಗಳಲ್ಲೂ ಇವರ ಕಾವ್ಯವಾಚನ ವ್ಯಾಖ್ಯಾನಗಳು ನೆರವೇರಿವೆ. ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಪಡೆದ ಶ್ರೀಯುತರಿಗೆ ಗಮಕ ಕಲಾ ಪರಿಷತ್ತಿನಿಂದ 'ಗಮಕ ರತ್ನಾಕರ' ಪ್ರಶಸ್ತಿ ದೊರೆತಿದೆ. ಇದೇ ಗಮಕ ಪರಿಷತ್ತಿನ ೧೯೭೨ರ ತೃತೀಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಎಂ.ರಾಘವೇಂದ್ರರಾಯರು (೧೯೧೪) ಪಾಂಡವಪುರದವರಾಗಿದ್ದು ಮೈಸೂರಿನಲ್ಲಿ ಸಂಗೀತ ಗಮಕಗಳಲ್ಲಿ ಆಸಕ್ತರಾದರು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕದಿಂದಾಗಿ ಇನ್ನಿತರ ಸಾಹಿತ್ಯ ಕೃತಿಗಳೊಂದಿಗೆ ಗಮಕ ಕಲೆಗೆ ಶಾಸ್ತ್ರೀಯತೆಯನ್ನು ನಿರೂಪಿಸುವ ಶಾಸ್ತ್ರಕೃತಿ ರಚನೆಯನ್ನೂ ಮಾಡಿದ್ದಾರೆ. ಅಲ್ಲದೆ ಗಮಕ ಕಲೆಯ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ರಾಜ್ಯ ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತರಾದ ಇವರಿಗೆ ಗಮಕ ಕಲಾ ಪರಿಷತ್ತಿನಿಂದ 'ಗಮಕ ರತ್ನಾಕರ' ಎಂಬ ಬಿರುದು ಸಂದಿದೆ. ಇದೇ (ಗಮಕ ಕಲಾ ಪರಿಷತ್ತಿನ) ತೃತೀಯ ಸಮ್ಮೇಳನ (೧೯೭೨)ರಲ್ಲಿ ಸನ್ಮಾನಿತರಲ್ಲಿ ಒಬ್ಬರಾದ ಜಯಲಕ್ಷ್ಮಿಗಣೇಶ ಮೂರ್ತಿಯವರು ಕೆ.ಆರ್.ಪೇಟೆಯ ಹೇಮಗಿರಿಯಲ್ಲಿ ೧೯೧೨ರಲ್ಲಿ ಜನಿಸಿ ಸ್ವಂತ ಪರಿಶ್ರಮದಿಂದ ಗಮಕ ವಾಚನದಲ್ಲಿ ಸಿದ್ಧಿ ಪಡೆದರು. ೩೦ ವರ್ಷಗಳ ಕಾಲ ಆಕಾಶವಾಣಿಯ ಕಲಾವಿದರಾಗಿದ್ದರು. 'ಗಮಕ ಸರಸ್ವತಿ' , 'ಗಮಕ ಕಲಾಕೋವಿದೆ' ಬಿರುದುಗಳನ್ನು ಸಂಘ ಸಂಸ್ಥೆಗಳು ನೀಡಿ ಗೌರವಿಸಿವೆ.

ಅಖಿಲ ಭಾರತ ನಾಲ್ಕನೇ ಗಮಕ ಕಲಾ ಸಮ್ಮೇಳನ ೧೯೭೮ರಲ್ಲಿ ನಡೆದಿದ್ದು, ಆ ವೇಳೆಯಲ್ಲಿ ಸನ್ಮಾನಿತರಾದವರಲ್ಲಿ ಒಬ್ಬರಾದ ಹೆಚ್. ಶೇಷಗಿರಿರಾವ್ ಅವರು ಮಂಡ್ಯದಲ್ಲಿ ೧೯೧೩ರಲ್ಲಿ ಜನಿಸಿದವರು. ಗಮಕ, ಹರಿಕಥೆಗಳಲ್ಲಿ ಸ್ವಂತ ಪರಿಶ್ರಮ ಪಡೆದು ಮಂಡ್ಯದಲ್ಲಿ ನಾಲ್ಕೈದು ದಶಕಗಳಿಂದ ಗಮಕ ಕಲೆಯನ್ನು ಪ್ರಸರಿಸುತ್ತಿದ್ದಾರೆ. ೧೯೫೪ರಲ್ಲಿ ಶ್ರೀವಿದ್ಯಾಗಣಪತಿ ಗಮಕ ಶಿಕ್ಷಣಾಲಯ ಸ್ಥಾಪಿಸಿ ಪ್ರಾಂಶುಪಾಲರಾಗಿ, ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗಮಕ, ಕೀರ್ತನೆ, ಸುಗಮ ಸಂಗೀತಗಳಲ್ಲಿ ಅನೇಕ ಕಲಾವಿದರನ್ನು ರೂಪಿಸಿದ್ದಾರೆ. ೨೫ ಹರಿಕಥೆಗಳನ್ನು ರಚಿಸಿದ್ದಾರೆ. ಜಿಲ್ಲೆಯ ಗಮಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶ್ರೀಯುತರಿಗೆ 'ಗಮಕ ಕಲಾರತ್ನ', 'ಕೀರ್ತನ ಕೇಸರಿ', 'ಹರಕಥಾ ವಿಚಕ್ಷಣ', 'ಅಳಸಿಂಗ ಪ್ರಶಸ್ತಿ', 'ಕರ್ನಾಟಕ ಕಲಾ ತಿಲಕ', 'ಕಲಾ ವಿಚಕ್ಷಣ' ಇತ್ಯಾದಿ ಬಿರುದುಗಳು ಬಂದಿವೆ.

ಮಂಡ್ಯದ ಗುರುದೇವ ಲಲಿತಕಲಾ ಅಕಾಡಮಿಯಿಂದ ೧೯೬೮ರಲ್ಲಿ ಪುರಸ್ಕೃತರಾದ ಶ್ರೀಮತಿ ವಿಜಯಮ್ಮ ಅವರು ಸಂಗೀತ ಗಮಕಗಳನ್ನು ಸ್ವಂತ ಪರಿಶ್ರಮದಿಂದ ಕಲಿತು, ತಮ್ಮಷ್ಟಕ್ಕೆ ವಾಚನದ ಹವ್ಯಾಸ ಉಳ್ಳವರಾಗಿದ್ದು, ಆಕಾಶವಾಣಿಯಿಂದಲೂ ಕಾರ್ಯಕ್ರಮ ನೀಡಿದ್ದಾರೆ. ಇವರುಗಳಲ್ಲದೆ ಗಮಕ ನಾರಾಯಣಗೌಡರು ಅರಕೆರೆಯವರು. ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಜಿ.ನಾರಾಯಣ ಅವರು ದೇಶಹಳ್ಳಿಯವರಾಗಿದ್ದು ನಾಡಿನ ಗಮಕ ಕಲೆಯ

ಉಳಿವಿಗಾಗಿ ಹಲವಾರು ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಿರುವವರು. ಕರ್ನಾಟಕ ಗಮಕ ಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡ್ಯದ ಪ್ರತಿನಿಧಿಯಾಗಿ ೯೬–೯೭ನೇ ಸಾಲಿನಲ್ಲಿ ತೈಲೂರು ವೆಂಕಟಕೃಷ್ಣ ಅವರು ಆಯ್ಕೆಯಾಗಿದ್ದರು.

**ಕೀರ್ತನ ಕಲಾವಿದರು**

ಹರಿಕಥೆ ಅಥವಾ ಕೀರ್ತನ ಒಂದು ಪ್ರಾಚೀನ ಕಲೆ. ಕೀರ್ತನ ಮಾಡುವವರಿಗೆ ಶ್ರಾವ್ಯವಾದ ಧ್ವನಿ, ಒಳ್ಳೆಯ ಸಂಗೀತ ಜ್ಞಾನ, ಪುರಾಣ, ವೇದ, ಗಮಕ, ಅಧ್ಯಾತ್ಮ ಮುಂತಾದವುಗಳ ಆಳವಾದ ಅರಿವು ಅಗತ್ಯವಾಗಿರುತ್ತದೆ. ಕೀರ್ತನಕಾರರು ಈ ಮಾಧ್ಯಮದ ಮೂಲಕ ಸಾಮಾಜಿಕ, ರಾಜಕೀಯ ಮತ್ತು ದೇಶದ ಸಮಸ್ಯೆ ಹಾಗೂ ಸ್ಥಿತಿಗತಿಗಳ ಮೇಲೆ ಕಲಾತ್ಮಕವಾಗಿ ಬೆಳಕು ಚೆಲ್ಲಿ ಸುಧಾರಣೆ ತರುವ ಕೆಲಸ ಮಾಡುತ್ತಾರೆ. ಈ ಜಿಲ್ಲೆಯಲ್ಲಿ ಹರಿಕಥೆ, ಕೀರ್ತನ ಮಾಡುವ ಕಲಾವಿದರು ಕೆಲವರಿದ್ದಾರೆ. ಮಂಡ್ಯದ ಸಿ.ಎಸ್.ಆಶ್ವತ್ಥನಾರಾಯಣ ಅವರು, (೧೯೦೮) ೧೯೨೭ರಲ್ಲಿ ಪ್ರಥಮ ಕಾರ್ಯಕ್ರಮ ನೀಡಿ, ಆನಂತರ ರಾಜ್ಯಾದಾದ್ಯಂತ ಹರಿಕಥೆಗಳನ್ನು ಮಾಡಿ ಹೆಸರುವಾಸಿಯಾಗಿದ್ದು, ಇವರಿಗೆ 'ಕೀರ್ತನ ಕೇಸರಿ', ಎಂಬ ಬಿರುದೂ ಇತ್ತು. ಮದ್ದೂರಿನ ಎಸ್.ಟಿ.ಈಶ್ವರಾಚಾರ್‌ರವರು, (೧೯೨೭) ಕಿಟ್ಟಿ ಭಾಗವತರ ಬಳಿ ಸಂಗೀತವನ್ನೂ, ಡಂಕಣಾಚಾರ್ಯರ ಬಳಿ ಹರಿಕಥಾ ಶಿಕ್ಷಣವನ್ನೂ ಪಡೆದಿದ್ದು, ಮದ್ದೂರು ತಾಲೂಕಿನ ಹಳ್ಳಿಹಳ್ಳಿಗಳಲ್ಲಿ ಕಾರ್ಯಕ್ರಮ ನೀಡಿರುತ್ತಾರೆ. ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್ಯರಲ್ಲಿ ಸಂಗೀತ ಅಭ್ಯಾಸ ಮಾಡಿದ ಮದ್ದೂರಿನ ಡಂಕಣಾಚಾರ್‌ರವರು, (೧೯೨೯) ರಾಜ್ಯದ ಹಲವೆಡೆ ಕೀರ್ತನ ಕಾರ್ಯಕ್ರಮ ನೀಡಿದ್ದಾರೆ. ಸ್ಥಳೀಯ ಸಂಸ್ಥೆಯಿಂದ 'ಕೀರ್ತನ ಸುಧಾಂಶು', ಎಂಬ ಬಿರುದು ಪಡೆದಿದ್ದಾರೆ. ಹಲವಾರು ವರ್ಷಗಳಿಂದ ಕೀರ್ತನ ವೃತ್ತಿಯಲ್ಲಿ ತೊಡಗಿರುವ ಎ.ಆರ್.ಗುರುರಾಜದಾಸ್‌ರವರು, (೧೯೪೧) ಶ್ರೀರಂಗಪಟ್ಟಣದವರು. ಇವರು ರಾಜ್ಯದ ವಿವಿಧ ಸಂಘ ಸಂಸ್ಥೆಗಳಿಂದ 'ಹರಿದಾಸ ಚಿರಂಜೀವಿ', ಹರಿದಾಸ ಚೂಡಾಮಣಿ, ಕೀರ್ತನ ಕಲಾ ಚತುರ, ಮುಂತಾದ ಬಿರುದುಗಳನ್ನು ಪಡೆದು ಹೆಸರುವಾಸಿಯಾಗಿದ್ದಾರೆ. ಗಮಕಿ ಎಚ್.ಶೇಷಗಿರಿರಾವ್ ಮತ್ತು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಶಿಷ್ಯ ವೇತನ ಪಡೆಯುತ್ತ ಕೀರ್ತನ ಕಲೆಯನ್ನು ಮುಂದುವರಿಸಿದ ಎಸ್.ಆರ್.ಲಕ್ಷ್ಮೀನರಸಿಂಹನ್‌ರವರು (೧೯೬೬) ಮಂಡ್ಯ ನಗರದವರು.

## ಸಿನಿಮಾ

ಕನ್ನಡ ಸಿನಿಮಾ ಜಗತ್ತಿನ ಆರಂಭದೊಂದಿಗೆ ಜಿಲ್ಲೆಯ ಸಂಪರ್ಕವುಂಟಾಗಿದ್ದು ಅವ್ಯಾಹತವಾಗಿ ಮುಂದುವರಿದಿರುವುದನ್ನು ಕಾಣಬಹುದು. ಕನ್ನಡ ನೆಲದ ಪ್ರಥಮ ಚಿತ್ರವೆಂದು ಪರಿಗಣಿತವಾದ ಮೂಕಿ ಚಿತ್ರ 'ಮೃಚ್ಛಕಟಿಕ' ೧೯೨೯ ರಲ್ಲಿ ತಯಾರಾಗಿದ್ದು ಇದರ ಹೊರಾಂಗಣ ಚಿತ್ರಿಕರಣ ಶ್ರೀರಂಗಪಟ್ಟಣದಲ್ಲಿ ನಡೆಯಿತು. ಈ ಚಿತ್ರದ ಕಲಾ ನಿರ್ದೇಶಕರಾಗಿದ್ದ ಖ್ಯಾತ ಕಲಾ ವಿಮರ್ಶಕ ಜಿ.ವೆಂಕಟಾಚಲಂ ಪಾಂಡವಪುರದವರು. ಇದೇ ವೇಳೆಯಲ್ಲಿ ದೇಸಾಯಿ ಅವರ ಒಂದು ಕಿರುಚಿತ್ರಕ್ಕೆ ಸಹ ಶ್ರೀರಂಗಪಟ್ಟಣದಲ್ಲಿ ಹೊರಾಂಗಣ ಚಿತ್ರೀಕರಿಸಲಾಯಿತು. ಜಿಲ್ಲೆಯವರೇ ಆದ ಎಚ್.ಎಲ್.ಎನ್.ಸಿಂಹ ಅವರ ೧೯೩೦ರಲ್ಲಿ ತಯಾರಾದ 'ಹಿಸ್ ಲವ್ ಅಫೇರ್' ಚಿತ್ರವೂ ಇಲ್ಲಿ ಹೊರಾಂಗಣವನ್ನು ಕಂಡಿತು. ಜಿಲ್ಲೆಯಾದ್ಯಾಂತ ನದಿ ವನಗಳು, ಗಿರಿ, ಶಿಖರಗಳು, ದೇವಾಲಯ–ಕೊಳ–ಕೊತ್ತಳಗಳು, ಸದಾ ಹಸಿರು ತುಂಬಿದ ಹೊಲಗದ್ದೆಗಳು, ಮುಗ್ಧ ಗ್ರಾಮೀಣ ಪರಿಸರ, ಜನರ ಸಹಕಾರ ಇತ್ಯಾದಿಗಳಿಂದಾಗಿ ಇಂಗ್ಲೀಷ್, ಹಿಂದಿ ಭಾಷೆಯೂ ಸೇರಿದಂತೆ ದಕ್ಷಿಣದ ಎಲ್ಲ ಭಾಷೆಯ ನೂರಾರು ಚಲನಚಿತ್ರಗಳು ಈವರೆಗೆ ಜಿಲ್ಲೆಯಲ್ಲಿ ಚಿತ್ರೀಕರಣಗೊಂಡಿವೆ. ಜಗದ್ವಿಖ್ಯಾತ ಕೃಷ್ಣರಾಜಸಾಗರದ ಬೃಂದಾವನದಲ್ಲಿ ನಡೆದಿರುವಷ್ಟು ಚಿತ್ರೀಕರಣ ಭಾರತದ ಬೇರೆಡೆಯಲ್ಲಿ ಎಲ್ಲಿಯೂ

ನಡೆದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು, ಇಲ್ಲಿ ಪುಟಿಯುವ ನೀರಿನ ಹಿನ್ನೆಲೆ, ವರ್ಣಮಯ ದೀಪಾಲಂಕಾರ, ಗಿಡಮರಗಳು ಇತ್ಯಾದಿಗಳು ರಂಗಸಜ್ಜಿಕೆಯಂತೆ (ಸೆಟ್ಟಿಂಗ್) ಸಿದ್ಧವಾಗಿವೆ. ಅಂತೆಯೆ ಶಿವ ಸಮುದ್ರದ ಜಲಧಾರೆ, ಮುತ್ತತ್ತಿ ಅರಣ್ಯ ಪ್ರದೇಶ, ಶ್ರೀರಂಗಪಟ್ಟಣದ ಬಳಿಯ ಗಂಜಾಂ, ರಂಗನತಿಟ್ಟುಗಳು, ಕೊಕ್ಕರೆ ಬೆಳ್ಳೂರು, ಐತಿಹಾಸಿಕ ಸ್ಮಾರಕಗಳು, ತೊಣ್ಣೂರಿನ ಕೆರೆ ಇತ್ಯಾದಿಗಳಲ್ಲಿ ಹೊರಾಂಗಣ ಚಿತ್ರೀಕರಣ ದಿನ ನಿತ್ಯವೆಂಬಂತೆ ನಡೆಯುತ್ತಿರುತ್ತದೆ. ಮಂಡ್ಯ ಬಳಿಯ ಮಹದೇವಪುರ ಸಿನಿಮಾ ಗ್ರಾಮ ಎಂದೆ ಪ್ರಸಿದ್ಧವಾಗಿದೆ. ಗ್ರಾಮೀಣ ಪರಿಸರಕ್ಕೆ ಬೇಕಾಗುವ ಎಲ್ಲ ಪರಿಕರಗಳು ಈ ಗ್ರಾಮದಲ್ಲಿದ್ದು. ಹಲವು ಭಾಷೆಯ ಚಿತ್ರಗಳು ಇಡಿಯಾಗಿ ಇಲ್ಲಿ ಚಿತ್ರಿತವಾಗಿವೆ. ಇವೆಲ್ಲಕ್ಕಿಂತ ಹೆಚ್ಚು ಖ್ಯಾತವಾಗಿರುವುದೆಂದರೆ ಪ್ರಸಿದ್ಧ ಮೇಲುಕೋಟೆ ಕ್ಷೇತ್ರ. ಇಲ್ಲಿಯ ಕಲ್ಯಾಣಿಗಳು, ಬೆಟ್ಟಗುಡ್ಡಗಳು, ದೇವಾಲಯ, ಮಂಟಪಗಳು, ರಸ್ತೆ–ಮನೆಗಳು, ಪ್ರಕೃತಿ–ವಾತಾವರಣ ಜನತೆಯ ಸಹಕಾರ ಇತ್ಯಾದಿಗಳಿಂದಾಗಿ ಅಧಿಕ ಸಂಖ್ಯೆಯಲ್ಲಿ ಇಲ್ಲಿ ಚಿತ್ರೀಕರಣ ನಡೆದಿವೆ. ಇದರ ಸಂಖ್ಯೆ ಹೆಚ್ಚಿದ್ದು ಇತ್ತೀಚೆಗೆ ಇಲ್ಲಿಯದೇ ಪ್ರಾದೇಶಿಕ ಶುಲ್ಕವನ್ನು ಕೆಲವು ನಿರ್ಬಂಧಿತ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ಶುಲ್ಕವನ್ನೂ ಸ್ಥಳೀಯ ಆಡಳಿತ ವಿಧಿಸಿರುವುದಲ್ಲದೇ, ಇಲ್ಲಿಯ ವಾತಾವರಣಕ್ಕೆ ಧಕ್ಕೆಯಾಗುವುದರಿಂದ ಚಿತ್ರೀಕರಣ ನಿಷೇಧಿಸಬೇಕೆಂದು ತೈಲೂರು ವೆಂಕಟಕೃಷ್ಣ ಅವರು ಪತ್ರಿಕಾ ಹೇಳಿಕೆಯೊಂದನ್ನು ನೀಡಿರುವುದುಂಟು.

ಚಲನಚಿತ್ರ ಕ್ಷೇತ್ರಕ್ಕೆ ಜಿಲ್ಲೆಯಿಂದ ಕಲಾವಿದರು, ನಿರ್ದೇಶಕರು ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದಾರೆ. ಖ್ಯಾತ ಅಭಿನೇತ್ರಿ ವೈಜಯಂತಿಮಾಲಾ ಅವರು ಹಾಗೂ ಅಭಿನೇತ್ರಿ ಸಂಧ್ಯಾ ಹಾಗೂ ಅವರ ಪುತ್ರಿ ಜಯಲಲಿತ ಅವರುಗಳು ಮೂಲತ: ಮಂಡ್ಯದವರು. ಸಂಧ್ಯಾ ಅವರು ಅಭಿನಯಿಸಿದ್ದ 'ಪ್ರೇಮದ ಪುತ್ರಿ' ಕನ್ನಡ ಚಿತ್ರಕ್ಕೆ ೧೯೫೭ರಲ್ಲಿ ಪ್ರಾದೇಶಿಕ ಪ್ರಶಸ್ತಿ ದೊರೆಕಿತ್ತು. ವರದಾಚಾರ್ ಅವರು ೧೯೩೩ರಲ್ಲಿ ತಯಾರಿಸಿದ 'ಭಕ್ತಧ್ರುವ' ಚಿತ್ರದಲ್ಲಿ ಗರುಡನಗಿರಿ ನಾಗೇಶರಾಯರು ಗಾಯಕ ಹಾಗೂ ನಟರಾಗಿ ಅಭಿನಯಿಸಿದ್ದರು. ಚಲನಚಿತ್ರ ಕ್ಷೇತ್ರದಲ್ಲಿ 'ಸಂಪತ್ತು' ಎಂದು ಹೆಸರಾದ ಚಲುವೈಯ್ಯಂಗಾರ್ ಮೂಲತ: ಮಂಡ್ಯದವರು. ಹಳೆಯ ತಲೆಮಾರಿನ ಕಲಾವಿದರಲ್ಲಿ ಮಳವಳ್ಳಿ ಸುಂದರಮ್ಮ ಅವರು ಗುಲೇಬಕಾವಲಿ ಕಾಳಿದಾಸ, ಮನ್ಮಥ ವಿಜಯ, ಸುಭದ್ರ, ಶಾಕುಂತಲ, ಕಬೀರ್ ಇತ್ಯಾದಿ ಚಿತ್ರಗಳಿಗೆ ಹಿನ್ನೆಲೆಯ ಗಾಯಕರಾಗಿ ಹಾಡಿದ್ದರಲ್ಲದೆ ೧೯೩೭ ರಲ್ಲಿ ಚಿತ್ರಿತವಾದ 'ಚಿರಂಜೀವಿ' ಚಿತ್ರದಲ್ಲಿ ನಟಿಸಿದ್ದರು.

ಪಾಂಡವಪುರ ತಾಲೂಕಿನ ಹಳೆಬೀಡು ಗ್ರಾಮದ ರಾಮಚಂದ್ರ ಶಾಸ್ತ್ರಿ ಅವರು ೧೯೩೦ ರಲ್ಲಿ ಚಿತ್ರರಂಗ ಪ್ರವೇಶಿಸಿ ಸುಬ್ಬಯ್ಯನಾಯ್ಡು ಅವರ 'ಭಕ್ತ ಅಂಬರೀಷ' (ತಮಿಳು) ಚಿತ್ರದಲ್ಲಿ ದೂರ್ವಾಸನ ಪಾತ್ರ ವಹಿಸಿದ್ದರು. ಗುಬ್ಬಿ ವೀರಣ್ಣರ 'ಸುಭದ್ರಾ' ಕನ್ನಡ ಚಿತ್ರಕ್ಕಾಗಿ ಪುಣೆಗೆ ಹೋಗಿ ಆರು ತಿಂಗಳು ಇದ್ದರು. ಮತ್ತೆ ಕೆಲಕಾಲ ನಾಟಕ ಕ್ಷೇತ್ರದಲ್ಲಿದ್ದು ೧೯೫೬ ರಲ್ಲಿ ಮಹಾತ್ಮಕಬೀರ್ ಚಿತ್ರದಿಂದ ಸಿನಿಮಾ ಕ್ಷೇತ್ರಕ್ಕೆ ಬಂದು, ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಯ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಖ್ಯಾತಿಗಳಿಸಿದರು. ಇವರ ಸಹೋದರ ವಿಜಯನಾರಸಿಂಹ (೧೯೨೭) ಅವರೂ ಅದೇ ಹಳೇಬೀಡು ಗ್ರಾಮದವರಾಗಿದ್ದು ಚಲನಚಿತ್ರ ಸಾಹಿತಿಗಳು. ಚಿತ್ರ ಸಂಗೀತದ ರಚನಾಕಾರರು ಆಗಿದ್ದರು. ಇವರ ಮಲತಮ್ಮ ಯೋಗಾನರಸಿಂಹ (೧೯೨೭–೨೦೦೨) ಅವರು ಮೊದಲಿಗೆ ಚಿಕ್ಕಪ್ಪಂದಿರ ನಾಟಕ ಶಾಲೆಯಲ್ಲಿ ನಟಿಸುತ್ತಿದ್ದು ಚಿಂತರ ಚಲನಚಿತ್ರ ಕ್ಷೇತ್ರಕ್ಕೆ ಬಂದವರು. ಶುಭಮಂಗಳ, ಕಾಲೇಜುರಂಗ, ಫಲಿತಾಂಶ. ರಂಗನಾಯಕಿ, ಹೇಮಾವತಿ ಇತ್ಯಾದಿ ೧೫ ಚಲನಚಿತ್ರಗಳಿಗೆ ಸಂಭಾಷಣೆ, ಸಾಹಿತ್ಯ ರಚನೆ, ಸಂಗೀತ, ಇತ್ಯಾದಿ ಒದಗಿಸಿದ್ದಾರಲ್ಲದೆ ನಟಿಸಿಯೂ ಇದ್ದಾರೆ. ಜೀವನ ಸಂಗ್ರಾಮ, ಗಜಗೌರಿ ಚಲನಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. ದೂರದರ್ಶನದಲ್ಲಿಯೂ ಸಾಕ್ಷಿ ಹೇಳಿದ ಸೀಸೆ. ಡಾಕ್ಟರ್ ಎಂದರೆ ಹೀಗಿರಬೇಕು ಇತ್ಯಾದಿ ಕಥಾನಕ ಸರಣಿಗಳನ್ನು

ನಿರ್ದೇಶಿಸಿದ್ದಾರೆ. ಯೋಗಾನರಸಿಂಹ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ (೮೩), ರಾಜ್ಯೋತ್ಸವ ಪ್ರಶಸ್ತಿ (೯೬), ಹೊನ್ನಪ್ಪ ಭಾಗವತರ್ ಪ್ರಶಸ್ತಿ (೯೮) ಗಾನಕಲಾ ಪರಿಷತ್ ನಿಂದ ವಿದ್ವತ್ ಸದಸ್ಸಿನ ಸನ್ಮಾನ. ದೂರದರ್ಶನ ಕೇಂದ್ರದ ಸನ್ಮಾನ (೯೮) ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ (೯೯)ಗಳು ಲಭ್ಯವಾಗಿವೆ. ಒಂದು ಅವಧಿಗೆ (೮೭–೯೦) ನಾಟಕ ಅಕಾಡೆಮಿ ಸದಸ್ಯರೂ ಆಗಿದ್ದರು.

ಮಳವಳ್ಳಿಯ ಎಚ್.ಎಲ್.ಎನ್. ಸಿಂಹ ಅವರಿಗೆ (೧೯೦೪–೧೯೭೨) ಬಾಲ್ಯದಲ್ಲಿ ವರದಾಚಾರ್. ಮಳವಳ್ಳಿ ಸುಂದರಮ್ಮ ಮುಂತಾದವರ ನಾಟಕಗಳ ಪ್ರಭಾವವಾಗಿದ್ದು ಪ್ರೌಢ ಶಾಲೆಯಲ್ಲಿ ಇರುವಾಗಲೇ ನಾಟಕ ಬರೆದು ಪೀರ್ ಅವರೊಂದಿಗೆ ಅಭಿನಯಿಸಿದ್ದರು. ವೀರಣ್ಣ ಅವರ 'ಹಿಸ್ ಲವ್ ಅಫೇರ್ಸ್' ಚಿತ್ರದ ನಿರ್ದೇಶಕ ಆರ್.ಜಿ.ಎ ಆಂಗ್ಲೊ ಅವರಲ್ಲಿ ಸಹನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅವರ ಯಶಸ್ವೀ ನಾಟಕ 'ಸಂಸಾರ ನೌಕೆ' ಪ್ರಥಮ ಸಾಮಾಜಿಕ ಚಲನಚಿತ್ರವಾಗಿ ರೂಪುಗೊಂಡು ಸಿನಿಮಾ ಕ್ಷೇತ್ರದಲ್ಲಿ ಸಿಂಹ ಅವರಿಗೆ ಹೆಸರು ತಂದಿತು. ನಂತರ 'ಗುಣಸಾಗರಿ' ಹಾಗೂ 'ಬೇಡರ ಕಣ್ಣಪ್ಪ' ನಿರ್ದೇಶಿಸಿದರು. ಅದರಲ್ಲಿ ಪ್ರತಿಭಾವಂತರಾದ ಹಾಗೂ ಮುಂದೆ ಚಲನಚಿತ್ರ ಕ್ಷೇತ್ರದಲ್ಲಿ ದಿಗ್ಗಜರೆನಿಸಿಕೊಂಡ ರಾಜಕುಮಾರ್, ಪಂಡರಿಬಾಯಿ, ನರಸಿಂಹರಾಜು, ಜಿ.ವಿ. ಅಯ್ಯರ್ ಅವರನ್ನು ಚಲನಚಿತ್ರ ರಂಗಕ್ಕೆ ಪರಿಚಯಿಸಿದ ಕೀರ್ತಿ ಸಿಂಹ ಅವರದು. ನಂತರ 'ಅಬ್ಬಾ ಆ ಹುಡುಗಿ', 'ತೇಜಸ್ವಿನಿ', 'ಅನುಗ್ರಹ' ನಿರ್ದೇಶಿಸಿ, ಅಂತಿಮ ಕಾಲದಲ್ಲಿ 'ರತ್ನಹಾರ'ಕ್ಕೆ ತಯಾರಿ ನಡೆಸಿದ್ದರು. ಇನ್ನೊಬ್ಬ ಪ್ರತಿಭಾವಂತರಾದ ಬಿ.ಎಸ್. ರಂಗ ಅವರು ನಾಗಮಂಗಲದ ಬಿಂಡಿಗನವಿಲೆಯವರು. ಛಾಯಾಗ್ರಾಹಕರಾಗಿದ್ದ ಅವರು ಮುಂಬಯಿಗೆ ತೆರಳಿ ಚಿತ್ರ ಸಂಸ್ಕರಣ ಘಟಕದಲ್ಲಿ ಕಾರ್ಯನಿರ್ವಹಿಸಿ, ಅದರ ಸಂಸ್ಥಾಪಕರ ೧೭ ಹಿಂದಿ ಚಿತ್ರಗಳಿಗೆ ಸಹಾಯಕರಾಗಿ, ಚೆನ್ನೈಗೆ ಬಂದು ತಮಿಳು ಚಿತ್ರಗಳಿಗೆ ಛಾಯಾಗ್ರಾಹಕರಾಗಿದ್ದವರು. ನಂತರ ತಮ್ಮ ಸ್ವಂತ ಸ್ಟುಡಿಯೋ 'ವಿಕ್ರಂ ಪ್ರೊಡಕ್ಷನ್' ಆರಂಭಿಸಿ ಇತರೆ ಭಾಷೆಗಳ ಹಲವಾರು ಚಲನಚಿತ್ರಗಳನ್ನು ನಿರ್ಮಿಸಿ ನಿರ್ದೇಶಿಸಿರುವರು. ಕನ್ನಡದಲ್ಲಿ ಭಕ್ತಮಾರ್ಕಂಡೇಯ, ಮಹಿಷಾಸುರ ಮರ್ಧಿನಿ, ದಶಾವತಾರಗಳಲ್ಲದೆ ಇನ್ನೂ ಹಲವಾರು ಚಿತ್ರಗಳು ಸಂಸ್ಥೆಯಿಂದ ನಿರ್ಮಿತವಾಗಿದೆ. ಕನ್ನಡದ ಮೊದಲ ಪೂರ್ಣ ಪ್ರಮಾಣದ ವರ್ಣಚಿತ್ರ ಅಮರಶಿಲ್ಪಿ ಜಕಣಾಚಾರಿಯನ್ನು ರಂಗಾ ಅವರೇ ನಿರ್ಮಿಸಿದ್ದು, ವರ್ಣಚಿತ್ರ ತಯಾರಿಕೆ ಅಂದಿಗೆ ದುಬಾರಿಯಾದುದರಿಂದ ಬೇರೆ ಯಾರೂ ಪ್ರಯತ್ನಿಸದೇ ಇದ್ದುದರಿಂದ ಐದು ವರ್ಷಗಳ ನಂತರ ಎರಡನೇ ವರ್ಣ ಚಿತ್ರ 'ಭಲೇಬಸವ' ನಂತರ 'ಶ್ರೀಕೃಷ್ಣದೇವರಾಯ' ಗಳನ್ನು ರಂಗಾ ಅವರೇ ನಿರ್ಮಿಸಿದರು. ನಂತರವೂ ೯೦ ರ ದಶಕದಲ್ಲಿ ' ಭಾಗ್ಯವಂತರು' 'ಬಂಗಾರದ ಬದುಕು' ನಿರ್ಮಿಸಿದ್ದಾರೆ. ಅಮರ ಶಿಲ್ಪಿ ಜಕಣಾಚಾರಿಯೂ ಸೇರಿದಂತೆ ಇವರ ಚಿತ್ರಗಳಿಗೆ ಹಲವಾರು ಪ್ರಶಸ್ತಿಗಳು ಬಂದಿವೆ.

ಮಂಡ್ಯದ ಸಾಂಸ್ಕೃತಿಕ ಬದುಕಿನ ಮುಖ್ಯಚೇತನರೆನಿಸಿದ್ದ ಕೆ.ವಿ.ಶಂಕರಗೌಡ ಅವರು 'ಕೂಡಿಬಾಳೋಣ' ಚಿತ್ರ ನಿರ್ಮಾಣ ಮಾಡಿದ್ದಾರೆ. ಅವರ ಮಗ ಕೆ.ಎಸ್. ಸಚ್ಚಿದಾನಂದ ಮತ್ತು 'ಒಂದು ಮುತ್ತು', 'ಮರೆಯದ ಹಾಡು', 'ಹೊಸ ನೀರು', 'ಸಂಕ್ರಾತಿ' ಇತ್ಯಾದಿ ಗಂಭೀರ ಮೌಲಿಕ ಚಿತ್ರಗಳನ್ನು ನಿರ್ಮಿಸಿ ರಾಜ್ಯ ಪ್ರಶಸ್ತಿಗಳಿಸಿದ್ದಾರೆ. ನಾಗಮಂಗಲದ ಜಯರಾಂ ೧೯೭೬ ರಿಂದ ಈಚೆಗೆ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ್ದು ಶ್ವೇತಗುಲಾಬಿ, ಬಾಡದ ಹೂ, ಹೊಸನೀರು, ಅರುಣ ರಾಗ ಚಿತ್ರಗಳಿಗೆ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ಇವರ ಇನ್ನಿತರ ಕೆಲವು ಚಿತ್ರಗಳೆಂದರೆ ಮರುಳು ಸರಪಣಿ, ಬೆತ್ತಲೆ ಸೇವೆ, ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಶರವೇಗದ ಸರದಾರ, ಮಾಧುರಿ, ಮತ್ಸರ ಇತ್ಯಾದಿ, ಇವರ ಸಹೋದರ ಕೆ.ವಿ. ರಾಜು ಅವರು ಕೂಗು, ಬಂಧಮುಕ್ತ, ಸಂಗ್ರಾಮ, ಯುದ್ಧಕಾಂಡ ಇತ್ಯಾದಿ ನಿರ್ದೇಶಿಸಿದ್ದಾರೆ. ಒಂದು ಪ್ರೇಮದ ಕಥೆ 'ರಾಜ ಸಿಂಹ' 'ನನ್ನ ರೋಷ ನೂರು ವರುಷ', 'ಸಾಹಸ ಸಿಂಹ'ದ ನಿರ್ದೇಶಕ ಜೋಸೈಮನ್ ಮಂಡ್ಯದವರು. 'ಗ್ರಹಣ', 'ಬೆಳ್ಳಿ ಬೆಳಕು' ಚಿತ್ರಗಳ ಕೋಡಿಹಳ್ಳಿ ಶಿವರಾಂ;

'ಫಿನಿಕ್ಸ್'ನ ಗೌಡಗೆರೆ ಶಿವರಾಂ, 'ನಮ್ಮೂರ ಬಸ್ವಿ', 'ಬಸ್ ಕಂಡಕ್ಟರ್' ನಿರ್ಮಿಸಿದ ಡಿ.ಎಚ್.ಗೌಡರಲ್ಲದೆ, ಎನ್.ಆರ್. ಕೇಶವ ಶ್ರೀಕಂಠಮೂರ್ತಿ ಅವರುಗಳು ಮಂಡ್ಯ ಜಿಲ್ಲೆಯವರು.

ಇತ್ತೀಚಿನ ದಿನಗಳಲ್ಲಿ, ನಾಗತಿಹಳ್ಳಿ ಚಂದ್ರಶೇಖರ್‌ರವರು ಚಲನಚಿತ್ರ ಹಾಗೂ ದೂರದರ್ಶನ ಧಾರವಾಹಿಗಳನ್ನು ನಿರ್ಮಿಸಿ, ನಿರ್ದೇಶಿಸಿ, ಅಪಾರ ಖ್ಯಾತಿಗಳಿಸುತ್ತಿರುವರು. ಕಾದಂಬರಿಕಾರರೂ ಆದ ಶ್ರೀಯುತರು 'ಬಾನಲ್ಲೆ ಮಧುಚಂದ್ರಕೆ', 'ಉಂಡು ಹೋದ ಕೊಂಡು ಹೋದ' 'ಕೊಟ್ರೇಶಿ ಕನಸು' ನಿರ್ದೇಶಿಸಿದ್ದಾರೆ. 'ಕಾಡಿನ ಬೆಂಕಿ', 'ಪ್ರಥಮ ಉಷಾಕಿರಣ' ಚಿತ್ರಗಳಲ್ಲಿನ ಚಿತ್ರಕಥೆ ಹಾಗೂ ಸಂಭಾಷಣೆಗಳಿಗೆ ಪ್ರಶಸ್ತಿ ಪಡೆದಿದ್ದಾರೆ. ಇವರ ಈಚಿನ ಚಿತ್ರ ' ಅಮೆರಿಕಾ ಅಮೆರಿಕಾ'ಗೆ ಪ್ರಶಸ್ತಿ ದೊರೆತಿದೆ.

ನಟರಲ್ಲಿ ಅಂಬರೀಶ್ ಹಾಗೂ ಮಂಡ್ಯ ರಮೇಶ್ ಸಾಕಷ್ಟು ಹೆಸರು ಮಾಡಿರುವ ಕಲಾವಿದರು. ರಮೇಶ್ ನಾಗಾಭರಣರ 'ಜನುಮದ ಜೋಡಿ' ಮೂಲಕ ಅಭಿನಯ ರಂಗಕ್ಕೆ ಬಂದಿದ್ದು ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಮನೆತನ, ಜನನಿ, ನೀಲಿ ಕುದುರೆ, ಇತಿಹಾಸ ಇತ್ಯಾದಿ ದೂರದರ್ಶನ ಧಾರಾವಾಹಿಗಳಲ್ಲಿ ನಟಿಸಿದ್ದು ಕಿರುತೆರೆಯ ಮೂಲಕ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಮೈಸೂರಿನ ಕೀರ್ತಿ ಫಿಲಂ ಟ್ರೈನಿಂಗ್ ಇನ್ಸಿಟ್ಯೂಟ್‌ನಲ್ಲಿ ಉಪ ಪ್ರಾಂಶುಪಾಲರಾಗಿದ್ದಾರೆ.

ಸಂಸತ್ ಸದಸ್ಯರಾಗಿರುವ (ಎಂ.ಪಿ) ಅಂಬರೀಶ್ (೧೯೫೨) ಅವರು ಮದ್ದೂರಿನ ದೊಡ್ಡರಸೀಕೆರೆ ಗ್ರಾಮದವರು. 'ಕಲಾಭಿಮನ್ಯು', 'ರೆಬಲ್ ಸ್ಟಾರ್'. 'ಕಲಿಯುಗ ಕರ್ಣ', ಇತ್ಯಾದಿ ಅನೇಕ ಬಿರುದುಗಳನ್ನು, ಚಿನ್ನದ ಕಿರೀಟವೇ ಇತ್ಯಾದಿ ಹಲವಾರು ಸನ್ಮಾನಗಳನ್ನು ಪಡೆದಿರುವ ಅಂಬರೀಶ್ (ಅಮರನಾಥ್) ಪುಟ್ಟಣ್ಣ ಕಣಕಾಲ್ ಅವರ ಶೋಧ. ನಾಗರಹಾವು, ಶುಭಮಂಗಳ, ಗಳಿಂದ ಚಿತ್ರರಂಗ ಪ್ರವೇಶಿಸಿ 'ದೇವರ ಕಣ್ಣು', 'ಅಂತ', 'ಚಕ್ರವ್ಯೂಹ' ಇತ್ಯಾದಿಗಳಿಂದ ಮೇಲೇರಿದವರು. 'ಅಮರ ಜ್ಯೋತಿ', 'ಹೃದಯವಂತ' 'ನ್ಯೂಡೆಲ್ಲಿ', 'ತಾಯಿಗೊಬ್ಬ ಕರ್ಣ', 'ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್', 'ಕರ್ಣನ ಸಂಪತ್ತು' ಇತ್ಯಾದಿ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವರ ತಮ್ಮ ನಟನೆ ಹಾಗೂ ನಡತೆಯಿಂದಾಗಿ ಸಾವಿರಾರು ಅಭಿಮಾನಿಗಳನ್ನು ಪಡೆದಿರುವುದಲ್ಲದೆ ಅಭಿಮಾನಿಗಳ ಸಂಘಗಳಿಗೂ ಕಾರಣಕರ್ತರಾಗಿದ್ದಾರೆ. ಅವರ ಹೆಸರಿನಲ್ಲಿ ಕೆಲವು ಪ್ರಶಸ್ತಿಗಳೂ ಸ್ಥಾಪಿತವಾಗಿವೆ.

ಜಿಲ್ಲೆಯ ಸಾಹಿತಿಗಳ ಕೆಲವು ಕೃತಿಗಳು ಚಲನಚಿತ್ರಗಳಾಗಿವೆ. ಎಂ.ಆರ್.ಶ್ರೀ(ಮಹಾತ್ಯಾಗ)ಎ.ಎನ್. ಮೂರ್ತಿರಾವ್ (ಆಶಾಢಭೂತಿ ಸುಬ್ಬಶಾಸ್ತ್ರೀ) ಅಶ್ವಥ್ (ರಂಗನಾಯಕಿ, ಮುನಿಯನ ಮಾದರಿ, ಮರ್ಯಾದೆ ಮಹಲು) ತ್ರಿವೇಣಿ (ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಶರಪಂಜರ, ಹೂವು ಹಣ್ಣು, ಕಂಕಣ, (ಬೆಕ್ಕಿನ ಕಣ್ಣು ಮಲೆಯಾಳದಲ್ಲಿ) ವಾಣಿ (ಎರಡು ಕನಸು, ಶುಭಮಂಗಳ, ಹೊಸಬೆಳಕು) ಆರ್ಯಾಂಭ ಪಟ್ಟಾಭಿ (ಕಪ್ಪು ಬಿಳುಪು, ಎರಡು ಮುಖ, ಸವತಿನೆರಳು, ಮರಳಿ ಗೂಡಿಗೆ) ಈಶ್ವರಾಚಾರ್ (ಕಾಳದೊಡ್ಡಿ ಕುರುಕ್ಷೇತ್ರ) ಇತ್ಯಾದಿ ಉದಾಹರಿಸಬಹುದು. ಪು.ತಿ.ನ., ಕೆ.ಎಸ್.ನರವರ ಅನೇಕ ಗೀತೆಗಳು ಚಲನಚಿತ್ರಗಳಲ್ಲಿ ಬಳಕೆಯಾಗಿವೆ. ಕೆ.ಎಸ್.ನರವರ 'ಮೈಸೂರು ಮಲ್ಲಿಗೆ' ಪದ್ಯಗಳನ್ನೇ ಉಪಯೋಗಿಸಿಕೊಂಡು ರೂಪಿಸಿದ ವಿಶಿಷ್ಟ ಬಗೆಯ ಚಲನಚಿತ್ರ. ಚಂದ್ರಶೇಖರ ಆಲೂರ್‌ರವರ 'ಗೀತ ಸಂಗೀತ' ಎನ್ನುವ ಸಿನಿಮಾ, ಸಾಹಿತ್ಯ ಹಾಗೂ ಗೀತೆಗಳ ಅಧ್ಯಯನವನ್ನೊಳಗೊಂಡ ಪುಸ್ತಕ ಪ್ರಕಟಿಸಿದ್ದಾರೆ.

ಜಿಲ್ಲೆಯ ಪ್ರಥಮ ಚಲನಚಿತ್ರಮಂದಿರ ಸುಮಾರು ೧೯೪೭ ರಲ್ಲಿ ಆರಂಭವಾದ 'ಮಂಡ್ಯ ಟಾಕೀಸ್' ೧೯೭೫ರಲ್ಲಿ 'ಸಂಜಯ' ಎಂದು ಹೆಸರು ಬದಲಿಸಿಕೊಂಡು ನವೀಕೃತಗೊಂಡಿತು. ಪ್ರಸ್ತುತ ಜಿಲ್ಲೆಯಲ್ಲಿ (೨೦೦೦-೦೨) ೩೫ ಶಾಶ್ವತ ಸಿನಿಮಾ ಮಂದಿರಗಳು ಹಾಗೂ ೪೦ ತತ್ಕಾಲಿಕ ಮಂದಿರಗಳು ಇವೆ. ೧೯೯೮-೯೯ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭ ೨೦೦೦ ದಲ್ಲಿ ಮಂಡ್ಯದಲ್ಲಿ ನಡೆಯಿತು.